ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಏಪ್ರಿಲ್ 16 ಶನಿವಾರ 2022

ಸಂಪುಟ: 43 | ಸಂಚಿಕೆ: 01 | ಪುಟಗಳು: 12+XII+VIII | ₹4

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523,
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ, ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ನಯನ ಕುಮಾರ್ಸ್ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ 'ನಾಡೋಜ' ಭಾಷ್ಯಂ ಸ್ವಾಮೀಜಿ ಅವರಿಗೆ ಆತ್ಮೀಯ ಅಭಿನಂದನೆ



ಮೈಸೂರು,ಏ.15–ಹಂಪಿ ಕನ್ನಡ ವಿಶ್ವ ವಿದ್ಯಾನಿಲಯದಿಂದ ನಾಡೋಜ ಗೌರವಕ್ಕೆ ಭಾಜನರಾದ ಮೈಸೂರಿನ ವಿಜಯನಗರ 1ನೇ ಹಂತದಲ್ಲಿರುವ ಯೋಗ ನರಸಿಂಹ ಸ್ವಾಮಿ ದೇವಸ್ಥಾನದ ಸಂಸ್ಥಾಪಕರಾದ ಶ್ರೀ ಭಾಷ್ಯಂ ಸ್ವಾಮೀಜಿ ಅವರನ್ನು ನಯನ ಕುಮಾರ್ಸ್ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ವತಿಯಿಂದ ಅಭಿನಂದಿಸಲಾಯಿತು.

ಮೈಸೂರಿನ ದಟ್ಟಗಳ್ಳಿ ನೇತಾಜಿ ಸರ್ಕಲ್ ಬಳಿಯಿರುವ ನಯನ ಕುಮಾರ್ಸ್ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಆಸ್ಪತ್ರೆಯ ಮಾಲೀಕ ಕೆ.ಬಿ. ಕುಮಾರ್, ಶ್ರೀಮತಿ ಗೀತಾ ಕುಮಾರ್, ಲಯನ್ಸ್ ಕ್ಲಬ್‌ನ ಲಯನ್ಸ್ ಕೆ.ದೇವೇಗೌಡ, ಚಿತ್ರ ನಿರ್ಮಾಪಕ ಎಸ್.ಎ. ಗೋವಿಂದ ರಾಜು, ಡಾ.ರಾಜ್‌ಕುಮಾರ್ ಅವರ ಪುತ್ರಿ ಶ್ರೀಮತಿ ಲಕ್ಷ್ಮೀ ಗೋವಿಂದರಾಜು ಅವರು ಭಾಷ್ಯಂ ಸ್ವಾಮೀಜಿ ಅವರನ್ನು ಅಭಿನಂದಿಸಿದರು.

ಗೌರವ ಸ್ವೀಕರಿಸಿ ಮಾತನಾಡಿದ ಭಾಷ್ಯಂ ಸ್ವಾಮೀಜಿ ಅವರು, ವಾಸ್ತವವಾಗಿ ಪ್ರಶಸ್ತಿ ಬಂದರೆ ಅದನ್ನು ದೇವರಿಗೆ ಅರ್ಪಿಸುತ್ತೇನೆ. ಪ್ರಶಸ್ತಿಗಳನ್ನು ನಾವು ಹುಡುಕಿಕೊಂಡು ಹೋಗಬಾರದು. ಅದು ನಮ್ಮನ್ನು ಹುಡುಕಿಕೊಂಡು ಬರಬೇಕು ಎಂದು ಈ ಹಿಂದೆ ಮಾಧ್ಯಮಗಳಿಗೆ ತಿಳಿಸಿದ್ದೆ. ನನಗೆ ಪ್ರಶಸ್ತಿಯಲ್ಲಿ ಕೊಟ್ಟಿದ್ದ ಆಭರಣವನ್ನು ದೇವರ ಕೊರಳಿಗೆ ಸಮರ್ಪಿಸಿದ್ದೇನೆ ಎಂದರು.

ಕಳೆದ 8 ವರ್ಷಗಳಿಂದ ನಾಡೋಜ ಗೌರವಕ್ಕೆ ನನ್ನ ಹೆಸರು ಹೋಗುತ್ತಿತ್ತು. ಕಳೆದ 22 ವರ್ಷಗಳಿಂದ ನನಗೆ ಪದ್ಮಶ್ರೀ ಪ್ರಶಸ್ತಿ ನೀಡುವಂತೆ ಸರ್ಕಾರ ಶಿಫಾರಸು ಮಾಡುತ್ತಾ ಬಂದಿದೆ. ನಾಡೋಜ ಪ್ರಶಸ್ತಿಗೂ ನನಗೂ ಏನು ಸಂಬಂಧ ಎಂದು ಕೆಲ ಮಾಧ್ಯಮದವರು ಪ್ರಶ್ನಿಸಿದ್ದರು ಎಂದ ಅವರು, ನಾನು 123 ಗ್ರಂಥಗಳನ್ನು ಕನ್ನಡಕ್ಕೆ ತರ್ಜುಮೆ ಮಾಡಿದ್ದೇನೆ. ಜ್ಞಾನಕ್ಕೆ ಜಾತಿಯಿಲ್ಲ. ಕನ್ನಡದ ಮೇರುನಟ ಡಾ. ರಾಜ್‌ಕುಮಾರ್ ಅವರ ಅಭಿಮಾನದ ಊಪ ದೇಶದಿಂದ ನನಗೆ ನಾಡೋಜ ಪ್ರಶಸ್ತಿ ಲಭಿಸಿದೆ. ಈ ಪ್ರಶಸ್ತಿ ಪಡೆಯುವಾಗ ಡಾ.ರಾಜಕುಮಾರ್ ಮತ್ತು ಪುನೀತ್ ರಾಜ್ ಕುಮಾರ್ ಅವರನ್ನು ಸ್ಮರಿಸಿಕೊಂಡಿದ್ದಾಗಿ ಹೇಳುತ್ತಾ ಸ್ವಾಮೀಜಿಗಳು ಭಾವುಕರಾದರು.

ಕಾರ್ಯಕ್ರಮದಲ್ಲಿ ಭಾಷ್ಯಂ ಸ್ವಾಮೀಜಿ ಅವರ ಸಹೋದರ ಶ್ರೀನಿವಾಸ್, ಶೇಷಾದ್ರಿ, ಅಶ್ವಿನ್‌ಕುಮಾರ್, ನಯನ ಕುಮಾರ್ಸ್ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ವೈದ್ಯರು ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

ಮೈಸೂರಲ್ಲಿ ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ ನವೀಕೃತ ಶೋರೂಂ ಉದ್ಘಾಟನೆ



ಮೈಸೂರು, ಏ.14(ಜಿಎ)– ಮೈಸೂರಿನ ಬೆಂಗಳೂರು–ನೀಲಗಿರಿ ರಸ್ತೆಯಲ್ಲಿರುವ ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್‌ನ ನವೀಕೃತ ಶೋರೂಂ ಅನ್ನು ಶಾಸಕ ಎಲ್.ನಾಗೇಂದ್ರ ಶುಕ್ರವಾರ ಉದ್ಘಾಟಿಸಿದರು.

ಈ ವೇಳೆ ಮಾತನಾಡಿದ ಶಾಸಕ ನಾಗೇಂದ್ರ ಉತ್ತಮ ಗುಣಮಟ್ಟದ ಚಿನ್ನಾಭರಣ ಮಾರಾಟ ಮಾಡುವಲ್ಲಿ ಹೆಸರು ವಾಸಿಯಾದ ಮಲಬಾರ್ ಗೋಲ್ಡ್ ನನ್ನ ಕ್ಷೇತ್ರದಲ್ಲಿ ನೂತನ ನವೀಕೃತ ಮಳಿಗೆ ಆರಂಭಿಸಿರುವುದು ಸಂತಸ ವಿಷಯವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಯಾವಾಗಲೂ ನಾನು ಉತ್ತಮ ಸೇವೆಗಳ ಜೊತೆಗೆ ಉತ್ತಮ ಸಂಬಂಧವನ್ನು ಹೊಂದಿದ್ದೇನೆ ಅದರಂತೆ ಮಲಬಾರ್ ಗೋಲ್ಡ್ ನೊಂದಿಗೂ ಒಳ್ಳೆಯ ಸಂಬಂಧವಿದೆ ಎಂದ ಅವರು ಮಲಬಾರ್ ಗೋಲ್ಡ್ ಸಂಸ್ಥೆಯೂ ಗುಣಮಟ್ಟದಲ್ಲಿ ಗ್ರಾಹಕರನ್ನು ಸೆಳೆದಿದ್ದು, ಈ ನೂತನ ಮಳಿಗೆಯನ್ನು ಗ್ರಾಹಕರು ಸದುಪಯೋಗ ಪಡಿಸಿಕೊಳ್ಳಬೇಕು ಮಲಬಾರ್ ಗೋಲ್ಡ್ ಕೋವಿಡ್ ಸಂದರ್ಭದಲ್ಲಿ ನೂರಾರು ಮಂದಿಗೆ ಆಹಾರದ ಕಿಟ್ ನೀಡಿ ತನ್ನ ಸಾಮಾಜಿಕ ಕಾಳಜಿ ತೋರಿದೆ ಎಂದು ಇದೇ ಸಂದರ್ಭದಲ್ಲಿ ತಿಳಿಸಿದರು.

ಶಾಸಕ ತನ್ವೀರ್ ಸೇಠ್ ಮಾತನಾಡಿ, ಮಲಬಾರ್ ಗೋಲ್ಡ್ ಸಂಸ್ಥೆಯೂ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಒತ್ತು ನೀಡಿದ್ದು, 350 ಹೆಣ್ಣು ಮಕ್ಕಳ ಪದವಿಪೂರ್ವ ಶಿಕ್ಷಣದ ವಿದ್ಯಾಭ್ಯಾಸಕ್ಕೆ ತಲಾ 10 ಸಾವಿರ ರೂ. ನೀಡಿರುವ ಕಾರ್ಯ ಶ್ಲಾಘನೀಯ. ಕೇವಲ ವ್ಯಾಪಾರವಾಗಿ ನೋಡದೆ ಅದರೊಟ್ಟಿಗೆ ಸಾಮಾಜಿಕ ಕಾಳಜಿ ತೋರಿದೆ. ಈ ಮಳಿಗೆ ಜತೆಗೆ ಸರ್ಕಾರ ಮತ್ತು ಜನಪ್ರತಿನಿಧಿಗಳು ಸದಾ ಇರುತ್ತೇವೆ ಎಂದರು.

ಮಲಬಾರ್ ಗೋಲ್ಡ್ ನ ಕರ್ನಾಟಕ ಹೆಡ್ ಫಿಲ್ಲರ್ ಬಾಬು, ಉಪಮೇಯರ್ ಅನ್ವರ್ ಬೇಗ್, ನಗರಪಾಲಿಕೆ ಸದಸ್ಯರಾದ ಸತೀಶ್, ರಂಗಸ್ವಾಮಿ, ಮೃಗಾಲಯ ಪ್ರಾಧಿಕಾರದ ಸದಸ್ಯೆ ಜ್ಯೋತಿ, ಮಲಬಾರ್ ಗ್ರೂಪ್ ನ ಎಂ.ಪಿ.ಅಹಮ್ಮದ್, ಗಜೇಂದ್ರ ಸಿಂಗ್ ಇನ್ನಿತರರು ಉಪಸ್ಥಿತರಿದ್ದರು.

ಬೆಳ್ಳಿ ನಾಣ್ಯ ಕೊಡುಗೆ....

ಮಲಬಾರ್ ಗೋಲ್ಡ್‌ನಲ್ಲಿ ಏ.15 ರಿಂದ 23 ರವರೆಗೆ ಚಿನ್ನಾಭರಣ ಖರೀದಿ ಮಾಡುವ ಪ್ರತಿ ಗ್ರಾಹಕರಿಗೆ ಬೆಳ್ಳಿ ನಾಣ್ಯವನ್ನು ಉಚಿತವಾಗಿ ನೀಡಲಾಗುವುದು. ಅಲ್ಲದೆ ಮೇಕಿಂಗ್ ಚಾರ್ಜ್‌ನಲ್ಲಿಯೂ ವಿಶೇಷ ರಿಯಾಯಿತಿ ಜೊತೆಗೆ ಆಕರ್ಷಕ ಚಿನ್ನಾಭರಣಗಳು ಲಭ್ಯವಿವೆ.

ತೊಳಸಿ ಜ್ಯುವೆಲರಿಯಲ್ಲಿ ನೆಕ್‌ಲೇಸ್, ಹಾರ ಮೇಳ



ತೊಳಸಿ THOLASI JEWELS Fine Jewellers Since Generations

ಮೈಸೂರು, ಏ.15–ತಲೆಮಾರುಗಳಿಂದಲೂ ಅತ್ಯುತ್ತಮ ಆಭರಣ ವ್ಯಾಪಾರಿಗಳಾಗಿರುವ ತೊಳಸಿ ಜ್ಯುವೆಲ್ಸ್, ಮೈಸೂರಿನ ವಿ.ವಿ.ಮೊಹಲ್ಲಾದ ಟೆಂಪಲ್ ರಸ್ತೆಯಲ್ಲಿ ರುವ ತನ್ನ ಶೋ ರೂಂನಲ್ಲಿ ಏಪ್ರಿಲ್ 13 ರಿಂದ 17ರವರೆಗೆ ಚಿತ್ತಾಕರ್ಷಕ ನೆಕ್‌ಲೇಸ್ ಮತ್ತು ಹಾರ ಮೇಳವನ್ನು ಆಯೋಜಿಸಿದೆ.

ಮೇಳವು ಮೈಸೂರಿಗರಿಗೆ ಸಾಂಪ್ರದಾಯಿಕ, ಕುಂದನ್ ಮತ್ತು ಇತ್ತೀಚಿನ ಸಮಕಾಲೀನ ವಿನ್ಯಾಸಗಳೊಂದಿಗೆ ಕೊಡುಗೆಯನ್ನು ನೀಡುತ್ತಿದೆ. ಅಲ್ಲದೆ, ನೂರಾರು ಗ್ರಾಹಕರು ಶೇ.5ರಷ್ಟು ರಿಯಾಯಿತಿ, ಪ್ರತಿ ಗ್ರಾಂಗೆ 50 ರೂ. ಹೆಚ್ಚುವರಿ ಬೋನಸ್, ಹೊಸ ಚಿನ್ನಾಭರಣಗಳ ಖರೀದಿಗೆ ಹಳೆಯ ಚಿನ್ನಾಭರಣಗಳ ವಿನಿಮಯ ಸೇರಿದಂತೆ ಹಲವಾರು ಪ್ರಯೋಜನಗಳ ಲಾಭ ಪಡೆಯುತ್ತಿದ್ದಾರೆ. ಮೇಳದ ವಿಶೇಷತೆ ಎಂದರೆ, ಕೈಕುಶಲತೆಯ ನೂರಾರು ವಿನ್ಯಾಸದ ಅಂದದ ಆಭರಣಗಳ ಪ್ರದರ್ಶನ. ಗ್ರಾಹಕರು ಏ.17 (ಭಾನುವಾರದವರೆಗೆ) ಇದರ ಪ್ರಯೋಜನವನ್ನು ಪಡೆಯಬಹುದಾಗಿದ್ದು, ಹೆಚ್ಚಿನ ಮಾಹಿತಿಗಾಗಿ ಆಭರಣ ಮಳಿಗೆಯ **ಮೊ. 91082–66126** ಅನ್ನು ಸಂಪರ್ಕಿಸಬಹುದು.

ಈ ಕೊಡುಗೆ ವಿ.ವಿ.ಮೊಹಲ್ಲಾದಲ್ಲಿರುವ ತೊಳಸಿ ಜ್ಯುವೆಲ್ಸ್ ಶೋರೂಂಗೆ ಸೀಮಿತವಾಗಿದ್ದು, ಮಳಿಗೆಯು ಬೆಳಗ್ಗೆ 11ರಿಂದ ರಾತ್ರಿ 7ರವರೆಗೆ ಸಾರ್ವಜನಿಕರಿಗೆ ಮುಕ್ತವಾಗಿರುತ್ತದೆ. ತೊಳಸಿ ಜ್ಯುವೆಲ್ಸ್ ಮೈಸೂರಿಗರಿಗೆ ಅಚ್ಚುಮೆಚ್ಚಿನದಾಗಿದ್ದು, ಒಂದು ಪುಟ್ಟ ಮಳಿಗೆಯಲ್ಲಿ ಆರಂಭವಾಗಿ ಈಗ ಎರಡು ಬೃಹತ್ ಸುವಿಶಾಲ ಮಳಿಗೆಗಳೊಂದಿಗೆ ಮೈಸೂರಿನ ಹೆಗ್ಗುರುತಾಗಿದೆ. ತನ್ನ ಮಳಿಗೆಗಳಲ್ಲಿ ಗ್ರಾಹಕರಿಗೆ ಆರಾಮವಾಗಿ ಕುಳಿತು ಆಭರಣ ಖರೀದಿಸಲು ಸುವಿಶಾಲ ಸ್ಥಳಾವಕಾಶ ಹೊಂದಿದ್ದು, ಇಡೀ ಕುಟುಂಬಕ್ಕೆ ತಡೆ ರಹಿತ ಸಂತಸದಾಯಕ ಶಾಪಿಂಗ್ ಅನುಭವವನ್ನು ನೀಡುವುದರೊಂದಿಗೆ ಸಾಕಷ್ಟು ಪ್ರಮಾಣದ ನಿರೀಕ್ಷಣಾ ಸ್ಥಳಾವಕಾಶ, ಸಮರ್ಪಕವಾದ ಪಾರ್ಕಿಂಗ್ ಸೌಲಭ್ಯ ಮತ್ತು ಸಾವಿರಾರು ನಮೂನೆಗಳ ಆಯ್ಕೆ ಅವಕಾಶವನ್ನೂ ಹೊಂದಿದೆ.

ಶ್ರೀ ಸ್ವಾಮಿ ಆತ್ಮನಂದೇಂದ್ರ ಸರಸ್ವತಿ ನಿಧನ



ಮೈಸೂರು: ಹೆಸರಾಂತ ಆಧ್ಯಾತ್ಮಿಕ ಮುಖಂಡರೂ ಆದ ಶ್ರೀ ಸ್ವಾಮಿ ಆತ್ಮನಂದೇಂದ್ರ ಸರಸ್ವತಿ ಅವರು ಇಂದು ಮುಂಜಾನೆ ಮೈಸೂರಿಂದ 9 ಕಿಲೋಮೀಟರ್ ದೂರದಲ್ಲಿರುವ ಬನ್ನೂರು ರಸ್ತೆಯ ಹಲಗಯ್ಯನಹುಂಡಿಯಲ್ಲಿ ಬ್ರಹ್ಮೈಕ್ಯರಾಗಿದ್ದಾರೆ. ಅವರಿಗೆ 98 ವರ್ಷ ವಯಸ್ಸಾಗಿತ್ತು.


ಗೀತೆ ಮೇಲಿನ ತಮ್ಮ ಪ್ರವಚನದಿಂದ ಹೆಸರುವಾಸಿಯಾಗಿದ್ದ ಸ್ವಾಮೀಜಿ ಅವರು ಅದ್ವೈತ ಫಿಲಾಸಫಿಯಲ್ಲಿ ಭಾರೀ ಹೆಸರು ಮಾಡಿದ್ದರು. ಭಗವದ್ಗೀತೆ ಮೇಲೆ ಕಳೆದ 50 ವರ್ಷಕ್ಕೂ ಅಧಿಕ ಕಾಲದಿಂದ ಉಪನ್ಯಾಸ ನೀಡುತ್ತಾ ಬಂದಿದ್ದರು. ಇವರ ಉಪನ್ಯಾಸಗಳು 2017ರಲ್ಲಿ ಅಮೆರಿಕಾದ ನ್ಯೂಯಾರ್ಕ್ ವುಡ್‌ಸ್ಟಾಕ್ ವೇದಾಂತಿಕ್ ಲೈಟ್ ಪಬ್ಲಿಷರ್ಸ್‌ನಿಂದ ಪ್ರಕಟಗೊಂಡಿದೆ. ಪೂರ್ವಾಶ್ರಮದಲ್ಲಿ ಇವರು ರಸಾಯನಶಾಸ್ತ್ರದಲ್ಲಿ ಸ್ನಾತಕೋತ್ತರ ಪದವೀಧರರಾಗಿದ್ದು, ಐಎಎಸ್ ಪಾಸ್ ಮಾಡಿದ ನಂತರ ಕೇಂದ್ರ ಗೃಹ ಇಲಾಖೆಯಲ್ಲಿ ಉನ್ನತ ಹುದ್ದೆಯಲ್ಲಿ ಕಾರ್ಯ ನಿರ್ವಹಿಸಿದ್ದರು. ನಂತರ ಸನ್ಯಾಸತ್ವದತ್ತ ಹೊರಳಿದ್ದರು. ಇವರಿಗೆ ಹೊಳೆ ನರಸೀಪುರ ಸ್ವಾಮಿ ಸಚ್ಚಿದಾನಂದೇಂದ್ರ ಸರಸ್ವತಿ ಸ್ವಾಮಿಗಳು ಮಾರ್ಗದರ್ಶಕರಾಗಿದ್ದರು.

ಜೆ.ಪ್ರದೀಪ್‌ಕುಮಾರ್



ಮೈಸೂರು, ಏ.15–ಮೈಸೂರಿನ ಹಳ್ಳಿ ಶ್ರೀರಾಮಪುರ ಪರಮಹಂಸ ನಗರದ ನಿವಾಸಿ ಇಂಡಿಯನ್ ಬ್ಯಾಂಕ್ ನಿವೃತ್ತ ಉದ್ಯೋಗಿ ಜೆ.ಪ್ರದೀಪ್ ಕುಮಾರ್(65) ಶುಕ್ರವಾರ ಮುಂಜಾನೆ ನಗರದ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಕೆಲ ಕಾಲದಿಂದ ಅಸ್ವಸ್ಥರಾಗಿದ್ದ ಇವರು ಚಿಕಿತ್ಸೆ ಫಲಿಸದೆ ನಿಧನರಾದರು. ಎಸ್‌ಡಿಎಂ ಕಾಲೇಜಿನ ಜೀವಶಾಸ್ತ್ರ ವಿಭಾಗದ ಹೆಚ್‌ಓಡಿ ಆದ ಪತ್ನಿ ವಿಜಯಶ್ರೀ ಜೆ.ಎಸ್, ಪುತ್ರಿ ನಯನ, ಪುತ್ರ ನವೀನ್, ಅಳಿಯ ಡಾ.ವಿಕಾಶ್ ಸೇರಿದಂತೆ ಅಪಾರ ಬಂಧುವರ್ಗ ಅಗಲಿದ್ದಾರೆ. ಶನಿವಾರ ಬೆಳಗ್ಗೆ 10 ಗಂಟೆ ನಂತರ ಮೈಸೂರಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿದ್ದು, ಸಂಬಂಧಿಕರು ಮತ್ತು ಪುತ್ರ ಬರಬೇಕಾಗಿರುವುದರಿಂದ ಸ್ಥಳ ನಿಗದಿಯಾಗಿಲ್ಲ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

16.04.2022 ಶನಿವಾರ, ಮಳೆ ನಕ್ಷತ್ರ: ಅಶ್ವಿನಿ 14.04.2022 ರಿಂದ 26.04.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ
ತಿಥಿ: ಪೂರ್ಣಿಮಾ, ನಕ್ಷತ್ರ: ಹಸ್ತ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ಮಾತಾ ಅಮೃತಾನಂದಮಯಿ ಮಠ** : ಬ್ರಹ್ಮಸ್ಥಾನ ದೇವಸ್ಥಾನದ ವಾರ್ಷಿಕೋತ್ಸವ, ಬೆಳಗ್ಗೆಯಿಂದ ಸಂಜೆಯವರೆಗೆ ಶ್ರೀ ಲಲಿತಾಸಹಸ್ರನಾಮ ಅರ್ಚನೆ, ಬೆಳಗ್ಗೆ 6.30ಕ್ಕೆ ಮಹಾಗಣಪತಿ ಹೋಮ, ಸಂಜೆ 4.30ಕ್ಕೆ ಶನಿದೋಷ ನಿವಾರಣಾ ಪೂಜೆ, ಸಂಜೆ 7ಕ್ಕೆ ಭಗವತಿ ಸೇವೆ, ಭಜನೆ, 8.30ಕ್ಕೆ ಆರತಿ, ಮಹಾಪ್ರಸಾದ, ಸ್ಥಳ: ಮಾತಾ ಅಮೃತಾನಂದಮಯಿ ಮಠ, ಬೋಗಾದಿ 2ನೇ ಹಂತ.

■ **ಓಂ ಶ್ರೀ ಮಲೆ ಮಹದೇಶ್ವರ ವೃದ್ಧರ ಆರೈಕೆ ಕೇಂದ್ರ** : ಉಚಿತ ಆರೋಗ್ಯ ತಪಾಸಣಾ ಶಿಬಿರ, ಉದ್ಘಾಟನೆ : ಡಾ.ಎ.ಆರ್. ರೇಣುಕಾಪ್ರಸಾದ್, ಪುಷ್ಪಾರ್ಚನೆ : ನವಾಯು ಫೌಂಡೇಷನ್ ಸಂಸ್ಥಾಪಕ ಡಾ. ಪಿ. ನವ್ಯ, ಉಪಸ್ಥಿತರು : ಡಾ. ಸ್ವರೂಪ್, ವಿಕಾಸ್ ಶಾಸ್ತ್ರಿ, ಸ್ಥಳ: ಕೇಂದ್ರದ ಆವರಣ, ಅರವಿಂದನಗರ, ಬೆಳಗ್ಗೆ 10 ರಿಂದ.

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ** : ಡಾ. ಬಿ.ಆರ್. ಅಂಬೇಡ್ಕರ್ ಅವರ 131ನೇ ಜನ್ಮ ದಿನಾಚರಣೆ ಅಂಗವಾಗಿ ಉಪನ್ಯಾಸ, ಸಾನ್ನಿಧ್ಯ : ಅರ್ಜುನ್ ಅವಧೂತ ಗುರೂಜಿ, ಅಧ್ಯಕ್ಷತೆ : ಕರಾಮುವಿವಿ ಕುಲಪತಿ ಪ್ರೊ. ಎಸ್. ವಿದ್ಯಾಶಂಕರ್, ವಿಶೇಷ ಉಪನ್ಯಾಸ : ಲೇಖಕ ವಾದಿರಾಜ್ ಅವರಿಂದ, ಉಪಸ್ಥಿತರು : ಮೈಸೂರು ವಿವಿ ಕುಲಸಚಿವ ಪ್ರೊ. ಆರ್. ರಾಜಣ್ಣ, ಸ್ಥಳ: ಕಾವೇರಿ ಸಭಾಂಗಣ, ಕರಾಮುವಿವಿ, ಬೆಳಗ್ಗೆ 11.30ಕ್ಕೆ.

■ **ಆರಭಿ ಸಾಂಸ್ಕೃತಿಕ ಟ್ರಸ್ಟ್**: ವಸಂತೋತ್ಸವ, ಜಾನಪದ ಮತ್ತು ಭಾವಗೀತೆ ಗಾಯನ, ಡಾ.ಮಳವಳ್ಳಿ ಮಹದೇವಸ್ವಾಮಿ, ಅಮ್ಮ ರಾಮಚಂದ್ರ ಅವರಿಗೆ ಅಭಿನಂದನೆ, ಸ್ಥಳ: ಕರ್ನಾಟಕ ಕಲಾಮಂದಿರ, ಸಂಜೆ 5.30ಕ್ಕೆ.

ವಿವಿಧೆಡೆ ಶ್ರೀ ರಾಮನವಮಿ

■ **ಗಾನವಿಶಾರದ ಶ್ರೀಬಿಡಾರಂ ಕೃಷ್ಣಪ್ಪನವರ ಶ್ರೀ ಪ್ರಸನ್ನ ಸೀತಾರಾಮ ಮಂದಿರ** : 106ನೇ ವಾರ್ಷಿಕ ಪಾರಂಪರಿಕ ರಾಮನವಮಿ ಸಂಗೀತೋತ್ಸವ, ವಿದುಷಿ ರಂಜನಿ ಮತ್ತು ವಿದುಷಿ ಗಾಯತ್ರಿ ಅವರಿಂದ ಕರ್ನಾಟಕ ಶಾಸ್ತ್ರೀಯ ಯುಗಳ ಗಾಯನ ಗೋಷ್ಠಿ, ಪಿಟೀಲಿನಲ್ಲಿ ವಿದುಷಿ ಎಚ್.ಎಂ.ಸ್ಮಿತಾ–ಪಿಟೀಲು, ಮೃದಂಗದಲ್ಲಿ ವಿದ್ವಾನ್ ಸಾಯಿ ಗಿರಿಧರ್ – ಮೃದಂಗ, ಓಂಕಾರ್‌ರಾವ್–ಘಟಂ, ಸ್ಥಳ: ಶ್ರೀ ಪ್ರಸನ್ನ ಸೀತಾರಾಮ ಮಂದಿರ, ಸಂಜೆ 5.30ಕ್ಕೆ.

■ **ಶ್ರೀ ಜಾನಕೀ ರಾಮ ಮಂದಿರ** : ಶ್ರೀ ರಾಮನವಮಿ ಕಾರ್ಯಕ್ರಮ, ಸಂಜೆ ಶ್ರೀ ಶೇಷಾದ್ರಿ ಭಜನಾ ಮಂಡಳಿಯವರಿಂದ ಭಜನೆ, ಸ್ಥಳ: ಮಂದಿರದ ಆವರಣ, ಗೊಲ್ಲಗೇರಿ, ಚಾಮರಾಜ ಮೊಹಲ್ಲಾ.

■ **ಶ್ರೀ ರಾಮ ಸೇವಾ ಮಂಡಲಿ** : ಶ್ರೀ ರಾಮೋತ್ಸವ ಕಾರ್ಯಕ್ರಮ, ಬೆಳಗ್ಗೆ 10.30ಕ್ಕೆ ವಿದ್ವಾನ್ ಟಿ.ಕೆ. ರಾಮಾನುಜಾಚಾರ್ಯ ಮತ್ತು ವಿದುಷಿ ಶ್ರೀರಂಗಂ ಶ್ರುತಿರಂಜನಿ ಅವರಿಂದ ದ್ವಂದ್ವ ಪಿಟೀಲು ವಾದನ, ವಿದ್ವಾನ್ ಹೆಚ್.ಕೆ. ಸುಧೀಂದ್ರ –ಮೃದಂಗ, ವಿದ್ವಾನ್ ಜಿ.ಎಸ್. ರಾಮಾನುಜಂ–ಘಟಂ, ಸಂಜೆ 6ಕ್ಕೆ ಚೇತನಾ ಮಹಿಳಾ ಸಮಾಜದವರಿಂದ ಭಜನೆ, ಸಂಜೆ 7 ರಿಂದ ಅಚ್ಯುತ ಎಂ. ಆತ್ರೇಯ ಅವರಿಂದ ಭಜನೆ, ಸ್ಥಳ: ಶ್ರೀ ಅವನಿ ಶಂಕರ ಮಠ, ವಿದ್ಯಾರಣ್ಯಪುರಂ, 4ನೇ ಮೇನ್ 9ನೇ ಕ್ರಾಸ್.



■ **ಶ್ರೀ ರಾಮ ಮಂದಿರ, ಜಯನಗರ** : ಶ್ರೀ ರಾಮೋತ್ಸವ, ಬೆಳಗ್ಗೆ 9 ಗಂಟೆಗೆ ಶ್ರೀ ಧನ್ವಂತರಿ ಹೋಮ, ಸಂಜೆ 4 ಗಂಟೆಗೆ ಕಲಶ ಸ್ಥಾಪನೆ, ರಾತ್ರಿ 7.30 ರಿಂದ ಶ್ರೀ ಸುದರ್ಶನ ನೃಸಿಂಹ ಹೋಮ, ಶ್ರೀ ಸತ್ಯನಾರಾಯಣ ಪೂಜೆ, ಸ್ಥಳ: ಶ್ರೀರಾಮಮಂದಿರ, ಜಯನಗರ.

■ **ಶ್ರೀ ರಾಮಾಭ್ಯುದಯ ಸಭಾ ಪಬ್ಲಿಕ್ ಚಾರಿಟಬಲ್ ಟ್ರಸ್ಟ್** : ಶ್ರೀ ರಾಮೋತ್ಸವ, ತ್ರಿಚೂರ್ ಸಹೋದರರಾದ ಕೃಷ್ಣ ಮೋಹನ್ ಮತ್ತು ವಿದ್ವಾನ್ ರಾಮಕುಮಾರ್ ಮೋಹನ್ ಅವರಿಂದ ಶಾಸ್ತ್ರೀಯ ಸಂಗೀತ, ಸಾಯಿ ರಕ್ಷಿತ್–ಪಿಟೀಲು, ತ್ರಿಚೂರ್ ಆರ್. ಮೋಹನ್ –ಮೃದಂಗ, ಕೋವೈ ಸುರೇಶ್–ಘಟಂ, ಸ್ಥಳ: ಆಲಮ್ಮನವರ ಛತ್ರ, ಕುಂಚಿಟಿಗರ ಸಂಘ, ಸಂಜೆ 6.30 ರಿಂದ.

■ **ದೊಡ್ಡ ಶ್ರೀ ರಾಮಮಂದಿರ** : ಶ್ರೀರಾಮ ಪಟ್ಟಾಭಿಷೇಕ ಮತ್ತು ಶ್ರೀ ವೀರಾಂಜನೇಯಸ್ವಾಮಿ ಮಹೋತ್ಸವ, ಬೆಳಗ್ಗೆ 9 ಗಂಟೆಗೆ ಶ್ರೀ ಸತ್ಯನಾರಾಯಣಸ್ವಾಮಿ ಪೂಜೆ, ಮಹಾಮಂಗಳಾರತಿ, ಅನ್ನಸಂತರ್ಪಣೆ, ಸ್ಥಳ: ಮೈಸೂರು ನಗರ ಗಾಣಿಗರ ಸಂಘ, ತಿಲಕ್‌ನಗರ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ–ಡಾ. ಪ್ರದೀಪ್ ಕುಮಾರ್ ಹೆಬ್ರಿ, 6.20 ಗೀತಾರಾಧನ, 6.35 ಭವದ ಬಯಲಿಗರು– ವಚನಕಾರರ ಪರಿಚಯಾತ್ಮಕ ಕಾರ್ಯಕ್ರಮ, ಲೇಖನ ಮತ್ತು ಪ್ರಸ್ತುತಿ– ಮೈಸೂರು ಉಮೇಶ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ, ಗಾಯನ– ಎಮ್.ಆರ್. ಸುಧಾ ಮತ್ತು ಎಂ.ಎಸ್. ಲಕ್ಷ್ಮೀಶ, ವ್ಯಾಖ್ಯಾನ– ಡಾ. ಪ್ರದೀಪ್ ಕುಮಾರ್ ಹೆಬ್ರಿ, 7.15 ತ್ಯಾಜ್ಯ ನಿಭಾಯಿಸುವ ರೀತಿ–ಪ್ರಾಯೋಜಿತ ಕಾರ್ಯಕ್ರಮ, 9.00 ರಾಮನವಮಿಯ ಸಂದರ್ಭದಲ್ಲಿ ತ್ಯಾಗರಾಜರ ಶ್ರೀರಾಮನ ಕುರಿತಾದ ಕೃತಿಗುಚ್ಛ, 9.30 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ 'ಸ್ವಾತಂತ್ರ್ಯ ಚಳವಳಿಯ ಪಯಣ– ಆಕಾಶವಾಣಿಯೊಂದಿಗೆ', 10.00 ಕೆ.ಎಸ್. ಹೇರಂಭ ಮತ್ತು ಕೆ.ಎಸ್. ಹೇಮಂತ್–ಯುಗಳ ವೇಣುವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.45 ಜನಪದಗೀತೆ–ರಾಮಶೆಟ್ಟಿ ಮತ್ತು ತಂಡ, 1.20 ಭಾವಗೀತೆ– ಮಾಲತಿ ಶರ್ಮ, ಸುಪ್ರಿಯಾ ರಘುನಂದನ್, 3.35 ಮಕ್ಕಳ ಮಂಟಪ– ಮುಖಾಮುಖಿ–ಗಣಿತದ ಆಸಕ್ತಿದಾಯಕ ಕಲಿಕೆ, ನಡೆಸಿಕೊಡುತ್ತಾರೆ ಜಿ.ಬಿ. ಸಂತೋಷ್‌ಕುಮಾರ್, 4.00 ನಾಟಕ 'ಅಪ್ಪಣೆ ಮಹಾಪ್ರಭು' ಮೂಲ ಉರ್ದು– ರಾಜ್‌ಕುಮಾರ್ ದಾಗ್ ಕನ್ನಡ ಅನುವಾದ ಎಂ.ಅಬ್ದುಲ್ ರೆಹಮಾನ್ ಪಾಷಾ, ನಿರ್ದೇಶನ– ಶಂಕರ್ ಎಸ್.ಭಟ್, 4.30 ನೆನಪಿನಂಗಳ–ಹಿರಿಯ ಚಲನ ಚಿತ್ರನಟಿ ಪಂಡರೀಬಾಯಿ ಅವರೊಂದಿಗೆ ಎಂ.ಶಂಕರಪ್ಪ ಮತ್ತು ಎಂ.ಎಸ್. ಅನುಪಮ ಅವರು ನಡೆಸಿದ್ದ ಮಾತುಕತೆ, ಪ್ರಸ್ತುತಿ– ಎಸ್.ಲಕ್ಷ್ಮೀನಾರಾಯಣ, 6.50 ಕೃಷಿರಂಗ–ಕಿಸಾನ್ ವಾಣಿ, ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, 9.00 ಜನಪದ ಸಂಗೀತ–ಚಿಕ್ಕತಾಯಮ್ಮ ಮತ್ತು ತಂಡ, 9.15 ನಮ್ಮ ಸುತ್ತಲಿನ ದೇವಸ್ಥಾನಗಳು–ಮಾತನಾಡುತ್ತಾರೆ ಸಿ.ಎನ್. ಶ್ಯಾನುಭೋಗ್, 9.30 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ–ಟಿ.ಎಸ್. ತ್ಯಾಗರಾಜನ್ – ಹಾಡುಗಾರಿಕೆ



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಏಪ್ರಿಲ್ 16 ಶನಿವಾರ 2022


ಸಂಪುಟ: 43 | ಸಂಚಿಕೆ: 01 | ಪುಟಗಳು: 12+XII+VIII

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4







ಈಶ್ವರಪ್ಪ ರಾಜೀನಾಮೆ

●ಮುಖ್ಯಮಂತ್ರಿ ಬೊಮ್ಮಾಯಿಗೆ ರಾಜೀನಾಮೆ ಸಲ್ಲಿಕೆ ●ಉನ್ನತ ಮಟ್ಟದ ತನಿಖೆಗೆ ಸಿಎಂಗೆ ಮನವಿ ●ಇಂದಿನಿಂದ ಹಿಂದುತ್ವದ ಪರ ಹೋರಾಟ

ಬೆಂಗಳೂರು, ಏ.15(ಕೆಎಂಶಿ)– ಬೆಳಗಾವಿ ಗುತ್ತಿಗೆದಾರ ಸಂತೋಷ್ ಪಾಟೀಲ್ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ಅವರು ತಮ್ಮ ಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ಶಿವಮೊಗ್ಗದಿಂದ ನಗರಕ್ಕೆ ಮರಳುತ್ತಿದ್ದಂತೆ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಅವರ ಸರ್ಕಾರಿ ನಿವಾಸಕ್ಕೆ ತೆರಳಿ ತಮ್ಮ ರಾಜೀನಾಮೆ ಪತ್ರ ಸಲ್ಲಿಸಿದರು. ರಾಜೀನಾಮೆ ಪತ್ರ ನೀಡಿದ ನಂತರ ಮುಖ್ಯಮಂತ್ರಿ ಅವರೊಂದಿಗೆ ಕೆಲಕಾಲ ಮುಖಾಮುಖಿ ಚರ್ಚೆ ನಡೆಸಿದರು.

ರಾಜೀನಾಮೆ ನೀಡಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಈಶ್ವರಪ್ಪ, ಪ್ರಕರಣಕ್ಕೆ ಸಂಬಂಧಿಸಿದಂತೆ ಉನ್ನತ ಮಟ್ಟದ ತನಿಖೆ ನಡೆಸುವಂತೆ ಮನವಿ ಮಾಡಿಕೊಂಡಿದ್ದೇನೆ. ಇಡೀ ರಾಜ್ಯದ ಜನತೆ ಇದೊಂದು ಷಡ್ಯಂತರವೆಂದೇ ಹೇಳುತ್ತ, ಸತ್ಯಾಸತ್ಯತೆ ಹೊರಬರಬೇಕು ಎಂಬ ಕಾರಣಕ್ಕೆ ●11ನೇ ಪುಟಕ್ಕೆ

> ಸಚಿವ ಈಶ್ವರಪ್ಪ ಸ್ವಯಂಪ್ರೇರಣೆಯಿಂದ ರಾಜೀನಾಮೆ ನೀಡಿದ್ದಾರೆ. ಶೀಘ್ರದಲ್ಲಿಯೇ ಆರೋಪಗಳಿಂದ ಮುಕ್ತವಾಗುತ್ತಾರೆ. ಸಂತೋಷ್ ಆತ್ಮಹತ್ಯೆ ಪ್ರಕರಣದಲ್ಲಿ ಹೇಳಿಕೆಗಳನ್ನು, ತೀರ್ಮಾನಗಳನ್ನು ಕೊಡಲು ವಿರೋಧ ಪಕ್ಷದವರೇನು ನ್ಯಾಯಾಧೀಶರೇ ಅಥವಾ ಪೊಲೀಸರೇ?
>
> –ಬಸವರಾಜ ಬೊಮ್ಮಾಯಿ.

ಕಾಂಗ್ರೆಸ್ ಕಾಲದ ಪರ್ಸಂಟೇಜ್ ಬಗ್ಗೆ ಯಾರೂ ಮಾತನಾಡಲಿಲ್ಲ



ಹಾಸನ, ಏ.15– ಭ್ರಷ್ಟಾಚಾರ ಯಾರ್ಯಾರಿಂದ ಎಲ್ಲೆಲ್ಲಿ ಹುಟ್ಟಿಕೊಂಡಿದೆ. ಪಾಪ ಈಶ್ವರಪ್ಪ ಅವರ ಬಗ್ಗೆ ನಾನು ಮಾತನಾಡಲ್ಲ. ಕಾಂಗ್ರೆಸ್‌ನವರು ಈಗ ಮೇಲೆ ಹತ್ತಿ ಕುಣಿಯುತ್ತಿದ್ದಾರೆ. ಕಾಂಗ್ರೆಸ್ ಕಾಲದಲ್ಲಿ ನಡೆದ ಪರ್ಸಂಟೇಜ್ ಬಗ್ಗೆ ಯಾಕೆ ಮಾತನಾಡಲಿಲ್ಲ ಎಂದು ಮಾಜಿ ಸಚಿವ ಹೆಚ್.ಡಿ.ರೇವಣ್ಣ ಪ್ರಶ್ನೆ ಮಾಡಿದ್ದಾರೆ. ಹಾಸನದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್‌ನವರು ಮೇಲೆ ಹತ್ತಿ ಕುಣಿಯುದು ಬೇಡ, ನಿಮ್ಮ ಕಾಲದಲ್ಲಿ ಏನಾಗಿದೆ. ಈಶ್ವರಪ್ಪ ತಪ್ಪು ಮಾಡಿದ್ದರೆ ತಪ್ಪೇ. ತನಿಖೆ ನಂತರ ಸತ್ಯಾಂಶ ತಿಳಿಯಲಿದೆ. ವರ್ಕ್ ಆರ್ಡರ್ ಇಲ್ಲದೆ ಕೆಲಸ ಮಾಡಿದ್ದರೆ ಸರ್ಕಾರ ಆ ಕುಟುಂಬಕ್ಕೆ ಪರಿಹಾರ ಕೊಡಬೇಕು.



ವಿಶೇಷಾಂಕದ ವಿಶೇಷ





ಮತ್ತೆ ಕೊಚ್ಚೆಗುಂಡಿಯಾಗುತ್ತಿರುವ ಹೆಬ್ಬಾಳ ಕೆರೆ

ಕಾರ್ಖಾನೆಗಳ ರಾಸಾಯನಿಕಯುಕ್ತ, ಕೊಳಚೆ ನೀರಿನಿಂದಾಗಿ ಮೀನುಗಳ ಮಾರಣಹೋಮ; ದುರ್ವಾಸನೆ ಬೀರುತ್ತಿರುವ ಕೆರೆ

●ಮೋಹನ್ ಕಾಯಕ




ಮೈಸೂರು,ಏ.15–ಇನ್ಫೋಸಿಸ್ ಪ್ರತಿಷ್ಠಾನದಿಂದ ಮರುಜೀವನಗೊಂಡ ಮೈಸೂರಿನ ಹೆಬ್ಬಾಳ ಕೆರೆಯನ್ನು ಮತ್ತೆ ಹಾಳು ಮಾಡಲಾಗಿದೆ. ಕೆರೆ ಕೊಚ್ಚೆಗುಂಡಿಯಂತಾಗಿ ಲಕ್ಷಾಂತರ ಮೀನುಗಳ ಮಾರಣಹೋಮವೇ ನಡೆದಿದೆ.

ಬರೋಬ್ಬರಿ 108 ಕೋಟಿ ರೂ.ವೆಚ್ಚದಲ್ಲಿ ಅಭಿವೃದ್ಧಿಯಾಗಿ, ಅಂದದಿಂದ ಕಂಗೊಳಿಸುತ್ತಿರುವ ಹೆಬ್ಬಾಳ ಕೆರೆಯ ಸುಂದರ ವಾತಾವರಣ ಈಗ ಸತ್ತ ಮೀನುಗಳ ದುರ್ವಾಸನೆಯ ತಾಣವಾಗಿ ಬದಲಾಗಿದೆ. ಕೆರೆಯಲ್ಲಿದ್ದ ಕಸ–ಕಡ್ಡಿ, ಪಾಚಿ ತಿಂದು ನೀರನ್ನು ಶುಚಿಯಾಗಿಡಬೇಕಾಗಿದ್ದ ಹಲವು ಬಗೆಯ ಮೀನುಗಳು, ಒಳಚರಂಡಿ ಹಾಗೂ ಕಾರ್ಖಾನೆಗಳ ರಾಸಾಯನಿಕ ಮಿಶ್ರಿತ ನೀರು ಸೇವಿಸಿ ಸತ್ತು ತೇಲಾಡುತ್ತಿವೆ.

ಸುಮಾರು 51 ಎಕರೆ ವಿಸ್ತೀರ್ಣದ ಹೆಬ್ಬಾಳ ಕೆರೆಯು 36 ಎಕರೆ ಜಲಾವೃತ ಪ್ರದೇಶ, 8 ಎಕರೆ ಹಸಿರು ಪ್ರದೇಶ ಹಾಗೂ 2.1 ಕಿ.ಮೀ ಉದ್ದ ವಾಕಿಂಗ್ ಪಾಥ್ ಹೊಂದಿದ್ದು, 2.1 ಎಕರೆ ಪ್ರದೇಶದಲ್ಲಿ ತ್ಯಾಜ್ಯ ನೀರಿನ ಸಂಸ್ಕರಣಾ ಘಟಕವಿದ್ದರೂ ಶುದ್ಧ ನೀರಿಗಿಂತ ಕಲುಷಿತ ನೀರೇ ಹೆಚ್ಚಾಗಿ ಕೆರೆಯನ್ನು ಆವರಿಸಿರುವುದು ಜಲಚರಗಳಿಗೆ ಮಾರಕವಾಗಿದೆ.

ಕೆಐಎಡಿಬಿ ಅಧಿಕಾರಿಗಳು ನೇರ ಹೊಣೆ: ಕಳೆದ ಎರಡ್ಮೂರು ದಿನಗಳಿಂದ ಕೆರೆಯಲ್ಲಿ ಮೀನುಗಳು ಸಾವನ್ನಪ್ಪಿದ್ದು, ಕೆರೆ ಸುತ್ತಲಿನ ಕಾರ್ಖಾನೆಗಳು ಹಾಗೂ ಬಡಾವಣೆಗಳಿಂದ ಹರಿದು ಬರುವ ಕಲುಷಿತ ನೀರು ಇಷ್ಟೆಲ್ಲಾ ಅನಾಹುತಕ್ಕೆ ಕಾರಣವಾಗಿದೆ. ಕರ್ನಾಟಕ ಇಂಡಸ್ಟ್ರಿಯಲ್ ●11ನೇ ಪುಟಕ್ಕೆ





ನಕ್ಕರೆ ಅದೇ ಸ್ವರ್ಗ

ಅಪ್ಪ : "ನಮ್ಮ ಕಾಲದಲ್ಲಿ 10 ರೂಪಾಯಿ ತಗೊಂಡು ಹೋದ್ರೆ ಅಕ್ಕಿ, ಬೇಳೆ, ಮೊಸರು ಎಲ್ಲಾ ತರ್ತಿದ್ವಿ"

ಮಗ : "ಈಗ ಅದೆಲ್ಲಾ ಸಾಧ್ಯ ಇಲ್ಲ ಅಪ್ಪಾ... ಎಲ್ಲಾ ಅಂಗಡಿಗಳಲ್ಲೂ ಸಿ.ಸಿ. ಕ್ಯಾಮೆರಾ ಇಟ್ಟಿರ್ತಾರೆ!"

ಮೈಸೂರು ಮಿತ್ರ

ಶನಿವಾರ, 16 ಏಪ್ರಿಲ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಜೀವನ ಎನ್ನುವುದು ನಮ್ಮ ಆತ್ಮ ಪರೀಕ್ಷೆಯ ಸಾಧನ ಮಾತ್ರ

—ಲಾರ್ಡ್ ಬ್ರೌನಿಂಗ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ದುಡಿಯೋ ತನಕ ಮಡದಿ

ಸಂಪಾದಕೀಯ

ಧನ್ಯೋಸ್ಮಿ

ಪ್ರಿಯ ಓದುಗರೆ,

ನಿಮ್ಮ 'ಮೈಸೂರು ಮಿತ್ರ' 42 ವಸಂತಗಳನ್ನು ಪೂರೈಸಿ ಇಂದು 43ನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿದ್ದಾನೆ. 'ಮಿತ್ರ'ನ ಪ್ರತಿ ವಾರ್ಷಿಕೋತ್ಸವದಲ್ಲೂ ಎಂತಹ ಪರಿಸ್ಥಿತಿ ಇದ್ದರೂ ವರ್ಣರಂಜಿತ ವಿಶೇಷಾಂಕದೊಂದಿಗೆ ಓದುಗರೊಂದಿಗೆ ಸಂಭ್ರಮ ಹಂಚಿಕೊಳ್ಳುತ್ತಾ ಬಂದಿದ್ದೇವೆ.

ಕಳೆದ ಮೂರು ವರ್ಷದಿಂದ ವಿಶ್ವವನ್ನೇ ತಲ್ಲಣಗೊಳಿಸಿರುವ ಮಹಾಮಾರಿ ಕೊರೊನಾ ವೈರಸ್ (ಸೋಂಕು) ಭೀತಿಯ ನಡುವೆಯೂ ಕೇಂದ್ರ–ರಾಜ್ಯ ಸರ್ಕಾರದ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಾ 'ಮಿತ್ರ' ನಿಮ್ಮ ಕೈಸೇರುತ್ತಿದೆ. ಈ ಸಂಕಷ್ಟದ ಪರಿಸ್ಥಿತಿಯಲ್ಲೂ, ಈ ವಾರ್ಷಿಕೋತ್ಸವದ ಸಂದರ್ಭದಲ್ಲಿ 32 ಪುಟಗಳ ವರ್ಣರಂಜಿತ ವಿಶೇಷಾಂಕ ನಿಮ್ಮ ಕೈ ಸೇರುತ್ತಿದೆ ಎಂದು ಹೇಳಲು ಸಂತೋಷವಾಗುತ್ತಿದೆ.

ಯಾವುದೇ ಸಂಸ್ಥೆಯ ಪ್ರಗತಿಯ ಹಾದಿಯಲ್ಲಿ 42 ವರ್ಷಗಳ ಪಯಣ ಅಷ್ಟೊಂದು ಸರಳ, ಸುಗಮವೇನಲ್ಲ. ಈಗ 42 ಸಂವತ್ಸರಗಳನ್ನು ಪೂರ್ಣಗೊಳಿಸಿರುವ 'ಮೈಸೂರು ಮಿತ್ರ'ನೂ ಡಿಜಿಟಲ್ ಮೀಡಿಯಾದ ಸವಾಲು, ಸಾಮಾಜಿಕ ಜಾಲತಾಣಗಳ ಪೈಪೋಟಿ, ಮೂರು ವರ್ಷದಿಂದ ಕೊರೊನಾ ಸೋಂಕಿನ ಕಾಟ, ಇದರ ನಡುವೆ ನ್ಯೂಸ್ ಪ್ರಿಂಟ್ ಬೆಲೆ ಏರಿಕೆ ಹೀಗೆ ಹಲವು ಸಮಸ್ಯೆ, ಸವಾಲುಗಳನ್ನು ಸಮರ್ಥವಾಗಿ ಎದುರಿಸಿ, ಈಗ 43ನೇ ವಸಂತಕ್ಕೆ ಕಾಲಿಟ್ಟಿದ್ದಾನೆ.


ಕೋವಿಡ್–19 ಜಾಡ್ಯದ ಆರ್ಭಟ ಮೂರು ವರ್ಷ ಕಳೆದರೂ ಮುಂದುವರೆದಿದೆ. ಸೋಂಕಿನ ಮೊದಲ ಹಾಗೂ ಎರಡನೇ ಅಲೆ ಸಾಕಷ್ಟು ಸಾವು–ನೋವು ತಂದಿತ್ತು. ಆದರೆ, ಅತೀ ಶೀಘ್ರವಾಗಿ ಲಸಿಕೆ ಸಂಶೋಧನೆ ನಡೆದು, ಅದು ತ್ವರಿತ ರೀತಿ ಜನರಿಗೆ ತಲುಪಿದ್ದರಿಂದ ಕೊರೊನಾ 3ನೇ ಅಲೆಯಲ್ಲಿ ರೂಪಾಂತರಿ ವೈರಾಣುಗಳ ಆರ್ಭಟ ತಗ್ಗಿತು. ಈಗ 4ನೇ ಅಲೆಯ ಗುಮ್ಮನ ಬಗ್ಗೆ ಪ್ರಸ್ತಾಪವಾಗುತ್ತಿದೆ. ಇದಕ್ಕೆ ಕಡಿವಾಣ ಹಾಕಲು ಕೇಂದ್ರದ ನೇತೃತ್ವದಲ್ಲಿ ರಾಜ್ಯ ಸರ್ಕಾರಗಳು ಸಾಕಷ್ಟು ಮುನ್ನೆಚ್ಚರಿಕಾ ಕ್ರಮ ಕೈಗೊಂಡಿವೆ.

ಮೊದಲ ಹಂತದಲ್ಲಿ ಈ ಮಾರಣಾಂತಿಕ ಸೋಂಕು ತಡೆಯಲು ಕೇಂದ್ರ ಸರ್ಕಾರ **'ಲಾಕ್‌ಡೌನ್'** ಜಾರಿಗೊಳಿಸಿತ್ತು. 'ಜೀವ ಉಳಿಸಿಕೊಂಡು ಜೀವನ ಕಂಡುಕೊಳ್ಳಿ' ಸಂದೇಶದ ಮೂಲಕ ಜೀವ ರಕ್ಷಣೆಗೋಸ್ಕರ ಪ್ರತಿಯೊಬ್ಬರೂ ಎಚ್ಚರಿಕಾ ಕ್ರಮಗಳನ್ನು ಪಾಲಿಸಲೇಬೇಕು ಎಂದು ಉಭಯ ಸರ್ಕಾರಗಳೂ ಜನರಲ್ಲಿ ಜಾಗೃತಿ ಮೂಡಿಸಿದ್ದವು. ಈ ವೇಳೆ ದೇಶದ ಎಲ್ಲಾ ರೀತಿಯ ಸಾರಿಗೆ ಸಂಚಾರ ವ್ಯವಸ್ಥೆ ಸ್ಥಗಿತಗೊಂಡಿತ್ತು, ಕೈಗಾರಿಕೆಗಳೂ ಬಂದ್ ಆಗಿದ್ದವು. ಸರ್ಕಾರಿ, ಖಾಸಗಿ ಶಾಲಾ–ಕಾಲೇಜು, ಕಚೇರಿಗಳು ಮುಚ್ಚಿದ್ದವು. ವ್ಯಾಪಾರ, ವಾಣಿಜ್ಯ ವಹಿವಾಟು ಸ್ಥಗಿತವಾಗಿತ್ತು. ಮೂಲ ಸೌಕರ್ಯಗಳಿಗೆ ಸೀಮಿತವಾಗಿ ಜನ–ವಾಹನ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗಿತ್ತು. ಇಂಥ ಪರಿಸ್ಥಿತಿಯಲ್ಲಿ ದಿನಪತ್ರಿಕೆಗಳ ಪ್ರಸರಣ ಬೇಕೇ, ಬೇಡವೇ ಎಂಬ ಗೊಂದಲ ಉಂಟಾಯಿತು. ಪತ್ರಿಕಾಲಯಗಳು ಪತ್ರಿಕೆ ಹೊರತರಲು ಸಿದ್ಧವಿದ್ದರೂ ಓದುಗರಿಗೆ ತಲುಪಿಸಲು ಪ್ರಸರಣ ವ್ಯವಸ್ಥೆಯಲ್ಲಿ ತೊಡಕಾಗಿದ್ದರಿಂದ ಕೆಲವು ಪತ್ರಿಕೆಗಳು ಅನಿವಾರ್ಯವಾಗಿ ತಾತ್ಕಾಲಿಕ ರಜೆ ಘೋಷಿಸಿ, ಮುದ್ರಣ ನಿಲ್ಲಿಸಿದವು. ಬಳಿಕ ಕೆಲ ದಿನಗಳಲ್ಲೇ ಪರಿಸ್ಥಿತಿ ಬದಲಾಯಿತು. 'ಪತ್ರಿಕೆ'ಗಳೇ ಸುರಕ್ಷಿತ ಮಾಧ್ಯಮ ಎಂಬುದು ಜನರಿಗೆ ಮನವರಿಕೆಯಾಯಿತು. ಸರ್ಕಾರಗಳೂ ಅದನ್ನು ದೃಢಪಡಿಸಿದವು.

ಅಲ್ಲಿಂದ ಪತ್ರಿಕೆಗಳು ಚೇತರಿಕೆ ಕಾಣುತ್ತಿರುವಂತೆಯೇ ಈಗ ರಷ್ಯಾ–ಉಕ್ರೇನ್ ಯುದ್ಧ ಅಕ್ಷರಶಃ ಮುದ್ರಣ ಮಾಧ್ಯಮಕ್ಕೆ ಕಂಟಕವನ್ನೇ ತಂದೊಡ್ಡಿದೆ. ಭಾರತಕ್ಕೆ ಅನ್ವಯಿಸುವಂತೆ ಹೇಳುವುದಾದರೆ ಶೇ. 75ಕ್ಕೂ ಅಧಿಕ ಮುದ್ರಣ ಕಾಗದ ಆಮದಾಗುತ್ತದೆ. ಬಹುತೇಕ ದೊಡ್ಡ, ಮಧ್ಯಮ ಮುದ್ರಣ ಮಾಧ್ಯಮ ಸಂಸ್ಥೆಗಳು ಆಮದು ಮುದ್ರಣ ಕಾಗದವನ್ನೇ ಅವಲಂಬಿಸಿವೆ. ಭಾರತದ ವಿಚಾರದಲ್ಲಿ ಸಿಂಹಪಾಲು ಮುದ್ರಣ ಕಾಗದ ಆಮದಾಗುವುದು ಕೆನಡಾ ಹಾಗೂ ರಷ್ಯಾದಿಂದ. ಆದರೆ ಯುದ್ಧದಿಂದಾಗಿ ಆಮದು ವಹಿವಾಟು ಸ್ಥಗಿತಗೊಂಡಿದ್ದು, ಮುದ್ರಣ ಕಾಗದದ ಕೊರತೆ, ಅದರ ಬೆಲೆ ಗಗನಕ್ಕೇರುವಂತೆ ಮಾಡಿದೆ. ಈ ಮೊದಲೇ ಕೊರೊನಾದಿಂದ ಏರಿಕೆ ಕಂಡಿದ್ದ ಮುದ್ರಣ ಕಾಗದದ **(ನ್ಯೂಸ್ ಪ್ರಿಂಟ್)** ದರ ಈಗ ಯುದ್ಧದಿಂದ ದುಪ್ಪಟ್ಟಾಗಿದೆ. ಆಮದು ವ್ಯತ್ಯಯದ ಜೊತೆಗೆ ದೇಶೀಯವಾಗಿರುವ ದೈತ್ಯ ಮುದ್ರಣ ಮಾಧ್ಯಮಗಳ ಪೈಪೋಟಿಯಿಂದಾಗಿ ಸಣ್ಣ ಪ್ರಮಾಣದ ಮುದ್ರಣ ಮಾಧ್ಯಮಗಳು ಇನ್ನೂ ಸಂಕಷ್ಟಕ್ಕೀಡಾಗುವ ಪರಿಸ್ಥಿತಿ ಬಂದಿದೆ. ಆದರೆ, ನಾವಂತು ನಮ್ಮ ಓದುಗರ ಹಿತದೃಷ್ಟಿಯಿಂದ ಇದನ್ನು ಸಹಿಸಿಕೊಂಡು, ಪುಟ ಸಂಖ್ಯೆಯನ್ನು ನಿಶ್ಚಿತವಾಗಿ ಕಾಯ್ದುಕೊಂಡು ಬರುತ್ತಿದ್ದೇವೆ. ನಿಜ, ನಮ್ಮ ಓದುಗರು ಹಾಗೂ ಭವಿಷ್ಯದ ಮೇಲೆ ನಮಗೆ ಅಪಾರ ವಿಶ್ವಾಸವಿದೆ. ಇಂದಲ್ಲ ನಾಳೆ ಪರಿಸ್ಥಿತಿ ಸುಧಾರಿಸುತ್ತದೆ.

ಈ ಮಧ್ಯೆ ಕೊರೊನಾ ನಾಲ್ಕನೇ ಅಲೆ ಬರುತ್ತಿದೆ. ಮಾಸ್ಕ್ ಧರಿಸಿ, ಸಾಮಾಜಿಕ ಅಂತರ ಕಾಯ್ದುಕೊಳ್ಳಿ ಎಂದು ಸರ್ಕಾರಗಳು ನೀಡುತ್ತಿರುವ ಎಚ್ಚರಿಕೆಯನ್ನು, ಆರೋಗ್ಯ ಹಿತದೃಷ್ಟಿಯ ಸಲಹೆ–ಸೂಚನೆಗಳನ್ನು ಚಾಚೂ ತಪ್ಪದೇ ಪಾಲಿಸೋಣ. ನಾವಂತೂ ಕೊರೊನಾ ಮಾರ್ಗಸೂಚಿಯನ್ನು ಈಗಲೂ ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದೇವೆ. ಓದುಗರ ಸುರಕ್ಷತೆಗೆ ಹೆಚ್ಚಿನ ಬದ್ಧತೆ ಪ್ರದರ್ಶಿಸುವ ವಾಗ್ದಾನವನ್ನು 'ಮಿತ್ರ' ಮಾಡಲಿದೆ. ನಾಲ್ಕು ದಶಕಗಳಿಗೂ ಅಧಿಕ ಕಾಲದಿಂದಲೂ 'ಮಿತ್ರ'ನನ್ನು ಪೋಷಿಸಿ–ಬೆಳೆಸಿದ ಓದುಗ ಮಹಾಶಯರು, ನಮಗೆ ಸದಾ ಒತ್ತಾಸೆಯಾದ ಜಾಹೀರಾತುದಾರರು, ವಿಶೇಷವಾಗಿ ಮನೆ ಮನೆಗೆ 'ಮಿತ್ರ'ನ ತಲುಪಿಸುತ್ತಾ ಬಂದಿರುವ ಪತ್ರಿಕಾ ವಿತರಕರಿಗೆ ಈ ಸಂದರ್ಭದಲ್ಲಿ ನಮ್ಮ ಹೃದಯಪೂರ್ವಕ ಕೃತಜ್ಞತೆಗಳು. ಧನ್ಯೋಸ್ಮಿ.

—ಸಂಪಾದಕ



ಕೆಬಿಜಿಯವರ

ಛೂಮಂತ್ರ... ಛೂಮಂತ್ರ... ಛೂಮಂತ್ರ...

ಮೈಸೂರು ಮಹಾನಗರ ಪಾಲಿಕೆ : ನೀವು, ಈ ಮುಂಗಾರು ವಿಪತ್ತು ನಿರ್ವಹಣೆಗೆ ಸಜ್ಜಾಗಿದ್ದಿರಾ?



ಮೈಸೂರು ಮಹಾನಗರ ಪಾಲಿಕೆ



ಲ್ಯಾನ್ಸ್‌ಡೌನ್ ಬಿಲ್ಡಿಂಗ್



ದೇವರಾಜ ಮಾರುಕಟ್ಟೆ



ಸರ್ಕಾರಿ ಅತಿಥಿ ಗೃಹ



ವೆಲ್ಲಿಂಗ್‌ಟನ್ ಹೌಸ್

ಈಗ ಬೇಸಿಗೆ ಇದ್ದರೆ, ಮುಂಗಾರು ಅಥವಾ ಮಳೆಗಾಲ ದೂರ ಇರುವುದೇ? ಇಲ್ಲ ಅಲ್ಲವೆ. ಮೇ, ಜೂನ್ ತಿಂಗಳು ಬಂತೆಂದರೆ, ಮೇಲಿನ ನೀಲಿ ಆಕಾಶವು ಬೂದು ಬಣ್ಣಕ್ಕೆ ತಿರುಗಿ ಕ್ರಮೇಣ ಕಪ್ಪು ಬಣ್ಣಕ್ಕೆ ತಿರುಗುತ್ತದೆ ಮತ್ತು ಗಾಳಿಯು ವೇಗವಾಗಿ ಬೀಸುತ್ತದೆ. ಬಿರು ಬಿಸಿಲಿನಿಂದ ಕಾದಿರುವ ಭೂಮಿಯು ಸುರಿಯುವ ಧಾರಾಕಾರ ಮಳೆಯಿಂದ ತನಗೆ ತಾನೇ ತೊಯ್ದು ಹೋಗುತ್ತದೆ.

ಮಳೆ ಮೊದ ಮೊದಲು ಕಳ್ಳನಂತೆ ಬರುತ್ತದೆ. ಸದ್ದಿಲ್ಲದೇ, ಮುನ್ಸೂಚನೆಯೂ ಇಲ್ಲದೆ ಹಾಗೂ ಊಹಿಸಲಾಗದ ರೀತಿಯಲ್ಲಿ. ಬಡಪಾಯಿ ದ್ವಿಚಕ್ರ ವಾಹನ ಸವಾರರು ಹೇಳದೇ, ಕೇಳದೇ ಅನಿರೀಕ್ಷಿತವಾಗಿ ಬರುವ ಮಳೆಯ ನೀರಿನಲ್ಲಿ ಸಿಕ್ಕಿ ಹಾಕಿಕೊಳ್ಳುತ್ತಾರೆ. ಸಾಮಾನ್ಯವಾಗಿ ಮುಂಗಾರು ದಪ್ಪದಾದ ಹನಿಯಿಂದ ಆರಂಭವಾಗಿ ಕ್ರಮೇಣ ಧೋ ಎಂದು ಸುರಿಯುತ್ತದೆ. ಗುಡುಗಿನ ಅಬ್ಬರ, ಸಿಡಿಲ ಬಡಿತ ಹಾಗೂ ಮಿಂಚಿನ ಜೊತೆಗೂಡಿ, ಆಕಾಶದಲ್ಲಿ ಕಡು ಕಪ್ಪು ಬಣ್ಣದ ಮೋಡಗಳ ಸಂಘರ್ಷವೇ ಏರ್ಪಡುತ್ತದೆ. ಕ್ರಮೇಣ ಪ್ರಾರಂಭವಾಗುವ ಮಳೆ ಅಬ್ಬರ ಸುನಾಮಿ ರೀತಿಯ ವೇಗದಲ್ಲಿ ಭೂಮಿಗೆ ಅಪ್ಪಳಿಸುತ್ತದೆ. ಜನರಲ್ಲಿ ಆತಂಕಕ್ಕೂ ಕಾರಣವಾಗುತ್ತದೆ.

ನಾನು ಮಳೆಯ ಬಗ್ಗೆ ಮಾತನಾಡುವುದಾದರೂ ಏಕೆ ಗೊತ್ತಾ? ಏಕೆಂದರೆ ಕಳೆದ 2–3 ವರ್ಷಗಳಲ್ಲಿ ನಮ್ಮ ಮೈಸೂರು ಮಹಾನಗರದಲ್ಲಿ, ಅತ್ಯಂತ ವೇಗವಾಗಿ ಬೀಸುವ ಬಿರುಗಾಳಿ ಮತ್ತು ಭಾರೀ ಮಳೆ ಸೃಷ್ಟಿಸಿದ ಅವಾಂತರಗಳನ್ನು, ಅನಾಹುತಗಳನ್ನು ಅಧ್ವಾನಗಳನ್ನು ನಾನು ಚೆನ್ನಾಗಿ ಬಲ್ಲೆ. ನಗರವನ್ನು ಹಾಯ್ದು ವಸತಿ ಬಡಾವಣೆಗಳಲ್ಲಿ ಹರಿಯುವ ಚರಂಡಿಯ ನೀರು, ಮಳೆಯಿಂದ ತುಂಬಿ ತುಳುಕುವ ರಸ್ತೆಗಳು ಹಾಗೂ ಯುಜಿಡಿ, ಮ್ಯಾನ್‌ಹೋಲ್‌ಗಳಿಂದ ಉಕ್ಕಿ, ತಗ್ಗುಪ್ರದೇಶದ ಮನೆಗಳಿಗೆ ನುಗ್ಗುವ ಕೆಸರು ನೀರನ್ನು ನೋಡಿದ್ದೀವಿ. ಒಳಚರಂಡಿಗಳಿಂದ ಉಕ್ಕಿ ಹರಿಯುವ ಮಳೆಯ ನೀರು ರಸ್ತೆಯಲ್ಲಿ ನದಿಯಂತೆ ಪ್ರವಾಹವನ್ನು ಉಂಟು ಮಾಡುತ್ತದೆ. ಅನೇಕ ವೇಳೆ ರಸ್ತೆಯಲ್ಲಿ ನಿಲ್ಲಿಸಿದ್ದ ವಾಹನಗಳು ತೇಲಾಡುವುದಲ್ಲದೆ ಕೊಚ್ಚಿ ಹೋಗುವುದನ್ನು, ನೋಡಿದ್ದೇನೆ. ಭಾರೀ ಮಳೆ ಸುರಿಯುವ ಕಾಲದಲ್ಲಿ ಇದು ಸಾಮಾನ್ಯವಾದ ನೋಟವಾಗಿರುತ್ತದೆ.

ಆದರೆ, ಇದಕ್ಕಿಂತ ಅತೀ ಕೆಟ್ಟದಾದ ದೃಶ್ಯವೆಂದರೆ, ಕಡಿದಾದ ಇಳಿಜಾರುಗಳಲ್ಲಿ ಮತ್ತು ಚಾಮುಂಡಿಬೆಟ್ಟದಲ್ಲಿ ಉಂಟಾಗುವ ಭೂಕುಸಿತಗಳು. ಇದರ ಜೊತೆಗೆ ಶತಮಾನಗಳಷ್ಟು ಹಳೆಯದಾದ ಸುಪ್ರಸಿದ್ಧ ದೇವರಾಜ ಮಾರುಕಟ್ಟೆ, ಲ್ಯಾನ್ಸ್‌ಡೌನ್ ಹಾಗೂ ಇತರ ಪಾರಂಪರಿಕ ಸ್ಮಾರಕಗಳೆಂದು ಹೇಳಲಾಗುವ ಕಟ್ಟಡಗಳ ಸಂಭವನೀಯ ಕುಸಿತ.

ನಮ್ಮ ಮೈಸೂರು ಮಹಾನಗರ ಪಾಲಿಕೆ (ಎಂಸಿಸಿ) ಹಾಗೂ ಲೋಕೋಪಯೋಗಿ ಇಲಾಖೆ (ಪಿಡಬ್ಲ್ಯೂಡಿ)ಗಳು ಈ ರೀತಿಯ ಮಳೆಯಿಂದ ಉಂಟಾಗುವ ಪ್ರಕೃತಿ ವಿಕೋಪ ಪರಿಸ್ಥಿತಿಗಳನ್ನು ನಿರೀಕ್ಷಿಸಿಕೊಂಡು ಪರಿಸ್ಥಿತಿಯನ್ನು ಸರಿಯಾದ ಸಮಯದಲ್ಲಿ ಸಮರ್ಥವಾಗಿ ನಿರ್ವಹಿಸಲು ಸರ್ವ ಸನ್ನದ್ಧವಾಗಬೇಕಾಗಿದೆ. ಅಷ್ಟಕ್ಕೂ ಅವರು ಮುಂಗಾರಿಗೆ ಸಿದ್ಧರಾಗಿದ್ದಾರೆಯೇ?

ಮುಂದೆ ಎದುರಾಗಬಹುದಾದ ಸಂಭವನೀಯ ಘಟನೆಗಳನ್ನು ಎದುರಿಸಲು ಪರಿಹಾರ ಕಾರ್ಯಾಚರಣೆ ಅವರಲ್ಲಿ ಎಲ್ಲಾ ಸುರಕ್ಷತಾ ಉಪಕರಣಗಳು, ಸಾಧನಾ ಸಾಮಗ್ರಿಗಳು ಹಾಗೂ ತರಬೇತಿ ಪಡೆದ ಸಿಬ್ಬಂದಿ ಇದ್ದಾರೆಯೇ? ನೀರು ತುಂಬಿರುವ ರಸ್ತೆಗಳಲ್ಲಿ ಸರಾಗವಾಗಿ ಓಡಾಡಲು ಸಾಧ್ಯವಾಗುವಂತಹ ಗಾಳಿ ತುಂಬಬಹುದಾದ ರಬ್ಬರಿನ ರಕ್ಷಣಾ ದೋಣಿಗಳು ಮತ್ತು ನೀರು ತುಂಬಿರುವ ರಸ್ತೆಗಳಲ್ಲಿ ಚಲಿಸಲು ಸಾಧ್ಯವಿರುವ ವಾಹನಗಳು ಸಜ್ಜಾಗಿವೆಯೇ?

ಅಗ್ನಿಶಾಮಕ ಪಡೆ ಸಿದ್ಧವಾಗಿದೆಯೇ ? ಇಂತಹ ವಿಕೋಪ ಪರಿಸ್ಥಿತಿಗಳಿಂದ ಮನುಷ್ಯರು ಮತ್ತು ಪ್ರಾಣಿಗಳನ್ನು ರಕ್ಷಿಸಲು ಇರುವ ಶಿಷ್ಟಾಚಾರಗಳೇನು? ಅಂತಹ ವಿಕೋಪ ಪ್ರದೇಶಗಳಿಂದ ಸ್ಥಳಾಂತರಗೊಂಡ ಜನರು ಮತ್ತು ಪ್ರಾಣಿಗಳಿಗೆ ಸುರಕ್ಷಿತ ಆಶ್ರಯ ತಾಣವನ್ನು ಎಲ್ಲಿ ಕಲ್ಪಿಸುತ್ತಾರೆ? ಅವರಿಗೆಲ್ಲಾ ಹೇಗೆ ಪುನರ್ವಸತಿ ಕಲ್ಪಿಸುತ್ತಾರೆ? ಅವರಿಗೆ ಬೇಕಾಗುವ ಆಹಾರ ಮತ್ತು ಔಷಧಿಗಳ ಪಾಡೇನು?

> “ ಪಾರಂಪರಿಕ ಕಟ್ಟಡಗಳ ಪ್ರೇಮಿಗಳೆಂದು ಕರೆಸಿಕೊಳ್ಳುವವರು ತುಂಬಾ ಹಗುರವಾದ, ಒಂದು ರೀತಿಯ ವಿವೇಕರಹಿತ ಪ್ರಶ್ನೆಗಳನ್ನು ಕೇಳುತ್ತಾರೆ : ಶತಮಾನಕ್ಕೂ ಹಳೆಯದಾದ ಸರ್ಕಾರಿ ಭವನ ಹಾಗೂ ವೆಲ್ಲಿಂಗ್ಟನ್ ಹೌಸ್ ಕಟ್ಟಡಗಳನ್ನು ನೋಡಿ. ಅವು ಈಗಲೂ ಹೇಗೆ ಸುಸ್ಥಿತಿಯಲ್ಲಿ ಒಳ್ಳೆಯ ಕಟ್ಟಡಗಳಾಗಿ ಉಳಿದುಕೊಂಡಿವೆ? ಇದೊಂದು ಅವಿವೇಕತನದಿಂದ ಪೆದ್ದರು ಕೇಳುವ ಪ್ರಶ್ನೆ. ಈ ಕಟ್ಟಡಗಳ ಬಾಳಿಕೆ, ನಿರ್ಮಾಣದ ಗುಣಮಟ್ಟ ಮತ್ತು ಅವುಗಳನ್ನು ನಿರ್ಮಿಸಿದ ಇಂಜಿನಿಯರುಗಳನ್ನು ಅವಲಂಬಿಸಿದೆ. ಆದರೆ, ಎಲ್ಲಕ್ಕಿಂತ ಮುಖ್ಯವಾಗಿ, ಈ ಎರಡು ಕಟ್ಟಡಗಳು ವಾಸದ ಕಟ್ಟಡಗಳಾಗಿದ್ದವು. ಉತ್ತಮ ನಿರ್ವಹಣೆಗೆ ಒಳಗೊಂಡಿವೆ. ಮೇಲಾಗಿ ದುರುಪಯೋಗ ಹಾಗೂ ಪ್ರತಿನಿತ್ಯದ ಬಳಕೆಯಿಂದ ಹೊರಗೆ ಉಳಿದಿದ್ದವು. ಆದರೆ, ದೇವರಾಜ ಮಾರುಕಟ್ಟೆ ಮತ್ತು ಲ್ಯಾನ್ಸ್‌ಡೌನ್ ಕಟ್ಟಡ, ಅವುಗಳ ಬಾಡಿಗೆದಾರರಿಂದಲೇ ದುರುಪಯೋಗಕ್ಕೆ, ದುಸ್ಥಿತಿಗೆ ಒಳಗಾಗಿದ್ದವು (ತಮ್ಮ ವ್ಯಾಪಾರ ವ್ಯವಹಾರಗಳಿಗೆ ಅನುಕೂಲವಾಗುವಂತಹ ರೀತಿಯಲ್ಲಿ ಮಳಿಗೆಗಳನ್ನು ಮನಬಂದಂತೆ ಮಾರ್ಪಾಡುಗೊಳಿಸುತ್ತಿದ್ದರು). ಇದರಿಂದಾಗಿ ಅನೇಕ ಗೋಡೆಗಳು ಬಿರುಕು ಬಿಟ್ಟಿದ್ದವು ಹಾಗೂ ಕಟ್ಟಡದ ಅಡಿಪಾಯ ಹಾಗೂ ಮೂಲ ಸ್ವರೂಪ ನಿಶಕ್ತಗೊಂಡವು.

ಚೆಸ್ಕ್ (ವಿದ್ಯುತ್ ಇಲಾಖೆ) : ನೀವು ಮುಂಗಾರಿನ ಅವಘಡಗಳ ಪರಿಸ್ಥಿತಿ ನಿಭಾಯಿಸಲು ಸಿದ್ಧವಾಗಿದ್ದೀರಾ?

ಅರಣ್ಯ ಇಲಾಖೆ : ಭಾರೀ ಗಾಳಿ, ಮಳೆಯ ಆರ್ಭಟದಿಂದ ರಸ್ತೆಯ ಮೇಲೆ ಉರುಳುವ ಮರಗಳನ್ನು ಶೀಘ್ರ ಗತಿಯಲ್ಲಿ ಕಡಿದು, ಸಾಗಿಸಲು ಅನುಕೂಲವಾಗುವಂತೆ ತುಂಡರಿಸಲು ಬೇಕಾದ ಬ್ಯಾಟರಿ ಚಾಲಿತ ಉಪಕರಣ ಮತ್ತು ಗರಗಸಗಳೊಂದಿಗೆ ನೀವು ಸಿದ್ಧವಾಗಿದ್ದೀರಾ?

ಮುಂಗಾರು ಪ್ರಾರಂಭವಾಗುವುದಕ್ಕಿಂತ ಮುಂಚಿತವಾಗಿ ಅಂತಹ ಅವಘಡಗಳನ್ನು ಎದುರಿಸಲು, ನಮ್ಮ ಚುನಾಯಿತ ಪ್ರತಿನಿಧಿಗಳು ಹಾಗೂ ಸಂಬಂಧಪಟ್ಟ ಅಧಿಕಾರಿಗಳು ತಮ್ಮ ಬುದ್ಧಿ ಚಮತ್ಕಾರಗಳನ್ನು ಉಪಯೋಗಿಸುತ್ತಾರೆ ಎಂದು ಭಾವಿಸೋಣ. ಹವಾಮಾನದ ಬದಲಾವಣೆಯಿಂದಾಗಿ, ಹಿಂದಿನ ಹಾಗೆ ಮಳೆಯು ಏಕಾಏಕಿ ಯದ್ವಾತದ್ವಾ ಹಾಗೂ ಭೀಕರ ರೀತಿಯಲ್ಲಿ ಸುರಿಯಬಹುದು.

ಈಗ, ಶತಮಾನಗಳಷ್ಟು ಹಳೆಯದಾದ, ಪಾರಂಪರಿಕ ಕಟ್ಟಡಗಳೆಂದು ಬಿಂಬಿತವಾಗುತ್ತಿರುವ ಬೃಹತ್ ಕಟ್ಟಡಗಳಾದ **ದೇವರಾಜ ಮಾರುಕಟ್ಟೆ ಮತ್ತು ಲ್ಯಾನ್ಸ್‌ಡೌನ್ ಕಟ್ಟಡಗಳ** ವಿಚಾರಕ್ಕೆ ಬರುತ್ತೇನೆ. ಮಳೆ ಜೋರಾಗಿ ಬಿದ್ದರೆ, 2016ರ ಆಗಸ್ಟ್ ತಿಂಗಳಲ್ಲಿ ಒಂದು ಭಾಗ ಕುಸಿದಂತೆ, ದೇವರಾಜ ಮಾರುಕಟ್ಟೆಯ ಇನ್ನೊಂದು ಭಾಗವೂ ಕುಸಿಯಲೂಬಹುದು.

ಆದರೆ, ಇಲ್ಲಿ ತೊಂದರೆಯೆಂದರೆ ಪಾರಂಪರಿಕ ಕಟ್ಟಡಗಳನ್ನು ಉಳಿಸಲು ಹೊರಟಿರುವ ಮಹಾನುಭಾವರು ಮತ್ತು ಬುದ್ಧಿಜೀವಿಗಳು. ಇದಕ್ಕಾಗಿ 'ಮಂಥನ'ಕ್ಕೆ ನಿಂತಿರುವ ಎರಡು ಗುಂಪಿನ ಜನರಿದ್ದಾರೆ. ಪುರಾಣದಲ್ಲಿ ಬರುವ 'ಸಮುದ್ರ ಮಂಥನ'ದ ಹಾಗೆ. **ಪಾರಂಪರಿಕ ಕಟ್ಟಡಗಳನ್ನು ಉಳಿಸಿಕೊಳ್ಳಲು ಪರಿಣಿತರ ಒಂದು ಗುಂಪಿದೆ. ಮತ್ತೊಂದೆಂದರೆ ಸರ್ಕಾರ.** ಅವಶ್ಯಕತೆ ಇದ್ದಲ್ಲಿ ಅದೇ ರೀತಿಯ ವಾಸ್ತುಶಿಲ್ಪವನ್ನು ಉಳಿಸಿಕೊಂಡು ಕಟ್ಟಡವನ್ನು ನೆಲಸಮ ಮಾಡಿ ಪುನಃನಿರ್ಮಾಣ ಮಾಡುವುದು. ಕೆಲವು ಬಾಡಿಗೆದಾರರು, ಈ ಕಟ್ಟಡಕ್ಕೆ ತೇಪೆ ಹಚ್ಚಿ ಈಗ ಹೇಗಿದೆಯೋ ಹಾಗೆಯೇ ಇರಬೇಕೆಂದು ಒತ್ತಾಯಿಸಿ ಈಗ ಈ ವಿಷಯವನ್ನು ನ್ಯಾಯಾಲಯದ ಮುಂದೆ ಕೊಂಡೊಯ್ದಿದ್ದಾರೆ. ನ್ಯಾಯಾಲಯವು ತೀರ್ಪು ನೀಡುವ ಹೊತ್ತಿಗೆ ಮುಂಗಾರು ಪ್ರಾರಂಭವಾಗಿರುತ್ತದೆ. ಶಿಥಿಲವಾದ ಸ್ಥಿತಿಯಲ್ಲಿ ನಿಂತಿರುವ ದೇವರಾಜ ಮಾರುಕಟ್ಟೆ ಕಟ್ಟಡ ಯಾವಾಗ ಏನಾಗುತ್ತದೆಯೋ ಆ ದೇವರೇ ಬಲ್ಲ.

ಹಲೋ, ಮೈಸೂರು ನಗರ ಪಾಲಿಕೆ, ಈ ಮುಂಗಾರಿನಲ್ಲಿ ನೀನು ವಿಪತ್ತು ನಿರ್ವಹಣೆಗೆ ಸಜ್ಜಾಗಿದ್ದೀಯಾ ? ಅಥವಾ ಪಾರಂಪರಿಕ ಕಟ್ಟಡಗಳನ್ನು ಉಳಿಸುವ ಸಲಹೆಗಾರರಿಗೆ ಬಹು ಮೊತ್ತದ ಶುಲ್ಕ ನೀಡಿ, ಪಾರಂಪರಿಕ ಸ್ಮಾರಕಗಳ ಸಂರಕ್ಷಣೆ ಮಾಡುವ ವಿಚಾರದಲ್ಲಿ ಪವಾಡ ಮಾಡಬಹುದೆಂದು ಎದುರು ನೋಡುತ್ತಿರುವೆಯಾ? (ಈ ಹಿಂದೆ ನಡೆದಿರುವ ಹಾಗೆ).

ಈಗ ಲ್ಯಾನ್ಸ್‌ಡೌನ್ ಕಟ್ಟಡದ ವಿಚಾರಕ್ಕೆ ಬರೋಣ: 2012ರ ಆಗಸ್ಟ್‌ನಲ್ಲಿ ಸಂಭವಿಸಿದ ದುರಂತದಿಂದ ಕಟ್ಟಡದ ಒಂದು ಮಳಿಗೆ ಕುಸಿದು ಬಿದ್ದು, ನಾಲ್ಕು ಜನ ಬಡಪಾಯಿಗಳು ಮೃತಪಟ್ಟ ಕಾರಣದಿಂದ ಈ ಕಟ್ಟಡವನ್ನು ಬಳಸುವುದು ತುಂಬಾ ಅಪಾಯಕಾರಿ ಎಂದು ಭಾವಿಸಿ ಒಂದು ದಶಕಕ್ಕೂ ಹೆಚ್ಚು ಕಾಲದಿಂದ ಇದನ್ನು ತೊರೆಯಲಾಗಿದೆ. ಇದೊಂದು ರೀತಿ ಭೂತ ಬಂಗಲೆಯಂತೆ ಬಿಕೋ ಎನ್ನುತ್ತಿದೆ. ಒಂದೋ ಅದನ್ನು ಕೆಡವಿ ಹೊಸ ಕಟ್ಟಡ ಕಟ್ಟಲಿಲ್ಲ. ಹೋಗಲಿ ಅದನ್ನು ಪಾರಂಪರಿಕವಾಗಿ ಉಳಿಸಿಕೊಳ್ಳಲು ಈ ಪಾರಂಪರಿಕ ತಜ್ಞರಿಂದ ಆಗಲೂ ಇಲ್ಲ.

ಪಾರಂಪರಿಕ ಕಟ್ಟಡಗಳ ಪ್ರೇಮಿಗಳೆಂದು ಕರೆಸಿಕೊಳ್ಳುವವರು ತುಂಬಾ ಹಗುರವಾದ, ಒಂದು ರೀತಿಯ ವಿವೇಕರಹಿತ ಪ್ರಶ್ನೆಗಳನ್ನು ಕೇಳುತ್ತಾರೆ : ಶತಮಾನಕ್ಕೂ ಹಳೆಯದಾದ **ಸರ್ಕಾರಿ ಭವನ** ಹಾಗೂ **ವೆಲ್ಲಿಂಗ್ಟನ್ ಹೌಸ್** ಕಟ್ಟಡಗಳನ್ನು ನೋಡಿ. ಅವು ಈಗಲೂ ಹೇಗೆ ಸುಸ್ಥಿತಿಯಲ್ಲಿ ಒಳ್ಳೆಯ ಕಟ್ಟಡಗಳಾಗಿ ಉಳಿದುಕೊಂಡಿವೆ?

ಇದೊಂದು ಅವಿವೇಕತನದಿಂದ ಪೆದ್ದರು ಕೇಳುವ ಪ್ರಶ್ನೆ. ಈ ಕಟ್ಟಡಗಳ ಬಾಳಿಕೆ, ನಿರ್ಮಾಣದ ಗುಣಮಟ್ಟ ಮತ್ತು ಅವುಗಳನ್ನು ನಿರ್ಮಿಸಿದ ಇಂಜಿನಿಯರುಗಳನ್ನು ಅವಲಂಬಿಸಿದೆ. **ಆದರೆ, ಎಲ್ಲಕ್ಕಿಂತ ಮುಖ್ಯವಾಗಿ, ಈ ಎರಡು ಕಟ್ಟಡಗಳು ವಸತಿ ಕಟ್ಟಡಗಳಾಗಿದ್ದವು.** ಉತ್ತಮ ನಿರ್ವಹಣೆಗೆ ಒಳಗೊಂಡಿವೆ. ಮೇಲಾಗಿ ದುರುಪಯೋಗ ಹಾಗೂ ಪ್ರತಿನಿತ್ಯದ ಬಳಕೆಯಿಂದ ಹೊರಗೆ ಉಳಿದಿದ್ದವು. ಆದರೆ, ದೇವರಾಜ ಮಾರುಕಟ್ಟೆ ಮತ್ತು ಲ್ಯಾನ್ಸ್‌ಡೌನ್ ಕಟ್ಟಡ, ಅವುಗಳ ಬಾಡಿಗೆದಾರರಿಂದಲೇ ದುರುಪಯೋಗಕ್ಕೆ, ದುಸ್ಥಿತಿಗೆ ಒಳಗಾಗಿದ್ದವು (ತಮ್ಮ ವ್ಯಾಪಾರ ವ್ಯವಹಾರಗಳಿಗೆ ಅನುಕೂಲವಾಗುವಂತಹ ರೀತಿಯಲ್ಲಿ ಮಳಿಗೆಗಳನ್ನು ಮನಬಂದಂತೆ ಮಾರ್ಪಾಡುಗೊಳಿಸುತ್ತಿದ್ದರು). ಇದರಿಂದಾಗಿ ಅನೇಕ ಗೋಡೆಗಳು ಬಿರುಕು ಬಿಟ್ಟಿದ್ದವು ಹಾಗೂ ಕಟ್ಟಡದ ಅಡಿಪಾಯ ಹಾಗೂ ಮೂಲ ಸ್ವರೂಪ ನಿಶಕ್ತಗೊಂಡವು.

ಹಾಗೂ ದಿನನಿತ್ಯವೂ ವ್ಯಾಪಾರ–ವ್ಯವಹಾರಗಳಿಗಾಗಿ ಸಾವಿರಾರು ಜನರು ಕಾಲ್ನಡಿಗೆಯಲ್ಲಿ ಈ ಕಟ್ಟಡಗಳನ್ನು ಪ್ರವೇಶಿಸುತ್ತಿದ್ದರು. ಸ್ವಾಭಾವಿಕವಾಗಿ ಹಾಗೂ ಕಾಲಘಟ್ಟದ ಪರಿಣಾಮದಿಂದಾಗಿ ಈ ಎರಡೂ ಕಟ್ಟಡ ಶಿಥಿಲಗೊಂಡು ಕೆಲವು ಭಾಗಗಳು ಕುಸಿದು ಬೀಳಲು ಕಾರಣವಾಯಿತು. ಜೊತೆಗೆ ಪ್ರಾಕೃತಿಕ ವಿಕೋಪಗಳಾದ ಮಳೆ, ಗಾಳಿ ಹಾಗೂ ಅಜುಬಾಜಲ್ಲೇ ದಿನವಿಡೀ ಸಾವಿರಾರು ವಾಹನಗಳ ಸಂಚಾರದಿಂದ ಕಟ್ಟಡಗಳು ಅಸ್ಥಿರವಾಗುತ್ತಿದ್ದವು.

ಈ ಕಟ್ಟಡವನ್ನು ಉಪಯೋಗಿಸುವಂತಹವರು ಯಾವುದು ಒಳ್ಳೆಯದು ಎಂಬುದರ ಬಗ್ಗೆ ಗಂಭೀರ ಹಾಗೂ ವಸ್ತುನಿಷ್ಠವಾಗಿ ಯೋಚಿಸಬೇಕಿತ್ತು. ಭಾವೋದ್ವೇಗಕ್ಕೆ ಒಳಗಾದ ಭಾವನಾತ್ಮಕ ಮೂರ್ಖರಂತಲ್ಲ. ಈ ಕಟ್ಟಡಗಳು **ಪಾರಂಪರಿಕವಾಗಿ** ಪುನರ್‌ಜೀವನಗೊಂಡ (after conservation) ನಂತರ, ಭಾರೀ ಮಳೆಯಿಂದಾಗಿ ಈ ಕಟ್ಟಡಗಳು ಕುಸಿದು ಬೀಳುವುದನ್ನು ಹಾಗೂ ಜನರ ಸಾವನ್ನು ನಾವು ನೋಡಬೇಕೆ... ಕೇಳಬೇಕೆ?

ಮೈಸೂರು ಮಹಾನಗರ ಪಾಲಿಕೆ: ಈ ಮುಂಗಾರಿನಲ್ಲಿ ಆಗಬಹುದಾದ ವಿಪತ್ತಿನ ನಿರ್ವಹಣೆಗಾಗಿ ಸನ್ನದ್ಧವಾಗಿರಿ?

ನೆನಪಿರಲಿ: ಮುಂಚಿತವಾಗಿ ಎಚ್ಚರಿಸುವುದು ಸನ್ನದ್ಧರಾಗುವಂತೆ ಮಾಡುತ್ತದೆ.

(ಮೂಲ ಇಂಗ್ಲಿಷ್ ಲೇಖನದ ಕನ್ನಡ ಅನುವಾದ)

email: voice@starofmysore.com

ಸಂತೋಷ್ ಪಾಟೀಲ್ ಸಾವಿನ ಪ್ರಕರಣ: ಸೂಕ್ತ ತನಿಖೆ ನಡೆಸಲಿ

ನಿಮ್ಮ ಪತ್ರಗಳು

ಮಾನ್ಯರೆ,

ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್.ಈಶ್ವರಪ್ಪನವರು ಗುತ್ತಿಗೆ ಹಣದ ಬಿಲ್ ಮಂಜೂರು ಮಾಡಲು ಶೇ.40ರಷ್ಟು ಕಮಿಷನ್ ಕೇಳಿದರು ಎಂದು ಆರೋಪಿಸಿ, ತಮ್ಮ ಸಾವಿಗೆ ಅವರೇ ಕಾರಣ ಎಂದು ಹೇಳುವ ಡೆತ್ ನೋಟ್ ಬರೆದಿಟ್ಟು ಗುತ್ತಿಗೆದಾರ ಸಂತೋಷ್ ಎಂಬ ವ್ಯಕ್ತಿ ಆತ್ಮಹತ್ಯೆ ಮಾಡಿಕೊಂಡಿರುವುದರ ಬಗ್ಗೆ ಮಾಧ್ಯಮಗಳಲ್ಲಿ ನಾನಾ ರೀತಿಯ ವರದಿಗಳು ಪ್ರಕಟವಾಗುತ್ತಿವೆ. ಪ್ರತಿಪಕ್ಷವಾದ ಕಾಂಗ್ರೆಸ್, ಈಶ್ವರಪ್ಪನವರನ್ನು ಸಚಿವ ಸಂಪುಟದಿಂದ ವಜಾಗೊಳಿಸಬೇಕೆಂದು ಆಗ್ರಹಿಸಿ, ರಾಜ್ಯಪಾಲರಿಗೆ ಮನವಿ ಸಲ್ಲಿಸಿದೆ. ಸಾಮಾಜಿಕ ತಾಣಗಳಲ್ಲಿಯೂ ಈ ಬಗ್ಗೆ ಸಾಕಷ್ಟು ಪೋಸ್ಟಿಂಗ್ಸ್‌ಗಳು ಹರಿದಾಡುತ್ತಿವೆ. ತಮಗೆ ಮೃತ ಸಂತೋಷ್‌ನ ಪರಿಚಯವೇ ಇಲ್ಲ ಎಂದು ಹೇಳಿರುವ ಸಚಿವ ಈಶ್ವರಪ್ಪ, ತಾವು ಯಾರಿಂದಲೂ ಕಮಿಷನ್ ಕೇಳಿಲ್ಲ. ಇದೆಲ್ಲಾ ಪ್ರತಿಪಕ್ಷ ಕಾಂಗ್ರೆಸ್ ಹೂಡಿರುವ ಷಡ್ಯಂತ್ರ ಎಂಬ ಮಾಮೂಲಿ ವರಸೆಯಲ್ಲಿ ಮಾತನಾಡಿದ್ದಾರೆ ಹಾಗೂ ತಾವು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡುವ ಪ್ರಶ್ನೆಯೇ ಇಲ್ಲ ಎಂದಿದ್ದರು. (ಈಗ ರಾಜೀನಾಮೆ ನೀಡಿದ್ದಾರೆ) ಮತ್ತೊಂದು ಬೆಳವಣಿಗೆಯಲ್ಲಿ ಕೇಂದ್ರದ ಗೃಹ ಸಚಿವ ಅಮಿತ್ ಶಾ ಈಶ್ವರಪ್ಪನವರಿಂದ ನೇರವಾಗಿ ವರದಿ ಕೇಳಿದ್ದಾರೆನ್ನಲಾಗಿದೆ.

ಮತ್ತೊಂದು ಕಡೆ, ಗುತ್ತಿಗೆದಾರ ಸಂತೋಷ್ ಆತ್ಮಹತ್ಯೆ ಪ್ರಕರಣದಲ್ಲಿ ಸಚಿವ ಈಶ್ವರಪ್ಪ ಹಾಗೂ ಅವರ ಆಪ್ತರಾದ ಬಸವರಾಜು ಮತ್ತು ರಮೇಶ್ ವಿರುದ್ಧ ಏ.13ರಂದು ಉಡುಪಿಯ ಟೌನ್ ಪೊಲೀಸ್ ಠಾಣೆಯಲ್ಲಿ ಪ್ರಥಮ ವರ್ತಮಾನ ವರದಿ (ಎಫ್‌ಐಆರ್) ದಾಖಲಾಗಿದೆ. ಇವರನ್ನು ಎಫ್‌ಆರ್‌ಐನಲ್ಲಿ ಕ್ರಮವಾಗಿ 01, 02 ಮತ್ತು 03 ಎಂದು ಹೆಸರಿಸಲಾಗಿದೆ.

ರಾಜ್ಯದ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ.ಕೆಂಪಣ್ಣನವರು ಕೆಲವು ತಿಂಗಳ ಹಿಂದೆ ಪ್ರಧಾನಿ ಮೋದಿಯವರಿಗೆ ಪತ್ರ ಬರೆದು ರಾಜ್ಯದಲ್ಲಿ ನಡೆಯುವ ಕಾಮಗಾರಿಗಳ ಬಿಲ್ಲುಗಳನ್ನು ಪಾಸ್ ಮಾಡಿಸಲು ಸಂಬಂಧಪಟ್ಟ ಸಚಿವರಿಗೆ ಶೇ.40 ಕಮಿಷನ್ ನೀಡಬೇಕು ಎಂಬ ಆರೋಪ ಮಾಡಿದ್ದರೂ ಅವರ ದೂರಿನ ಮೇಲೆ ಇದುವರೆಗೂ ಕೇಂದ್ರ ಸರ್ಕಾರ ಯಾವುದೇ ಕ್ರಮ ಕೈಗೊಳ್ಳದಿರುವುದು ಅಚ್ಚರಿ ಎನಿಸುತ್ತದೆ. ಹೀಗಾಗಿ ಪ್ರತಿಪಕ್ಷಗಳ ಮೇಲೆ ಭ್ರಷ್ಟಾಚಾರದ ಆರೋಪ ಹೊರಿಸುವ ಯಾವ ನೈತಿಕತೆಯೂ ಆ ಪಕ್ಷಕ್ಕಿಲ್ಲ ಎಂದು ಹೇಳಬಹುದು. ಭ್ರಷ್ಟಾಚಾರ ನಿಲ್ಲಿಸದಿದ್ದರೆ, ಕಾಮಗಾರಿ ಸ್ಥಗಿತಗೊಳಿಸುವುದಾಗಿ ಎಚ್ಚರಿಕೆ ನೀಡಿರುವ ಕೆಂಪಣ್ಣ, ಐದಾರು ಸಚಿವರು, 20ಕ್ಕೂ ಹೆಚ್ಚು ಶಾಸಕರಿಂದ ಭ್ರಷ್ಟಾಚಾರ ನಡೆದಿದೆ ಎಂದು ಆರೋಪಿಸಿದ್ದಾರೆ ಹಾಗೂ 15 ದಿನಗಳ ಬಳಿಕ ಭ್ರಷ್ಟಾಚಾರದ ದಾಖಲೆ ಬಿಡುಗಡೆ ಮಾಡುವುದಾಗಿ ಘೋಷಿಸಿದ್ದು, ಈ ಪ್ರಕರಣದ ಸೂಕ್ತ ತನಿಖೆಗೆ ಸಂಬಂಧಪಟ್ಟವರಿಗೆ ಆದೇಶ ನೀಡಬೇಕಾಗಿದೆ. **–ಡಾ.ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು**

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಹೊನ್ನಾವರದಲ್ಲಿ ಶ್ರೀ ಲಕ್ಷ್ಮಿಕಾಂತಸ್ವಾಮಿ ರಥೋತ್ಸವ



ನಾಗಮಂಗಲ, ಏ.16(ಮಹೇಶ್)– ತಾಲೂಕಿನ ಬಿಂಡಿಗನವಿಲೆ ಹೋಬಳಿಯ ಸ್ವರ್ಣಪುರಿ ಎಂದೇ ಹೆಸರು ವಾಸಿಯಾಗಿರುವ ಹೊನ್ನಾವರದ ಲಕ್ಷ್ಮಿಕಾಂತಸ್ವಾಮಿ ಬ್ರಹ್ಮ ರಥೋತ್ಸವ ವೈಭವದಿಂದ ನೆರವೇರಿತು.

ಕಳೆದ ಮೂರು ದಿನಗಳಿಂದ ಅಂಕುರಾರ್ಪಣೆ, ಕಲ್ಯಾಣೋತ್ಸವ, ಗಜೇಂದ್ರ ಮೋಕ್ಷಗಳು, ಗರುಡ ಪಟದೊಂದಿಗೆ ಪ್ರಾರಂಭವಾದ ರಥೋತ್ಸವದ ಕಾರ್ಯಕ್ರಮಗಳು ನಡೆದವು.

ನಂತರ ಸಾವಿರಾರು ಭಕ್ತಾದಿಗಳ ಸಮ್ಮುಖದಲ್ಲಿ ಲಕ್ಷ್ಮಿಕಾಂತ ಸ್ವಾಮಿಯ ರಥೋತ್ಸವವೂ ಪ್ರಮುಖ ಬೀದಿಗಳಲ್ಲಿ ಸಂಚರಿಸಿತು. ಉತ್ಸವ ಸಂಚರಿಸಿದ ರಸ್ತೆಗಳಲ್ಲೆಲ್ಲಾ ಭಕ್ತಾದಿಗಳಿಗೆ ಕೋಸಂಬರಿ, ಪಾನಕ ಸೇವೆಗಳನ್ನು ಏರ್ಪಡಿಸಲಾಗಿತ್ತು. ಸುತ್ತಮುತ್ತಲಿನ ಗ್ರಾಮಗಳಾದ ಕ್ಯಾತನಹಳ್ಳಿ, ಮಾರನಾಯಕನಹಳ್ಳಿ, ಕೋಡಿಹಳ್ಳಿ ಮತ್ತು ಬೆಂಗಳೂರಿನ ಸಾವಿರಾರು ಭಕ್ತಾದಿಗಳು ರಥೋತ್ಸವದಲ್ಲಿ ಪಾಲ್ಗೊಂಡಿದ್ದರು.



ಬಿಚ್ಚು ನುಡಿ

ವಿಕ್ರಂ ಮುತ್ತಣ್ಣ

ನೀವೇ ಹೇಳಿ; ನಮಗೆ ಎಂಎಲ್‌ಸಿಗಳ ಅಗತ್ಯ ಇದೆಯೇ?

ಕಳೆದ ವರ್ಷ, ಕರ್ನಾಟಕ ವಿಧಾನಪರಿಷತ್ತಿಗೆ ಸ್ಥಳೀಯ ಸಂಸ್ಥೆಗಳಿಂದ ಚುನಾವಣೆ ನಡೆಯಿತು. ದುರದೃಷ್ಟಕರ ಸಂಗತಿ ಎಂದರೆ ಏನು ಗೊತ್ತೆ? ಗೆದ್ದಂತಹ ಅಭ್ಯರ್ಥಿ ಆತನ ಕಾರ್ಯಸೂಚಿಯ ಬಗ್ಗೆ ಚರ್ಚಿಸುವುದಕ್ಕಿಂತ, ಟಿಕೆಟ್ ಗಿಟ್ಟಿಸಲು ಹಾಗೂ ಮತದಾರರಿಗೆ ಹಂಚಲು ಯಾವೆಲ್ಲಾ ಅಭ್ಯರ್ಥಿಗಳು ಎಷ್ಟು ಹಣ ಖರ್ಚು ಮಾಡಿದರು ಎಂಬುದರ ಬಗ್ಗೆ ಬಹಳಷ್ಟು ಚರ್ಚೆಯಲ್ಲಿ ತೊಡಗಿದ್ದರು.

ಗೆದ್ದ ನಂತರ ಪರಿಷತ್ ಸದಸ್ಯರು ಏನೆಲ್ಲಾ ಮಾಡುತ್ತಾರೆ ಎಂಬುದರ ಬಗ್ಗೆ ನಮ್ಮಲ್ಲನೇಕರಿಗೆ ಕುತೂಹಲ ಇರಬಹುದು. ರಾಜ್ಯ ವಿಧಾನ ಮಂಡಲದಲ್ಲಿ ವಿಧಾನಪರಿಷತ್ತಿಗೆ ಇರುವ ಮಹತ್ವವೇನು? ಇದಕ್ಕೆ ತಕ್ಷಣದ ಉತ್ತರ "ಏನೂ ಇಲ್ಲ". ವಿಧಾನ ಪರಿಷತ್ತಿನಿಂದ ಯಾವ ಘನ ಕಾರ್ಯವೂ ಸಾಧ್ಯವಾಗದು. ಆದ್ದರಿಂದ ಅದು ವ್ಯರ್ಥವಾದುದು. ಅದನ್ನು ರದ್ದು ಮಾಡುವುದು ಒಳ್ಳೆಯದು.

ಕರ್ನಾಟಕ ಸೇರಿದಂತೆ, ಆರು ರಾಜ್ಯಗಳ ವಿಧಾನ ಮಂಡಲಗಳಲ್ಲಿ ಮಾತ್ರ ದ್ವಿಸದನ ಪದ್ಧತಿ ಅಸ್ತಿತ್ವದಲ್ಲಿದೆ. ಈ ಪದ್ಧತಿಯನ್ವಯ ವಿಧಾನ ಸಭೆ–ಕೆಳಮನೆ ಹಾಗೂ ವಿಧಾನ ಪರಿಷತ್ತು–ಮೇಲ್ಮನೆ. ಬಹುತೇಕ ರಾಜ್ಯಗಳು ಕೇವಲ ಒಂದೇ ಸದನದ ಮೂಲಕ ಯಶಸ್ವಿಯಾಗಿ ಕಾರ್ಯ ನಿರ್ವಹಿಸುವುದು ಸಾಧ್ಯವಾಗಿರುವಾಗ, ನಮ್ಮ ರಾಜ್ಯಕ್ಕೆ ಏಕೆ ಅದು ಸಾಧ್ಯವಾಗಲಾರದು?

"ಹಿರಿಯರ ಮನೆ" ಎಂದೇ ಪರಿಗಣಿತವಾಗಿರುವ ವಿಧಾನ ಪರಿಷತ್ ಅನ್ನು ಹಲ್ಲಿಲ್ಲದ ಹಾವು ಎಂಬುದಾಗಿಯೂ ಕರೆಯಬಹುದು. ಅದು ತನ್ನ ಪಾಲಿಗೆ ಬಂದದ್ದನ್ನು ಮಾತ್ರ ಜೀರ್ಣಿಸಿಕೊಳ್ಳಬೇಕು ಅಷ್ಟೆ.

ಪರಿಷತ್ತಿನಲ್ಲಿ ಮಂಡನೆಯಾಗುವ ಯಾವುದೇ ಮಸೂದೆಯನ್ನು ಅದು ನಾಲ್ಕು ತಿಂಗಳ ಕಾಲ ತನ್ನಲ್ಲಿರಿಸಿಕೊಳ್ಳಬಹುದು. ಒಂದು ವೇಳೆ ಅದಕ್ಕೆ ವಿಧಾನ ಪರಿಷತ್ ಅಂಗೀಕಾರ ನೀಡದೇ ಹೋದರೂ ನಾಲ್ಕು ತಿಂಗಳ ನಂತರ ಸದರಿ ಮಸೂದೆ ಸಹಜವಾಗಿಯೇ ಅಂಗೀಕಾರ ಗೊಳ್ಳುತ್ತದೆ. ಹಣಕಾಸಿನ ಮಸೂದೆಗೆ ಸಂಬಂಧಿಸಿದಂತೆ, ಅದು ಮಂಡನೆಯಾದ 14 ದಿನಗಳ ಒಳಗೆ ತನಗೆ ಇಷ್ಟ ಇರಲಿ, ಇಲ್ಲದಿರಲಿ ಒಪ್ಪಿಗೆ ನೀಡಲೇಬೇಕು. ಹಾಗಾದಲ್ಲಿ ನಮಗೆ ಈ ಸದನ (ವಿಧಾನಪರಿಷತ್ತು) ಅವಶ್ಯಕತೆಯಾದರೂ ಏಕೆ?

ರಾಜ್ಯ ಶಾಸಕಾಂಗದಲ್ಲಿ ವಿಧಾನ ಪರಿಷತ್ತಿನ ಮಹತ್ವವನ್ನು ಪ್ರಸ್ತಾಪಿಸುವಾಗ ಅನೇಕರು "ಅಟಕ್ಕುಂಟು ಲೆಕ್ಕಕ್ಕಿಲ್ಲ ಎಂಬ ವಿಶೇಷಣವನ್ನು ಬಳಸುತ್ತಾರೆ.

ರಾಜ್ಯ ಶಾಸಕಾಂಗದಲ್ಲಿ ವಿಧಾನಪರಿಷತ್ತಿಗೆ ಮಹತ್ವ ಇಲ್ಲದೇ ಇರಬಹುದು. ಆದರೆ ಅದರ ಅಸ್ತಿತ್ವದಿಂದ ತೆರಿಗೆದಾರರ ಹಣ ಮಾತ್ರ ವ್ಯರ್ಥವಾಗುತ್ತಲೇ ಇದೆ. ಇದು ಮಾತ್ರವಲ್ಲ ಪಟ್ಟಣ ಪ್ರದೇಶದ ಸ್ಥಳೀಯ ಸಂಸ್ಥೆಗಳಲ್ಲಿ ಈ ಸದಸ್ಯರ ಪ್ರಾತಿನಿಧ್ಯತೆ, ಪಟ್ಟಣ ಯೋಜನೆಯಿಂದ ಹಿಡಿದು ಶಿಕ್ಷಕರ ನೇಮಕಾತಿ, ವರ್ಗಾವಣೆಯವರೆಗೆ, ಎಲ್ಲದರ ಮೇಲೂ ನಕಾರಾತ್ಮಕ ಪರಿಣಾಮ ಬೀರುತ್ತದೆ.

ವಾಸ್ತವ ಸಂಗತಿ ಎಂದರೆ, ರಾಜ್ಯ ಶಾಸಕಾಂಗದಲ್ಲಿ ವಿಧಾನಪರಿಷತ್ತಿಗೆ ಮಹತ್ವ ಇಲ್ಲದಿರಬಹುದು. ಆದರೆ ರಾಜಕೀಯ ಪಕ್ಷಗಳಿಗೆ ಪುನರ್ವಸತಿ ಕೇಂದ್ರ ಅಥವಾ "ಆಶ್ರಯ ತಾಣಗಳ" ಹಾಗೆ, ಇಲ್ಲವೆ ಹಣ ಸಂಗ್ರಹಣೆಗಾಗಿ ಈ ಸದನದ ಅವಶ್ಯಕತೆ ಇದೆ. ರಾಜಭವನಗಳು ಸಕ್ರಿಯವಾಗಿಲ್ಲದ ಹಾಗೂ ನಿಷ್ಠಾವಂತ ರಾಜಕಾರಣಿಗಳಿಗೆ ಯಾವ ರೀತಿ ಪುನರ್ವಸತಿ ಕಲ್ಪಿಸುತ್ತವೆಯೋ ಅದೇ ರೀತಿಯಲ್ಲಿ ವಿಧಾನ ಪರಿಷತ್ತುಗಳು ಸಹ ವಿಧಾನಸಭೆಯ ಟಿಕೆಟ್ ವಂಚಿತ ನಿಷ್ಠಾವಂತ ಕಾರ್ಯಕರ್ತರಿಗೆ ಆಶ್ರಯ ತಾಣಗಳಾಗಿವೆ.

ಅದೇ ರೀತಿ ಪಕ್ಷದ ನಿಧಿಗಾಗಿ ದೇಣಿಗೆ ಸಂಗ್ರಹಿಸಲು ವಿಧಾನ ಪರಿಷತ್ತನ್ನು ಬಳಸಿಕೊಳ್ಳಲಾಗುತ್ತಿದೆ. ಸೀಮಿತ ಮತ ಕ್ಷೇತ್ರ ಹೊಂದಿರುವ ಎಂಎಲ್‌ಸಿ ಸೀಟಿಗಾಗಿ ಹಣ ಚೆಲ್ಲಲು ಶ್ರೀಮಂತ ವ್ಯಕ್ತಿಗಳು ಸಿದ್ಧರಿರುತ್ತಾರೆ. ಇದೊಂದು ರೀತಿಯ ಉಳಿತಾಯ ಇದ್ದ ಹಾಗೆ. ಒಂದು ಬಾರಿ ಶಾಸಕರಾಗಿ (ಎಂಎಲ್‌ಸಿ) ಆಯ್ಕೆಗೊಂಡ ನಂತರ, ಅಧಿಕಾರಸ್ಥರು ಮತ್ತು ಮಂತ್ರಿಗಳ ನೇರ ಸಂಪರ್ಕಕ್ಕೆ ಬರುತ್ತಾರೆ ಹಾಗೂ ಅವರ ಮೂಲಕ ತಮ್ಮ ಕೆಲಸಗಳನ್ನು ಮಾಡಿಸಿಕೊಳ್ಳುತ್ತಾರೆ.

ಎಂಎಲ್‌ಎಗಳಾಗಿ ಚುನಾಯಿತರಾಗುವುದಕ್ಕಿಂತ ಎಂಎಲ್‌ಸಿಗಳಾಗಿ ಚುನಾಯಿತರಾಗುವುದು ಸುಲಭ ಸಾಧ್ಯ. ಏಕೆಂದರೆ, ಎಂಎಲ್‌ಸಿ ಚುನಾವಣೆಯಲ್ಲಿ ಮತದಾರರು ಕಡಿಮೆ ಸಂಖ್ಯೆಯಲ್ಲಿ ಇರುತ್ತಾರೆ. ಇದು ಹಣಕಾಸು ದೃಷ್ಟಿಯಿಂದಲೂ ಸಹ ವ್ಯವಹರಿಸಲು ಸುಲಭವಾಗುತ್ತದೆ. ನೀವು ಹಣ ಖರ್ಚು ಮಾಡಲು ಸಿದ್ಧರಿದ್ದರೆ ಮತ್ತು ಜಾತಿ ಪ್ರಾಬಲ್ಯವುಳ್ಳವರಾದರೆ, ನಿಮ್ಮ ಆಯ್ಕೆ ಬಹುತೇಕ ಖಚಿತವೆನ್ನಬಹುದು.

ವಿಧಾನಸಭಾ ಚುನಾವಣೆಗಳ ರೀತಿಯಲ್ಲಿ, ಪರಿಷತ್ ಚುನಾವಣೆಯಲ್ಲಿ ಅಭ್ಯರ್ಥಿಗಳ ಚುನಾವಣಾ ವೆಚ್ಚದ ಮೇಲೆ ಚುನಾವಣಾ ಆಯೋಗ ಯಾವುದೇ ಮಿತಿ ವಿಧಿಸಿಲ್ಲ. ಇದು ಮತದಾರರಿಗೆ ಹಣದ ಆಮಿಷ ಒಡ್ಡಲು ಹೆಚ್ಚು ಸಹಕಾರಿಯಾಗಿದೆ. ರಾಷ್ಟ್ರೀಯ ದಿನಪತ್ರಿಕೆಗಳು ವರದಿ ಮಾಡಿರುವ ಹಾಗೆ, ಎಂಎಲ್‌ಸಿ ಚುನಾವಣೆಯಲ್ಲಿ ಪ್ರತಿ ಮತದಾರ, ರೂ.25,000 ದಿಂದ ಲಕ್ಷದವರೆಗೆ ಹಣ ಪಡೆಯುತ್ತಾರಂತೆ (ಒಂದು ವೋಟಿಗೆ). ಕೆಲ ವೇಳೆ ಆದ್ಯ ಪ್ರಾಶಸ್ತ್ಯ ಮತ ಪಡೆಯಲು ಇದಕ್ಕಿಂತ ಹೆಚ್ಚಿಗೆ ನೀಡಬೇಕು. ಏಕೆಂದರೆ, ಅಭ್ಯರ್ಥಿಗಳು ಮೊದಲ ಪ್ರಾಶಸ್ತ್ಯ ಮತದ ಮೂಲಕವೇ ತಮ್ಮ ಗೆಲುವನ್ನು ಖಾತರಿಪಡಿಸಿಕೊಳ್ಳಲು ಹಂಬಲಿಸುತ್ತಾರೆ. ಅವರಿಗೆ ಎರಡನೇ ಪ್ರಾಶಸ್ತ್ಯದ ಮತದ ಬಗ್ಗೆ ಲಕ್ಷ್ಯ ಇರದು.

ಇದರಿಂದೇನೋ ರಾಜಕೀಯ ಪಕ್ಷಗಳು ಮತ್ತು ಕೆಲವು ನಿರ್ದಿಷ್ಟ ಮತದಾರರು, ತಮ್ಮ ತಮ್ಮ ಖಜಾನೆಯನ್ನು ತುಂಬಿಸಿಕೊಳ್ಳುತ್ತಾರೆ. ಆದರೆ ತೆರಿಗೆದಾರರಾದ ನಾವೇಕೆ ಈ ಪರಿಷತ್ತನ್ನು ಉಳಿಸಲು ತೆರಿಗೆ ಕಟ್ಟುತ್ತಿದ್ದೇವೆ?

ವಿಧಾನಪರಿಷತ್ತು ಪ್ರತಿ ವರ್ಷ ತೆರಿಗೆದಾರರ ಮೇಲೆ 51 ಕೋಟಿಗೂ ಅಧಿಕ ಆರ್ಥಿಕ ಹೊರೆ ಹೊರಿಸುತ್ತದೆ. ಪ್ರತಿಯೋರ್ವ ಎಂಎಲ್‌ಸಿಗೂ ಒಂದು ಕಾರು, ದೂರವಾಣಿ ಸೌಲಭ್ಯ, ನಾನಾ ಭತ್ಯೆ, ಆರೋಗ್ಯ ವಿಮೆ, ವಸತಿ ಮುಂತಾದವುಗಳನ್ನು ರಾಜ್ಯ ಸರ್ಕಾರ ಒದಗಿಸುತ್ತದೆ. ಕಂಪ್ಯೂಟರ್ ನಿರ್ವಹಣೆಗಾಗಿಯೇ ವಾರ್ಷಿಕ 15 ಲಕ್ಷ ಖರ್ಚು ಬೀಳುತ್ತದೆ.

ಪರಿಷತ್ ಸದಸ್ಯರ ವಾರ್ಷಿಕ ಪ್ರಯಾಣ ಭತ್ಯೆ 11 ಕೋಟಿ ರೂಪಾಯಿಗಳು. ಅಂದರೆ ಪ್ರತಿಯೋರ್ವ ಸದಸ್ಯನಿಗೂ ವಾರ್ಷಿಕ ರೂ.14.6 ಲಕ್ಷ ತಗಲುತ್ತದೆ. ಎಂಎಲ್‌ಸಿಗಳು ಪ್ರತಿವರ್ಷ ತಮ್ಮ ಸ್ಥಳೀಯ ಪ್ರದೇಶ ಅಭಿವೃದ್ಧಿ ನಿಧಿಯಾಗಿ ಆರು ಕೋಟಿ ರೂಪಾಯಿಗಳನ್ನು ಪಡೆಯುತ್ತಾರೆ. ಅವರ ಆರು ವರ್ಷಗಳ ಅಧಿಕಾರ ಅವಧಿಯಲ್ಲಿ ಇದು 36 ಕೋಟಿ ರೂ.ಗಳಾಗುತ್ತದೆ. ಸೋಜಿಗದ ಸಂಗತಿ ಎಂದರೆ, ಈ ಹಣವನ್ನು ಯಾವ ರೀತಿಯಲ್ಲಿ ಮತ್ತು ಹೇಗೆ ಖರ್ಚು ಮಾಡಲಾಗುತ್ತದೆ ಎಂಬುದರ ಬಗ್ಗೆ ತೆರಿಗೆದಾರನಿಗೆ ತಿಳಿಸಲು ಯಾವುದೇ ವೆಬ್‌ಸೈಟ್‌ಗಳೂ ಇಲ್ಲ.

ಎಂಎಲ್‌ಸಿಗಳು ಒಮ್ಮೆ ತಮ್ಮ ಆರು ವರ್ಷಗಳ ಅಧಿಕಾರಾವಧಿ ಪೂರ್ತಿಗೊಳಿಸಿದರೆ, ಅವರು ಮತ್ತು ಅವರ ಕುಟುಂಬ ವರ್ಗದವರಿಗೆ ಜೀವನ ಪರ್ಯಂತ ನಿವೃತ್ತಿ ವೇತನ ಹಾಗೂ ಆರೋಗ್ಯ ಭದ್ರತೆ ದೊರೆಯುತ್ತದೆ.

ಈ ಎಲ್ಲಾ ಸೌಲಭ್ಯ ಹಾಗೂ ಸವಲತ್ತುಗಳನ್ನು ಪಡೆಯುವ ಅವರಿಂದ ಆಡಳಿತಕ್ಕೆ ಏನು ಉಪಯೋಗ? ಬರೀ ಶೂನ್ಯ ಅಷ್ಟೇ. ವಿಧಾನ ಪರಿಷತ್ತಿನಿಂದಾಗುವ ಉಪಯೋಗವನ್ನು ಸಮರ್ಥಿಸಿಕೊಂಡು ಮಾತನಾಡುವ ಕೆಲವರು, ರಾಷ್ಟ್ರೀಯ ಮಟ್ಟದಲ್ಲಿ ರಾಜ್ಯಸಭೆ ಇರುವುದರಿಂದಲೇ ನಮಗೆ **ಡಾ. ಮನಮೋಹನ್ ಸಿಂಗ್** ಮತ್ತು **ಅರುಣ್ ಜೇಟ್ಲಿ**ಯಂತಹ ಮುತ್ಸದ್ದಿಗಳು ದೊರಕಲು ಸಾಧ್ಯವಾಗಿದೆ ಎಂಬ ವಾದವನ್ನು ಮಂಡಿಸುತ್ತಾರೆ. ಆದರೆ, ಕೇಂದ್ರದ ಮಟ್ಟಿಗೆ ಅದು ನಿಜವೂ ಇರಬಹುದು. ಆದರೆ ರಾಜ್ಯದ ಮೇಲ್ಮನೆಯ ವಿಷಯಕ್ಕೆ ಬಂದರೆ ಆ ರೀತಿಯದ್ದಲ್ಲ.

ಎಸ್. ನಿಜಲಿಂಗಪ್ಪ, ಕಡಿದಾಳ್ ಮಂಜಪ್ಪ ಹಾಗೂ ಖಾದ್ರಿ ಶಾಮಣ್ಣನವರಂತಹ ಧುರೀಣರು, ರಾಜಕೀಯ ಮುತ್ಸದ್ದಿಗಳು ವಿಧಾನ ಪರಿಷತ್ತಿನಲ್ಲಿ ಇದ್ದಂತಹ ಒಂದು ಕಾಲವಿತ್ತು. ಆದರೆ ಇಂದು ನಾವು ಎಂತಹವರನ್ನು ಹೊಂದಿದ್ದೇವೆ? ವಿಧಾನ ಪರಿಷತ್ ಟಿಕೆಟ್‌ಗಳನ್ನು ಉದ್ಯಮಿ, ವ್ಯಾಪಾರಿ, ರಿಯಲ್ ಎಸ್ಟೇಟ್ ಹಾಗೂ ಇತರೆ ವ್ಯವಹಾರಗಳಲ್ಲಿ ಹಣ ಮಾಡಿದಂತಹ ವ್ಯಕ್ತಿಗಳಿಗೆ ನೀಡಲಾಗುತ್ತಿದೆ. ಅವರಲ್ಲಿ ಬಹುತೇಕರು ಬಡಾವಣೆಗಳನ್ನು ಅಭಿವೃದ್ಧಿ ಪಡಿಸುವುದು ಹಾಗೂ ಕಟ್ಟಡಗಳನ್ನು ನಿರ್ಮಿಸುವ ಮೂಲಕ ಅಪಾರ ಪ್ರಮಾಣದ ಹಣ ಮಾಡಿದ್ದಾರೆ. ವಿಧಾನಪರಿಷತ್ತು ಈಗ ಹಿರಿಯರ ಮನೆಯಾಗಿ (Elders House) ಉಳಿದಿಲ್ಲ, ಬದಲಾಗಿ ಕಟ್ಟಡ ಕಟ್ಟುವವರ (Builders House) ಮನೆಯಾಗಿ ಹೋಗಿದೆ.

ವಿಧಾನಪರಿಷತ್ ಅನ್ನು "ಹಿರಿಯರ ಮನೆ" ಎಂದು ಕರೆಯಲಾಗುತ್ತದೆ. ಅದರಂತೆ ಇದು, ಹಿರಿಯರು ಮತ್ತು ಬುದ್ಧಿವಂತರಿಂದ ತುಂಬಿರಬೇಕಾಗಿತ್ತು. ನಾಮಕರಣಗೊಂಡ ಮಹಾಮೇಧಾವಿ ಸದಸ್ಯರು, ಪರಿಷತ್ತಿಗೆ ಸೂಕ್ತ ಮಾರ್ಗದರ್ಶನ ನೀಡಬೇಕಾಗಿತ್ತು. ಅದೇ ರೀತಿ ಕೆಲವೊಂದು ಕ್ಷೇತ್ರಗಳಿಂದ ಚುನಾಯಿತ ಸದಸ್ಯರು, ತಮ್ಮ ತಮ್ಮ ಕ್ಷೇತ್ರಗಳ ಮತದಾರರ ಹಿತಾಸಕ್ತಿಗಳನ್ನು (ಶಿಕ್ಷಕರು, ಪದವೀಧರರು, ಹಿಂದುಳಿದ ವರ್ಗಗಳು) ರಕ್ಷಿಸಬೇಕಾಗಿತ್ತು. ಆದರೆ ಅವರು ಹಾಗೆ ಮಾಡುತ್ತಾರೆಯೇ?

ಶಿಕ್ಷಕರ ಕ್ಷೇತ್ರವನ್ನು ಪ್ರತಿನಿಧಿಸುವ ಎಂಎಲ್‌ಸಿ ಒಬ್ಬರು ಶಿಕ್ಷಕರಿಗೆ ಕನಿಷ್ಠ ವೇತನ ಅಥವಾ ಅವರಿಗೆ ತರಬೇತಿ ನೀಡುವ ವಿಚಾರವಾಗಿ ವಿಧಾನ ಪರಿಷತ್ತಿನಲ್ಲಿ ಮಾತನಾಡಿದ್ದನ್ನು ನಾವು ಎಂದಾದರೂ ನೋಡಿದ್ದೇವೆಯೇ? ಅದೇ ರೀತಿ ನಿರುದ್ಯೋಗಿ ಪದವೀಧರರಿಗೆ ಉದ್ಯೋಗ ಅಥವಾ ಕೌಶಲ್ಯ ತರಬೇತಿ ನೀಡುವ ಬಗ್ಗೆ ಮಾತನಾಡಿದ್ದುಂಟೆ?

ಯಾವುದಾದರೊಬ್ಬ ಎಂಎಲ್‌ಸಿ, ತಮ್ಮ ನಗರದ ವ್ಯವಸ್ಥಿತ ಬೆಳವಣಿಗೆ ಕುರಿತಾಗಿ ಪಟ್ಟಣ ಯೋಜನೆಯ ಬಗ್ಗೆ ಮಾತನಾಡಿದ್ದು, ಪ್ರಶ್ನೆ ಕೇಳಿದ್ದುಂಟೆ? ನಮ್ಮಲ್ಲಿಯೇ ತೆಗೆದುಕೊಂಡರೆ ಪರಿಷತ್ ಸದಸ್ಯರು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಹಿಡಿದು ವಿಶ್ವವಿದ್ಯಾಲಯದ ನೇಮಕಾತಿ ಸಮಿತಿಯವರೆಗೆ ಪ್ರಾತಿನಿಧ್ಯ ಹೊಂದಿರುತ್ತಾರೆ. ಪ್ರಾಶಸ್ತ್ಯದ ಮೇಲೆ ಸಿ.ಎ ನಿವೇಶನ ಪಡೆಯುವುದು, ಮಂಜೂರಾತಿ ಮಾಡಿಸುವುದಕ್ಕಷ್ಟೆ ಅವರು ಪರಿಷತ್ ಪ್ರಾತಿನಿಧ್ಯ ಹೊಂದಿದ್ದಾರೆಯೇ ಎಂದೆನಿಸುತ್ತದೆ.


ನಿಸ್ಸಂದೇಹವಾಗಿ, ಇತ್ತೀಚಿನ ವರ್ಷಗಳಲ್ಲಿ ವಿಧಾನಪರಿಷತ್ತು ಯಾವುದೇ ಮಹತ್ವದ ಕಾರ್ಯ ಮಾಡುವುದಿಲ್ಲ. ನಮ್ಮ ಶರೀರಕ್ಕೆ ಯಾವ ರೀತಿಯಲ್ಲೂ ಉಪಯೋಗಕ್ಕೆ ಬಾರದೆ, ಆರೋಗ್ಯಕ್ಕೆ ಹಾನಿಯನ್ನು ಉಂಟು ಮಾಡುವ ಅಪೆಂಡಿಕ್ಸ್ ಇರುವ ಹಾಗೆ, ಪರಿಷತ್ ಅಸ್ತಿತ್ವದಲ್ಲಿದೆ. ಪರಿಷತ್ತಿನ ಈ ಅನುಪಯುಕ್ತತೆ ಹಾಗೂ ಇದರ ಚುನಾವಣೆಯಲ್ಲಿ ನಡೆಯುವ ಭ್ರಷ್ಟಾಚಾರವೂ ಒಂದು ರೀತಿ ನಮ್ಮ ರಾಜಕೀಯ ವ್ಯವಸ್ಥೆಗೆ ಕಪ್ಪು ಚುಕ್ಕೆಯಾಗಿದೆ. ಆರೋಗ್ಯಕ್ಕೆ ಹಾನಿಕಾರಕವಾದ ಅಪೆಂಡಿಕ್ಸ್‌ನಂತೆ ಇದನ್ನು ಇಲ್ಲವಾಗಿಸುವುದು ಅನಿವಾರ್ಯವೇ ಆಗಿದೆ. ಆದರೆ, ಏನು ಮಾಡುವುದು; ಯಾವುದೇ ಸರ್ಕಾರ ತನ್ನ ಆಶ್ರಯ ತಾಣವನ್ನು ಹೇಗೆ ಮುಚ್ಚಲು ಬಯಸುತ್ತದೆ?

ಇದರ ಬಗ್ಗೆ ಯಾವುದಾದರೂ ಸರ್ಕಾರೇತರ ಸಂಸ್ಥೆ ಸೊಲ್ಲೆತ್ತುವ ಅನಿವಾರ್ಯತೆ ಇದೆ ಎಂದು ಭಾವಿಸೋಣ.

E-mail:vikram@starofmysore.com




ಡಿಸೆಂಬರ್ 15, 2020ರಂದು ನಡೆದ ವಿಧಾನಮಂಡಲದ ಅಧಿವೇಶನದ ವೇಳೆ ವಿಧಾನಪರಿಷತ್‌ನಲ್ಲಿ ಸಭಾಪತಿ ಸ್ಥಾನ ಅಲಂಕರಿಸಿದ್ದ ಉಪ ಸಭಾಪತಿಯವರ ಸಮ್ಮುಖದಲ್ಲಿ ನಡೆದ ಸದಸ್ಯರ ಮಾರಾಮಾರಿ ದೃಶ್ಯವಿದು. ಇದು ಹಿರಿಯ ಹಾಗೂ ಬುದ್ಧಿವಂತರ ಸದನಕ್ಕೆ ಒಂದು ಕಪ್ಪುಚುಕ್ಕೆ.














ಮೈಸೂರು ಮಿತ್ರ
ದಿನಪತ್ರಿಕೆಗೆ 43ನೇ ವರ್ಷದ
ವಾರ್ಷಿಕೋತ್ಸವದ ಶುಭಾಶಯಗಳು
ರಾಜ್ಯಾಧ್ಯಕ್ಷರು
ಕರ್ನಾಟಕ ಪ್ರದೇಶ ಕುರುಬರ ಸಂಘ(ರಿ)
ಬೆಂಗಳೂರು
ಶುಭಕೋರುವವರು : ಬಿ.ಕೆ.ರಾಜು, ಶ್ರೀನಿವಾಸ್, ಬಸವೇಗೌಡ ಮತ್ತು ಸ್ನೇಹಿತರು...


43
ವರ್ಷಕ್ಕೆ ಪಾದಾರ್ಪಣೆ
ಮಾಡುತ್ತಿರುವ ಜನಮೆಚ್ಚಿದ
ಮೈಸೂರು ಮಿತ್ರ ನಿಗೆ
ಶುಭಾಶಯಗಳು
ಕಳಲೆ ಕೇಶವಮೂರ್ತಿ
ಮಾಜಿ ಶಾಸಕರು,
ನಂಜನಗೂಡು ವಿಧಾನಸಭಾ ಕ್ಷೇತ್ರ


ಚಾಮರಾಜನಗರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ
ಚುನಾವಣೆ - 2022
7-ನಾಗವಳ್ಳಿ ಸಾಮಾನ್ಯ ಕ್ಷೇತ್ರ
ಮಾನ್ಯ ಮತಭಾಂದವರೇ,
ದಿನಾಂಕ 17-04-2022ನೇ ಭಾನುವಾರ ನಡೆಯಲಿರುವ ಚಾಮರಾಜನಗರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಚುನಾವಣೆಗೆ ನಾಗವಳ್ಳಿ ಸಾಮಾನ್ಯ ಕ್ಷೇತ್ರದಿಂದ ಅಭ್ಯರ್ಥಿಯಾಗಿ ಸ್ಪರ್ಧಿಸಿರುತ್ತೇನೆ. ತಮ್ಮ ಅಮೂಲ್ಯವಾದ ಮತವನ್ನು ನನ್ನ ಗುರುತಾದ 'ತಕ್ಕಡಿ' ಗುರುತಿನ ಮುಂದೆ ಮುದ್ರೆ ಒತ್ತುವ ಮೂಲಕ ನನ್ನನ್ನು ಜಯಶೀಲನನ್ನಾಗಿ ಮಾಡಿ ತಮ್ಮಗಳ ಸೇವೆ ಮಾಡಲು ಅವಕಾಶ ಮಾಡಿಕೊಡಬೇಕಾಗಿ ಪ್ರಾರ್ಥಿಸಿಕೊಳ್ಳುತ್ತೇನೆ.
ಕ್ರ.ಸಂ.
ಅಭ್ಯರ್ಥಿಯ ಹೆಸರು
ಚಿಹ್ನೆ
1
ಎ.ಎಸ್. ಪ್ರದೀಪ್
ಮತದಾನದ ದಿನಾಂಕ : 17-04-2022, ಭಾನುವಾರ
ಸಮಯ ಬೆಳಗ್ಗೆ 7-00 ರಿಂದ ಸಂಜೆ 4-00 ಗಂಟೆವರೆಗೆ
ತಮ್ಮ ಸೇವಾಕಾಂಕ್ಷಿ
ಎ.ಎಸ್. ಪ್ರದೀಪ್
ಆಲೂರು
ಮೊ : 9945685510


ಸುಸ್ವಾಗತ
ಜನತಾ ಜಲಧಾರೆ
ಕಾರ್ಯಕ್ರಮದ ಪ್ರಯುಕ್ತ
ಹೆಚ್.ಡಿ.ಕೋಟೆಗೆ
ಆಗಮಿಸುತ್ತಿರುವ
ಮಾಜಿ ಪ್ರಧಾನಿಗಳಾದ
ಹೆಚ್.ಡಿ.ದೇವೇಗೌಡ
ರವರಿಗೆ ಹೃತ್ಪೂರ್ವಕ ಸ್ವಾಗತ
ಕೆ.ಪುರಂದರ
ಜೆ.ಡಿ.ಎಸ್.ಮುಖಂಡರು
ಕಳಸ್ತವಾಡಿ


ಮೈಸೂರು ಮಿತ್ರ ನಿಗೆ
ಶುಭಾಶಯಗಳು
43ನೇ ವಸಂತಕ್ಕೆ
ಕಾಲಿಡುತ್ತಿರುವ ಈ ಶುಭ
ಸಂದರ್ಭದಲ್ಲಿ ಜನಪ್ರಿಯ
'ಮೈಸೂರು ಮಿತ್ರ'
ದಿನಪತ್ರಿಕೆಗೆ
ಹೃದಯಪೂರ್ವಕ
ಅಭಿನಂದನೆಗಳು
ಹೆಚ್.ಎ.ವೆಂಕಟೇಶ್
ಕರ್ನಾಟಕ ಪ್ರಾದೇಶಿಕ ಕಾಂಗ್ರೆಸ್ ಸಮಿತಿ ವಕ್ತಾರರು


43
ನೇ
ವರ್ಷಕ್ಕೆ ಕಾಲಿಟ್ಟ
ಮೈಸೂರು ಮಿತ್ರ ನಿಗೆ
ಹುಟುಹಬ್ಬದ
ಶುಭಾಶಯಗಳು
ಬಿ.ಹರ್ಷವರ್ಧನ್
ಶಾಸಕರು,
ನಂಜನಗೂಡು ವಿಧಾನಸಭಾ ಕ್ಷೇತ್ರ


43 ನೇ ವಾರ್ಷಿಕೋತ್ಸವದ
ಈ ಸುಸಂದರ್ಭದಲ್ಲಿ
ಜನಪ್ರಿಯ ಬೆಳಗಿನ
ದಿನಪತ್ರಿಕೆ
ಮೈಸೂರು ಮಿತ್ರ ನಿಗೆ
ಶುಭಾಶಯಗಳು
ದೇವರಳ್ಳಿ ಸೋಮಶೇಖರ್
ಹುಣಸೂರು ತಾಲೂಕು ಜೆಡಿಎಸ್ ಅಧ್ಯಕ್ಷರು

ಬಿ.ಜೆ. ಪುಟ್ಟಸ್ವಾಮಿ ಪೀಠಾಧಿಪತಿ: ಕರ್ನಾಟಕ ಪ್ರಜಾ ಪಾರ್ಟಿ ಪ್ರತಿಭಟನೆ



ಮೈಸೂರು, ಏ.15(ಜಿಎ)– ಶ್ರೈಲೇಶ್ವರ ಗಾಣಿಗರ ಮಹಾಸಂಸ್ಥಾನ ಮಠದ ಪೀಠಾಧಿಪತಿಯಾಗಿ ಮಾಜಿ ಸಚಿವ ಬಿ.ಜೆ ಪುಟ್ಟಸ್ವಾಮಿಯವರು ದೀಕ್ಷೆ ಪಡೆಯುತ್ತಿರುವುದನ್ನು ವಿರೋಧಿ ಕರ್ನಾಟಕ ಪ್ರಜಾ ಪಾರ್ಟಿ(ರೈತಪರ್ವ) ವತಿಯಿಂದ ಮೈಸೂರು ಜಿಲ್ಲಾ ನ್ಯಾಯಾಲಯದ ಎದುರು ಪ್ರತಿಭಟನೆ ನಡೆಸಲಾಯಿತು.

ಶ್ರೈಲೇಶ್ವರ ಗಾಣಿಗರ ಮಹಾಸಂಸ್ಥಾನ ಮಠದ ಪೀಠಾಧಿಪತಿಯಾಗಿ ದೀಕ್ಷೆ ಪಡೆಯಲು ಮುಂದಾಗಿರುವ ಮಾಜಿ ಸಚಿವ ಬಿ.ಜೆ ಪುಟ್ಟಸ್ವಾಮಿ ಮಠಗಳ ಆಚಾರ ವಿಚಾರಗಳನ್ನು ಅರಿಯದೆ ಮಠಾಧೀಶರಾಗಲು ಮುಂದಾಗಿರುವುದು ಸರಿಯಲ್ಲ. ಅವರ ನಡೆ ಹಿಂದೂ ಸಂಸ್ಕೃತಿಗೆ ವಿರುದ್ಧವಾಗಿದೆ ಎಂದು ಕಿಡಿಕಾರಿದರು. ಪ್ರತಿಭಟನೆಯಲ್ಲಿ ಕರ್ನಾಟಕ ಪ್ರಜಾ ಪಾರ್ಟಿ(ರೈತಪರ್ವ) ರಾಜ್ಯಾಧ್ಯಕ್ಷ ಡಾ.ಬಿ.ಶಿವಣ್ಣ, ರಾಜ್ಯ ಸಂಘಟನಾ ಕಾರ್ಯದರ್ಶಿ ಹರೀಶ್ ಗೌಡ, ರಾಜ್ಯ ಉಪಾಧ್ಯಕ್ಷರಾದ ಎ.ಜಿ. ರಾಮಚಂದ್ರರಾವ್, ಕೆ.ಜಿ.ಯೋಗೇಶ್, ಗಾಣಿಗ ಸಮಾಜದ ಮುಖಂಡರಾದ ಡಾ.ಬಿ.ಎಂ ನಾಗಪ್ಪ, ಪಿ. ಧನಶೇಖರ್, ಮಹದೇವಪ್ಪ ಗುಂಡ್ಲುಪೇಟೆ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಬೆಲೆ ಏರಿಗೆ ಖಂಡಿಸಿ ಎಸ್‌ಡಿಪಿಐ ಪ್ರತಿಭಟನೆ

ಮೈಸೂರು, ಏ.15(ಜಿಎ)– ಪೆಟ್ರೋಲ್ ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಏರಿಕೆ ಖಂಡಿಸಿ ಎಸ್‌ಡಿಪಿಐ ಪ್ರತಿಭಟನೆ ನಡೆಸಿತು. ನಗರದ ಫೌಂಟನ್ ವೃತ್ತದಲ್ಲಿ ಜಮಾಯಿಸಿದ ಎಸ್‌ಡಿಪಿಐನ ಕಾರ್ಯಕರ್ತರು ಪ್ಲೇ ಕಾರ್ಡ್ ಹಿಡಿದು ರಾಜ್ಯ ಮತ್ತು ಕೇಂದ್ರ ಸರ್ಕಾರದ ವಿರುದ್ಧ ವಿವಿಧ ಘೋಷಣೆ ಕೂಗಿದರಲ್ಲದೇ ಪೆಟ್ರೋಲ್ ಹಾಗೂ ಅಗತ್ಯ ವಸ್ತುಗಳ ಬೆಲೆ ಕಡಿಮೆ ಮಾಡುವಂತೆ ಒತ್ತಾಯಿಸಿದರು. ಎಸ್‌ಡಿಪಿಐ ಜಿಲ್ಲಾ ಕಾರ್ಯದರ್ಶಿ ಮಹಮ್ಮದ್ ಶಫೀಉಲ್ಲ, ರಾಜ್ಯ ಸಮಿತಿ ಸದಸ್ಯ ಅಮ್ಜಾದ್ ಖಾನ್, ಜಿಲ್ಲಾಧ್ಯಕ್ಷ ರಫತ್ ಖಾನ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.





ಕಾಡಾನೆ ಹಿಮ್ಮೆಟ್ಟಿಸಿದ ಸಾಕು ನಾಯಿ

ಮಡಿಕೇರಿ, ಏ.15– ಮನೆಯ ಮುಂದೆ ನಿಲ್ಲಿಸಿದ್ದ ಪಿಕ್ ಅಪ್ ವಾಹನದ ಮೇಲೆ ಕಾಡಾನೆ ದಾಳಿ ನಡೆಸಲು ಮುಂದಾದಾಗ ಸಾಕು ನಾಯಿಯೊಂದು ಕಾಡಾನೆಯನ್ನು ಹಿಮ್ಮೆಟ್ಟಿಸಿದ ಘಟನೆ ವಿರಾಜಪೇಟೆ ತಾಲೂಕು ಹೊರವಲಯದ ಕರಡ ಗ್ರಾಮದಲ್ಲಿ ನಡೆದಿದೆ. ಕರಡ ಗ್ರಾಮ ನಿವಾಸಿ ಸೋಮಪ್ಪ ಎಂಬವರ ಮನೆಯ ಮುಂದಿನ ರಸ್ತೆಯಲ್ಲಿ ಪಿಕ್ ಅಪ್ ವಾಹನ ನಿಲ್ಲಿಸಲಾಗಿತ್ತು. ಶುಕ್ರವಾರ ಬೆಳಗೆ 7 ಗಂಟೆಯ ವೇಳೆಗೆ ತೋಟದಿಂದ ಹೊರ ಬಂದ ಕಾಡಾನೆಯೊಂದು ಪಿಕ್ ಅಪ್ ವಾಹನದ ಮೇಲೆ ಎರಗಲು ಮುಂದಾಗಿದೆ. ಇದನ್ನು ಕಂಡ ಸಾಕು ನಾಯಿ ಜೋರಾಗಿ ಬೊಗಳುವ ಮೂಲಕ ಕಾಡಾನೆಯನ್ನು ಹಿಮ್ಮೆಟ್ಟಿಸಿದ್ದು, ಜೀಪನ್ನು ಆನೆ ದಾಳಿಯಿಂದ ಕಾಪಾಡಿದೆ. ಶ್ವಾನದ ಪ್ರತಿರೋಧದಿಂದ ಸ್ಥಳದಿಂದ ಕಾಲ್ಕಿತ್ತ ಕಾಡಾನೆ ಪಕ್ಕದಲ್ಲೇ ಇರುವ ಮತ್ತೊಂದು ಕಾಫಿ ತೋಟಕ್ಕೆ ನುಗ್ಗಿ ಕಾಫಿ ಗಿಡಗಳ ನಡುವೆ ಮರೆಯಾಗಿದೆ. ಈ ವಿಡಿಯೋ ಇದೀಗ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.



ಚಾಮರಾಜನಗರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ನಾಗವಳ್ಳಿ ಕ್ಷೇತ್ರದಿಂದ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಎ.ಎಸ್. ಪ್ರದೀಪ್ ಆಲೂರು ಅವರ ಪರವಾಗಿ ಶಾಸಕ ಪುಟ್ಟರಂಗಶೆಟ್ಟಿ, ಮಾಜಿ ಶಾಸಕ ಕೃಷ್ಣಮೂರ್ತಿ ಹಾಗೂ ಇತರ ಮುಖಂಡರು ವಿವಿಧ ಗ್ರಾಮಗಳಲ್ಲಿ ಮತ ಯಾಚಿಸಿದರು

ಬಿ.ಜೆ.ಪುಟ್ಟಸ್ವಾಮಿಯವರ ಸನ್ಯಾಸತ್ವ ಸ್ವೀಕಾರ ಸ್ವಾಗತಾರ್ಹ



ತಿ.ನರಸೀಪುರ, ಏ.15(ಎಸ್‌ಕೆ)– ರಾಜ್ಯ ರಾಜಕಾರಣದಲ್ಲಿ ತನ್ನದೇ ಆದ ವಿಶೇಷ ಛಾಪು ಮೂಡಿಸಿದ ಗಾಣಿಗ ಸಮುದಾಯದ ಮುಖಂಡ ಬಿ.ಜೆ.ಪುಟ್ಟಸ್ವಾಮಿಯವರು ರಾಜಕೀಯ ಜೀವನಕ್ಕೆ ತಿಲಾಂಜಲಿ ಇಟ್ಟು ಸನ್ಯಾಸತ್ವ ಸ್ವೀಕರಿಸಲು ಹೊರಟಿರುವುದನ್ನು ರಾಜ್ಯದ ಸಮಸ್ತ ಗಾಣಿಗ ಸಮಾಜ ಸ್ವಾಗತಿಸುತ್ತದೆ ಎಂದು ಹಿಂದುಳಿದ ವರ್ಗಗಳ ಮಾಜಿ ಜಿಲ್ಲಾಧ್ಯಕ್ಷ ಹಾಗೂ ವಿಶ್ವ ಗಾಣಿಗ ಚಾರಿಟಬಲ್ ಟ್ರಸ್ಟ್‌ನ ಟ್ರಸ್ಟಿ ಆಲಗೂಡು ಎಂ.ವೆಂಕಟರಮಣ ಶೆಟ್ಟಿ ತಿಳಿಸಿದರು.

ಪಟ್ಟಣದ ಕಬಿನಿ ಅತಿಥಿಗೃಹದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿ.ಜೆ.ಪುಟ್ಟಸ್ವಾಮಿಯವರು ರಾಜಕೀಯ ಜೀವನದಿಂದ ನಿವೃತ್ತರಾಗಿ ಶ್ರೀಕ್ಷೇತ್ರ ಶೈಲೇಶ್ವರ ಗಾಣಿಗರ ಮಹಾಸಂಸ್ಥಾನ ಮಠದ ಪ್ರಥಮ ಪೀಠಾಧಿಪತಿಗಳಾಗಿ ಶ್ರೀಪೂರ್ಣಾನಂದ ಪುರಿ ಸ್ವಾಮಿ ಎಂಬ ನಾಮಾಂಕಿತದೊಂದಿಗೆ ಪಟ್ಟಾಭಿಷೇಕ ಹೊಂದುತ್ತಿರುವುದಕ್ಕೆ ಇಡೀ ಸಮಸ್ತ ಗಾಣಿಗ ಸಮುದಾಯ ಅವರನ್ನು ಮುಕ್ತಕಂಠದಿಂದ ಸ್ವಾಗತಿಸುತ್ತಿದೆ. ಇದಕ್ಕಾಗಿ ಗಾಣಿಗ ಸಮುದಾಯ ಹಲವು ಪೂರ್ವಭಾವಿ ಸಭೆ ನಡೆಸಿ ಪುಟ್ಟಸ್ವಾಮಿಯವರ ಸನ್ಯಾಸತ್ವ ದೀಕ್ಷೆಯನ್ನು ಪ್ರಶಂಸಿಸಿ ಸ್ವಾಗತಿಸಿದೆ. ಆದರೆ ಕೆಲ ಕಿಡಿಗೇಡಿಗಳ ಮಾತಿನಿಂದ ಪ್ರಚೋದಿತನಾಗಿರುವ ಗಾಣಿಗ ಸಮುದಾಯಕ್ಕೆ ಸಂಬಂಧವೇ ಇಲ್ಲದ ಡಾ.ಶಿವಣ್ಣ ಎಂಬಾತ ಜನಾಂಗದ ವೈಯಕ್ತಿಕ ವಿಚಾರದಲ್ಲಿ ಮೂಗು ತೂರಿಸಿ ಬಿ.ಜೆ.ಪುಟ್ಟಸ್ವಾಮಿ ಮಠಾಧಿಪತಿಗಳಾಗಲು ವಿರೋಧ ವ್ಯಕ್ತಪಡಿಸಿದ್ದಾರೆ. ಈ ವ್ಯಕ್ತಿಗೂ ಗಾಣಿಗ ಸಮುದಾಯಕ್ಕೂ ಸಂಬಂಧವಾದರೂ ಏನು? ಈ ಬಗ್ಗೆ ಪ್ರಶ್ನೆ ಮಾಡಲು, ವಿರೋಧ ವ್ಯಕ್ತಪಡಿಸಲು ಆತನಿಗ್ಯಾವ ನೈತಿಕತೆ ಇದೆ. ಯಾರೋ ಕೆಲ ಅಪಪ್ರೋಲಿಗಳ ಮಾತು ಕೇಳಿ ಮೇರು ವ್ಯಕ್ತಿತ್ವದ ಪುಟ್ಟಸ್ವಾಮಿ ಅವರನ್ನು ಅಪಹಾಸ್ಯ ಮಾಡಲು ಹೊರಟಿರುವ ನಿಮಗೆ ಮಾನ ಮರ್ಯಾದೆ ಇದೆಯೇ? ನಿಮಗೂ ಗುರು ಪೀಠಕ್ಕೂ ಇರುವ ಸಂಬಂಧವಾದರೂ ಏನು ಎಂದು ಖಾರವಾಗಿ ಪ್ರಶ್ನಿಸಿದರು.

ಸುದ್ದಿಗೋಷ್ಠಿಯಲ್ಲಿ ಅಖಿಲ ಕರ್ನಾಟಕ ಗಾಣಿಗ ಸಂಘದ ಮುಖ್ಯಸ್ಥ ಚನ್ನಕೇಶವ ಶೆಟ್ಟಿ, ಮೈಸೂರು ಜಿಲ್ಲಾ ಜ್ಯೋತಿ ಪಣ ಯುವ ಜನ ಸಂಘದ ಮುಖಂಡ ರಘು, ತಾಲೂಕು ಗಾಣಿಗರ ಸಂಘದ ಅಧ್ಯಕ್ಷ ರಾಮಚಂದ್ರು, ನಂಜನಗೂಡು ಗಾಣಿಗರ ಸಂಘದ ಅಧ್ಯಕ್ಷ ಮಾದಶೆಟ್ಟಿ ಹಾಜರಿದ್ದರು.

ನಂ.ಗೂಡು: ಮಹಿಳೆ ಮೇಲೆ ಅತ್ಯಾಚಾರ

ನಂಜನಗೂಡು, ಏ.15– ಜಮೀನಿನಲ್ಲಿ ಕುರಿ ಮೇಯಿಸುತ್ತಿದ್ದ ಮಹಿಳೆ ಮೇಲೆ ವ್ಯಕ್ತಿಯೋರ್ವ ಅತ್ಯಾಚಾರವೆಸಗಿದ ಘಟನೆ ನಂಜನಗೂಡು ತಾಲೂಕಿನ ತಗಡೂರು ಗ್ರಾಮದಲ್ಲಿ ನಡೆದಿರುವುದಾಗಿ ತಡವಾಗಿ ವರದಿಯಾಗಿದೆ.

ಈ ಘಟನೆಯು ಏ.11ರಂದು ನಡೆಯಿತು ಎಂದು ಹೇಳಲಾಗಿದ್ದು, ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಸಂತ್ರಸ್ತೆ ಇಂದು ನೀಡಿದ ಹೇಳಿಕೆಯಂತೆ ದೊಡ್ಡಕವಲಂದೆ ಠಾಣೆ ಪೊಲೀಸರು ತಗಡೂರು ಗ್ರಾಮದವನೇ ಆದ ರಾಜು ಎಂಬಾತನ ವಿರುದ್ಧ ಅತ್ಯಾಚಾರ ಹಾಗೂ ಜಾತಿ ನಿಂದನೆ ಪ್ರಕರಣ ದಾಖಲಿಸಿ ಆತನನ್ನು ವಶಕ್ಕೆ ಪಡೆದಿದ್ದಾರೆ.

ವಿವರ: ತಗಡೂರು ಗ್ರಾಮದ 45 ವರ್ಷ ವಯಸ್ಸಿನ ಮಹಿಳೆ ಏ.11ರಂದು ಜಮೀನಿನಲ್ಲಿ ಕುರಿ ಮೇಯಿಸುತ್ತಿದ್ದ ವೇಳೆ ಅಲ್ಲಿಗೆ ತೆರಳಿದ ಅದೇ ಗ್ರಾಮದ ರಾಜು(55) ಎಂಬಾತ ಮಹಿಳೆ ಮೇಲೆ ಅತ್ಯಾಚಾರವೆಸಗಿದನೆಂದು ದೂರಿನಲ್ಲಿ ಹೇಳಲಾಗಿದೆ. ಸಂಜೆ ಕುರಿಗಳು ಮಾತ್ರ ಮನೆಗೆ ವಾಪಸ್ಸಾಗಿದ್ದು, ಮಹಿಳೆ ಬಾರದ ಹಿನ್ನಲೆಯಲ್ಲಿ ಆಕೆಯ ಪತಿ ಜಮೀನಿಗೆ ತೆರಳಿ ಹುಡುಕಾಡಿದಾಗ ಮಹಿಳೆ ಅಸ್ವಸ್ಥಳಾಗಿ ಬಿದ್ದಿದ್ದಳು ಎನ್ನಲಾಗಿದ್ದು, ನಂಜನಗೂಡು ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿದ ನಂತರ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ಆಕೆಯನ್ನು ದಾಖಲಿಸಲಾಗಿದೆ. ಸಂತ್ರಸ್ತ ಮಹಿಳೆ ಇಂದು ಹೇಳಿಕೆ ನೀಡಿದ ಹಿನ್ನಲೆಯಲ್ಲಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಇಂದು ವಿದ್ಯುತ್ ವ್ಯತ್ಯಯ

ಬನ್ನೂರು: ತುರ್ತು ನಿರ್ವಹಣಾ ಕಾಮಗಾರಿ ಹಿನ್ನೆಲೆಯಲ್ಲಿ ಏ.16 ರಂದು ಬೆಳಗ್ಗೆ 10 ರಿಂದ 6 ರವರೆಗೆ ತುರಗನೂರು, ನುಗ್ಗಳ್ಳಿ ಕೊಪ್ಪಲು, ಯಾಚೇನಹಳ್ಳಿ, ದೊಡ್ಡ ಮೂಲ ಗೂಡು, ಮೇಣಸಿ ಕ್ಯಾತನಹಳ್ಳಿ, ಕೆಂಪೇಗೌಡನ ಕೊಪ್ಪಲು ಸುತ್ತಮುತ್ತಲ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ವೀರನಹೊಸಹಳ್ಳಿಗೆ ಆನೆ ನುಗ್ಗಿ ದಾಂಧಲೆ



ಹನಗೋಡು, ಏ. 15 (ಮಹೇಶ್)– ಶುಕ್ರವಾರ ಬೆಳಗ್ಗೆ 8ಗಂಟೆ ಸಮಯದಲ್ಲಿ ಸಲಗವೊಂದು ನಾಗರಹೊಳೆ ರಾಷ್ಟ್ರೀಯ ಉದ್ಯಾನವನದ ವೀರನಹೊಸಹಳ್ಳಿ ಅರಣ್ಯದಿಂದ ಆಚೆ ಬಂದು ವೀರನ ಹೊಸಹಳ್ಳಿ ಗ್ರಾಮದೊಳಗೆ ನುಗ್ಗಿ ದಾಂಧಲೆ ಮಾಡಿತು. ಈಗ ಮುಂಗಾರು ಸಮಯವಾದ್ದರಿಂದ ರೈತರು ತಮ್ಮ ಜಮೀನುಗಳಲ್ಲಿ ಕೃಷಿ ಕಾರ್ಯದಲ್ಲಿ ಮುಂಜಾನೆ ಉಳುಮೆ ಮಾಡುವ ಕಾರ್ಯದಲ್ಲಿ ತೊಡಗಿರುವ ಸಮಯದಲ್ಲಿ ಆನೆ ಓಡಾಟ ಮಾಡುತ್ತಿದ್ದು, ಆತಂಕ ಮೂಡಿಸಿತ್ತು. ನಂತರ ಅರಣ್ಯ ಇಲಾಖೆಯ ಸಿಬ್ಬಂದಿ ನಾಗರಹೊಳೆ ಹೆಬ್ಬಾಗಿಲಿನ ಮುಖ್ಯ ದ್ವಾರದ ಮೂಲಕ ಕಾಡಿಗೆ ಓಡಿಸಲು ಯಶಸ್ವಿಯಾದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಬೇಕಾಗಿದ್ದಾರೆ
ಬ್ರಾಹ್ಮಣ ಮಹಿಳೆ ಅಡುಗೆ ಸಹಾಯಕಿ ಬೇಕಾಗಿದ್ದಾರೆ.
ಸಂಪರ್ಕಿಸಿ:
9242509325
9449380528

SITE FOR SALE
Hanchya Mathura Nagara 7kilo meter from Suburb bustand bannur road mysuru
* Muda approved
* Bank loan available
Site -50x80 (2 sites)N/F, S/F and 60x40 (2sites) E/F
Contact Number :
9945897813

ಮನೆ ಮಾರಾಟಕ್ಕಿದೆ
20x38 ಅಳತೆಯ N/F ಮನೆ, ವಿಜಯನಗರ 4ನೇ ಹಂತ, 2ನೇ ಘಟ್ಟ, G.F- 1BHK ಮನೆ, ಕಾರ್ ಪಾರ್ಕಿಂಗ್, 1st, 2nd Floor - 3BHK ಡುಪ್ಲೆಕ್ಸ್ ಮನೆ ಫುಲ್ ಫರ್ನಿಶ್ಡ್
6362355860 / 8095743484

ಬೇಕಾಗಿದ್ದಾರೆ
ಮೇಟಗಳ್ಳಿ, ಕೈಗಾರಿಕಾ ಪ್ರದೇಶದಲ್ಲಿರುವ ಪ್ರತಿಷ್ಠಿತ ಕಾರ್ಖಾನೆಗಳಿಗೆ ಯುವಕರು ಬೇಕಾಗಿದ್ದಾರೆ. ವಯಸ್ಸು 18 ರಿಂದ 35 ವರ್ಷ, ವಿದ್ಯಾರ್ಹತೆ: 7 ರಿಂದ PUC ಮತ್ತು ITI ಉಚಿತ ಊಟ ಮತ್ತು ರಿಯಾಯಿತಿ ದರದಲ್ಲಿ ವಸತಿ ನೀಡಲಾಗುವುದು. ESI ಮತ್ತು PF ಸೌಲಭ್ಯವಿರುತ್ತದೆ. (ಯಾವುದೇ ಶುಲ್ಕವಿರುವುದಿಲ್ಲ)
8277047300

SRI LAKSHMI GROUPS
SPECIALIST IN
Painting, Interior, Exterior and Water Proofing.
Contractor, Dr.Fixit, Terrace, Roof, Mould.
Website: www.slgpainters.com
Present Google Review is 4.9
Call : 99459 38632 / 87927 08269
98867 73293 (Karnataka Services)

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಹೆಸರಾಂತ ಕಾರ್ಖಾನೆಯೊಂದಕ್ಕೆ ತಕ್ಷಣ ಪುರುಷ ಕಾರ್ಮಿಕರು ಬೇಕಾಗಿದ್ದಾರೆ. ವಯೋಮಿತಿ 18 ರಿಂದ 40 ವರ್ಷದೊಳಗೆ–ಮೊದಲು ಬಂದವರಿಗೆ ಆದ್ಯತೆ, ವಿದ್ಯಾರ್ಹತೆ:– ಕನ್ನಡ ಓದು/ಬರಹ ಗೊತ್ತಿರಬೇಕು. ವೇತನ: 12,165+ESI&PF ಮತ್ತು ಉಚಿತ ಊಟದ ವ್ಯವಸ್ಥೆ. ಅಗತ್ಯ ದಾಖಲಾತಿಗಳು: ಆಧಾರ್ ಕಾರ್ಡ್, ಬ್ಯಾಂಕ್ ಪಾಸ್ ಬುಕ್, ಫೋಟೋ–06, ಟಿ.ಸಿ. ಅಥವಾ ಮಾರ್ಕ್ಸ್ ಕಾರ್ಡ್ ಕಡ್ಡಾಯ. (ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ)
8453408502 / 9108100117

SC ಆದಿ ಕರ್ನಾಟಕ (ಬಲಗೈ)
BE, M.Tech, MBBS, MD, MS, BAMS, M.Sc, M.Com, MBA, MCA, MA, Phd, B.Sc, B.com, BA, B.Ed ವಧುವರರಿಗೆ ಸಂಪರ್ಕಿಸಿ:
ಸವಿಲೂರು ರಂಗಸ್ವಾಮಿ, ಮೈಸೂರು ಸಿಟಿ ವಧುವರರ ಮಾಹಿತಿ ಕೇಂದ್ರ, ಎನ್.ಆರ್.ಮೊಹಲ್ಲಾ, ಮೈಸೂರು.
8711974172

WANTED
Female Sales Executive - 5 Nos.
Graduates with computer knowledge, may walk-in interview with handwritten bio-data to:
Sharada Jewellers
58, D.D. Urs Road, Opp. Anjaneyaswamy Temple, Mysore.

HOME LOAN
11B, 9/11A ಕಾರ್ಪೋರೇಷನ್ & ಮುಡಾ ಖಾತಾಗಳಿಗೆ ಸಾಲ ಸೌಲಭ್ಯ ಕೊಡಿಸಲಾಗುವುದು.
ಮನೆ ಖರೀದಿ, ಸೈಟ್ ಖರೀದಿ, ಮನೆ ಕನ್ಸ್ಟ್ರಕ್ಷನ್, ಮಾರ್ಟ್‌ಗೇಜ್, ಫ್ಲ್ಯಾಟ್ ಖರೀದಿ
HOUSING LOAN FOR PENSIONERS
ಶ್ರೀ ಸಾಯಿ ಎಂಟರ್‌ಪ್ರೈಸಸ್ ಮೈಸೂರು
8884176836

Ground Floor ಮನೆ ಬಾಡಿಗೆಗೆ ದೊರೆಯುತ್ತದೆ
ಮೈಸೂರು, ಶ್ರೀರಾಂಪುರ 2ನೇ ಹಂತ, ರಿಂಗ್ ರಸ್ತೆಯ ಹತ್ತಿರ, ಈ ಅಂತಸ್ತು 30x40 ಮನೆ ಪೂರ್ವ ದ್ವಾರ 2 Bedrooms (Attached), Living Room, Italian Kitchen, CCTV, Solar, Geyser, Mosquito net and Doors ಇದೆ. ಚಿಕ್ಕ ಕುಟುಂಬದವರಿಗೆ ಮಾತ್ರ. (Brokers excuse)
8310336144 / 7996504996

ಬೇಕಾಗಿದ್ದಾರೆ
ವಯಸ್ಸಾದ ವೃದ್ಧರು ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲೇ ಉಳಿದುಕೊಳ್ಳುವಂತಹ ಸೇವಾ ಮನೋಭಾವವುಳ್ಳ ಯುವಕ/ಯುವತಿಯರು, ಮಹಿಳೆಯರು, ವಿಧವೆ/ವಿಚ್ಛೇದಿತೆಯರು ಹೋಂ ನರ್ಸ್ ಕೆಲಸಕ್ಕಾಗಿ ಬೇಕಾಗಿದ್ದಾರೆ (ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆ) (ಯಾವುದೇ ರೀತಿಯ ಶುಲ್ಕ ಇರುವುದಿಲ್ಲ) ಸಂಬಳ 12000ರಿಂದ 16000ವರೆಗೆ
9513253739 /7411614209

ಇಂದೇ ಬೇಕಾಗಿದ್ದಾರೆ
ಮೈಸೂರು ಮತ್ತು ಸುತ್ತಮುತ್ತಲಿನ ಕೈಗಾರಿಕ ಪ್ರದೇಶಗಳಲ್ಲಿರುವ ಕಂಪನಿಗಳಿಗೆ Packing, Helper, Checking, Store Incharge, Line Incharge, Maintenance ಮುಂತಾದ ಕೆಲಸಗಳಿಗೆ 356 ಯುವಕ/ಯುವತಿಯರು ಬೇಕಾಗಿದ್ದಾರೆ. ಸಂಬಳ: 14500/- ರಿಂದ 40000/-(ESI+PF+OT) ಸೇರಿ. ಸಂಪರ್ಕಿಸಿ:
7892878915 / 9353753194

ತಕ್ಷಣ ಸೈಟು ಮಾರಾಟಕ್ಕಿದೆ
45x65, 11B ಕೇರ್ಗಳ್ಳಿ, ಸೋಮನಾಥನಗರ ಹತ್ತಿರ, ಕೇರ್ಗಳ್ಳಿ ಸ್ಕೂಲ್ ಎದುರುಗಡೆ, ಮೈಸೂರು. 46 ಲಕ್ಷಗಳು (Negotiable)
9945855516 / 8892732802

ಕರ್ನಾಟಕದಾದ್ಯಂತ ತಕ್ಷಣ ಬೇಕಾಗಿದ್ದಾರೆ
ಒಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) MNC ಕಂಪನಿಗಳಿಗೆ 4th, 7th, SSLC, PUC, ITI, any Degree Pass / Fail ಯುವಕ, ಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ. ESI / PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ + ಓಟಿ 15,000/– ರಿಂದ 46,000/–
7259865221 / 8867373902

ಬೇಕಾಗಿದ್ದಾರೆ
ಹೋಟೆಲ್ ಉದ್ಯಮಕ್ಕೆ ಎಲ್ಲಾ ವಿಧವಾದ ಕೆಲಸಗಳಿಗೆ ಪುರುಷರು / ಮಹಿಳೆಯರು ಅನುಭವವಿರುವ / ಇಲ್ಲದಿರುವವರು ಬೇಕಾಗಿದ್ದಾರೆ. ಆಸಕ್ತರು ವಿವರಗಳೊಂದಿಗೆ ನೇರವಾಗಿ ಸಂಪರ್ಕಿಸಿ.
ಹೋಟೆಲ್ ವಿಷ್ಣುಭವನ್
ಬಿ.ಎನ್.ರಸ್ತೆ, ಭೀಮಾ ಜ್ಯೂಯಲರ್ಸ್ ಕೆಳಗೆ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಎದುರು, ಬಿ.ಎನ್.ರಸ್ತೆ, ಮೈಸೂರು.

Dr.D.H.BAGALKOT SEXOLOGIST
ಲೈಂಗಿಕ ನಿಶ್ಯಕ್ತಿ ಶಾಶ್ವತ ನಿವಾರಣೆ
ಮೈಸೂರು: ಪ್ರತಿ ತಿಂಗಳು 1, 2 ಹಾಗೂ 16, 17 ರಂದು
www.drbagalkot.com

ಬಟ್ಟೆಲು ಸಾಂಬ್ರಾಣಿ ಉದ್ಯೋಗ
ಉತ್ತಮ ಗುಣಮಟ್ಟದ ಬಟ್ಟೆಲು ಸಾಂಬ್ರಾಣಿಯನ್ನು ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 1000 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196
9880548596

ಬೇಕಾಗಿದ್ದಾರೆ
ವಯಸ್ಸಾದ ವೃದ್ಧರು, ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲೇ ಉಳಿದುಕೊಳ್ಳುವಂತಹ ಸೇವಾ ಮನೋಭಾವವುಳ್ಳ ಯುವಕ/ಯುವತಿಯರು, ಮಹಿಳೆಯರು, ವಿಧವೆ/ವಿಚ್ಛೇದಿತೆಯರು ಹೋಂ ಕೇರ್ ಕೆಲಸಕ್ಕೆ ಬೇಕಾಗಿದ್ದಾರೆ. (ಯಾವುದೇ ರೀತಿಯ ಶುಲ್ಕ ಇರುವುದಿಲ್ಲ) ಆಧಾರ್ ಕಾರ್ಡ್ ಕಡ್ಡಾಯ. ಕೂಡಲೇ ಸಂಪರ್ಕಿಸಿ: ಸಂಬಳ: 10,000.–ರಿಂದ 15,000/–ವರೆಗೆ.
9035324777/7259306665
9035081222

ಶ್ರೀ ಮಹಾಲಕ್ಷ್ಮೀ ಟ್ರಾವೆಲ್ಸ್
21/4 ಶಿರಡಿ, ಪಂಡರಾಪುರ, ಶನಿಸಿಂಗಣಾಪುರ, ಎಲ್ಲೋರ, ಗೃಹ್ನೇಶ್ವರ. 26/5 ಕಾಶಿ ವಿಶ್ವನಾಥ, ಪ್ರಯಾಗ್ ರಾಜ್, ಅಯೋಧ್ಯ. 27/5 ... 9/5 ... 2/5 ... 17/5 ಗುಜರಾತ್, ದ್ವಾರಕ, ಸೋಮನಾಥ್, ನಾಗನಾಥ, ಸರ್ದಾರ್ ವಲ್ಲಭಭಾಯ್ ಪಟೇಲ್ ಪ್ರತಿಮೆ. 26/5 ರಾಮೇಶ್ವರಂ, ಧನುಷ್ಕೋಟಿ, ...
9591017782 / 9964527782

SITES FOR SALE
MUDA Approved
Bank Loan Available
Srinagara Near Srirampura Ring Road
8050345574

MUDA APPROVED SITE FOR SALE
20X30, 30X40 & 30X50 @ 3999/Sft. Onwards,
B/w Police Layout & Lalithadri Nagar Layout. within ring road.
READY WITH ALL BASIC AMENITIES & BANK LOAN AVAILABLE.
98800 65122 / 77956 09173

ಗಿರವಿ ಚಿನ್ನಾಭರಣ ಖರೀದಿ
ಗಿರವಿ ಇಟ್ಟಿರುವವರಿಗೆ ಸುವರ್ಣಾವಕಾಶ ಗಿರವಿ ಇಟ್ಟಿರುವ ಚಿನ್ನಾಭರಣವನ್ನು ನಾವೆ ಬಿಡಿಸಿ ಕಮಿಷನ್ ಇಲ್ಲದೆ ಇಂದಿನ ಆನ್‌ಲೈನ್ ಬೆಲೆಗೆ ತೆಗೆದುಕೊಂಡು ಉಳಿದ ಹಣ ತಕ್ಷಣ ಕೊಡುತ್ತೇವೆ. ಈ ಸುವರ್ಣಾವಕಾಶವನ್ನು ಕಳೆದುಕೊಳ್ಳಬೇಡಿ. ಕೂಡಲೇ ಸಂಪರ್ಕಿಸಿ
(T&C) - 5200/- 1ಗ್ರಾಂ
8050518881

AIR COOLER EXCHANGE OFFER
UPTO RS. 4000 OFF
Service Center for Air Cooler
SYMPHONY, KENSTAR
Contact:
9845963421 / 9900237315

COMMERCIAL SPACE FOR RENT
1300 Sqft First Floor Commercial/Office Space available for Rent @Vanivilasa Road, Near RTO West...
9611077006/9686016498

ವಧು-ವರಾನ್ವೇಷಣೆ
ಎಲ್ಲಾ ಜಾತಿಯ ವಧು-ವರರಿಗಾಗಿ & ವಿಧುರ-ವಿಚ್ಛೇದಿತ ವಧು-ವರರಿಗಾಗಿ ಕೂಡಲೇ ಸಂಪರ್ಕಿಸಿ.
SPECIAL OFFERS FOR REGISTRATION
9343175000

ತಕ್ಷಣ ಸಂಪರ್ಕಿಸಿ
ಮೈಸೂರಿನ (ಪ್ರಸಿದ್ಧ ಕಂಪನಿ, ಆಫೀಸ್ ಮತ್ತು ಹೋಟೆಲುಗಳಿಗೆ, 7th, SSLC, PUC, ITI, Diploma, any Degree pass/fail ಆದವರಿಗೆ Packing, Helper, Maintenance, Cashier, Billing, Data entry, Computer Operator, HR Admin, Assistant ಮುಂತಾದ ಕೆಲಸಗಳಿಗೆ ಬೇಕಾಗಿದ್ದಾರೆ. ಸಂಬಳ: 14000/- ರಿಂದ 39000/- (ESI+PF+OT) ಸೇರಿ.
ಸಂಪರ್ಕಿಸಿ: 9980630131 / 9980850141

SDJ JEWELERS
ಪುರುಷರು ಮತ್ತು ಮಹಿಳೆಯರು
Tele Callers ಮತ್ತು Sales Executive ಬೇಕಾಗಿದ್ದಾರೆ.
Qualification: SSLC/ PUC/ Degree/ Post Graduation
ಉಳಿದುಕೊಳ್ಳಲು PG ವ್ಯವಸ್ಥೆ ಇರುತ್ತದೆ
Salary : 20,000
8884304444

ಬೇಕಾಗಿದ್ದಾರೆ
ತಮಿಳು ಮತ್ತು ತೆಲುಗು ಮಾತನಾಡಲು ಬರುವ Telecaller ಬೇಕಾಗಿದ್ದಾರೆ.
ಸಂಬಳ - 20000/-
8884304444

CONSTRUCTION
₹1950*/- ಪ್ರತಿ ಚದರ ಅಡಿಗೆ PILLAR CONSTRUCTION
100% ಅಲ್ಟ್ರಾಟೆಕ್ ಸಿಮೆಂಟ್, ಟೀಕ್ ವುಡ್ ಬಾಗಿಲು ಮತ್ತು ಕಿಟಕಿಗಳು
5 Years Maintainace free
91647-63079

ಬೇಕಾಗಿದ್ದಾರೆ
ಸ್ಟಾಕ್ ನೋಡಿಕೊಳ್ಳಲು ಹುಡುಗರು ಬೇಕಾಗಿದ್ದಾರೆ
ಸಂಬಳ 12000/- 10-7 PM
Ph.9380142144
ಶಿವರಾಂಪೇಟೆ, ಮೈಸೂರು

Sudarshan Saur
SOLAR WATER HEATER
ATTRACTIVE OFFER
ಸೇಲ್ಸ್&ಸರ್ವೀಸ್
10 ವರ್ಷಗಳ ಗ್ಯಾರಂಟಿ
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

DOCUMENT LOST
I T.R. Sampath Lost my original sale deed of property's bearing Site No.1645, 2nd stage, Hebbal Layout, Mysore city Registered Document Kandaya Pathra (Title Deed) in MUDA and registered in the office of sub-registrar office, Mysore South on 11.4.2001. Complaint has been lodged in police station on 6.4.2022, Hebbal, Mysore-570017.
Founder please call: 9880994608

AFFIDAVIT
I, Balachandra B.K., S/o Kidigannegowda B.C., residing at D.No. 2931, LIG House, Group-1, KHB Colony, Near Sudarshan School, Hootagalli, Belavadi Post, Mysore-570 018. I declare that in my Aadhar Card and all other documents my name is entered as Balachandra B.K. S/o Kidigannegowda B.C. But by bonafide mistake in my Passport bearing No. 61701856 my name is entered as Koorgahalli Kidigannegowda Balachandra instead of Ballenahalli Kidigannegowda Balachandra. Hence I swear this in front of Notary Veena. G. on 12.4.2022, that my name is Ballenahalli Kidigannegowda Balachandra.
Sd/- Ballenahalli Kidigannegowda Balachandra.

ಬೇಕಾಗಿದ್ದಾರೆ
ಸರೋಕೇರ್ ಮೈಸೂರು ಹೆಲ್ತ್ ಸೆಂಟರ್‌ನಲ್ಲಿ ಕೆಲಸಕ್ಕೆ ಯುವತಿಯರು ಬೇಕಾಗಿದ್ದಾರೆ.
ವಿದ್ಯಾರ್ಹತೆ: SSLC, 2nd PUC & ಯಾವುದೇ ಪದವಿ
ನ್ಯೂ ಕಾಂತರಾಜ ಅರಸು ರಸ್ತೆ, ಕೆ.ಜಿ.ಕೊಪ್ಪಲು, ಮೈಸೂರು.
8296366894
7996011692

ತಕ್ಷಣ ಬೇಕಾಗಿದ್ದಾರೆ
ಕಡಕೊಳ, ತಾಂಡ್ಯ ಇಂಡಸ್ಟ್ರಿಯಲ್ ಮತ್ತು TVS ಫ್ಯಾಕ್ಟರಿ ಸುತ್ತಮುತ್ತ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC. ಸಂಬಳ: 15,500/–, ವಯೋಮಿತಿ : 50 ವರ್ಷದ ಒಳಗೆ. ESI ಮತ್ತು PF ಊಟ ತಿಂಡಿ ವಸತಿ ಸೌಲಭ್ಯ ಇರುತ್ತದೆ. ಸಂಪರ್ಕಿಸಬೇಕಾದ ಸಂಖ್ಯೆಗಳು:
9620777819 / 9620667819

ತಕ್ಷಣ ಬೇಕಾಗಿದ್ದಾರೆ
ಮನೆಯಿಂದಲೇ ಸರಳವಾದ ಕೈ ಬರವಣಿಗೆಯ ಮೂಲಕ ಫಾರಂ ಫಿಲ್ಲಿಂಗ್ ಮತ್ತು ಡಾಟಾ ಎಂಟ್ರಿ ಮಾಡಿ ಸುಲಭವಾಗಿ ಪ್ರತಿವಾರ ಮತ್ತು ಪ್ರತಿ ತಿಂಗಳು ಕೈ ತುಂಬಾ ಹಣಗಳಿಸಿ. ಸಂಪರ್ಕಿಸಿರಿ
7624918246 / 7259848246

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಬೇಕಾಗಿದ್ದಾರ
ಪ್ರಿಂಟಿಂಗ್ ಪ್ರೆಸ್‌ಗೆ
ಡಿಟಿಪಿ ಆಪರೇಟರ್‌ಗಳು ಮತ್ತು ಡಿಸೈನರ್‌ಗಳು ಬೇಕಾಗಿದ್ದಾರೆ. ಅನುಭವ ಇದ್ದವರಿಗೆ ಮೊದಲ ಆದ್ಯತೆ
ಮೊ : 9449853308

ಡೇಟಾ ಬೇಸ್ ಮೊಬೈಲ್ ನಂಬರ್‌ಗಳು ಟೆಲಿಕಾಲ್ ಮಾಡಲು ಬೇಕಾಗಿದೆ.
ಮೊಬೈಲ್ ಡೇಟಾ ಬೇಸ್ ಹೊಂದಿರುವ ಕಂಪನಿಗಳು ಕೂಡಲೇ ಸಂಪರ್ಕಿಸಿ ನಮ್ಮ ಕಂಪನಿಗೆ, ಟೆಲಿಕಾಲ್ ಮಾಡಲು ಬೇಕಾಗಿದೆ (ಟೆಲಿಕಾಲ್ ಮಾಡಲು ಮಹಿಳೆಯರು ಬೇಕಾಗಿದ್ದಾರೆ). ಕೂಡಲೇ ಸಂಪರ್ಕಿಸಿ –
9036991977

1 ಲಕ್ಷಕ್ಕೆ ಒಂದು ದಿನಕ್ಕೆ 200ರೂ ಸೆಕ್ಯೂರಿಟಿಗೆ ಚಿನ್ನ ಕೊಡಲಾಗುವುದು
ಪ್ರತಿ ದಿನ ಚಿನ್ನಾಭರಣದ ಪಡಿವಾಟಿಗೆ 1 ಲಕ್ಷಕ್ಕೆ ಒಂದು ದಿನಕ್ಕೆ 200ರೂ ಸೇರಿಸಿ ಸಂಜೆ ವಾಪಸ್ ಕೊಡಲಾಗುವುದು. ಕೊಟ್ಟಿರುವ ಹಣಕ್ಕೆ ಚಿನ್ನವನ್ನು ಸೆಕ್ಯೂರಿಟಿಯಾಗಿ ನೀಡಲಾಗುವುದು. ಸಂಪರ್ಕಿಸಿ – MNM ಗೋಲ್ಡ್ ರೇಸ್ಟೋ ಕಲರ್ ಲ್ಯಾಬ್ ಪಕ್ಕ, ಅಶೋಕ ರಸ್ತೆ, ಮೈಸೂರು.
9036991977
ಟೆಲಿಕಾಲ್ ಮಾಡಲು ಮಹಿಳೆಯರು ಬೇಕಾಗಿದ್ದಾರೆ

Groom / Bride Mach Makers ವಧು /ವರರ ಮಾಹಿತಿ ಕೇಂದ್ರ
ಎಲ್ಲಾ ಜಾತಿಯ Govt. Job/ Privat / Own Busniess, ಡಾಕ್ಟರ್, ಇಂಜಿನಿಯರ್, Any Degree, Diploma Etc., 22000 ವಧುಗಳಿಗೆ ವರ ಬೇಕು. 32000 ವರರಿಗೆ ವಧು ಬೇಕು. 4200 ದ್ವಿತೀಯರಿಗೆ ... Life Partner ... ವಧುಗಳಿಗೆ ರಿಯಾಯಿತಿ ಇದೆ.
ಚೇತನ ಗಂಗಾ: 7975728012

TEACHERS REQUIRED
English Medium - 2022-2023
A.K.Academy (English Medium)
Bannimantap, 'B' Layout, Mysore- 570015
1) NST / Montessori Trained
2) PUC, D.Ed.
3) B.A / B.Ed, (Hindi, Kannada, Histroy & English
4) B.Sc, B.Ed (CBZ & PCMB)
5) Diploma in Computer / BCA
6) C.PEd., & B.PEd
8861977636
(Timing 10.30 am to 1.00 pm)

ತ್ರಿಮತಸ್ಥ ಬ್ರಾಹ್ಮಣ ಸಮುದಾಯದವರಿಗೆ ಶ್ರಾದ್ಧ ಹಾಗೂ ಅಪರ ಕರ್ಮಗಳನ್ನು ನೆರವೇರಿಸಿಕೊಡಲಾಗುವುದು.
ಆಸಕ್ತರು ಸಂಪರ್ಕಿಸಿ:
ಮೋಹನ್ ಅಯ್ಯಂಗಾರ್
ಮೊ.: 7411026201 / 9036030713
(ಒಟ್ಟು 10 ಜನರಿಗೆ ರೂ.6,500/– ಮಾತ್ರ)
ಸೂಚನೆ: ಇದು ಶ್ರಾದ್ಧ ಕರ್ಮಕ್ಕೆ ಮಾತ್ರ, ಅಪರ ಕರ್ಮಗಳಿಗೆ ಪ್ರತ್ಯೇಕವಾಗಿ ಸಂಪರ್ಕಿಸತಕ್ಕದ್ದು.

ಮನೆ ಮಾರಾಟಕ್ಕಿದೆ
ದಟ್ಟಗಳ್ಳಿ 3ನೇ ಹಂತ, 20x30, E/F ಡ್ಯೂಪ್ಲೆಕ್ಸ್ ಮನೆ, 11 ಚದರ, 3BHK ಆತ್ಯಾಧುನಿಕ ಸೌಲಭ್ಯವಿರುವ ಮನೆ, ಸಾಲ ಸೌಲಭ್ಯವಿದೆ. ಖರೀದಿದಾರರು ಸಂಪರ್ಕಿಸಿ:
9110650781

ತಮಿಳು ವಧು ಬೇಕಾಗಿದೆ
29 ವರ್ಷದ ವರನಿಗೆ 26 ವರ್ಷದ ಒಳಗಿನ ವಧು ಬೇಕು. ವರನಿಗೆ ಸ್ವಂತ ವ್ಯಾಪಾರ ಇದ್ದು, ತಿಂಗಳಿಗೆ 40 ಸಾವಿರ ವರಮಾನ ಆದಾಯವಿದೆ. ಬಡವರು, ಮಧ್ಯಮವರ್ಗದವರು, ವಿದ್ಯಾರ್ಹತೆ: ಎಸ್.ಎಸ್.ಎಲ್.ಸಿ ಆದರೂ ಪರವಾಗಿಲ್ಲ.
6900084328 / 8217085643

SITE FOR SALE
30x40 site for sale near Dattagalli
30x40 house for sale in old RT Nagar
40x60 site for sale in Sharada Layout near Srinagar
50x80 site for sale in JP Nagar
Contact: H Murali
9880344263

ಒಂದು ಗ್ರಾಂಗೆ 5300ರೂ. ಗಿರವಿ ಚಿನ್ನಾಭರಣ ಖರೀದಿ
ಯಾವುದೇ ಬ್ಯಾಂಕ್ ಫೈನಾನ್ಸ್ ಮತ್ತು ಗಿರವಿ ಅಂಗಡಿಯಿಂದ ಬಿಡಿಸಿ ನಿಮ್ಮ ಆಭರಣದ ಪ್ಯೂರಿಟಿಗೆ ಒಂದು ಗ್ರಾಂಗೆ 5300ರೂ ಗಳಂತೆ ಖರೀದಿಸಿ ಉಳಿದ ಹಣ ಕೊಡಲಾಗುವುದು. ಹಾಗೂ 1% ಬಡ್ಡಿಯಲ್ಲಿ ಹಣ ಸಾಲ ನೀಡಲಾಗುವುದು ಸಂಪರ್ಕಿಸಿ. MNM ಗೋಲ್ಡ್, ಅಶೋಕ ರಸ್ತೆ, ಮೈಸೂರು.
7259214732

CAR FOR SALE
Diesel Ambassador 2006 Model in Top Condition at Madikeri / HM+ Engine
Contact: only Between 7 pm to 9 pm
9480013017

DoorStep ಕಾರ್‌ವಾಶ್ ಹುಡುಗರು ಬೇಕಾಗಿದ್ದಾರೆ
Full Time & Part Time
ಸಮಯ: ಬೆಳಗ್ಗೆ 6.30 ರಿಂದ ಸಂಜೆ 6.00 ರವರೆಗೆ, ತಿಂಗಳಿಗೆ –Full Time 15,000-25000, Part Time ದಿನಕ್ಕೆ 300-500 ವರೆಗೂ ಗಳಿಸಿ, ದ್ವಿಚಕ್ರ ವಾಹನ ಬೇಕು.
8105169384

WANTED
Sales Boy for Counter Sale
9964664983
9742985437

WANTED
Machine Operator
Diploma with 2 yrs Experience, Sales and Collection Executive with two wheeler,
Mail : bilvagreen@gmail.com
Whatsapp:
9945229013

ಮನೆ ಭೋಗ್ಯಕ್ಕೆ ಇದೆ
ಮನೆ ನಂ. 4392, 2BHK 4ನೇ ಕ್ರಾಸ್, 2ನೇ ಹಂತ, ಹಾಸನ ಬೇಕರಿ ಹತ್ತಿರ, ಕೆ.ಡಿ.ಸರ್ಕಲ್, ವಿಜಯನಗರ, ಮೈಸೂರು. ಸಂಪರ್ಕಿಸಿ:
8123941037

ಬೇಕಾಗಿದ್ದಾರೆ
ರೆಡಿಮೇಡ್ ಬಟ್ಟೆ ಅಂಗಡಿಗೆ ಸೇಲ್ಸ್‌ಗರ್ಲ್ಸ್ ಬೇಕಾಗಿದ್ದಾರೆ. ಅನುಭವವುಳ್ಳವರಿಗೆ ಮೊದಲ ಆದ್ಯತೆ.
ಶ್ರೀ ರೇಣುಕಾಂಬ ಫ್ಯಾಷನ್, ಒಲಂಪಿಯಾ ಟಾಕೀಸ್ ಹತ್ತಿರ, ಮೈಸೂರು

ಮನೆ ಬಾಡಿಗೆಗೆ ಇದೆ
2BHK ಎಲ್ಲಾ ಸೌಲಭ್ಯದೊಂದಿಗೆ, ಉತ್ತರ ದಿಕ್ಕಿಗೆ 18x40 ಅಳತೆಯುಳ್ಳ ಮನೆ ಯಶೋಧರ ನಗರ, ಅಮೃತಾನಂದಮಯಿ ಸ್ಕೂಲ್ ಬಸ್ಸು ಸ್ಟಾಪ್, ಅಮೃತಾನಂದಮಯಿ ಶಾಲೆ & ಚೆಲಿಕಾಂ ಲೇಡೀಸ್ ಹತ್ತಿರ, ಗದ್ದಿಗೆ ಮುಖ್ಯ ರಸ್ತೆ, ಬೋಗಾದಿ (ಉತ್ತರ), ಮೈಸೂರು. (ಸಸ್ಯಹಾರಿಗಳಿಗೆ ಮಾತ್ರ)
9902064179 / 9590975279

ಬೇಕಾಗಿದ್ದಾರೆ
ಶಾಲೆಯಲ್ಲಿ ಕಸ ಗುಡಿಸಲು ಮತ್ತು ಇತರೆ ಎಲ್ಲಾ ವಿಧವಾದ ಮನೆ ಕೆಲಸಗಳನ್ನು ಮಾಡಬಲ್ಲ ಆರೋಗ್ಯವಂತ ಸಮರ್ಥ ಮಹಿಳೆ, ಕೆಲಸದ ಸಮಯ ಬೆಳಗ್ಗೆ 9 ರಿಂದ ಸಂಜೆ 5, ಸಂಬಳ ತಿಂಗಳಿಗೆ 6000/– (ಶಾಲೆ ಸುತ್ತಮುತ್ತ ಸಮೀಪದಲ್ಲಿ ವಾಸಿಸುವವರಿಗೆ ಆದ್ಯತೆ) ಸಂಪರ್ಕಿಸಿ: ಜ್ಞಾನ ಗಂಗೋತ್ರಿ ಕಾನ್ವೆಂಟ್, ರಾಜೇಂದ್ರನಗರ, ಮೈಸೂರು–570007
9243580672 / 9113980741

SITE FOR SALE
30x40 Size East Facing MUDA Khata Price 20 Lacs
9342123373

GEM SELECTIONS
(A Part of Khanna Gems Group)
100% Natural Govt. Lab Certified Gemstones
ಶೇಕಡಾ 100 ರಷ್ಟು ನೈಸರ್ಗಿಕ ಸರ್ಕಾರಿ ಪ್ರಯೋಗಾಲಯದಿಂದ ಪ್ರಮಾಣೀಕೃತ ರತ್ನದ ಹರಳುಗಳು ದೊರೆಯುತ್ತವೆ.
HIG-3, Near Akshaya Bhandar, New Kantharaju Urs Rd. Kuvempu Nagar, Mysuru, Karnataka-570023
8152066999

HOUSE FOR SALE
1) 20X30 Dulplex in Srirampura Near Bramarambha Choultry.
2) 20x30 Triplex in Dattagalli 3rd Stage, Kanakadasa Nagar (Buyers Only) Contact:
9110826919

HOUSE FOR RENT
3BHK House in 1st Floor at T.K. Layout is for Rent
For Detail Contact:
9880619850
9448521635

ಮನೆ ಭೋಗ್ಯಕ್ಕಿದೆ
1st Floor ಸೋಲಾರ್ 2 Bedroom
ಬಿ.ಬಿ.ಲಾಯ ರಸ್ತೆ, ಅಗ್ರಹಾರ, ಮೈಸೂರು
7019668213 / 9980029481

ಸುವರ್ಣ ಯಾತ್ರ
24/5/22 ಕಾಶಿ ಪ್ರವಾಸ 6 ದಿನಗಳು ವಿಮಾನದಲ್ಲಿ ಕಾಶಿ ಗಂಗಾ, ಬುದ್ಧಗಯಾ, ಪ್ರಯಾಗರಾಜ್, ಜಾರ್ಖಂಡ್.
1/06/22 ನೇಪಾಳ ಹಾಗೂ ಮುಕ್ತಿನಾಥ ಪ್ರವಾಸ 7 ದಿನಗಳು ವಿಮಾನದಲ್ಲಿ ಪಶುಪತಿನಾಥ, ಮನೋಕಾಮನ, ಕಠ್ಮಂಡು, ಪೋಕ್ರಾ
11/06/22 ದೆಹಲಿ ಕೇದಾರನಾಥ್, ಬದ್ರಿನಾಥ್ ಯಮುನೋತ್ರಿ, ಗಂಗೋತ್ರಿ 13 ದಿನಗಳು
8970949434 / 9019462508

ಕೊಳ್ಳೇಗಾಲದ ಜ್ಯೋತಿಷ್ಯರು
ಮೋಡಿ ಮಾಂತ್ರಿಕರು ಪಂ.ಎಸ್.ಕುಮಾರಸ್ವಾಮಿ
ಮೊ.: 9880583804
ಸ್ತ್ರೀ ಪುರುಷ ಪ್ರೇಮ, ಸಂತಾನ, ದಾಂಪತ್ಯ ಸಮಸ್ಯೆ (Divorce) ... (Reliance Smart) ಹತ್ತಿರ, ATM ಪಕ್ಕ, ... (KSRTC) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು

ಶ್ರೀ ರೇಣುಕಾದೇವಿ ಜ್ಯೋತಿಷ್ಯಾಲಯ
ಫೋನಿನ ಮೂಲಕ ನಿಮ್ಮ ಸಮಸ್ಯೆಗಳಿಗೆ ಪರಿಹಾರ ಶತಸಿದ್ಧ
8123941037
ಹಣಕಾಸಿನ ತೊಂದರೆಯೇ? ಪ್ರೀತಿ – ಪ್ರೇಮದಲ್ಲಿ ಸಮಸ್ಯೆಯೇ? ಸಂತಾನ ಸಮಸ್ಯೆಯೇ? ... ಗಂಡ – ಹೆಂಡತಿಯ ಸಮಸ್ಯೆಯೇ? ... 48 ಗಂಟೆಗಳಲ್ಲಿ ಪರಿಹಾರ ಶತಸಿದ್ಧ.

ತಕ್ಷಣ ಬೇಕಾಗಿದ್ದಾರೆ
KRS Road ಮೇಟಗಳ್ಳಿ ಸುತ್ತಮುತ್ತ ಏರಿಯಾದಲ್ಲಿ ಕೆಲಸ ಮಾಡಲು ... ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC, ಸಂಬಳ: S/ Sup 16,500/–8 hours, S/Guard 15,500/– 8 hours, ವಯೋಮಿತಿ : 45 ವರ್ಷದ ಒಳಗೆ, ESI ಮತ್ತು PF ಊಟ ತಿಂಡಿ ವ್ಯವಸ್ಥೆ ಇರುತ್ತದೆ. ಸಂಪರ್ಕಿಸಬೇಕಾದ ಸಂಖ್ಯೆಗಳು:
9880727819 / 9620667819

FLAT FOR SALE
3 BHK Fully Furnished Flat for Sale at Hebbal 2nd stage Mysore.
Contact no.
9481546302

ಬೇಕಾಗಿದ್ದಾರೆ
ಕರ್ನಾಟಕದಾದ್ಯಂತ ಕಂಪನಿ / ಆಫೀಸ್ ಕೆಲಸಗಳಿಗೆ ಯುವಕ / ಯುವತಿಯರು ಬೇಕಾಗಿದ್ದಾರೆ.
Any Education
ವಸತಿಯೂಟದೊಂದಿಗೆ Salary + ಓಟಿ 18,000-48,000/-
9538811104
9538811223

ವಧು ಬೇಕಾಗಿದ್ದಾಳೆ
40 ವರ್ಷ ವಯಸ್ಸಿನ ವಕೀಲ ವೃತ್ತಿಯಲ್ಲಿರುವ ಅವಿವಾಹಿತ ಕೊಡವ ವರನಿಗೆ ವಧು ಬೇಕಾಗಿದ್ದಾಳೆ. ಆಸಕ್ತರು ಸಂಪರ್ಕಿಸಿ:
7204362756

WANTED
1) Receptionists - (M/F)
2) Security Guards (M)
9739166772
9739199355

ಅಂಜನ ಶಾಸ್ತ್ರದ ಮೂಲಕ ಪರಿಹಾರ
ಶ್ರೀ ಅಂಜನ ದೇವಿ ಆರಾಧಕರು ಪಂ|| ಶ್ರೀನಿವಾಸ್ ಆಚಾರ್ಯ
ಮೈಸೂರಿನಲ್ಲಿ ಐದು ವರ್ಷದಿಂದ ... ಫೋನಿನ ಮೂಲಕ ಪರಿಹಾರ.
9663466548

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990

ಕೇರಳ ಶ್ರೀ ಭಗವತಿ ಜ್ಯೋತಿಷ್ಯರು
ಪಂ|| ಎಸ್.ಮಣಿಕಂಠನ್
ಮೊ: 9480743991

ಶುಭಲಗ್ನಂ
ಎಲ್ಲಾ ಜಾತಿಯ ವಧುವರರಿಗೆ ನೇರ ಸಂಪರ್ಕಿಸಿ. ಪ್ರತಿದಿನ ವಧುವರರ ನೇರ ಸಂದರ್ಶನ ಇರುತ್ತದೆ.
ಗುರೂಜಿ, ಮೈಸೂರು
ಸಂಪರ್ಕಿಸಿ: 6361740552
shubalagnam.com

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ದೋಷ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆ ನೇರ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಮೈಸೂರಲ್ಲಿ ಗುಡ್‌ಫ್ರೈಡೇ ಆಚರಣೆ

● ವಿವಿಧ ಚರ್ಚುಗಳಲ್ಲಿ ಬಿಷಪ್ ಸೇರಿದಂತೆ ಫಾದರ್‌ಗಳ ನೇತೃತ್ವದಲ್ಲಿ ಸಾಮೂಹಿಕ ಪ್ರಾರ್ಥನೆ ● ವಿದ್ಯುದ್ದೀಪಗಳಿಂದ ಕಂಗೊಳಿಸಿದ ಚರ್ಚುಗಳು





ಮೈಸೂರು, ಏ.15(ಆರ್‌ಕೆ)– ಶುಭ ಶುಕ್ರವಾರ (ಗುಡ್‌ಫ್ರೈಡೇ)ದ (ಏ.15) ಪ್ರಯುಕ್ತ ಮೈಸೂರಿನ ಎಲ್ಲಾ ಚರ್ಚ್‌ಗಳಲ್ಲಿ ಕ್ರೈಸ್ತ ಸಮುದಾಯದವರು ಸಾಮೂಹಿಕ ಪ್ರಾರ್ಥನೆ ಮಾಡಿದರು.

ಮೈಸೂರು ಪ್ರಾಂತ್ಯ ಬಿಷಪ್ ರೆವರೆಂಡ್ ಫಾದರ್ ಕೆ.ಎ.ವಿಲಿಯಂ ನೇತೃತ್ವದಲ್ಲಿ ಸೆಂಟ್ ಫಿಲೋಮಿನಾಸ್ ಚರ್ಚ್‌ನಲ್ಲಿ ಮುಂಜಾನೆ 5 ಗಂಟೆಯಿಂದಲೇ ಕನ್ನಡ, ಇಂಗ್ಲಿಷ್, ತಮಿಳು ಹಾಗೂ ಮಲಯಾಳಂ ಭಾಷೆಗಳಲ್ಲಿ ಯೇಸು ಕ್ರಿಸ್ತನ ಮುಂಭಾಗ ಕ್ಯಾಂಡಲ್ ಹಚ್ಚಿ ನಾಡಿನ ಸಮಸ್ತ ಜನರಿಗೆ ಒಳಿತಾಗಲಿ, ಸರ್ವರಲ್ಲಿ ಸೋದರತ್ವ, ಸಹಬಾಳ್ವೆ ನೆಲೆಸಲಿ ಎಂದು ಪ್ರಾರ್ಥಿಸಿದರು.

ಇಂದು ಉಪವಾಸ ವ್ರತ ಆಚರಿಸಿದ ಕೆಲ ಕ್ರೈಸ್ತ ಬಾಂಧವರು ಸಾಮೂಹಿಕ ಪ್ರಾರ್ಥನೆ ಮುಗಿಸಿದ ಬಳಿಕ ಉಪಾಹಾರ, ಗಂಜಿ ಸೇವಿಸಿದ ನಂತರವಷ್ಟೇ ಸಂಜೆ ಊಟ ಮಾಡಿದರು. ಭಾನುವಾರ ಈಸ್ಟರ್ ಸಂಭ್ರಮಾಚರಣೆ ಆಚರಿಸಲಿದ್ದು, ಎಲ್ಲಾ ಕ್ರೈಸ್ತ ದೇವಾಲಯಗಳಲ್ಲಿ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ.

ಲಷ್ಕರ್ ಮೊಹಲ್ಲಾದ ಸೆಂಟ್ ಫಿಲೋಮಿನಾ ಚರ್ಚ್, ಜೆ.ಎಸ್.ಎಸ್ ಗ್ರಾಮಾಂತರ ಬಸ್ ನಿಲ್ದಾಣ ಬಳಿಯ ಸೆಂಟ್ ಬಾರ್ಥಲೋಮಿಯಾ ವೆಸ್ಲಿ ಚರ್ಚ್, ಫೌಂಟೇನ್ ಸರ್ಕಲ್ ಬಳಿಯ ಕರುಣಾಮಯ ಚರ್ಚ್, ಆರ್.ಎಸ್.ನಾಯ್ಡು ನಗರ, ರಾಜೀವ ನಗರ, ಗಾಯತ್ರಿಪುರಂ, ಹಿನಕಲ್, ಹುಣಸೂರು ರಸ್ತೆ, ದಟ್ಟಗಳ್ಳಿ, ರಾಮಕೃಷ್ಣನಗರ ಸೇರಿದಂತೆ ಮೈಸೂರು ನಗರದಾದ್ಯಂತ ವಿವಿಧ ಕ್ರೈಸ್ತ ದೇವಾಲಯಗಳನ್ನು ವಿದ್ಯುದ್ದೀಪಗಳಿಂದ ಅಲಂಕರಿಸಲಾಗಿತ್ತು. ತಳಿರು-ತೋರಣಗಳಿಂದ ಶೃಂಗರಿಸಲಾಗಿತ್ತು.

ಗುಡ್‌ಫ್ರೈಡೇ ಅಂಗವಾಗಿ ಬಿಷಪ್ ಸೇರಿದಂತೆ ಎಲ್ಲಾ ಚರ್ಚ್‌ಗಳ ಫಾದರ್‌ಗಳನ್ನು ಭೇಟಿ ಮಾಡಿ ಕ್ರೈಸ್ತ ಸಮುದಾಯದವರು ಶುಭಾಶಯ ವಿನಿಮಯ ಮಾಡಿಕೊಳ್ಳುತ್ತಿದ್ದುದು ಕಂಡುಬಂದಿತು. ಸಾಲು-ಸಾಲು ರಜೆ ಇದ್ದುದರಿಂದ ಕೇರಳ, ತಮಿಳುನಾಡು ಸೇರಿದಂತೆ ವಿವಿಧೆಡೆಗಳಿಂದ ಪ್ರವಾಸಿಗರು ಮೈಸೂರಿಗೆ ಆಗಮಿಸುವುದರಿಂದ ಸೆಂಟ್ ಫಿಲೋಮಿನಾ ಚರ್ಚ್‌ಗೆ ಸಾವಿರಾರು ಮಂದಿ ಭೇಟಿ ನೀಡಿ ವೀಕ್ಷಿಸುತ್ತಿದ್ದಾರೆ.

ಗುಡ್‌ಫ್ರೈಡೇ ದಿನವಾದ ಇಂದು ಮೈಸೂರಿನ ಹೋಟೆಲ್‌ಗಳು, ಅರಮನೆ, ಮೃಗಾಲಯ, ಚಾಮುಂಡಿಬೆಟ್ಟಗಳಿಗೆ ಪ್ರವಾಸಿಗರ ದಂಡೇ ಹರಿದು ಬಂದಿತ್ತು. ಪ್ರವಾಸಿ ತಾಣಗಳಲ್ಲಿ ಭರ್ಜರಿ ವ್ಯಾಪಾರ-ವಹಿವಾಟು ನಡೆದು ವರ್ತಕರಲ್ಲಿ ಸಂತಸ ಮೂಡಿದೆ. ಟೂರ್ಸ್ ಅಂಡ್ ಟ್ರಾವೆಲ್ಸ್ ವಾಹನ ಬುಕ್ ಮಾಡಿಕೊಂಡು ಮೈಸೂರು ಮತ್ತು ಸುತ್ತಮುತ್ತಲ ಪ್ರವಾಸಿ ಕೇಂದ್ರಗಳಿಗೆ ಟ್ರಿಪ್ ಮಾಡುತ್ತಿದ್ದುದು ಇಂದು ಕಂಡುಬಂದಿತು.

ಆಯಾ ಪೊಲೀಸ್ ಠಾಣಾ ಇನ್ಸ್‌ಪೆಕ್ಟರ್‌ಗಳು ತಮ್ಮ ವ್ಯಾಪ್ತಿಯ ಚರ್ಚ್‌ಗಳಿಗೆ ಸಿಬ್ಬಂದಿಗಳನ್ನು ನಿಯೋಜಿಸಿ ಸೂಕ್ತ ಬಂದೋಬಸ್ತ್ ವ್ಯವಸ್ಥೆ ಮಾಡಿದ್ದರಲ್ಲದೆ, ಯಾವುದೇ ಅಹಿತಕರ ಘಟನೆ ನಡೆಯದಂತೆ ಕಟ್ಟೆಚ್ಚರ ವಹಿಸಿದ್ದರು.

ನಾಳೆ(ಏ.16) ಹೋಲಿ ಶನಿವಾರವೂ ಸಾಮೂಹಿಕ ಪ್ರಾರ್ಥನೆ ನಡೆಯಲಿದ್ದು, ಭಾನುವಾರ ಈಸ್ಟರ್ ಪ್ರಯುಕ್ತ ಎಲ್ಲಾ ಚರ್ಚ್‌ಗಳ ಆವರಣದಲ್ಲಿ ಸಂಭ್ರಮದ ಮೆರವಣಿಗೆ ನಂತರ ಭಕ್ತಿ ಭಾವದ ಪೂಜೆ, ಪ್ರೇಯರ್ ಆಯೋಜಿಸಲಾಗಿದೆ.

ಮೂರನೇ ಪುಟದಿಂದ

ಈಶ್ವರಪ್ಪ ರಾಜೀನಾಮೆ

ಸ್ವಯಂಪ್ರೇರಿತವಾಗಿ ಮಂತ್ರಿ ಸ್ಥಾನ ತ್ಯಜಿಸಿ, ತನಿಖೆ ಮುಕ್ತವಾಗಿ ನಡೆಯಲಿ ಎಂದು ದಾರಿ ಮಾಡಿಕೊಟ್ಟಿದ್ದೇನೆ. ಕಾಂಗ್ರೆಸ್ ಮುಖಂಡರು ಕುಡಿದ ಅಮಲಿನಲ್ಲಿ ಆರೋಪಗಳನ್ನು ಮಾಡುತ್ತಿದ್ದಾರೆ. ಅವರ ಎಲ್ಲ ಆರೋಪಗಳಿಗೂ ತನಿಖಾ ವರದಿಯೇ ಅಂತಿಮ ಉತ್ತರ ನೀಡುತ್ತದೆ. ಪ್ರಕರಣ ಬಯಲಾಗುತ್ತಿದ್ದಂತೆ ನಾನು ರಾಜೀನಾಮೆ ನೀಡಲು ಮುಂದಾಗಿದ್ದೆ. ಆದರೆ, ಮುಖ್ಯಮಂತ್ರಿ ಅವರೇ ಒಂದೆರಡು ದಿನ ಕಾಯುವಂತೆ ಸಲಹೆ ಮಾಡಿದ್ದರು. ಸಾವಿನ ಹಿಂದೆ ಯಾರಿದ್ದಾರೆ. ಇದನ್ನು ಏಕೆ ಮಾಡಿಸಿದ್ದಾರೆ ಎಂಬುದು ಸತ್ಯ ಹೊರಬೀಳಬೇಕು. ನಾನು ಷಡ್ಯಂತರಕ್ಕೆ ತಾತ್ಕಾಲಿಕವಾಗಿ ಬಲಿಯಾಗಿದ್ದೇನೆ.ಅಧಿಕಾರ ಬಿಟ್ಟಿದ್ದೇನೆ. ಆದರೆ, ಸುಮ್ಮನೆ ನಾನು ಕೂರುವುದಿಲ್ಲ. ನಾಳೆಯಿಂದಲೇ ಹಿಂದುತ್ವದ ಪರ ನನ್ನ ಹೋರಾಟ ಮುಂದುವರೆಯಲಿದೆ ಎಂದರು. ಬಿಜೆಪಿ ಅಧಿಕಾರಕ್ಕೆ ಬಂದ ನಂತರ ವಿವಿಧ ಕಾರಣಗಳಿಗೆ ಮೂವರು ಸಚಿವರು ತಲೆದಂಡ ತೆತ್ತಿದ್ದಾರೆ. ಈ ಹಿಂದೆ ಭ್ರಷ್ಟಾಚಾರ ಆರೋಪದ ಮೇಲೆ ಅಬ್ಕಾರಿ ಸಚಿವರಾಗಿದ್ದ ಎಚ್.ನಾಗೇಶ್ ತಮ್ಮ ಸ್ಥಾನ ತೊರೆಯಬೇಕಾಯಿತು. ನಂತರ ಲೈಂಗಿಕ ಸಿಡಿ ಪ್ರಕರಣದಲ್ಲಿ ರಮೇಶ್ ಜಾರಕಿಹೊಳಿ ಮಂತ್ರಿಸ್ಥಾನ ತ್ಯಜಿಸಿದ್ದರು. ಈಗ ಬೊಮ್ಮಾಯಿ ಸಂಪುಟದಲ್ಲಿ ಶೇ. 40ರಷ್ಟು ಕಮಿಷನ್ ಆರೋಪದಲ್ಲಿ ಈಶ್ವರಪ್ಪ ಸಚಿವ ಸ್ಥಾನ ಕಳೆದುಕೊಂಡಿದ್ದಾರೆ.

ಶಿವಮೊಗ್ಗದಿಂದ ಹೊರಟ ಈಶ್ವರಪ್ಪ ತಿಪಟೂರಿನಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ನಿವಾಸಕ್ಕೆ ತೆರಳಿ ಸ್ವಲ್ಪಕಾಲ ಅವರೊಂದಿಗೆ ಸಮಾಲೋಚನೆ ನಡೆಸಿ ನಂತರ ತುಮಕೂರಿನ ಸಿದ್ಧಗಂಗಾಮಠಕ್ಕೆ ಭೇಟಿ ಕೊಟ್ಟು ಶ್ರೀಗಳ ಆಶೀರ್ವಾದ ಪಡೆದರು. ನಂತರ ಅಲ್ಲಿಂದ ನೇರವಾಗಿ ನಗರಕ್ಕೆ ಬಂದು ಮುಖ್ಯಮಂತ್ರಿ ಭೇಟಿಯಾಗಿ ರಾಜೀನಾಮೆ ಸಲ್ಲಿಸಿದರು. ಇಂದಿನಿಂದ ಮೂರು ದಿನಗಳ ಕಾಲ ಪ್ರವಾಸಕ್ಕೆ ತೆರಳಿದ್ದ ಮುಖ್ಯಮಂತ್ರಿ ಅವರು, ಈಶ್ವರಪ್ಪ ಅವರ ರಾಜೀನಾಮೆ ಪಡೆಯಲೆಂದೇ ಹುಬ್ಬಳ್ಳಿಯಿಂದ ವಿಶೇಷ ವಿಮಾನದಲ್ಲಿ ನಗರಕ್ಕೆ ಧಾವಿಸಿದರು. ನಾಳೆಯಿಂದ ಹೊಸಪೇಟೆಯಲ್ಲಿ ಎರಡು ದಿನಗಳ ಕಾಲ ಬಿಜೆಪಿ ಕಾರ್ಯಕಾರಿಣಿ ನಡೆಯಲಿದ್ದು, ಅದರಲ್ಲಿ ಪಾಲ್ಗೊಳ್ಳಲು ಮುಖ್ಯಮಂತ್ರಿ ನಾಳೆ ಬೆಳಗ್ಗೆಯೇ ತೆರಳಲಿದ್ದಾರೆ. ಮುಂಬರುವ ವಿಧಾನಸಭೆ ಚುನಾವಣೆ ಗಮನದಲ್ಲಿಟ್ಟುಕೊಂಡೆ ನಡೆಯುತ್ತಿರುವ ರಾಜ್ಯ ಕಾರ್ಯಕಾರಿಣಿಯಲ್ಲಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಸೇರಿದಂತೆ ಹಲವು ನಾಯಕರು ಭಾಗವಹಿಸಲಿದ್ದಾರೆ. ಕಾರ್ಯಕಾರಿಣಿಯಲ್ಲಿ ಗೊಂದಲಕ್ಕೆ ಸಿಲುಕಬಾರದು ಎಂಬ ಉದ್ದೇಶದಿಂದ ಮುಖ್ಯಮಂತ್ರಿ, ಈಶ್ವರಪ್ಪ ರಾಜೀನಾಮೆ ಪಡೆದುಕೊಂಡಿದ್ದಾರೆ.

ಮೀನುಗಳ ಮಾರಣಹೋಮ

ಏರಿಯಾ ಡೆವಲಪ್‌ಮೆಂಟ್ ಬೋರ್ಡ್(ಕೆಐಎಡಿಬಿ) ಅಧಿಕಾರಿಗಳ ಬೇಜವಾಬ್ದಾರಿಯೇ ಇದಕ್ಕೆ ಮೂಲ ಕಾರಣ ಎಂದು ಹೆಬ್ಬಾಳ ಕೆರೆ ಹಿತರಕ್ಷಣಾ ಸಮಿತಿ ದೂರಿದೆ. ಹೆಬ್ಬಾಳ ಕೆರೆ ಮತ್ತೆ ಕೊಚ್ಚೆ ಗುಂಡಿಯಂತಾಗುತ್ತಿರುವುದಕ್ಕೆ ಹಾಗೂ ಲಕ್ಷಾಂತರ ಮೀನುಗಳ ಸಾವಿಗೆ ಕೆಐಎಡಿಬಿ ಅಧಿಕಾರಿಗಳು ನೇರ ಹೊಣೆಯಾಗಿದ್ದಾರೆ. ಕೆರೆ ಸುತ್ತಲಿನ ಕಾರ್ಖಾನೆಗಳಿಂದ ಬರುವ ರಾಸಾಯನಿಕಯುಕ್ತ ನೀರನ್ನು ತಡೆಯುವಂತೆ ಹತ್ತಾರು ಬಾರಿ ಮನವಿ ಮಾಡಿದರು ಯಾವುದೇ ಪ್ರಯೋಜನವಾಗಿಲ್ಲ. ಕಾರ್ಖಾನೆ ಮಾಲೀಕರ ವಿರುದ್ಧ ಕ್ರಮ ಕೈಗೊಳ್ಳದೆ ಕೈಕಟ್ಟಿ ಕುಳಿತಿದ್ದಾರೆ. ಕೆರೆಯಲ್ಲಿನ ಪ್ರಾಣಿ-ಪಕ್ಷಿಗಳು ಹಾಗೂ ವಾಯುವಿಹಾರಿಗಳ ಬಗ್ಗೆ ಕನಿಷ್ಠ ಕಾಳಜಿ ಇವರಿಗಿಲ್ಲ ಎಂದು ಕೆರೆ ಹಿತರಕ್ಷಣಾ ಸಮಿತಿ ಅಧ್ಯಕ್ಷ ಎಂ.ಆರ್.ರವಿಕುಮಾರ್ ಕಿಡಿಕಾರಿದರು.

ಪ್ರತಿಫಲವಿಲ್ಲ: ಸಂಪೂರ್ಣವಾಗಿ ಹೂಳು ತುಂಬಿಕೊಂಡಿದ್ದ ಕೆರೆಯನ್ನು ಸರ್ಕಾರದ ಜೊತೆಗೂಡಿ ಇನ್ಫೋಸಿಸ್ ಪ್ರತಿಷ್ಠಾನ ಕೋಟ್ಯಾಂತರ ರೂ. ಹಣ ವಿರ್ಚು ಮಾಡಿ ಅಭಿವೃದ್ಧಿ ಮಾಡಿದೆ. ಕೆರೆಯ ಸುತ್ತಲೂ 8 ಸಾವಿರ ಸಸಿಗಳ ನೆಟ್ಟು ಪೋಷಣೆ ಜೊತೆಗೆ ಕೆರೆಗೆ ಭದ್ರತೆಯನ್ನು ನೀಡುತ್ತಿದೆ. ಇನ್ಫೋಸಿಸ್ ಕೆರೆಯನ್ನು ಮುತುವರ್ಜಿ ವಹಿಸಿ ಸುಂದರ ತಾಣವನ್ನಾಗಿ ಮಾಡಿದ್ದಕ್ಕೂ ಸಾರ್ಥಕತೆ ಇಲ್ಲದಂತಾಗಿದೆ.

ಒಂದೆಡೆ ಸುತ್ತ-ಮುತ್ತಲಿನ ಬಡಾವಣೆ ನಿವಾಸಿಗಳು ತ್ಯಾಜ್ಯ ತಂದು ಸುರಿದರೆ, ಕಾರ್ಖಾನೆಗಳ ಮಾಲೀಕರು ಕಲುಷಿತ ನೀರನ್ನು ಬಿಡುತ್ತಿದ್ದಾರೆ. ಹಿರಿಯರು, ಮಹಿಳೆಯರು, ಮಕ್ಕಳು ವಾಯುವಿಹಾರಕ್ಕೆ ಹೋಗಲು ಈಗ ಹಿಂದೆಮುಂದೆ ನೋಡುತ್ತಿದ್ದಾರೆ. ಸಾಮಾಜಿಕ ಕಳಕಳಿಯುಳ್ಳ ಇನ್ಫೋಸಿಸ್‌ನ ಕೊಡುಗೆಯನ್ನು ಕಾಪಾಡಿಕೊಳ್ಳುವ ಯೋಗ್ಯತೆ ನಮಗೆ ಇಲ್ಲದಾಯಿತಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕೆರೆ ಕೊಚ್ಚೆ ನೀರಿನಿಂದ ದುರ್ವಾಸನೆ ಬೀರುತ್ತಾ, ಸತ್ತು ಬಿದ್ದಿರುವ ಲಕ್ಷಾಂತರ ಮೀನುಗಳನ್ನು ನೋಡಿದರೆ, ಸಮಾಜಕ್ಕೆ ಏನು ಮಾಡಿದರೇನು ಪ್ರಯೋಜನ ಎಂಬಂತಾಗಿದೆ ಎಂದು ಸಮಿತಿ ಪದಾಧಿಕಾರಿಗಳಾದ ರಾಘವೇಂದ್ರ(ಡ್ರೈವರ್), ಪ್ರಸನ್ನ, ಕೃಷ್ಣ, ರವಿ ಭೂಪತಿ ಹಾಗೂ ವಾಯು ವಿಹಾರಕ್ಕೆ ಬಂದ ಹಲವರು ಬೇಸರ ವ್ಯಕ್ತಪಡಿಸಿದರು.

ಪ್ರತಿಭಟನೆ: ಅಭಿವೃದ್ಧಿಯಾಗಿದ್ದ ಕೆರೆಯ ವಿನಾಶಕ್ಕೆ ಕಾರಣವಾಗಿರುವ ಕಾರ್ಖಾನೆಗಳು ಹಾಗೂ ಇದರ ಬಗ್ಗೆ ಬೇಜವಾಬ್ದಾರಿಯುತವಾಗಿ ವರ್ತಿಸುತ್ತಿರುವ ಕೆಐಎಡಿಬಿ ಧಿಕಾರಿಗಳ ವಿರುದ್ಧ ಪ್ರತಿಭಟನೆ ನಡೆಸಲಾಗುವುದು. ಕೆರೆಯ ದುಸ್ಥಿತಿಯನ್ನು ನೋಡಿದರೆ ಸಂಕಟವಾಗುತ್ತದೆ. ಕೆರೆಯ 6 ಕಡೆ ಕಲುಷಿತ ನೀರಿನ ಶುದ್ಧೀಕರಣ ಯಂತ್ರಗಳು ನಿರಂತರವಾಗಿ ಕೆಲಸ ಮಾಡುತ್ತಿದ್ದರೂ, ಕಲುಷಿತ ನೀರು ಹರಿವಿನ ಪ್ರಮಾಣವೇ ಹೆಚ್ಚಾಗಿದೆ. ಯುಜಿಡಿ ನೀರಿನ ಪೈಪ್‌ಲೈನ್‌ಗಳನ್ನು ಕೆರೆಗೆ ಬಿಡಲಾಗಿದೆ. ದುರ್ವಾಸನೆಯಿಂದ ಸುತ್ತ-ಮುತ್ತಲ ವಸತಿ ಬಡಾವಣೆಗಳಲ್ಲಿ ಸಾಂಕ್ರಾಮಿಕ ರೋಗಗಳು ಹರಡಬಹುದಾದ ಭೀತಿ ಎದುರಾಗಿದೆ.

ಇನ್ಫೋಸಿಸ್ ಪ್ರತಿಷ್ಠಾನದ ಪರವಾಗಿ ಸರ್ಕಾರ ನಿಲ್ಲಬೇಕು...

ಕೆಐಎಡಿಬಿ, ಮಾಲಿನ್ಯ ಮಂಡಳಿ ಕೂಡಲೇ ಹೆಬ್ಬಾಳ ಕೆರೆ ಉಳಿಸಲು ಗಮನ ಹರಿಸಬೇಕು. ಕೆಐಎಡಿಬಿ ನಿರ್ಲಕ್ಷ್ಯದಿಂದಾಗಿ ಕೆರೆ ಕಬಳಿಕೆಯಾಗಿದ್ದರೂ ಜನರು ಹೋರಾಟ ಮಾಡಿ ಉಳಿಸಿಕೊಂಡಿದ್ದಾರೆ. 100 ಎಕರೆ ವಿಸ್ತೀರ್ಣವಿದ್ದ ಕೆರೆ ಒತ್ತುವರಿಯಾಗಿ ಈಗ ಅದರ ಅರ್ಧದಷ್ಟು ಉಳಿದಿದೆ. ಕೆರೆ ಪಕ್ಕದಲ್ಲೇ ಇರುವ ಸ್ಯಾನ್‌ರೇ ಕಂಪನಿಯವರು ನಾಲ್ಕೈದು ಕಡೆ ಅಲೆದಾಡಿ ಕಡೆಗೇ ಹೆಬ್ಬಾಳ ಕೆರೆ ಪಕ್ಕದಲ್ಲಿ ಕಾರ್ಖಾನೆ ಕಟ್ಟಿದ್ದಾರೆ. ಸರ್ಕಾರಿ ಅಧಿಕಾರಿಗಳು, ರಾಜಕಾರಣಿಗಳು, ಕಾರ್ಖಾನೆಗಳ ಮಾಲೀಕರಿಂದ ಹೆಬ್ಬಾಳ ಕೆರೆ ನೀರು ಕಲುಷಿತವಾಗಿದೆ. ಇಷ್ಟೊಂದು ಹಣ ಖರ್ಚು ಮಾಡಿ ಕೆರೆ ಅಭಿವೃದ್ಧಿ ಮಾಡಿದ ಇನ್ಫೋಸಿಸ್ ಪ್ರತಿಷ್ಠಾನದ ಪರವಾಗಿ ಸರ್ಕಾರ ನಿಲ್ಲಬೇಕಾಗಿದೆ. –ಡಿ.ಮಾದೇಗೌಡ, ವಿಧಾನ ಪರಿಷತ್ ಮಾಜಿ ಸದಸ್ಯ

ಜೆಡಿಎಸ್ ಜೊತೆಗೆ ಹೊಂದಾಣಿಕೆ ಪಾಪದ ಕೆಲಸ

ಸಚಿವ ಅಶ್ವತ್ಥ್ ನಾರಾಯಣ



ಮಂಡ್ಯ,ಏ.15(ಮೋಹನ್‌ರಾಜ್)– ಜೆಡಿಎಸ್‌ನೊಂದಿಗೆ ಮೈತ್ರಿ ಮಾಡಿಕೊಳ್ಳುವುದು ಪಾಪದ ಕೆಲಸ. ಮುಂದಿನ ಚುನಾವಣೆಯಲ್ಲಿ ಜೆಡಿಎಸ್ ಜೊತೆಗೆ ಬಿಜೆಪಿ ಯಾವುದೇ ಸಂಬಂಧ ಅಥವಾ ಹೊಂದಾಣಿಕೆ ಮಾಡಿಕೊಳ್ಳುವುದಿಲ್ಲ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥ್ ನಾರಾಯಣ್ ಸ್ಪಷ್ಟಪಡಿಸಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಮಗೆ ಜೆಡಿಎಸ್ ಸಹವಾಸ ಬೇಡವಾಗಿದೆ. ನಮಗೆ ಕುಮಾರಸ್ವಾಮಿ ಅಗತ್ಯವಿಲ್ಲ. ಜನ ಈಗಾಗಲೇ ಜೆಡಿಎಸ್‌ಅನ್ನು ತಿರಸ್ಕರಿಸಿದ್ದಾರೆ. ಜನರಿಂದ ತಿರಸ್ಕಾರವಾದವರನ್ನು ನಾವು ಸಹ ತಿರಸ್ಕರಿಸುತ್ತೇವೆ. ತಿರಸ್ಕಾರಗೊಂಡವರ ಜೊತೆ ಎಂತಹ ಹೊಂದಾಣಿಕೆ ಎಂದು ಪ್ರಶ್ನಿಸಿದರು.

ಕುಮಾರಸ್ವಾಮಿ ಜನರಿಗೆ ಮೋಸ ಮಾಡಿಕೊಂಡೇ ಬಂದಿದ್ದು, ರಾಮನಗರದಲ್ಲಿ ಲಿಫ್ಟ್ ಇರಿಗೇಷನ್ ತಂದಿದ್ದು ಬಿಜೆಪಿ. ಜಲಧಾರೆ ಕಾರ್ಯಕ್ರಮ ಕೇವಲ ನಾಟಕವಾಗಿದ್ದು, ಕುಮಾರಸ್ವಾಮಿ ಹುಟ್ಟಿದ್ದೇ ನಾಟಕದಲ್ಲಿ. ನಾಟಕ ಆಡೋದು, ಕಣ್ಣೀರು ಹಾಕುವುದು ಕುಮಾರಸ್ವಾಮಿಗೆ ಸಾಮಾನ್ಯವಾಗಿದ್ದು, ಕುಮಾರಸ್ವಾಮಿ ಮಾತನ್ನು ಯಾರೂ ನಂಬಬಾರದು ಎಂದು ಹೇಳಿದರು.

ಕುಮಾರಸ್ವಾಮಿ ತಾವು ಹಾಳಾಗುವುದಲ್ಲದೇ ಅವರನ್ನು ನಂಬಿದವರನ್ನು ಹಾಳು ಮಾಡುತ್ತಿದ್ದು, ದಕ್ಷಿಣ ಕರ್ನಾಟಕಕ್ಕೆ ಹೆಚ್ಚಿಕೆ ಅಪಮಾನ ಮಾಡಿದ್ದಾರೆ. ಕುಮಾರಸ್ವಾಮಿಗೆ ರಾಜಕೀಯ ಮಾಡುವುದನ್ನು ಬಿಟ್ಟರೆ ಇನ್ನಾವುದೂ ಸಹ ಬರುವುದಿಲ್ಲ. ಕುಮಾರಸ್ವಾಮಿ ಅವರನ್ನು ಹೊರತುಪಡಿಸಿ ಜೆಡಿಎಸ್‌ನಿಂದ ಯಾರನ್ನೂ ಸಿಎಂ ಮಾಡುವುದಿಲ್ಲ. ಅವರಿಗೆ ಕಾಣುವುದು ಕೇವಲ ಅವರ ಕುಟುಂಬವಷ್ಟೇ. ಇನ್ನು ದಲಿತ ಮುಖ್ಯಮಂತ್ರಿಯನ್ನು ಮಾಡುತ್ತಾರೆಯೇ ಎಂದು ಸಚಿವ ಅಶ್ವತ್ಥ್ ನಾರಾಯಣ ಪ್ರಶ್ನಿಸಿದರು.

ಸಂವಿಧಾನ ಬದಲಾಯಿಸಲು ಯಾರಿಂದಲೂ ಸಾಧ್ಯವಿಲ್ಲ: ಸಚಿವ ವಿ. ಸೋಮಣ್ಣ



ಚಾಮರಾಜನಗರ, ಏ.15– ಇತಿಹಾಸ ಬದಲಾಯಿಸಬಹುದು. ಆದರೆ ಡಾ.ಬಿ.ಆರ್. ಅಂಬೇಡ್ಕರ್ ಬರೆದಿರುವ ಸಂವಿಧಾನವನ್ನು ಯಾರೂ ಬದಲಾಯಿಸಲು ಸಾಧ್ಯವಿಲ್ಲ ಎಂದು ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ತಿಳಿಸಿದರು.

ನಗರದ ಜಿಲ್ಲಾ ಬಿಜೆಪಿ ಕಚೇರಿ ಆವರಣದಲ್ಲಿ ಬಿಜೆಪಿ ಜಿಲ್ಲಾ ಎಸ್.ಸಿ.ಮೋರ್ಚಾದ ವತಿಯಿಂದ ನಡೆದ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ 131ನೇ ಜನ್ಮ ದಿನಾಚರಣೆ ಸಮಾರಂಭದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರ ಹಾಗೂ ಪಂಚತೀರ್ಥ ಕ್ಷೇತ್ರಗಳ ಸ್ಮಾರಕಗಳಿಗೆ ಪುಷ್ಪಾರ್ಚನೆ ಮಾಡಿ ಮಾತನಾಡಿದರು.

ಅಂಬೇಡ್ಕರ್ ವಿಶ್ವವನ್ನೇ ಸುತ್ತಾಡಿ, ಎಲ್ಲಾ ದೇಶಗಳ ಸಂವಿಧಾನವನ್ನು ಅಧ್ಯಯನ ಮಾಡಿ, ಹಲವು ಧರ್ಮ, ಜಾತಿ ವರ್ಗಗಳನ್ನು ಒಳಗೊಂಡ ಭಾರತದ ಅಭಿವೃದ್ಧಿಗೆ ಪೂರಕವಾದ ಸಂವಿಧಾನವನ್ನು ನೀಡಿದ್ದಾರೆ. ಇಂಥ ಮಹಾನ್ ವ್ಯಕ್ತಿಗೆ ವಿಶ್ವ ಮಟ್ಟದಲ್ಲಿ ಗೌರವ ದೊರೆತಿದೆ. ವಿಶ್ವಜ್ಞಾನಿ ಎಂಬ ಬಿರುದು ಬಂದಿದೆ. ವಿಶ್ವಸಂಸ್ಥೆಯು ಕೂಡ ಅಂಬೇಡ್ಕರ್ ಜಯಂತಿಯನ್ನು ಆಚರಣೆ ಮಾಡಿ, ಅವರ ಗುಣಗಾನ ಮಾಡಿದೆ. ಇಂಥ ಮಹಾಪುರುಷ ನಮ್ಮ ದೇಶದವರು ಎಂಬುವುದೇ ಹೆಮ್ಮೆಯಾಗಿದೆ ಎಂದರು. ವೇದಿಕೆಯಲ್ಲಿ ಪ್ರೊ. ಮಂಗಳಮೂರ್ತಿ ಮುಖ್ಯ ಭಾಷಣ ಮಾಡಿದರು. ಸಾಧಕರಾದ ಯುವ ವಿಜ್ಞಾನಿ ಡಾ. ನವೀನ್ ಮೌರ್ಯ, ಪೊಲೀಸ್ ಕ್ರೀಡಾಪಟು ಕೃಷ್ಣಪ್ಪ, ಮಾದಯ್ಯ, ಜಾನಪದ ಕಲಾವಿದ ಮಹೇಶ್ ಅವರನ್ನು ಉಸ್ತುವಾರಿ ಸಚಿವ ವಿ. ಸೋಮಣ್ಣ ಸನ್ಮಾನಿಸಿದರು.

ಬಿಜೆಪಿ ಎಸ್.ಸಿ. ಮೋರ್ಚಾದ ಜಿಲ್ಲಾಧ್ಯಕ್ಷ ಕಿನಕಹಳ್ಳಿ ರಾಚಯ್ಯ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಕೇಂದ್ರ ಪರಿಹಾರ ಸಮಿತಿ ಅಧ್ಯಕ್ಷ ಎಂ.ರಾಮಚಂದ್ರ, ಜಿಲ್ಲಾಧ್ಯಕ್ಷ ಆರ್.ಸುಂದರ್, ರಾಜ್ಯ ಎಸ್‌ಸಿ ಮೋರ್ಚಾ ಉಪಾಧ್ಯಕ್ಷ ಜಿ.ಎನ್. ನಂಜುಂಡಸ್ವಾಮಿ, ರಾಷ್ಟ್ರೀಯ ಓಬಿಸಿ ಮೋರ್ಚಾದ ಕಾರ್ಯಕಾರಿಣಿ ಸದಸ್ಯ ನೂರೊಂದುಶೆಟ್ಟಿ, ಚುಡಾ ಅಧ್ಯಕ್ಷ ಕುಲಗಾಣ ಶಾಂತಮೂರ್ತಿ, ಹಾಸನ ಜಿಲ್ಲಾ ಉಸ್ತುವಾರಿ ನಿಜಗುಣರಾಜ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಂಗಲ ಶಿವಕುಮಾರ್, ನಾಗಶ್ರೀಪ್ರತಾಪ್, ನಗರಸಭಾ ಅಧ್ಯಕ್ಷೆ ಆಶಾನಟರಾಜು, ಜಿ.ಪಂ.ಮಾಜಿ ಅಧ್ಯಕ್ಷ ಅಯ್ಯನಪುರ ಶಿವಕುಮಾರ್, ಗ್ರಾಮಾಂತರ ಮಂಡಲ ಅಧ್ಯಕ್ಷ ಬೇಡರಪುರ ಬಸವಣ್ಣ, ಜಿ.ಪಂ.ಮಾಜಿ ಸದಸ್ಯರಾದ ಆರ್. ಬಾಲರಾಜ್, ಎ.ಆರ್. ಬಾಲರಾಜ್, ಎಸ್ ಸಿ ಮೋರ್ಚಾದ ಪ್ರಧಾನ ಕಾರ್ಯದರ್ಶಿ ಮೂಡ್ನಾಕೂಡು ಪ್ರಕಾಶ್, ನಲ್ಲೂರು ಶ್ರೀನಾಥ್, ನಗರ ಮಂಡಲ ಪ್ರಧಾನ ಕಾರ್ಯದರ್ಶಿ ರಾಮಸಮುದ್ರ ಶಿವು, ಚಾಮುಲ್ ನಿರ್ದೇಶಕರಾದ ರವಿಶಂಕರ್, ವೇಣುಗೋಪಾಲ್, ಜಿಲ್ಲಾ ಮಾಧ್ಯಮ ಪ್ರಮುಖ್ ಎನ್. ಮಂಜುನಾಥ ಇತರರು ಹಾಜರಿದ್ದರು.



ಶಾಸಕ ಮಹೇಶ್ ಸೂಚನೆ ಮೇರೆಗೆ ಪೊಲೀಸರಿಂದ ವ್ಯಕ್ತಿ ಮೇಲೆ ಹಲ್ಲೆ ಆರೋಪ: ಡಿವೈಎಸ್ಪಿ ಕಚೇರಿ ಮುಂದೆ ಗ್ರಾಮಸ್ಥರ ಪ್ರತಿಭಟನೆ



ಉತ್ತಂಬಳ್ಳಿ ಗ್ರಾಮದ ನಿವಾಸಿ ಸಿದ್ದರಾಜು ಬೆಳಗ್ಗೆ ಕೊಂಡೋತ್ಸವದ ವೇಳೆ ಸಾರ್ವಜನಿಕವಾಗಿ ಚಪ್ಪಲಿ ತೋರಿಸುತ್ತಾ ಯಾರನ್ನೋ ಬೈಯ್ಯುತ್ತಾ ನಿಂತಿದ್ದ. ಹೀಗಾಗಿ ಆತನನ್ನು ಠಾಣೆಗೆ ಕರೆತಂದು ತಿಳುವಳಿಕೆ ಹೇಳಿ ಸಾರ್ವಜನಿಕವಾಗಿ ಶಾಂತಿ ಭಂಗ ಮಾಡಿದ ಆರೋಪದ ಮೇರೆಗೆ ಕೇಸ್ ದಾಖಲಿಸಿ ತಹಶೀಲ್ದಾರ್ ಕೋರ್ಟ್‌ಗೆ ಹಾಜರುಪಡಿಸುವ ಸಲುವಾಗಿ ಮೆಡಿಕಲ್ ಟೆಸ್ಟ್‌ಗಾಗಿ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಈ ವೇಳೆ ಆತನನ್ನು ಭೇಟಿ ಮಾಡಲು ಬಂದ ಕೆಲವರು ಘಟನೆಯನ್ನು ತಿರುಚಿ ಶಾಸಕರ ವಿರುದ್ಧ ರಾಜಕೀಯ ಮಾಡುತ್ತಿದ್ದಾರೆ.
- ಮಾದೇಗೌಡ, ಸಬ್ ಇನ್ಸ್‌ಪೆಕ್ಟರ್, ಆಗರ-ಮಾಂಬಳ್ಳಿ ಠಾಣೆ

ಕೊಳ್ಳೇಗಾಲ, ಏ.15–ತನ್ನನ್ನು ಪ್ರಶ್ನಿಸಿದನೆಂಬ ಕಾರಣಕ್ಕಾಗಿ ಶಾಸಕ ಎನ್.ಮಹೇಶ್ ಅವರು ನೀಡಿದ ಸೂಚನೆ ಮೇರೆಗೆ ಪೊಲೀಸರು ಗ್ರಾಮಸ್ಥನೊಬ್ಬನನ್ನು ಹಿಗ್ಗಾಮುಗ್ಗಾ ಥಳಿಸಿದ್ದಾರೆ ಎಂದು ಆರೋಪಿಸಿ ತಾಲೂಕಿನ ಉತ್ತಂಬಳ್ಳಿ ಗ್ರಾಮಸ್ಥರು ಹಾಗೂ ದಸಂಸ ಮುಖಂಡರು ಇಲ್ಲಿನ ಡಿವೈಎಸ್‌ಪಿ ಕಚೇರಿ ಮುಂದೆ ಪ್ರತಿಭಟನೆ ನಡೆಸಿದರು.

ಅಮಾಯಕ ಗ್ರಾಮಸ್ಥನ ಮೇಲೆ ಹಲ್ಲೆ ನಡೆಸಿರುವ ಪೊಲೀಸರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ ಪ್ರತಿಭಟನಾಕಾರರು, ಶಾಸಕ ಎನ್.ಮಹೇಶ್ ವಿರುದ್ಧ ಘೋಷಣೆ ಕೂಗಿದರು.

ವಿವರ: ತಾಲೂಕಿನ ಉತ್ತಂಬಳ್ಳಿ ಗ್ರಾಮದಲ್ಲಿ ಶುಕ್ರವಾರ ಮುಂಜಾನೆ ಕೊಂಡೋತ್ಸವ ನಡೆಯಿತು. ಈ ಹಿನ್ನೆಲೆಯಲ್ಲಿ ಬೆಳಗ್ಗೆ 9 ಗಂಟೆ ಸುಮಾರಿನಲ್ಲಿ ಶಾಸಕ ಎನ್.ಮಹೇಶ್ ಗ್ರಾಮಸ್ಥರಿಗೆ ಶುಭ ಕೋರಲು ಗ್ರಾಮಕ್ಕೆ ತೆರಳಿದ್ದರು. ಈ ವೇಳೆ ಸಿದ್ದರಾಜು(40) ಎಂಬಾತ ಶಾಸಕರನ್ನುದ್ದೇಶಿಸಿ, ನಿಮ್ಮನ್ನು ಗೆಲ್ಲಿಸಿ ಏನು ಪ್ರಯೋಜನವಾಗಿದೆ? ನನಗೆ ಒಂದು ಲೋನ್ ಕೂಡ ಕೊಡಿಸಿಲ್ಲ. ಗ್ರಾಮಕ್ಕೆ ಅಭಿವೃದ್ಧಿ ಕೆಲಸವನ್ನೂ ಮಾಡಿಲ್ಲ. ನೀವು ಯಾಕೆ ನಮ್ಮೂರಿಗೆ ಬಂದಿದ್ದೀರಿ? ಎಂದು ಏಕ ವಚನದಲ್ಲೇ ಪ್ರಶ್ನಿಸಿದ ಎನ್ನಲಾಗಿದೆ.

ಆ ಸಂದರ್ಭದಲ್ಲಿ ಶಾಸಕರ ಗನ್‌ಮನ್ ಶಿವಣ್ಣ, ಅಲ್ಲಿಯೇ ಇದ್ದ ಆಗರ-ಮಾಂಬಳ್ಳಿ ಠಾಣೆ ಪೊಲೀಸರಿಗೆ ಸೂಚನೆ ನೀಡಿದ ನಂತರ ಶಾಸಕರು ಗ್ರಾಮದಿಂದ ತೆರಳಿದ್ದಾರೆ. ಆನಂತರ ಸಿದ್ದರಾಜುವನ್ನು ಠಾಣೆಗೆ ಕರೆದೊಯ್ದು ಪೊಲೀಸರು ಹಿಗ್ಗಾಮುಗ್ಗಾ ಥಳಿಸಿದ್ದಲ್ಲದೇ, ಆತನ ವಿರುದ್ಧ ಕೇಸ್‌ವೊಂದನ್ನು ಹಾಕಿದ್ದಾರೆ. ಪೊಲೀಸರಿಂದ ಹಲ್ಲೆಗೊಳಗಾದ ಸಿದ್ದರಾಜು, ಇಲ್ಲಿನ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ದಸಂಸ ಸಂಚಾಲಕ ಉತ್ತಂಬಳ್ಳಿ ನಿಂಗಣ್ಣ, ಸಿದ್ದರಾಜುವಿನ ತಾಯಿ ಗಿರಿಜಮ್ಮ, ಪತ್ನಿ ಚೆನ್ನಾಜಮ್ಮ ಸೇರಿದಂತೆ ನೂರಾರು ಮಂದಿ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಈ ಕುರಿತು ಸುದ್ದಿಗಾರರ ಜೊತೆ ಮಾತನಾಡಿದ ಸಿದ್ದರಾಜು, ಉತ್ತಂಬಳ್ಳಿ ಗ್ರಾಮಕ್ಕೆ ಬಂದಿದ್ದ ಶಾಸಕರನ್ನು ನೋಡಿಕೊಂಡು ನನ್ನ ಪಕ್ಕದಲ್ಲಿ ನಿಂತಿದ್ದವರ ಜೊತೆ ನನ್ನ ಬೇಸರವನ್ನು ಹಂಚಿಕೊಂಡಿದ್ದೆ. ಇವರು ಶಾಸಕರಾಗಲು ದುಡಿದಿದ್ದ ನಾನು ಸಾಯೋವರೆಗೂ ವಾದ್ಯ ನುಡಿಸುವ ಕೆಲಸವನ್ನೇ ಮಾಡಿಕೊಂಡು ಜೀವನ ನಡೆಸುವುದೇ ಆಗಿದೆ. ನನಗೆ ಒಂದು ಲೋನ್ ಕೂಡ ಕೊಡಿಸಲಿಲ್ಲ ನೋಡು, ಹೋಗ್ತಾ ಇದ್ದಾನೆ ಎಂದು ಹೇಳಿದ್ದು ಅಷ್ಟೇ. ನಾನು ಶಾಸಕರಿಗೆ ಚಪ್ಪಲಿ ತೋರಿಸಲಿಲ್ಲ. ಮೊದಲಿಗೆ ಆಗ ನಾನು ಚಪ್ಪಲಿಯೇ ಹಾಕಿರಲಿಲ್ಲ. ಆದರೂ ಪೊಲೀಸರು ನನ್ನನ್ನು ಠಾಣೆಗೆ ಕರೆದೊಯ್ದು ಸಿಕ್ಕಾಪಟ್ಟೆ ಥಳಿಸಿದ್ದಾರೆ. ನಾನು ಶಾಸಕರಿಗೆ ಚಪ್ಪಲಿ ತೋರಿಸಿದೆ ಎಂದು ವಿನಾ ಕಾರಣ ಆರೋಪಿಸುತ್ತಿದ್ದಾರೆ ಎಂದು ತಿಳಿಸಿದ್ದಾರೆ.



ಡಾ. ಬಾಬಾ ಸಾಹೇಬ್ ಅಂಬೇಡ್ಕರ್‌ರವರ 131ನೇ ಜನ್ಮದಿನವನ್ನು, ನಾಗವಾಲ ಗ್ರಾಪಂ ಆವರಣದಲ್ಲಿ ಅಧ್ಯಕ್ಷ ನರೇಂದ್ರ ಹೂ ಗುಚ್ಛ ಸಮರ್ಪಣೆ ಮಾಡುವ ಮೂಲಕ ಆಚರಣೆ ಮಾಡಿದರು. ಈ ಸಂದರ್ಭದಲ್ಲಿ ಉಪಾಧ್ಯಕ್ಷೆ ಯಶೋಧಮ್ಮ, ಗ್ರಾಪಂ ಸದಸ್ಯರಾದ ಬಿ.ಕೆ.ಕುಮಾರ್, ಸಿ.ಮಹದೇವು, ಕೆಂಪೇಗೌಡ, ಟೈಲರ್ ಮಂಜು, ಹುಯಿಲಾಳು ಕುಮಾರ್, ಪಿಡಿಒ ಶೋಭಾರಾಣಿ ಕಾರ್ಯದರ್ಶಿ ಯಶವಂತ್, ಉದಯ್ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.




ಝುಂಡಾ ಬದಲಾಗಿರಬಹುದು...!


ನನ್ನ ಅಜೆಂಡಾ ಎಂದಿಗೂ ಬದಲಾಗದು...!




ಅಡಗೂರು ಹೆಚ್.ವಿಶ್ವನಾಥ್

ಝುಂಡಾ ಬದಲಾದರೂ ನನ್ನೊಳಗಿನ ಅಜೆಂಡಾ ಬದಲಾಗದು ಎನ್ನುವ ಹಿರಿಯ ರಾಜಕಾರಣಿ, ಹಳ್ಳಿಹಕ್ಕಿ ಅಡಗೂರು ಹೆಚ್.ವಿಶ್ವನಾಥ್ ಅವರಿಗೆ 75ನೇ ಹುಟ್ಟುಹಬ್ಬದ ಸಾರ್ಥಕ ಸಂಭ್ರಮ. ಆಡಳಿತ, ಸಾಮಾಜಿಕ ನ್ಯಾಯದ ವಿಚಾರ ಬಂದರೆ ನೇರ-ನಿಷ್ಠುರವಾಗಿ ತಮ್ಮ ಪಕ್ಷದವರು, ಇತರರು ಎಂದು ನೋಡದೇ ತರಾಟೆಗೆ ತೆಗೆದುಕೊಳ್ಳುವ ವಿಶ್ವನಾಥರದು ವಿಶಿಷ್ಟ ವ್ಯಕ್ತಿತ್ವ. ಇದ್ದದ್ದನ್ನು ಇದ್ದ ಹಾಗೆ ಹೇಳುವ, ರಾಜಕಾರಣದಲ್ಲಿ ಅಪಾರ ಅನುಭವವುಳ್ಳ ಹಳೆ ಮೈಸೂರು ಭಾಗದ ಪ್ರಬುದ್ಧ ಹಾಗೂ ರಾಜ್ಯ ರಾಜಕಾರಣದಲ್ಲಿ ವಿಶಿಷ್ಟ ಛಾಪು ಮೂಡಿಸಿರುವ ವಿಶ್ವನಾಥರು 'ಮೈಸೂರು ಮಿತ್ರ'ನೊಂದಿಗೆ ತಮ್ಮ ರಾಜಕೀಯ ಹಾಗೂ ವೈಯಕ್ತಿಕ ಅನುಭವಗಳನ್ನು ಮನಬಿಚ್ಚಿ ಹಂಚಿಕೊಂಡಿದ್ದಾರೆ.







ಸಂದರ್ಶನ : ದೇವರಾಜ ಎಸ್.ಬಿ. / ಮೋಹನ್ ಕಾಯಕ

ಮಿತ್ರ: ವಿಶ್ವನಾಥರಿಗೆ 75 ಆಯಿತು. ಬಿಜೆಪಿಯಲ್ಲಿ 75 ವರ್ಷ ಮೇಲ್ಪಟ್ಟವರಿಗೆ ಅಧಿಕಾರ ಇಲ್ಲ ಎಂಬ ನಿರ್ಬಂಧವಿದೆ. ನಿಮ್ಮ ಮುಂದಿನ ರಾಜಕೀಯ ನಡೆ ಏನು?.

ವಿಶ್ವನಾಥ್: ಐದು ದಶಕದಿಂದ ರಾಜಕೀಯ ಮಾಡಿಕೊಂಡು ಬರುತ್ತಿದ್ದೇನೆ. ನಾನು ಕಾಂಗ್ರೆಸ್‌ನಿಂದ ಜೆಡಿಎಸ್ ಸೇರಿದಾಗ ಸ್ನೇಹಿತರೆಲ್ಲಾ ಕೇಳಿದರು. ಆಗ ನಾನು ಹೇಳಿದ್ದೇನು ಎಂದರೆ, ನಾನು ಯಾವ ಪಕ್ಷದಲ್ಲಿ ಇರುತ್ತೇನೋ ಬಿಡುತ್ತೇನೋ ಅದು ಬೇರೆ. ಝುಂಡಾ(ಬಾವುಟ) ಬದಲಾಗಬಹುದೇ ಹೊರತು, ನನ್ನ ಅಜೆಂಡಾ ಮಾತ್ರ ಅದೇ ಇರುತ್ತದೆ. ನನ್ನ ಅಜೆಂಡಾ ದೇಶ, ರಾಜ್ಯ, ಜನ, ಪ್ರೀತಿ, ವಿಶ್ವಾಸ. ದೇವರಾಜ ಅರಸರು ನನಗೆ ಏನು ಹೇಳಿಕೊಟ್ಟು ಹೋದರು. ಆ ಅಜೆಂಡಾ ನಾನು ಬದುಕಿರುವವರೆಗೂ ಇರುತ್ತದೆ. ಝುಂಡಾ ಬದಲಾವಣೆ ಆಗುತ್ತದೆ ತೊಂದರೆಯಿಲ್ಲ.

ಮಿತ್ರ ನೀವು ಈಗಾಗಲೇ ಮೂರು ರಾಜಕೀಯ ಪಕ್ಷ ನೋಡಿಯಾಗಿದೆ. ನಿಮ್ಮ ವ್ಯಕ್ತಿತ್ವಕ್ಕೆ ಒಪ್ಪಿದ್ದು ಯಾವುದು?

ವಿಶ್ವನಾಥ್: ನಾನೇನು ಅಷ್ಟು ದೊಡ್ಡ ವ್ಯಕ್ತಿ ಅಲ್ಲ, ನನಗೆ ಅಂಥಾ ದೊಡ್ಡ ವ್ಯಕ್ತಿತ್ವವೂ ಇಲ್ಲ. ಇಲ್ಲಿ ಪಕ್ಷಗಳೆಲ್ಲವೂ ಚೆನ್ನಾಗಿವೆ. ಯಾರೂ ಪಕ್ಷದ ಬಗ್ಗೆ ಮಾತನಾಡಬಾರದು. ಜೆಡಿಎಸ್, ಬಿಜೆಪಿ, ಕಾಂಗ್ರೆಸ್, ಎಎಪಿ ಹೀಗೆ ಎಲ್ಲಾ ಪಕ್ಷಗಳೂ ಸರಿಯಿವೆ. ಆದರೆ ಪಕ್ಷದ ನಾಯಕತ್ವ ಸರಿಯಿಲ್ಲ, ಅದೇ ಯಡವಟ್ಟು.

ಮಿತ್ರ: ಈ ಹಿಂದೆ ಕಾಂಗ್ರೆಸ್ ನನ್ನ ಹೆತ್ತ ತಾಯಿ ಎಂದು ಹೇಳುತ್ತಾ ಇದ್ದೀರಿ? ಈಗಲೂ ಆ ಮಮಕಾರವೇ ಇದೆಯೇ?

ವಿಶ್ವನಾಥ್: ಖಂಡಿತ, 40 ವರ್ಷಗಳ ಕಾಲ ಕಾಂಗ್ರೆಸ್ ನೆರಳಲ್ಲಿ ನಾನು ಬೆಳೆದಿದ್ದೇನೆ. ಕಾಂಗ್ರೆಸ್ ನನಗೆ ಏನೆಲ್ಲಾ ಕೊಟ್ಟಿದೆ. ಆದರೆ ನಾನು ಯಾರನ್ನು ಕಾಂಗ್ರೆಸ್‌ಗೆ ಕರೆದುಕೊಂಡು ಬಂದೆನೋ, ಅವರಿಂದ ನನಗೆ ಅನ್ಯಾಯವಾಯ್ತು. ಕಾಂಗ್ರೆಸ್ ಬಿಟ್ಟು ಹೋಗುವ ವಾತಾವರಣ ಸೃಷ್ಟಿ ಮಾಡಿದ್ದರಿಂದ ನಾನು ಅನಿವಾರ್ಯವಾಗಿ ಅಲ್ಲಿಂದ ಹೊರ ಬರಬೇಕಾಯಿತು. ಹೌದು, ನಾನು ಜೆಡಿಎಸ್ ಕಚೇರಿಯಲ್ಲಿ ದೇವೇಗೌಡರು, ಕುಮಾರಸ್ವಾಮಿ ಮಧ್ಯೆ ಕುಳಿತುಕೊಂಡು ಸುದ್ದಿಗೋಷ್ಠಿಯಲ್ಲೇ ಹೇಳಿದ್ದೇನೆ. ಕಾಂಗ್ರೆಸ್ ನನ್ನ ತಾಯಿ. 40 ವರ್ಷ ಆ ನೆರಳಲ್ಲಿದ್ದೇನೆ. ತಾಯಿಯನ್ನು ತಾಯಿಯಲ್ಲ ಎಂದು ಹೇಗೆ ಹೇಳೋಕಾಗುತ್ತೆ ಹೇಳಿ...

ಮಿತ್ರ: ಒಂದು ದಶಕದಲ್ಲಿ ಮೂರು ಪಕ್ಷಗಳಿಗೆ ಪಕ್ಷಾಂತರ ಮಾಡಬೇಕಾಗಿ ಬಂತು. ಇದಕ್ಕೆ ಏನು ಕಾರಣ ಕೊಡುತ್ತೀರಾ?

ವಿಶ್ವನಾಥ್: ಆಯಾಯ ಪಕ್ಷಗಳ ನಾಯಕರ ದುರ್ಯೋಧನ ದುರಹಂಕಾರ, ಅವರ ನಡವಳಿಕೆ, ನಮ್ಮನ್ನೆಲ್ಲಾ ನಡೆಸಿಕೊಂಡ ಪರಿ ಇದೆಲ್ಲಾ ಕಾರಣ. ಕಾಂಗ್ರೆಸ್‌ನಿಂದ 14 ಜನ ಏಕೆ ಬಿಟ್ಟು ಬಂದರು. ಜೆಡಿಎಸ್‌ನಿಂದ ನಾವು ಮೂರು ಜನ ಬಿಟ್ಟು ಬಂದೆವು. ಕಾರಣ ಆಯಾಯ ಶಾಸಕಾಂಗ ಪಕ್ಷದ ನಾಯಕರ ನಡವಳಿಕೆಗಳು. ನಮ್ಮನ್ನು ನಡೆಸಿಕೊಂಡ ರೀತಿ. ಅಷ್ಟೇ...

ಮಿತ್ರ: ವಿಶ್ವನಾಥರು ಒಂದು ಸಮುದಾಯದ ನಾಯಕರೋ, ಜನನಾಯಕರೋ?

ವಿಶ್ವನಾಥ್: ನಾನು ಯಾವುದೇ ಒಂದು ಸಮುದಾಯಕ್ಕೆ ನಾಯಕನಲ್ಲ. ನಾನು ಜನರ ಜೊತೆ ಇರುವವನು. ಎಲ್ಲರಿಗೂ ಜಾತಿ ಅನ್ನೋದು ಇದ್ದೇ ಇದೆ. ಇಲ್ಲ ಎನ್ನಲಾಗದು. ಆದರೆ ಅದಷ್ಟೇ ರಾಜಕಾರಣವಲ್ಲ. ಯಾವುದೇ ಜನನಾಯಕನಿಗೆ ಅವನು ಯಾವ ಜಾತಿಗೆ ಸಂಬಂಧಪಟ್ಟಿರುತ್ತಾನೋ ಅದು ಬೋಣಿ. ಆದರೆ ಎಲ್ಲಾ ಸಮಾಜದವರು ಶಕ್ತಿ ತುಂಬುತ್ತಾರೆ.

ಮಿತ್ರ: ಪ್ರಸಕ್ತ ರಾಜಕೀಯ ವಿದ್ಯಮಾನದ ಬಗ್ಗೆ ಏನು ಹೇಳ್ತೀರಾ?

ವಿಶ್ವನಾಥ್: ಹೊಲಸು ರಾಜಕಾರಣ. ಬದಲಾವಣೆಗೆ ಜನ ತೀರ್ಮಾನ ಮಾಡಬೇಕು. ಯುವಕರು ಇದನ್ನು ಕೈಗೆತ್ತಿಕೊಳ್ಳಬೇಕು. ನಾವು ಎಲ್ಲಿದ್ದೀವಿ. ವಿದ್ಯುತ್ ಶುಲ್ಕ ಜಾಸ್ತಿ ಮಾಡಿದರು. ಆದರೆ ವಿದ್ಯುತ್ ಕಳ್ಳತನ ತಪ್ಪಿಸಲು ಸಾಧ್ಯವಾಗುತ್ತಿಲ್ಲ. ಸೋರಿಕೆ ತಪ್ಪಿಸಲು ಸಾಧ್ಯವಾಗುತ್ತಿಲ್ಲ. ಆದರ ಹೊರೆಯನ್ನು ಜನರ ಮೇಲಾಕುತ್ತಿದ್ದಾರೆ. 1.10 ಲಕ್ಷ ಕೋಟಿ ರೂ. ಸರ್ಕಾರದ ಅಧಿಕಾರಿ, ಸಿಬ್ಬಂದಿಗೆ ಸಂಬಳ, ಸಾರಿಗೆ, ಪಿಂಚಣಿ, ತಂದಿರುವ ಸಾಲಕ್ಕೆ ಬಡ್ಡಿ, ಇದಕ್ಕೆ ವೆಚ್ಚ ಮಾಡಲಾಗುತ್ತಿದೆ. ಎಲ್ಲಾ ಸರ್ಕಾರಗಳೂ ಇದೇ ಮಾಡುತ್ತಿರುವುದು. ಎಎಪಿ ನೋಡಿ. 15 ದಿನದ ಹಿಂದೆ ದೆಹಲಿಗೆ ಹೋಗಿದ್ದಾಗ ಕನ್ನಡದ ಮಾಧ್ಯಮ ಸ್ನೇಹಿತರೊಂದಿಗೆ ಮಾತನಾಡುವಾಗ ಸುಮ್ಮನೆ ಎಎಪಿ ಸರ್ಕಾರದ ವಿಶೇಷತೆ ಏನು? ಎಂದು ಕೇಳಿದೆ. ನಮಗೆ ವಿದ್ಯುತ್ ಶುಲ್ಕ ಇಲ್ಲ, ನೀರಿನ ತೆರಿಗೆ ಇಲ್ಲ, ಹೆಣ್ಣು ಮಕ್ಕಳು ಬಸ್ಸಿನಲ್ಲಿ ಉಚಿತವಾಗಿ ಪ್ರಯಾಣಿಸಬಹುದು, ನಮ್ಮ ಮಕ್ಕಳಿಗೆ ಉಚಿತ ಶಿಕ್ಷಣ, ಆರೋಗ್ಯ, ಇಷ್ಟೆಲ್ಲಾ ಇದೆ. ನಿಗದಿಪಡಿಸಿದ್ದಕ್ಕಿಂತ ಹೆಚ್ಚು ಬಳಸುವ ನೀರು ಹಾಗೂ ವಿದ್ಯುತ್‌ಗೆ ಮಾತ್ರ ಶುಲ್ಕ ಎಂದು ಹೇಳಿದರು. ನಗರಗಳಲ್ಲಿ ಜನ ನೀರಿನ ದರ, ವಿದ್ಯುತ್, ಬಸ್ ದರ, ಮಕ್ಕಳ ಶಿಕ್ಷಣ ಶುಲ್ಕ, ಆರೋಗ್ಯ ಇದರಲ್ಲೇ ಸುಸ್ತಾಗಿ ಹೋಗುತ್ತಾರೆ. ಆದರೆ ದೆಹಲಿಯಲ್ಲಿ ಇದೆಲ್ಲಾ ಉಚಿತವಾಗಿದೆ. ಇಲ್ಲಿ ಮಾತ್ರ ಒಬ್ಬರಿಂದೊಬ್ಬರಿಗೆ ತಿಳಿಯದಂತೆ ಕದಿಯುತ್ತಾ ಕುಳಿತಿದ್ದೇವೆ.

ಮಿತ್ರ ನೀವು ದೇವರಾಜ ಅರಸು ಗರಡಿಯಿಂದ ಬಂದವರು. ಈಗ ಅವರ ಆದರ್ಶ ಪಾಲನೆ ಆಗುತ್ತಿದೆಯೇ?

ವಿಶ್ವನಾಥ್: ಖಂಡಿತವಾಗಿ ಹೇಳುತ್ತೇನೆ, ದೇವರಾಜ ಅರಸು ಅವರ ಆದರ್ಶ ಪಾಲನೆಯಾಗುತ್ತಿಲ್ಲ. ಅವರು ಕೊಟ್ಟಂತಹ ಕಾರ್ಯಕ್ರಮ ಈವತ್ತಿಗೂ ಜೀವಂತ. ಅದರಿಂದ ಜನ ಬದುಕಿದ್ದಾರೆ. ನಮ್ಮ ಮಕ್ಕಳು ಬದುಕಿದ್ದಾರೆ. ನಮ್ಮ ಕುಟುಂಬ ಬದುಕಿದೆ. ಅವರು ಕೊಟ್ಟ ಭೂಮಿ, ಮೀಸಲಾತಿ, ಹಾವನೂರ್ ಆಯೋಗದ ವರದಿ, ಸಾಲದಿಂದ, ಜೀತದಿಂದ ಬಿಡುಗಡೆ ಮಾಡಿದ್ದು, ಗೌರವಯುತ ಬದುಕು ಕೊಟ್ಟಿದ್ದು ದೇವರಾಜ ಅರಸು. ಆದರೆ ಈವತ್ತು...?

ಮಿತ್ರ: ಹಿಂದೂಪರ ಸಂಘಟನೆಗಳ ನಾನಾ ಅಭಿಯಾನಗಳ ಬಗ್ಗೆ ನಿಮ್ಮ ಅಭಿಪ್ರಾಯ ಏನು?

ವಿಶ್ವನಾಥ್: ಶ್ರೀರಾಮ ಸೇನೆ, ವಿಶ್ವ ಹಿಂದು ಪರಿಷತ್, ಬಜರಂಗ ದಳ ಸರ್ಕಾರವೇ? ಇದು ಹೆಚ್ಚುವರಿ ಸಾಂವಿಧಾನಿಕ ಶಕ್ತಿಗಳು. ಯಾರು ಇವುಗಳನ್ನು ಹತ್ತಿಕ್ಕಬೇಕು?. ಹಿಂದು ದೇವಸ್ಥಾನದ ಬಳಿ ವ್ಯಾಪಾರ ಮಾಡ್ಬೇಡ, ಮುಸ್ಲಿಂ ಡ್ರೈವರ್ ಕಾರು ಹತ್ಬೇಡ. ಟಿಪ್ಪು ಸುಲ್ತಾನ್ ಚರಿತ್ರೆ ಓದ್ಬೇಡ, ಏನಿದು? ಅನಾಗರಿಕರಾಗುತ್ತಿದ್ದೇವೆ ನಾವು. ಎಲ್ಲಿ ಹೋಗುತ್ತಿದ್ದೀವಿ ನಾವು.

ಮಿತ್ರ: ಯಾವ ಪಕ್ಷದಲ್ಲಿ ನಿಮಗೆ ಹೆಚ್ಚು ಸಮಾಧಾನ, ಮನ್ನಣೆ ಇತ್ತು?

ವಿಶ್ವನಾಥ್: ನನಗೆ ಇಲ್ಲಿಯವರೆಗಿನ ರಾಜಕೀಯ ಪಯಣ ಸಮಾಧಾನ ತಂದಿದೆ ಆದರೆ ಪಕ್ಷ ಸಮಾಧಾನ ತಂದಿಲ್ಲ

ಮಿತ್ರ: ನಿಮ್ಮ ಸ್ವ-ಕ್ಷೇತ್ರ ಕೆ.ಆರ್.ನಗರ ತೊರೆದ ಬಗ್ಗೆ ನಿಮಗೆ ಪಶ್ಚಾತ್ತಾಪ ಇಲ್ಲವೆ?

ವಿಶ್ವನಾಥ್: ಪಶ್ಚಾತ್ತಾಪ ಅಂತೇನಿಲ್ಲ. ನಾನು ಎಂಎಲ್‌ಎ ಬಿಟ್ಟು ಲೋಕಸಭಾ ಚುನಾವಣೆಗೆ ಬಂದಿದ್ದರಿಂದ ಕೆ.ಆರ್.ನಗರ ಸಹಜವಾಗಿ ಕೈಬಿಟ್ಟಿತು. ಆಮೇಲೆ ದೇವೇಗೌಡರು ಹುಣಸೂರಿನಿಂದ ನನಗೆ ಅವಕಾಶ ಕೊಟ್ಟರು. ಹಾಗಾಗಿ ನಾನು ಈವತ್ತಿಗೂ ಹೇಳುತ್ತೇನೆ. ಕರ್ನಾಟಕದಲ್ಲಿ ನಾನು ಯಾರ ಮರ್ಜಿಯಲ್ಲೂ ಇಲ್ಲ. ಆದರೆ ಇಬ್ಬರ ಮರ್ಜಿಯಲ್ಲಿದ್ದೇನೆ. ಒಬ್ಬರು ದೇವರಾಜ ಅರಸರು, ಮತ್ತೊಬ್ಬರು ದೇವೇಗೌಡರು. ಇವರಿಬ್ಬರನ್ನು ಬಿಟ್ಟರೆ ನಾನು ಯಾರ ಮರ್ಜಿಯಲ್ಲೂ ಇಲ್ಲ. ಇನ್ನು ಸಿದ್ದರಾಮಯ್ಯ, ಯಡಿಯೂರಪ್ಪ ಅವರೆಲ್ಲಾ ನಮ್ಮ ಮರ್ಜಿಯಲ್ಲಿದ್ದಾರೆ.

ಮಿತ್ರ: ಬಾಂಬೆ ಡೇಸ್ ಪುಸ್ತಕ ಯಾವಾಗ ಬಿಡುಗಡೆ ಆಗುತ್ತೆ?

ವಿಶ್ವನಾಥ್: ಬಾಂಬೆ ಡೇಸ್ ರೆಡಿಯಾಗಿದೆ. ಸೂಕ್ತ ಸಮಯದಲ್ಲಿ ಬಿಡುಗಡೆ ಮಾಡ್ತೀನಿ.

ಮಿತ್ರ: ಬಾಂಬೆ ಫ್ರೆಂಡ್ಸ್ ನಿಮ್ಮ ಕೈಬಿಟ್ಟಿದ್ದಾರೆ ಎಂಬ ಮಾತಿದೆ. ನಿಜನಾ?

ವಿಶ್ವನಾಥ್: ಬಾಂಬೆ ಫ್ರೆಂಡ್ಸ್ ಈಗ ಮಜವಾಗಿದ್ದಾರೆ, ಮಂತ್ರಿಗಳಾಗಿದ್ದಾರೆ. ನಾನು ದೂರಾಗಿಲ್ಲ, ಅವರು ದೂರವಾಗಿರಬಹುದು. ಅದು ಬೇರೆ ವಿಚಾರ. ಅಧಿಕಾರ ಸಿಕ್ಕಿದ ಮೇಲೆ ಯಾರೂ ಬೇಕಾಗಿಲ್ಲ ಅವರಿಗೆ.

ಮಿತ್ರ: ವಿಶ್ವನಾಥ್ ಯಾವುದೇ ಪಕ್ಷದಲ್ಲಿದ್ದರೂ ಅಲ್ಲಿ 'ವಿರೋಧಿ' ನಾಯಕರಾಗಿರುತ್ತಾರೆ?

ವಿಶ್ವನಾಥ್: ಹೌದು, ಯಾರ ಮರ್ಜಿಯಲ್ಲೂ ಇಲ್ಲ. ಆದ್ದರಿಂದಲೇ ನೇರವಾಗಿ ಮಾತನಾಡುತ್ತೇನೆ. ವಸ್ತುಸ್ಥಿತಿಯನ್ನು ಹೇಳುತ್ತಲೇ ಇರುತ್ತೇನೆ.

ಮಿತ್ರ: ಯಾವ ನಾಯಕನಡಿ ಕೆಲಸ ಮಾಡಿದ್ದು ತೃಪ್ತಿ ತಂದಿದೆ?

ವಿಶ್ವನಾಥ್: ರಾಜಕೀಯದಲ್ಲಿ ಕೈ ಹಿಡಿದು ನಡೆಸಿದ ದೇವರಾಜ ಅರಸು, ಶಾಸಕನಾಗಿ ಹೇಗೆ ಕೆಲಸ ಮಾಡಬೇಕೆಂದು ಪಾಠ ಹೇಳಿಕೊಟ್ಟ ಗುರು ಬಸವಲಿಂಗಪ್ಪ, ಮಹಾಬುದ್ಧಿವಂತರಾದ ವೀರಪ್ಪಮೊಯ್ಲಿ, ಹಿಂದುಳಿದವರಿಗಾಗಿ ದುಡಿದ ಕೀರ್ತಿಶೇಷ ಬಂಗಾರಪ್ಪ, ಮುಖ್ಯಮಂತ್ರಿ ಹೇಗಿರಬೇಕೆಂದು ಹೇಳಿಕೊಟ್ಟಂತಹ ಎಸ್.ಎಂ.ಕೃಷ್ಣ, ನಡವಳಿಕೆ, ಕಾರ್ಯವೈಖರಿ, ಪ್ರೀತಿ ವಿಶ್ವಾಸ, ಕೆಲಸ ಮಾಡುವವರ ಬೆನ್ನುತಟ್ಟುವ ದೊಡ್ಡ ಗುಣ ಅವರಲ್ಲಿದೆ. ಹೀಗೆ ಹಲವರೊಂದಿಗೆ ಕೆಲಸ ಮಾಡಿದ್ದು ನನಗೆ ತೃಪ್ತಿ ತಂದಿದೆ.

● 2ನೇ ಪುಟಕ್ಕೆ

ಹುಟ್ಟಿಯಿಂದ ಹಾರಿಬಂದ ಹಕ್ಕಿ ಇದು...!

ಹಳ್ಳಿಹಕ್ಕಿ ಖ್ಯಾತಿಯ, ಪ್ರಬುದ್ಧ ಹಾಗೂ ಅತೀವ ಸಾಮಾಜಿಕ ಕಳಕಳಿಯುಳ್ಳ ಅಪರೂಪದ ರಾಜಕಾರಣಿ ಅಡಗೂರು ಹೆಚ್.ವಿಶ್ವನಾಥ್, ಕೆ.ಆರ್.ನಗರ ತಾಲೂಕು ಅಡಗೂರಿನ ಹುಚ್ಚೇಗೌಡ-ರಾಮಮ್ಮ ದಂಪತಿ ಪುತ್ರನಾಗಿ 1948ರ ಮೇ 10 ರಂದು ಜನಿಸಿದರು. ಅಂದು ಸರ್ಕಾರಿ ಶಾಲೆಯೇ ಇಲ್ಲದ ತಮ್ಮ ಊರಿನ ಕೂಲಿಮಠದಲ್ಲಿ ಮೊದಲು ಮರಳಿನ ಮೇಲೆ ಅಕ್ಷರಾಭ್ಯಾಸ ಮಾಡಿದರು.

ಚಿಕ್ಕಪ್ಪ ಕೆಂಪೇಗೌಡ, ಚಿಕ್ಕಮ್ಮ ನಾಗಮ್ಮ ಅವರು ಮೈಸೂರಿಗೆ ಕರೆತಂದು ಲಕ್ಷ್ಮೀಪುರಂ ಶಾಲೆಗೆ ಸೇರಿಸಿದರು. ನಂತರ ತಾಯಿಯ ತಂಗಿ(ಚಿಕ್ಕಮ್ಮ) ಕುರುಬಗೇರಿಗೆ ಕರೆತಂದು ತಮ್ಮೊಂದಿಗೆ ಇರಿಸಿಕೊಂಡು ಲ್ಯಾನ್ಸ್‌ಡೌನ್ ಕಟ್ಟಡದಲ್ಲಿದ್ದ ಶಾರದ ವಿಲಾಸ ಪ್ರಾಥಮಿಕ ಶಾಲೆಗೆ ಸೇರಿಸಿದರು. ಆದಾದ ನಂತರ ಮಹಾರಾಜ ಹೈಸ್ಕೂಲ್‌ನಲ್ಲಿ ವಿದ್ಯಾಭ್ಯಾಸ. ಸೆಂಟ್‌ಫಿಲೋಮಿನಾದಲ್ಲಿ ಪಿಯುಸಿ, ಜೆಎಸ್‌ಎಸ್‌ನಲ್ಲಿ ಪದವಿ ಶಿಕ್ಷಣ ಹಾಗೂ ಶಾರದ ವಿಲಾಸ ಕಾಲೇಜಿನಲ್ಲಿ ಕಾನೂನು ವಿದ್ಯಾಭ್ಯಾಸ ಮಾಡಿದ್ದಾರೆ.

ಹಿರಿಯ ವಕೀಲ ಅಬ್ದುಲ್ ಘನಿ ಅವರ ಬಳಿ 1974-78ರವರೆಗೆ ಲಾ ಪ್ರಾಕ್ಟೀಸ್ ಮಾಡಿದ ವಿಶ್ವನಾಥರು ದಿವಂಗತ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರ ಕೃಪೆಯಿಂದ 1978ರಲ್ಲಿ ಕೆ.ಆರ್.ನಗರ ವಿಧಾನಸಭಾ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾದರು. ಮೊದಲ ಚುನಾವಣೆಯಲ್ಲೇ 10 ಸಾವಿರ ಮತಗಳ ಅಂತರದಲ್ಲಿ ಜಯಗಳಿಸಿದ ಅವರು, 1989-94 ಮತ್ತು 99 ರ ಅವಧಿಯಲ್ಲಿ ಮೂರು ಅವಧಿಗೆ ಶಾಸಕರಾಗಿ ಆಯ್ಕೆಯಾದ ಇವರು, ಶಿಕ್ಷಣ, ಸಹಕಾರ ಸಚಿವರಾಗಿಯೂ ಕಾರ್ಯ ನಿರ್ವಹಿಸಿದ್ದರು. 2009 ರಲ್ಲಿ ಮೈಸೂರಿನಿಂದ ಸಂಸದರಾಗಿ ಆಯ್ಕೆಯಾಗಿದ್ದರು. ಪ್ರಸ್ತುತ ವಿಧಾನ ಪರಿಷತ್ ಸದಸ್ಯರಾಗಿರುವ ಅಡಗೂರು ಹೆಚ್.ವಿಶ್ವನಾಥ್, ತಮ್ಮ ನೈಜ ಅನುಭವಗಳನ್ನಾಧರಿಸಿ ಸಾಹಿತಿಯಾಗಿಯೂ ಅನೇಕ ಪುಸ್ತಕಗಳ ರಚಿಸಿ, ಪ್ರಕಟಿಸಿದ್ದಾರೆ.


ಮಿತ್ರ: 2023ರ ವಿಧಾನಸಭಾ ಚುನಾವಣೆಯಲ್ಲಿ ಯಾವ ಪಕ್ಷ ರಾಜ್ಯದ ಅಧಿಕಾರ ಹಿಡಿಯುವುದು ಎಂಬ ಭವಿಷ್ಯ ನುಡಿಯಬಲ್ಲಿರಾ?

ವಿಶ್ವನಾಥ್: ಮತದಾರರ ನಿರ್ಧಾರವೇ ಅಂತಿಮ. ಮೂರು ಪಕ್ಷಗಳ ಬಗ್ಗೆ ನಾನು ಮಾತನಾಡುತ್ತಿಲ್ಲ. ಆದರೆ ಮೂರು ಪಕ್ಷಗಳ ನಾಯಕರ ಬಗ್ಗೆ ಜನ ವಿಶ್ವಾಸ ಕಳೆದುಕೊಂಡಿದ್ದಾರೆ. ಜನನಾಯಕರು ವಿಶ್ವಾಸ ಗಳಿಸುವುದರಲ್ಲಿ ವಿಫಲವಾಗಿದ್ದಾರೆ. ಜನರಲ್ಲಿ ವಿಶ್ವಾಸ ತುಂಬುವ ಶಕ್ತಿ ಇರುವ ಪಕ್ಷ ಅಧಿಕಾರಕ್ಕೆ ಬರುತ್ತದೆ.

ಮುಡಾ, ಮಹಾನಗರ ಪಾಲಿಕೆ ಮೈಸೂರು ಸೌಂದರ್ಯ ಹಾಳು ಮಾಡಿವೆ..!

ಮಿತ್ರ: ಇನ್ನು ಮುಂದೆ ಹಳ್ಳಿಹಕ್ಕಿ ಸಾಹಿತ್ಯ ರಂಗದಲ್ಲಿ ಸ್ವಚ್ಛಂದವಾಗಿ ವಿಹರಿಸಲಿದೆಯೇ?

ವಿಶ್ವನಾಥ್: ನಾನು ಸಾಹಿತ್ಯ ಕ್ಷೇತ್ರಕ್ಕೆ ಬರಲು ಪ್ರೋತ್ಸಾಹ ಕೊಟ್ಟವರೇ ವಿಶ್ವೇಶ್ವರ ಭಟ್. ಅವರೊಂದಿಗೆ ಮಂಗಳೂರಿನಲ್ಲಿ ಎರಡು ದಿನ ಇದ್ದಾಗ ವೈಯಕ್ತಿಕ ರಾಜಕಾರಣದಲ್ಲಿ ಏನೇನಾಯಿತು ಎಂದು ಅವರೊಂದಿಗೆ ಹೇಳುವಾಗ ಅವರು, ಸರ್ ನೀವು ಪುಸ್ತಕ ಬರೆದುಬಿಡಿ ಚೆನ್ನಾಗಿದೆ ಎಂದಿದ್ದರು. ಅವರೇ ಜನ ಕಳುಹಿಸಿ, ನೀವು ಹೇಳಿ ಸಾಕು ಬರೆದುಕೊಳ್ಳುತ್ತಾರೆ ಎಂದಿದ್ದರು. ಆದರೆ ನಾನೇ ಬೇಡವೆಂದು 2006ರಲ್ಲಿ ನನ್ನ ಮೊದಲ **'ಹಳ್ಳಿಹಕ್ಕಿ ಹಾಡು'** ಪುಸ್ತಕ ಬರೆದೆ. ಈ ಪುಸ್ತಕದಲ್ಲಿ ನನ್ನ ಊರು, ಬಾಲ್ಯ, ಶಿಕ್ಷಣ, ರಾಜಕಾರಣ, ದೇವರಾಜ ಅರಸು ಸೇರಿದಂತೆ ಯಾವುದನ್ನು ಮುಚ್ಚಿಡದೆ ಎಲ್ಲವನ್ನೂ ಬರೆದಿದ್ದೆ. 2009ರಲ್ಲಿ ಸಂಸದನಾದ ಬಳಿಕ ಪಾರ್ಲಿಮೆಂಟ್ ಚುನಾವಣೆಯಲ್ಲಿ ನನಗೆ ಎದುರಾದ ಸನ್ನಿವೇಶಗಳ ಕುರಿತು ಬರೆದದ್ದು **'ಮತಸಂತೆ'**, ಮತದಾನ ಮತ್ತು ಫಲಿತಾಂಶದ ನಡುವೆ ಇದ್ದ 15 ದಿನಗಳಲ್ಲಿಯೇ ಬರೆದು ಪ್ರಿಂಟ್ ಮಾಡಿಸಿದ್ದೆ. ಮತದಾನ ಹೇಗಿರಬೇಕು. ಮತದಾನ ವ್ಯವಸ್ಥೆ ಹೇಗಿದೆ ಎಂಬುದನ್ನು ಪ್ರಸ್ತಾಪಿಸಿದ್ದೆ. ಪಾರ್ಲಿಮೆಂಟ್ ಮೆಂಬರ್ ಆಗಿ ಪಾರ್ಲಿಮೆಂಟ್ ಬಗ್ಗೆ ಬರೆಯದಿದ್ದರೆ ಹೇಗೆ ಎಂದು ಪಾರ್ಲಿಮೆಂಟ್ ಕುರಿತು **'ದ ಟಾಕಿಂಗ್ ಶಾಪ್'** ಎಂಬ ಪುಸ್ತಕ. ಇದನ್ನು ಬೇರೆ ದೇಶಗಳಿಗೂ ಕಳಿಸಿದ್ದೆ. ಆದಾದ ಮೇಲೆ 1975ರ ತುರ್ತುಪರಿಸ್ಥಿತಿ ಸಂದರ್ಭದಲ್ಲಿ ಡಿ.ದೇವರಾಜ ಅರಸರ ನಾಯಕತ್ವದಲ್ಲಿ ಕರ್ನಾಟಕ ರಾಜ್ಯದಲ್ಲಾದ ಸಮಗ್ರ ಅಭಿವೃದ್ಧಿ ಹಾಗೂ ಜನಪರ ಕಲ್ಯಾಣ ಕಾರ್ಯಕ್ರಮಗಳು ಕುರಿತು ಪಾಸಿಟಿವ್ ಆಗಿ **'ಅಪಸ್ಥಿತಿಯ ಅಲಾಪನೆಗಳು'** ಎಂಬ ಪುಸ್ತಕ ಬರೆದೆ. ಆ ನಂತರ **'ಮಲ್ಲಿಗೆಯ ಮಾತು'**, ರೈತ ಚಳುವಳಿ ಕುರಿತ **'ಸಿರಿ ಭೂಮಿ'** ಎಂಬ ಪುಸ್ತಕವನ್ನು ಬರೆದಿದ್ದು, ಅಕ್ಷರದ ಮೂಲಕ ರಾಜಕೀಯವನ್ನು, ವಸ್ತುಸ್ಥಿತಿಯನ್ನು ಕಟ್ಟಿಕೊಡಬೇಕಾಗಿದೆ. ಬಾಂಬೆ ಡೇಸ್ ಕೂಡ ರೆಡಿಯಿದ್ದು, ಸದ್ಯದಲ್ಲಿಯೇ ಬಿಡುಗಡೆಯಾಗಲಿದೆ. ಬರವಣಿಗೆ ನನ್ನ ಉಸಿರು ಎಂದಿಗೂ ನಿಲ್ಲುವುದಿಲ್ಲ.



ಮಿತ್ರ: 75 ವರ್ಷದ ಜೀವನ ಸಿಹಿಯೋ, ಕಹಿಯಾಗಿತ್ತೋ?

ವಿಶ್ವನಾಥ್: ಜೀವನ ಎಂದ ಮೇಲೆ ಸಿಹಿ-ಕಹಿ ಇದ್ದೇ ಇರುತ್ತದೆ. ಒಮ್ಮೆ ಸಿಹಿ ಜಾಸ್ತಿ ಯಾದರೆ, ಮತ್ತೊಮ್ಮೆ ಕಹಿ ಜಾಸ್ತಿಯಾಗಬಹುದು. ಸಿಹಿ ಸ್ವೀಕಾರ ಮಾಡಿದಾಗ ಅರಳ ಬೇಕಾಗಿಲ್ಲ. ಸಿಹಿ ಸ್ವೀಕಾರ ಮಾಡಿದಾಗ ಕೊರಗಬೇಕಾಗಿಲ್ಲ. ಸಿಹಿ-ಕಹಿಯನ್ನು ಸಮವಾಗಿ ತೆಗೆದುಕೊಂಡಾಗಲೇ ಬದುಕಾಗುವುದು.

ಮಿತ್ರ: ನಿಮಗೆ ಅತ್ಯಂತ ಬೇಸರ ತಂದ ಸಂಗತಿ ಯಾವುದು?

ವಿಶ್ವನಾಥ್: ನನಗೆ ಅತ್ಯಂತ ಬೇಸರ ತಂದಿದ್ದು, ಬಹಳ ದೊಡ್ಡ ಮನುಷ್ಯರು ಎನಿಸಿಕೊಂಡವರಿಗೆ ಸಹಾಯ ಮಾಡಿದ್ದು, ಕಾಂಗ್ರೆಸ್‌ಗೆ ಕರೆದುಕೊಂಡು ಬಂದವರಿಂದ ನಾವೇ ಕಾಂಗ್ರೆಸ್‌ನಿಂದ ಹೊರಬರುವಂತಹ ಸ್ಥಿತಿಯಾಯಿತು. ಸಮ್ಮಿಶ್ರ ಸರ್ಕಾರ ಕೆಡವಿ ಬಿಜೆಪಿ ಸರ್ಕಾರ ತಂದೆವು. ಆದರೆ ಏನಾಯಿತು. ಇವೆಲ್ಲವೂ ಬೇಸರ ತಂದಿವೆ.

ಮಿತ್ರ: ಎಂದಾದರೂ ನಿಮ್ಮ ಕಣ್ಣಲ್ಲಿ ನೀರು ಬರುವಂತಹ ಪ್ರಸಂಗ ನಡೆದಿದೆಯೇ?

ವಿಶ್ವನಾಥ್: ನನಗೆ ರಾಜಕೀಯದಲ್ಲಿ ಜನ್ಮಕೊಟ್ಟ ಡಿ.ದೇವರಾಜ ಅರಸರು ರೋಗದಿಂದ ಆಸ್ಪತ್ರೆ ಸೇರಿ ನಿಧನರಾದ ಸಂದರ್ಭದಲ್ಲಿ ಬಹಳ ದುಃಖ ಪಟ್ಟಿದ್ದೇನೆ. ಬಹಳ ದೊಡ್ಡ ಜನನಾಯಕನನ್ನು ಕಳೆದುಕೊಂಡುಬಿಟ್ಟೆವಲ್ಲ. ನನ್ನಂತಹ ಹಲವಾರು ಜನರನ್ನು ರಾಜಕೀಯದಲ್ಲಿ ಬೆಳೆಸಿದವರು. ನಾನು ಬೇರೆ ಯಾವುದಕ್ಕೂ ಯೋಚನೆ ಮಾಡಿದವನೂ ಅಲ್ಲ, ಕಣ್ಣೀರೂ ಹಾಕಿಲ್ಲ. ಆದರೆ ದೇವರಾಜ ಅರಸರು ನಮ್ಮನ್ನು ಅಗಲಿದ ಘಟನೆ ತುಂಬಾ ದುಃಖ ತರಿಸಿತು.

ಮಿತ್ರ: ನೀವು ಸದಾ ಸ್ಮರಿಸಿಕೊಳ್ಳುವಂತಹವರು ಯಾರು?

ವಿಶ್ವನಾಥ್: ನನ್ನ ಇಡೀ ಜೀವನದಲ್ಲಿ ಸ್ಮರಿಸಿಕೊಳ್ಳುವ ನಾಯಕ ಡಿ.ದೇವರಾಜ ಅರಸು. ಎಲ್ಲರನ್ನು ಪ್ರೀತಿ ಮಾಡುವ ಅವರ ದಾರಿಯಲ್ಲೇ ಹೋಗುತ್ತಿದ್ದೇನೆ. ಅಸಹಾಯಕ ಜನರಿಗೆ ಅವಕಾಶ ಮಾಡಿಕೊಡುವ, ಸಹಾಯ ಮಾಡುವ ದೇವರಾಜ ಅರಸು ನನ್ನ ಕಣ ಕಣದಲ್ಲಿಯೂ ಇದ್ದಾರೆ.

● 2ನೇ ಪುಟಕ್ಕೆ

ಮಿತ್ರ: ನಿಮಗೆ ಆದ ಘನಘೋರ ಅನ್ಯಾಯ ಯಾವುದು?

ವಿಶ್ವನಾಥ್: ನನಗೆ ಘನಘೋರ ಅನ್ಯಾಯ ಸಿದ್ದರಾಮಯ್ಯ, ಯಡಿಯೂರಪ್ಪ ಅವರಿಂದಾಯಿತು. ರಾಜಕಾರಣದಲ್ಲಿ ಇಂತಹ ಅನ್ಯಾಯ ಮಾಡಬಾರದು. ಏಕೆಂದರೆ ನಾವೆಲ್ಲರೂ ಈ ವ್ಯವಸ್ಥೆಯಲ್ಲಿ ಮುಕ್ತವಾಗಿ ಯಾವುದೇ ಪ್ರತಿಫಲ ಅಪೇಕ್ಷೆಗಳಿಲ್ಲದೆ ಸಹಾಯ ಮಾಡಿದ್ದೇವೆ. ಕರ್ನಾಟಕ ರಾಜಕಾರಣದಲ್ಲಿ ಹಲವಾರು ತಿರುವುಗಳಿಗೆ ಕಾರಣದ ನಮ್ಮಂತಹವರಿಗೆ ಇಂತಹ ಲೀಡರ್‌ಗಳು, ಕೃತಜ್ಞತೆಯೇ ಇಲ್ಲದ ನಾಯಕರು ನಾಯಕರುಗಳೇ ಅಲ್ಲ.

ಮೊದಲನೇ ಪುಟದಿಂದ

ನನ್ನ ಅಜೆಂಡಾ ಎಂದಿಗೂ ಬದಲಾಗದು

ಮಿತ್ರ: ಪ್ರಧಾನಿ ಮೋದಿಯವರ ಬಗ್ಗೆ ನಿಮ್ಮ ಅಭಿಪ್ರಾಯವೇನು?

ವಿಶ್ವನಾಥ್: ಪ್ರಧಾನಿ ಮೋದಿ ಅವರ ಬಗ್ಗೆ ನನಗೆ ಈವತ್ತಿಗೂ ಪ್ರೀತಿ, ವಿಶ್ವಾಸವಿದೆ. ಅವರ ಸಾಧನೆ ಹುಡುಗಾಟಿಕೆಯಲ್ಲ. 2003 ಅಕ್ಟೋಬರ್‌ವರೆಗೆ ಮೋದಿ ಯಾರು? ಅಲ್ಲಿಯವರೆಗೆ ಅವರೊಬ್ಬ ಊರಿಂದ ಊರಿಗೆ ತಿರುಗುತ್ತಿದ್ದ ಪ್ರಚಾರಕ. ಅವರು ಗುಜರಾತ್‌ನ ಬಲಿಷ್ಠ ಪಟೇಲ್ ಸಮುದಾಯವನ್ನು ಎದುರಿಸಿ ಮೂರು ಬಾರಿ ಮುಖ್ಯಮಂತ್ರಿಯಾದರು. 2 ಬಾರಿ ಭಾರತದ ಪ್ರಧಾನಮಂತ್ರಿಯಾಗಿದ್ದಾರೆ. ಹೌದು, ಚುನಾವಣೆ ಒಂದು ತಂತ್ರ, ಅದನ್ನು ನೀವೂ ಮಾಡಿ, ಯಾರು ಬೇಡ ಅಂತಾರೆ. ಮೋದಿ ಅವರು ಹಿಂದುತ್ವದ ಬಗ್ಗೆ ಇಲ್ಲಿಯತನಕ ಒಂದೇ ಒಂದು ಮಾತನಾಡಿಲ್ಲ. 'ಸಬ್ ಕಾ ಸಾತ್, ಸಬ್ ಕಾ ವಿಕಾಸ್' ಅಷ್ಟೇ. 2ನೇ ಬಾರಿ ಪ್ರಧಾನಿ ಆದಾಗ 'ಸಬ್ ಕಾ ವಿಕಾಸ್' ಅಂದರು. ಮುಸ್ಲಿಮರನ್ನೂ ಜೊತೆಗೆ ತೆಗೆದುಕೊಂಡು ಹೋಗ್ಬೇಕು ಎಂದು. ಹಾಗಾಗಿ ಮೋದಿ ಅವರ ವ್ಯಕ್ತಿತ್ವ ನಾಯಕತ್ವದ ಬಗ್ಗೆ ನನಗೆ ಅಪಾರವಾದ ಪ್ರೀತಿ, ವಿಶ್ವಾಸವಿದೆ.

ಮಿತ್ರ: ನಿಮಗೆ ಇಷ್ಟವಾದ ರಾಜಕೀಯ ನಾಯಕರು ಯಾರು?

ವಿಶ್ವನಾಥ್: ದೇವರಾಜ ಅರಸು ಅವರೊಂದಿಗೆ ಇನ್ನು ಬಹಳ ನಾಯಕರು ಇಷ್ಟವಾಗಿದ್ದಾರೆ. ಅನುಕರಿಸುವ, ಅನುಸರಿಸುವಂತಹ ನಾಯಕರಿದ್ದಾರೆ. ಸಿದ್ದರಾಮಯ್ಯನವರ ವಿಚಾರಕ್ಕೆ ಬಂದಾಗ ಹೇಳುತ್ತಿರುತ್ತೇನೆ. ಒಬ್ಬೊಬ್ಬರದ್ದು ಒಂದೊಂದು ಹೆಜ್ಜೆ ಗುರುತಿದೆ. ಕರ್ನಾಟಕ ರಾಜ್ಯದ ನಾಡಗುಡಿ ವಿಧಾನಸೌಧದಲ್ಲಿ ಬಿಟ್ಟು ಹೋಗಿದ್ದಾರೆ. ನಿಂದೇನೇಳಪ್ಪಾ ಸಿದ್ದರಾಮಯ್ಯ? ಎಂದು ಕೇಳುತ್ತೇನೆ. ಕೆಂಗಲ್ ಹನುಮಂತಯ್ಯನವರು ಜಗತ್‌ವಿಖ್ಯಾತ ವಿಧಾನಸೌಧ ಕಟ್ಟಿದರು. ಕರ್ನಾಟಕ ಏಕೀಕರಣದ ರೂವಾರಿ ನಿಜಲಿಂಗಪ್ಪನವರು, ಕರ್ನಾಟಕ ಎಂದು ನಾಮಕರಣ ಮಾಡಿದ ದೇವರಾಜ ಅರಸು, ಬಿಗಿ ಆಡಳಿತದ ವೀರೇಂದ್ರ ಪಾಟೀಲ್, ನೀರಾವರಿಯಲ್ಲಿ ಸಾಧಿಸಿದ ಹಾಗೂ ಪ್ರಧಾನಮಂತ್ರಿಯಾದ ದೇವೇಗೌಡರು, ಹಲವು ಮಹತ್ವದ ಕಾರ್ಯಕ್ರಮ ನೀಡಿದ ಎಸ್.ಎಂ.ಕೃಷ್ಣ ಅವರು, ಸಿಇಟಿ ಜಾರಿಗೆ ತಂದು ಬಡವರ ಮಕ್ಕಳು ಇಂಜಿನಿಯರಿಂಗ್ ಕಲಿಯಲು ಅವಕಾಶ ಮಾಡಿ ಕೊಟ್ಟ ವೀರಪ್ಪಮೊಯ್ಲಿಯವರು, ರೈತರಿಗೆ ಶಕ್ತಿ ತುಂಬಿದ ಬಂಗಾರಪ್ಪನವರು, ಹೀಗೆ ರಾಜ್ಯದಲ್ಲಿ ಆಡಳಿತ ನಡೆಸಿದ ಪ್ರತಿಯೊಬ್ಬ ಮುಖ್ಯಮಂತ್ರಿಯೂ ಕೂಡ ತಮ್ಮದೇ ಆದ ಹೆಜ್ಜೆ ಗುರುತು ಬಿಟ್ಟುಹೋಗಿರುವುದು ಅನುಕರಣೀಯ.



ವಿಶ್ವನಾಥ್ ಅವರನ್ನು ಸಂದರ್ಶನ ನಡೆಸುತ್ತಿರುವ ವರದಿಗಾರರಾದ ಎಸ್.ಬಿ.ದೇವರಾಜ್, ಮೋಹನ್ ಕಾಯಕ

ಮಿತ್ರ: ಯುವ ರಾಜಕಾರಣಿಗಳಿಗೆ ನಿಮ್ಮ ಕಿವಿ ಮಾತೇನು?

ವಿಶ್ವನಾಥ್: ಯುವಕರು ರಾಜಕಾರಣಕ್ಕೆ ಬರಬೇಕು. ಯುವಕರು ಈ ರಾಜ್ಯ ಹಾಗೂ ದೇಶವನ್ನು ಕೈಹಿಡಿಯಬೇಕು. ಸಾಕು ನಮ್ಮಂತಹವರು. ನಮಗೆ 75, ಸಾಕು, ನಮ್ಮಂತಹವರನ್ನೂ ಕೂರಿಸಿಕೊಂಡು ಭವಿಷ್ಯದಲ್ಲಿ ದೊಡ್ಡ ಕೀರ್ತಿ ಬರಬೇಕು ಎಂದು ಆಶಿಸುತ್ತಾರೆ. ಅಯ್ಯೋ ರಾಮನೇ... ಯುವಕ ಇನ್ನೆಲ್ಲಿ ಹೋಗ್ಬೇಕು. ಯುವಕರು ಈವತ್ತು ದೇಶದ ಸರ್ಕಾರ, ಸಮಾಜ ಆಡಳಿತವನ್ನು ಕೈಗೆತ್ತಿಕೊಳ್ಳಬೇಕು. ಯುವಕರಿಗೆ ಆಸೆ, ಆಕಾಂಕ್ಷೆ ಇರುತ್ತದೆ. ಹೇಗೆ ದೇಶ ಮುನ್ನಡೆಸಬೇಕೆಂಬ ವಿಷನ್ ಇರುತ್ತದೆ. ಹಾಗಾಗಿ ಎಲ್ಲಾ ಪಕ್ಷಗಳ ನಾಯಕರು ಯುವಕರಿಗೆ ಅವಕಾಶ ಮಾಡಿಕೊಡಬೇಕು. ಆದರೆ ನಾನಾಯ್ತು ನನ್ನ ಮಗ, ಮೊಮ್ಮಗ, ಹೆಂಡ್ತಿ ಹೀಗೆ ಮುಂದುವರೆಯಬೇಕು ಎನ್ನುವಂತಾಗಿದೆ. ಅದನ್ನೇ ಮೋದಿ ಹೇಳಿದ್ದು, ನಾಗ್ಪುರದಲ್ಲಿ ಸಿಬಿಐ ಅಧಿಕಾರಿಗಳ ಉದ್ದೇಶಿಸಿ ಮಾತನಾಡುವಾಗ 'ವಂಶವಾಹಿನಿಯ ಆಡಳಿತ, ಅಧಿಕಾರ ದೇಶಕ್ಕೆ ಮಾರಕ. ಇದು ಜನತಂತ್ರ ವ್ಯವಸ್ಥೆಯನ್ನು ಗೆದ್ದಲು ರೀತಿ ತಿನ್ನುತ್ತಿದೆ. ಇದು ಅಧಿಕಾರ ವರ್ಗಾವಣೆ ಮಾತ್ರವಲ್ಲ, ಭ್ರಷ್ಟಾಚಾರವೂ ವರ್ಗಾಯಿಸಿದಂತೆ' ಎಂದು ತುಂಬಾ ಚೆನ್ನಾಗಿ ಹೇಳಿದ್ದಾರೆ.

ಮಿತ್ರ: ಹುಣಸೂರು ಜಿಲ್ಲೆ ಮಾಡುವ ನಿಮ್ಮ ಕನಸು ನನಸಾಗುವುದೇ?

ವಿಶ್ವನಾಥ್: ನಮ್ಮ ಹುಣಸೂರು ಶಾಸಕ ಮಂಜುನಾಥ್, ನಾವೆಲ್ಲಾ ಮುಖ್ಯಮಂತ್ರಿ ಭೇಟಿ ಮಾಡಿ ಚರ್ಚಿಸಿದ್ದೇವೆ. ಈಗೆಲ್ಲಾ ಕೆಲಸ ಶುರು ಮಾಡುತ್ತಿದ್ದೇವೆ.

ಮಿತ್ರ: ಈ ಸಂದರ್ಭದಲ್ಲಿ ನಿಮ್ಮ ವಿರೋಧಿಗಳಿಗೆ ಏನು ಹೇಳ ಬಯಸುತ್ತೀರಾ?

ವಿಶ್ವನಾಥ್: ವಿರೋಧಕ್ಕೆ ವಿರೋಧ ಆಗಬಾರದು. ಪ್ರಜಾಪ್ರಭುತ್ವ ವ್ಯವಸ್ಥೆ ಬಗ್ಗೆ ಇರುವ ಪುಸ್ತಕದ ಮೊದಲ ಪುಟದಲ್ಲಿ ಹೇಳುತ್ತಾರೆ 'ಯಾವ ದೇಶ, ಯಾವ ರಾಜ್ಯ, ಯಾವ ನಾಡಿನಲ್ಲಿ ವಿರೋಧ ಪಕ್ಷಗಳು ಭದ್ರವಾಗಿರುತ್ತವೆಯೋ ಅಲ್ಲಿ ಆಡಳಿತ ಪಕ್ಷ ಸುಭದ್ರವಾಗಿರುತ್ತದೆ. ವಿರೋಧ ಪಕ್ಷ ಜಾಳಜಾಳವಾದರೆ ಆಡಳಿತವೂ ಹಾಗೆಯೇ ಇರುತ್ತದೆ' ಎಂದು. ಆದ್ದರಿಂದ ವಿರೋಧ ಪಕ್ಷಗಳು ಕೇವಲ ವಿರೋಧ ಮಾಡುವುದಲ್ಲ, ಸಮರ್ಥ ನಡೆಯಿರಬೇಕು. ವಿರೋಧ ಪಕ್ಷದ ನಾಯಕರನ್ನು 'ಮುಖ್ಯಮಂತ್ರಿಯ ನೆರಳು' ಎನ್ನುತ್ತಾರೆ. ಆದರೆ ಈಗ ಬಯ್ಯುವುದೇ ಕೆಲಸವಾಗಿದೆ. ರಚನಾತ್ಮಕವಾದ ಸಲಹೆಗಳನ್ನೇ ನೀಡುತ್ತಿಲ್ಲ.

ಮಿತ್ರ: ಕೆ.ಆರ್.ನಗರ ಕ್ಷೇತ್ರದಲ್ಲಿ ತಮ್ಮ ಹುಟ್ಟುಹಬ್ಬ ಆಚರಣೆಗೆ ಸಾ.ರಾ.ಮಹೇಶ್ ನೇತೃತ್ವ ವಹಿಸಿರುವ ಬಗ್ಗೆ ನಿಮ್ಮ ಪ್ರತಿಕ್ರಿಯೆ?

ವಿಶ್ವನಾಥ್: ಹೌದು, ನಮ್ಮ ಸ್ನೇಹಿತರೆಲ್ಲಾ 75ನೇ ಹುಟ್ಟುಹಬ್ಬ ಆಚರಣೆ ಬಗ್ಗೆ ಪ್ರಸ್ತಾಪಿಸಿದರು. ಕಮಿಟಿ ಮಾಡಿಕೊಂಡಿದ್ದೇವೆ ಎಂದರು. ನಾನು ಆರಂಭದಲ್ಲಿ ಬೇಡ ಎಂದರೂ ಅವರ ಪ್ರೀತಿಯನ್ನು ನಿರಾಕರಿಸಲಾಗಲಿಲ್ಲ, ನಮ್ಮ ಊರಿನ ಎಂಎಲ್‌ಎ ಕಮಿಟಿಯ ಅಧ್ಯಕ್ಷನಾಗಬೇಕು, ಕಾಂಗ್ರೆಸ್ ಅಭ್ಯರ್ಥಿಯಾದವರು ಕಾರ್ಯಾಧ್ಯಕ್ಷರಾಗಬೇಕು, ನಾನು ಹುಣಸೂರಿಗೆ ಸಂಬಂಧಿಸಿದವನಾದ ಕಾರಣ ಅಲ್ಲಿನ ಎಂಎಲ್‌ಎ ಉಪಾಧ್ಯಕ್ಷನಾಗಬೇಕು ಎಲ್ಲಾ ಸೇರಿಕೊಂಡು ಮಾಡುವುದಾದರೆ ಮಾಡಿ ಎಂದೆ. ಎಲ್ಲರೂ ಸೇರಿ ಸಿದ್ಧತೆ ಮಾಡುತ್ತಿದ್ದಾರೆ. 23-24 ವರ್ಷಕ್ಕೆ ಲಾಯರ್ ಆದೆ, 28-29 ವರ್ಷಕ್ಕೆ ಎಂಎಲ್‌ಎ ಆದೆ ನಾನು. ಹಾಗಾಗಿ ಬಹಳ ಚಿಕ್ಕ ವಯಸ್ಸಿನಲ್ಲೇ ಜನರ ಆಶೀರ್ವಾದ ಸಿಕ್ಕಿದೆ. ಮೇ.9 ಹಾಗೂ 10ರಂದು ಹುಟ್ಟುಹಬ್ಬಕ್ಕೆ ಸಿದ್ಧತೆ ಮಾಡಿಕೊಂಡಿದ್ದಾರೆ.

ಮೊದಲನೇ ಪುಟದಿಂದ

ಮೈಸೂರಿನ ಸೌಂದರ್ಯ ಹಾಳು ಮಾಡಿವೆ..!

ಮಿತ್ರ: ಅತ್ಯಂತ ಸಂತೋಷವಾದಾಗ ಏನು ಮಾಡುತ್ತೀರಿ?

ವಿಶ್ವನಾಥ್: ತುಂಬಾ ಖುಷಿಯಾದಾಗ ಹಾಡುತ್ತೇನೆ. ಬಹಳ ಪ್ರೀತಿಯಾದವರಿಗೆ ಫೋನ್ ಮಾಡಿ, ಅವರೊಂದಿಗೆ ಸಂತೋಷವನ್ನು ಹಂಚಿಕೊಳ್ಳುತ್ತೇನೆ. ಕಾಲೇಜು ದಿನಗಳಿಂದಲೂ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದೆ. ಬೆಸ್ಟ್ ಡಿಬೇಟರ್ ಆಗಿದ್ದೆ. ಜೆಎಸ್‌ಎಸ್ ಕಾಲೇಜಿನಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಮಾಡಿದ್ದೆವು. ಮೈಸೂರು ವಿವಿ ಸ್ಟೂಡೆಂಟ್ ಆಕ್ಷನ್ ಕಮಿಟಿ ಜನರಲ್ ಸೆಕ್ರೆಟರಿ ಆಗಿದ್ದೆ. ನಮ್ಮ ನಾಯಕತ್ವ ಬೆಳೆದಿದ್ದೆ ಜೆಎಸ್‌ಎಸ್ ಕಾಲೇಜಿನಲ್ಲಿ. ಶ್ರೀ ರಾಜೇಂದ್ರ ಸ್ವಾಮೀಜಿಗಳು ನಮಗೆ ಅವಕಾಶಗಳನ್ನು ನೀಡಿದ್ದರು.

ಮಿತ್ರ: ನಿಮಗಿಷ್ಟವಾದ ಊಟೋಪಚಾರ ಯಾವುದು?

ವಿಶ್ವನಾಥ್: ಉಪ್ಸಾರು-ಮುದ್ದೆ ತುಂಬಾ ಇಷ್ಟ. ಅದರಲ್ಲೂ ಸೊಪ್ಪಿನ ಉಪ್ಸಾರು. ಆದರೆ ಅದಕ್ಕೆ ಉಪ್ಪೆಸರು ಖಾರ. ನಿಂಬೆಹಣ್ಣು ಹಿಂಡಿಕೊಂಡು ಬಹಳ ಖುಷಿಯಿಂದ ಊಟ ಮಾಡುತ್ತೇನೆ.

ಮಿತ್ರ: ಏಕಾಂತವಾಗಿರಲು ಯಾವ ಸ್ಥಳ ಆಯ್ಕೆ ಮಾಡಿಕೊಳ್ಳುತ್ತೀರಿ?

ವಿಶ್ವನಾಥ್: ಏಕಾಂಗಿತನ ಕಾಡುತ್ತೆ ಎಂದೇ ಒಬ್ಬನೇ ಇರುವುದಿಲ್ಲ. ಊಟ ಮಾಡುವಾಗಲೂ ಜೊತೆಗೆ ಒಂದಿಬ್ಬರು ಇರಲೇಬೇಕು. ಏಕಾಂತವನ್ನು ಎಂದೂ ಅನುಭವಿಸಿಲ್ಲ. ಒಬ್ಬನೇ ಇರಬೇಕೆಂದು ಎಂದೂ ಅಂದುಕೊಂಡಿಲ್ಲ. ಜೊತೆ ಜೊತೆಯಲ್ಲೇ ಬೆಳೆದು, ಸಿಹಿ-ಕಹಿಯನ್ನು ಹಂಚಿಕೊಂಡವನು.

ಮಿತ್ರ: ನಿಮಗೆ ಕೋಪ ಯಾವಾಗ ಬರುತ್ತೆ?


ವಿಶ್ವನಾಥ್: ನಾನೆಂದು ಸಿಟ್ಟು ಮಾಡಿಕೊಂಡವನೇ ಅಲ್ಲ. ಆಕಸ್ಮಾತ್ ಸಿಟ್ಟು ಬಂದರೆ ಒಬ್ಬನೇ ಒಂದು ಕಡೆ ಕೂತು ಬಿಡುತ್ತೇನೆ.

ಮಿತ್ರ: ನಿಮ್ಮ ಬಾಲ್ಯದ ಅತ್ಯಂತ ಒಳ್ಳೆಯ ಸ್ನೇಹಿತ ಯಾರು?

ವಿಶ್ವನಾಥ್: ಬಾಲ್ಯದ ಸ್ನೇಹಿತ ಕಾಳಪ್ಪ. ನಾನು ಆತ ಪಿಯುಸಿ, ಡಿಗ್ರಿಯಲ್ಲಿ ಜೊತೆಗಿದ್ದವು. ಪಿರಿಯಾಪಟ್ಟಣ ತಾಲೂಕಿನ ಹಿಟ್ನೇ ಹೆಬ್ಬಾಗಿಲಿನಿಂದ ಬಂದ ಆತ ತುಂಬಾ ಬುದ್ಧಿವಂತ. ಹಿಂದುಳಿದ ವರ್ಗದಿಂದ ಬಂದು ರೇಷ್ಮೆ ಕೃಷಿಯಲ್ಲಿ ಡಾಕ್ಟರೇಟ್ ಮಾಡಿದ ಅವನು ರೇಷ್ಮೆ ಇಲಾಖೆಯಲ್ಲಿ ಕೆಲಸಕ್ಕೆ ಸೇರಿ ಕಡೆಗೆ ನಿರ್ದೇಶಕನಾಗಿ ನಿವೃತ್ತಿ ಹೊಂದಿದ. ಬಹಳ ಪ್ರಾಮಾಣಿಕವಾಗಿ ಸರ್ಕಾರಿ ಕೆಲಸ ಮಾಡಿದ.

ಮಿತ್ರ: ನಿಮಗೆ ಪಾಠ ಹೇಳಿಕೊಟ್ಟ ಶಿಕ್ಷಕರಲ್ಲಿ ಯಾರನ್ನು ಕಂಡರೆ ನಿಮಗಿಷ್ಟವಿತ್ತು?

ವಿಶ್ವನಾಥ್: ಮಹಾರಾಜ ಹೈಸ್ಕೂಲ್‌ನಲ್ಲಿದ್ದ ಶ್ರೀನಿವಾಸ ಅಯ್ಯಂಗಾರ್ ಮಾಸ್ತರ್. ಮಹಾರಾಜ ಹೈಸ್ಕೂಲ್ ಎಂದರೆ ಬಹಳ ದೊಡ್ಡ ಹೆಸರು. ಎಂತೆಂತಹ ಶಿಕ್ಷಕರಿದ್ದರು ಅವತ್ತು. ಅವರನ್ನು ನೋಡಿದರೆ ಗೌರವ. ಸಮಾಜಶಾಸ್ತ್ರ ಹೇಳಿಕೊಡುತ್ತಿದ್ದ ಶ್ರೀನಿವಾಸ ಅಯ್ಯಂಗಾರ್‌ರು ಮಹಾರಾಜ ಸ್ಕೂಲ್ ಸುತ್ತಾ ಬಂದರೆ ಏನೇನು ಸಿಗುತ್ತೆ ಗೊತ್ತಾ ಎನ್ನುತ್ತಿದ್ದರು. ಜಿಲ್ಲಾಧಿಕಾರಿಗಳ ಕಚೇರಿ, ಮಹಾರಾಣಿ ಕಾಲೇಜು, ಚಾಮುಂಡಿ ಗೆಸ್ಟ್‌ಹೌಸ್ ನೋಡಿದ್ದೀಯಾ ಎನ್ನುತ್ತಿದ್ದರು. ನಮ್ಮನ್ನು ಸಾಮಾಜಿಕವಾಗಿ, ಪ್ರಾಪಂಚಿಕವಾಗಿ ಎಚ್ಚರ ಮಾಡುತ್ತಿದ್ದರು.



ಮಿತ್ರ: ವಿದ್ಯಾರ್ಥಿ ಜೀವನದ ಒಂದು ಅವಿಸ್ಮರಣೀಯ ಸಂಗತಿ ಹೇಳುತ್ತೀರಾ?

ವಿಶ್ವನಾಥ್: ಹಳ್ಳಿಹಕ್ಕಿ ಹಾಡು ಪುಸ್ತಕದಲ್ಲೇ ಸ್ಟೂಡೆಂಟ್ ಲೈಫ್ ಕುರಿತು ಬರೆದಿದ್ದೇನೆ. ಕೋ-ಎಜುಕೇಷನ್ ಇದ್ದಿದ್ದರಿಂದ ಸಾಮಾಜಿಕವಾಗಿ ಹೇಗಿರಬೇಕು ಎಂಬುದನ್ನು ಕಲಿತಿದ್ದೆವು.

ಮಿತ್ರ: ನಿಮ್ಮ ಅಭಿಪ್ರಾಯದಲ್ಲಿ ಅತ್ಯಂತ ಸಂತೋಷಪಡುವಂತಹ ಸಂಗತಿ ಯಾವುದು?

ವಿಶ್ವನಾಥ್: ಇವತ್ತಿಗೂ ಒಂದು ಸಂತೋಷದ ಸಂಗತಿಯನ್ನು ಪಾಲನೆ ಮಾಡುತ್ತಾ ಬಂದಿದ್ದೇನೆ. 1978ರ ಫೆ.20ರಂದು ಚುನಾವಣೆ ನಡೆದು, 21ರಂದೇ ರಿಸಲ್ಟ್ ಇತ್ತು, ನಮ್ಮೂರಿಗೆ ಹೋದಾಗ ನಮ್ಮನೆ ಅಂಗಳದಲ್ಲಿ ಊರಿನ ಜನರೆಲ್ಲಾ ಕುಳಿತಿದ್ದರು. ನಮ್ಮ ತಂದೆ-ತಾಯಿಗೆ ವಿದ್ಯೆ ಇಲ್ಲದಿದ್ದರೂ ವಿವೇಕ ಇತ್ತು. ನಮ್ಮನೆ ಹಿಂದಿದ್ದ ಹೂಗಿಡವನ್ನೇ ನಮ್ಮಪ್ಪ ಬೊಕೆ(ಹೂಗುಚ್ಛ)ತರ ಮಾಡಿಕೊಂಡು ನನಗೆ ಕೊಟ್ಟು ಮನೆಯೊಳಗೆ ಕರೆದುಕೊಂಡು ಹೋಗಿದ್ದರು. ಆಮೇಲೆ ಮನೆ ದೇವರಿಗೆ ದೀಪಹಚ್ಚಿ ನಮಸ್ಕಾರ ಮಾಡಿ, ಊರಿನ ಯಜಮಾನರ ಕಾಲಿಗೆಲ್ಲಾ ನಮಸ್ಕಾರ ಮಾಡಿ ಕುಳಿತುಕೊಂಡಿದ್ದೆ. ಆಮೇಲೆ ನಮ್ಮ ತಾಯಿ ಒಂದು ಲೋಟ ಹಾಲು ತಂದಾಗ ನಾನೇ ಕೊಡುತ್ತೇನೆ ಎಂದು ಇಸ್ಕೊಂಡ ನಮ್ಮಪ್ಪ ನನಗೆ ಹಾಲು ಕೊಡುವುದಕ್ಕೂ ಮುಂಚೆ ಒಂದು ಮಾತು ಹೇಳುತ್ತೇನೆ ಪಾಲಿಸಬೇಕು ಎಂದರು. ನೀನು-ನಿನ್ನ ಕುಟುಂಬ ತಿನ್ನೋ ಅನ್ನ ನನ್ನ ಭೂಮಿಯದ್ದಾಗಬೇಕು. ಎಲ್ಲೂ ಕೈಯೊಡ್ಡಬಾರದು ಎಂದಿದ್ದರು. ಅವತ್ತು ನಮ್ಮ ತಂದೆ-ತಾಯಿ ಹೇಳಿಕೊಟ್ಟಿದ್ದು ಇವತ್ತಿಗೂ ನನಗೆ ಸಂತೋಷದ ಮಾತುಗಳು. ಇವತ್ತಿಗೂ ಪಾಲನೆ ಮಾಡಿಕೊಂಡು ಬಂದಿದ್ದೇನೆ. ನಾನು ಯಾರ ಮುಲಾಜಿನಲ್ಲೂ ಇಲ್ಲ. ಆದರಿಂದಲೇ ನೇರವಾಗಿ ವಸ್ತುಸ್ಥಿತಿ ಕುರಿತು ಮಾತನಾಡುತ್ತೇನೆ. ಅದು ನಮ್ಮಪ್ಪ ನನಗೆ ಹೇಳಿಕೊಟ್ಟ ಜೀವನದ ಪಾಠ.

ಮಿತ್ರ: ಮೈಸೂರಿನ ಬಗ್ಗೆ ನಿಮ್ಮ ಅಭಿಪ್ರಾಯವೇನು?

ವಿಶ್ವನಾಥ್: ಮೈಸೂರಿನ ಬಗ್ಗೆ ಬಹಳಷ್ಟು ಕನಸುಗಳನ್ನು ಕಟ್ಟಿಕೊಂಡು ಶಾಸಕ, ಸಚಿವನಾಗಿ ಕೆಲಸ ಮಾಡಿದ್ದೇನೆ. ಜಗತ್ ಪ್ರಸಿದ್ಧ ಮೈಸೂರನ್ನು ದೊಡ್ಡ ಜಾಗತಿಕ ಪ್ರವಾಸಿ ತಾಣ ಮಾಡುವುದರಲ್ಲಿ ಎಲ್ಲಾ ಸರ್ಕಾರಗಳು ಎಡವಿವೆ. ನಮ್ಮಲ್ಲಿ ಸಮುದ್ರವೊಂದಿಲ್ಲ ಅಷ್ಟೇ. ಇನ್ನೆಲ್ಲವೂ ಇದೆ. ಇಲ್ಲಿಯವರೆಗೆ ಯಾವ ಪ್ರವಾಸಿ ಮಂತ್ರಿಗಳು ಮೈಸೂರು ಪ್ರವಾಸಿಗರ ಕೇಂದ್ರವನ್ನಾಗಿಸಲು ಕೆಲಸ ಮಾಡಿಲ್ಲ. ಪ್ರವಾಸೋದ್ಯಮದಿಂದಲೇ ಮೈಸೂರಿಗರು ಬದುಕುತ್ತಿದ್ದಾರೆ. ಅತಿವೃಷ್ಟಿ, ಅನಾವೃಷ್ಟಿ ಏನೇ ಬಂದರೂ ಚಾಮುಂಡಿ ತಾಯಿ ಸೇವೆ, ದಸರಾ ನಿಲ್ಲಬಾರದು.

ಮಿತ್ರ: ಮೈಸೂರು ಪಾರಂಪರಿಕತೆಗೆ ಸೊಗಡು ಸಂರಕ್ಷಣೆಗೆ ನಿಮ್ಮ ಸಲಹೆ ಏನು?

ವಿಶ್ವನಾಥ್: ಹಳ್ಳಿಗಾಡು ಜನರಿಂದ ಹಿಡಿದು ನಗರ ಪ್ರದೇಶ, ದೇಶ-ವಿದೇಶದ ಪ್ರವಾಸಿಗರ ಅಭಿರುಚಿಗೆ ತಕ್ಕಂತೆ ಕಾರ್ಯಕ್ರಮಗಳನ್ನು ರೂಪಿಸಬೇಕು. ವಸ್ತುಪ್ರದರ್ಶನವನ್ನು ಇಡೀ ವರ್ಷಗಳ ಕಾಲ ನಡೆಸಬೇಕು.



ಪ್ರವಾಸಿಗರ ಕೇಂದ್ರವಾಗಬೇಕು. ಪಂಜಿನ ಕವಾಯತು ಮೈದಾನದ ಬಾಗಿಲನ್ನು ವರ್ಷಕ್ಕೊಮ್ಮೆ ತೆರೆದು, ಮುಚ್ಚುವುದಲ್ಲ ಇವೆಲ್ಲವನ್ನು ದೇಶ-ವಿದೇಶಗಳಿಂದ ಬರುವ ಪ್ರವಾಸಿಗರಿಗೆ ದೊಡ್ಡ ಆಕರ್ಷಣೆಗಳನ್ನಾಗಿ ಮಾಡಬೇಕು.

ಮಿತ್ರ: ಬೃಹತ್ ಮೈಸೂರು ಮಹಾನಗರ ಪಾಲಿಕೆ ಬಗ್ಗೆ ನಿಮ್ಮ ಅಭಿಪ್ರಾಯವೇನು?

ವಿಶ್ವನಾಥ್: ಬೃಹತ್ ಮೈಸೂರು ಮಾಡುವುದರಲ್ಲಿ ಯಾವುದೇ ತೊಂದರೆ ಇಲ್ಲ. ಈಗಾಗಲೇ ರಿಂಗ್ ರೋಡ್ ದಾಟಿ ಹೋಗಿದ್ದೇವೆ. ಹಂತ ಹಂತವಾಗಿ ಬೃಹತ್ ಮೈಸೂರು ಮಾಡಬೇಕು. ಇದರಿಂದ ಆದಾಯವೂ ಇದೆ. ಮದ್ಯ ಮಾರಾಟ ಮಾಡಿದ ದುಡ್ಡು, ಸಾರಿಗೆ, ನೋಂದಣಿ, ವಾಣಿಜ್ಯ ತೆರಿಗೆ ಹೊರತು ತೆರಿಗೆ ಬರುವಂತಹ ಜಾಗವೇ ಇಲ್ಲವಾ? ನಗರ ಕಂದಾಯ ಸರಿಯಾಗಿ ಆಗುತ್ತಿಲ್ಲ. ಎಲ್ಲೆಲ್ಲೋ ಸೋರಿ ಹೋಗುತ್ತಿದೆ. ಯಾರೋ ತಿಂದು ಹೋಗುತ್ತಿದ್ದಾರೆ. ಆದ್ದರಿಂದ ನಗರ ಕಂದಾಯ ಸಂಗ್ರಹಣೆಗೆ ವಿವಿಧ ಕಾರ್ಯಕ್ರಮಗಳನ್ನು ಮಾಡಬೇಕು.

ಮಿತ್ರ: ಚಾಮುಂಡಿಬೆಟ್ಟದ ಅಭಿವೃದ್ಧಿ ಮಂತ್ರದ ಬಗ್ಗೆ ನೀವೇನು ಹೇಳ್ತೀರಾ?

ವಿಶ್ವನಾಥ್: ಅರಣ್ಯ ಸಚಿವನಾಗಿದ್ದ ವೇಳೆ ನೈರೋಬಿಯಾ ಒಂದು ಕೋಟಿ ರೂ. ಕೊಟ್ಟಿತ್ತು. ಆ ದುಡ್ಡಿನಲ್ಲಿ ಚಾಮುಂಡಿಬೆಟ್ಟದ ಸುತ್ತಲೂ ಬೇಲಿ ಹಾಕಿಸಿದ್ದೆ. ಇವಾಗ ಎಲ್ಲಾ ಕಿತ್ತು ಹಾಕಿದ್ದಾರೆ. ಚಾಮುಂಡಿಬೆಟ್ಟವನ್ನು ಪ್ರತ್ಯೇಕ ಸ್ಥಳವನ್ನಾಗಿ ಮಾಡಬೇಕು. ಬೆಟ್ಟದ ಸುತ್ತಲೂ ಮನೆಗಳು ಇರಬಾರದು ಎಂದು ದೊಡ್ಡ ಯೋಜನೆ ಹಾಕಿಕೊಳ್ಳಲಾಗಿತ್ತು. ಆದರೆ ಯೋಜನೆ ಅನುಷ್ಠಾನವಾಗಲಿಲ್ಲ. ಇವತ್ತು ಬೆಟ್ಟದ ಮೇಲೆ ಇರುವ ಅಂಗಡಿ-ಮಳಿಗೆಗಳನ್ನು ತೆಗೆಸುತ್ತಿರುವುದು ಒಳ್ಳೆಯದು. ಬೆಟ್ಟದ ಕೆಳಗೆಯೇ ಪೂಜಾ ಸಾಮಗ್ರಿಗಳನ್ನು ತೆಗೆದುಕೊಂಡು ಹೋಗಬೇಕು. ಬೆಟ್ಟದ ಮೇಲೆ ಯಾವ ವ್ಯಾಪಾರ-ವಹಿವಾಟು ನಡೆಯಬಾರದು. ಭಕ್ತರು ಸರಾಗವಾಗಿ ಹೋಗಿ ತಾಯಿಗೆ ಪೂಜೆ ಸಲ್ಲಿಸಿ ಬರಬೇಕು. ಚಾಮುಂಡಿಬೆಟ್ಟ ಸದಾ ಸ್ವಚ್ಛವಾಗಿರಬೇಕು. ಮಕ್ಕಳೇ ಸಾವಿರ ಮೆಟ್ಟಿಲುಗಳನ್ನು ಹತ್ತಿ ಬಿಡುತ್ತವೆ. ಅಂತಹದರಲ್ಲಿ ಬೆಟ್ಟಕ್ಕೆ ರೋಪ್‌ವೇ ಹಾಕಿಸುತ್ತೇವೆ. ಸರಳಾಕುತ್ತೇವೆ ಎನ್ನುತ್ತಿರುವುದು ದುಡ್ಡು ತಂದು ಹಾಳು ಮಾಡುವ ಹುಚ್ಚಾಟ. ಬೆಟ್ಟದ ಸುತ್ತಲೂ ಬಡಾವಣೆಗಳಿದ್ದು, ಅರಮನೆಯೇ ಕಾಣದಂತೆ ದೊಡ್ಡ ದೊಡ್ಡ ಕಟ್ಟಡಗಳಾಗುತ್ತಿವೆ. ಮುಡಾ, ನಗರ ಪಾಲಿಕೆ ಮೈಸೂರಿನ ಸೌಂದರ್ಯವನ್ನೇ ಹಾಳುಮಾಡಿವೆ.

ನಗೆ ಬುಗ್ಗೆ

ಗರ್ಲ್‌ಫ್ರೆಂಡ್: ವಾವ್, ಮೊಬೈಲ್ ತುಂಬಾ ಚೆನ್ನಾಗಿದೆ. ಎಲ್ಲಿಂದ ತಂದೆ
ತಾಣ್ಯಾ: ರನ್ನಿಂಗ್ ರೇಸ್‌ನಲ್ಲಿ
ಗರ್ಲ್‌ಫ್ರೆಂಡ್: ಎಷ್ಟು ಮಂದಿ ಇದ್ದರು ರೇಸ್‌ನಲ್ಲಿ
ತಾಣ್ಯಾ: ಮೊಬೈಲ್ ಓನರ್, ಪೊಲೀಸ್, ನಾನು!

ಮೇಷ್ಟ್ರು: ವರ್ಷಕ್ಕೆ ಎಷ್ಟು ರಾತ್ರಿಗಳು?
ಗುಂಡ: 10 ರಾತ್ರಿಗಳು
ಮೇಷ್ಟ್ರು: ಅದ್ಹೇಗೆ?
ಗುಂಡ: 9 ನವರಾತ್ರಿ, 1 ಶಿವರಾತ್ರಿ!

ಅಪ್ಪ: ಯಾಕೋ ಶಾಲೆಗೆ ಹೋಗಿಲ್ಲ?
ಮಗ: ನಿನ್ನೆ ನಮ್ಮನ್ನೆಲ್ಲಾ ತೂಕ ಮಾಡಿದ್ದಾರೆ... ಇವತ್ತು ಮಾರಿ ಬಿಡ್ತಾರೇನೋ ಅಂತ ಹೋಗಿಲ್ಲ..!

ಹೆಂಡತಿ(ಸಿಟ್ಟಿನಿಂದ): ನಿಮ್ಮನ್ನು ಮದುವೆ ಆಗೋ ಬದಲು ನಾನು ಒಬ್ಬ ರಾಕ್ಷಸನನ್ನ ಮದುವೆ ಆಗಿದ್ರೂ ಎಷ್ಟೋ ಸುಖವಾಗಿರ್ತಿದ್ದೆ.
ಗಂಡ: ಹಾಗೆಲ್ಲಾ ರಕ್ತಸಂಬಂಧದಲ್ಲಿ ಮದುವೆ ಆಗಬಾರದು ಕಣೇ ಒಳ್ಳೇದಲ್ಲ.

ಮಗ: ಅಮ್ಮಾ ನನಗೆ ಈ ಅಂಗಡಿಯಿಂದ ಪಟಾಕಿ ಕೊಡ್ಸು...
ಅಮ್ಮ: ಅಯ್ಯೋ ಕರ್ಮ... ಅದು ಪಟಾಕಿ ಅಂಗಡಿ ಅಲ್ಲೋ... ಅದು ಲೇಡೀಸ್ ಹಾಸ್ಟೆಲ್
ಮಗ: ಮತ್ತೆ ಅಪ್ಪ ನೆನ್ನೆ ಅವರ ಫ್ರೆಂಡ್ ಹತ್ತಿರ ಹೇಳ್ತಿದ್ರು, ಇಲ್ಲಿ ಮಸ್ತ್ ಪಟಾಕಿಗಳಿವೆ ಅಂತ

ಪರಂಪರೆಯ ಪ್ರತೀಕ ವಾಣಿ ವಿಲಾಸ ಮಾರುಕಟ್ಟೆ

ಲೇಖನ: ಎಂ.ಬಿ.ಪವನ್‌ಮೂರ್ತಿ

ಸೂಪರ್ ಮಾರ್ಕೆಟ್, ಮಾಲ್‌ಗಳ ಸಂಸ್ಕೃತಿ ನಡುವೆಯೂ ಶತಮಾನದತ್ತ ದಾಪುಗಾಲಿಡುತ್ತಿದೆ ಮೈಸೂರಿನ ಅಗ್ರಹಾರದಲ್ಲಿರುವ ವಾಣಿ ವಿಲಾಸ ಮಾರುಕಟ್ಟೆ. ಪಾರಂಪರಿಕ-ಸಾಂಪ್ರದಾಯಿಕ ಸ್ವರೂಪದ ಈ ಮಾರುಕಟ್ಟೆ, ಈಗಲೂ ತನ್ನ ಅಸ್ತಿತ್ವದೊಂದಿಗೆ ತನ್ನದೇ ಆದ ಗ್ರಾಹಕರನ್ನೂ ಉಳಿಸಿಕೊಂಡು, ಮುನ್ನಡೆಯುತ್ತಿದೆ.

1926ರಲ್ಲಿ ನಿರ್ಮಾಣಗೊಂಡಿರುವ ಪರಂಪರೆಯ ಪ್ರತೀಕವಾದ ಈ ಮಾರುಕಟ್ಟೆಯು ಶಿಥಿಲಾವಸ್ಥೆಯ ಆರೋಪ ಎದುರಿಸಿ, ನೆಲಸಮಗೊಳಿಸುವ ಪ್ರಸ್ತಾಪ ಹಿಂದಿಕ್ಕಿ ತಾನು ಸದೃಢ ಎಂಬುದನ್ನು ನಿರೂಪಿಸಿದೆ. ಆಧುನಿಕ ಮೈಸೂರು ನಿರ್ಮಾತೃ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಂದ ಅಂದು ನಿರ್ಮಾಣಗೊಂಡ ಈ ಮಾರುಕಟ್ಟೆಗೆ 'ವಾಣಿ ವಿಲಾಸ ಸನ್ನಿಧಾನ' ಎಂದೇ ಖ್ಯಾತ ನಾಮರಾದ ರಾಜಮಾತೆ ಕೆಂಪನಂಜಮ್ಮಣ್ಣಿ ಅವರ ಹೆಸರು ನಾಮಕರಣ ಮಾಡಿರುವುದು ವಿಶೇಷ.

ಈ ಮೊದಲು ಇಲ್ಲಿಗೆ ಮೈಸೂರು ನಗರದ ಸುತ್ತಮುತ್ತಲ ಗ್ರಾಮಾಂತರ ಪ್ರದೇಶದಿಂದಲೂ ಹೆಚ್ಚಿನ ಸಂಖ್ಯೆ ಗ್ರಾಹಕರು ಬರುತ್ತಿದ್ದರು. ಆಯಾಯ ಪ್ರದೇಶದಲ್ಲಿ ಸ್ಥಳೀಯವಾಗಿ ಮಾರುಕಟ್ಟೆಗಳು ತಲೆ ಎತ್ತಿದಂತೆ ಗ್ರಾಹಕರಲ್ಲಿ ಇಲ್ಲಿಗೆ ಬರುವವರ ಸಂಖ್ಯೆ ವಿರಳವಾಯಿತು. ಆದರೂ ಮಾರುಕಟ್ಟೆ ತನ್ನ ಸುತ್ತಮುತ್ತಲ ನಾನಾ ಪ್ರದೇಶಗಳ ಸ್ಥಳೀಯ ಖಾಯಂ ಗ್ರಾಹಕರನ್ನು ಉಳಿಸಿಕೊಂಡಿದೆ. ಅಗ್ರಹಾರ, ಲಕ್ಷ್ಮೀಪುರಂ, ಸುಣ್ಣದಕೇರಿ ಸೇರಿದಂತೆ ಮೊದಲಾದ ಪ್ರದೇಶಗಳಿಂದ ಹೆಚ್ಚು ಗ್ರಾಹಕರು ಇಲ್ಲಿಗೆ ಬರುತ್ತಾರೆ.


ಕೈಗೆಟುಕುವ ನ್ಯಾಯಯುತ ಬೆಲೆಯಲ್ಲಿ ಪದಾರ್ಥಗಳು ದೊರೆಯುತ್ತವೆ ಎಂಬ ವಿಶ್ವಾಸವನ್ನು ಮಾರುಕಟ್ಟೆ ಉಳಿಸಿಕೊಂಡಿದೆ. ಕೋವಿಡ್ ಕಾರಣಕ್ಕೆ 2 ವರ್ಷಗಳು ವಹಿವಾಟಿನ ಮೇಲೆ ಭಾರೀ ಹೊಡೆತ ಬಿದ್ದಿತು. ಈಗ ಸುಧಾರಣೆ ಕಾಣುತ್ತಿದೆ. ಆದರೂ ಮೂರ್‍ನಾಲ್ಕು ದಶಕಗಳ ಹಿಂದೆ ಇಲ್ಲಿ ನಡೆಯುತ್ತಿದ್ದ ವಹಿವಾಟಿಗೆ ಹೋಲಿಸಿದರೆ, ಈಗಿನದ್ದೂ ಏನೇನೂ ಇಲ್ಲ' ಎನ್ನುತ್ತಾರೆ ಇಲ್ಲಿನ ವ್ಯಾಪಾರಿಗಳು. ಮಂಡಿ ಮಾರುಕಟ್ಟೆಗಿಂತಲೂ ತುಸು ಚಿಕ್ಕದಾಗಿಯೇ ಇರುವ ವಾಣಿ ವಿಲಾಸ ಮಾರುಕಟ್ಟೆ, ನ್ಯೂ ಸಯ್ಯಾಜಿರಾವ್ ರಸ್ತೆ ಮತ್ತು ವಾಣಿವಿಲಾಸ ರಸ್ತೆ ಸಂಧಿಸುವ ಮಾಧವರಾವ್ (ಅಗ್ರಹಾರ) ವೃತ್ತಕ್ಕೆ ಮುಖ್ಯದ್ವಾರ ಹೊಂದಿದೆ. ವಾಣಿ ವಿಲಾಸ ರಸ್ತೆ ಮಾರ್ಗದಲ್ಲಿಯೂ ಮಾರುಕಟ್ಟೆಗೆ ಮತ್ತೊಂದು ದ್ವಾರ ಇತ್ತಾದರೂ ಶಿಥಿಲಾವಸ್ಥೆ ಹಿನ್ನೆಲೆಯಲ್ಲಿ ಅದನ್ನು ಮುಚ್ಚಲಾಗಿದೆ.

ಭಾಗಶಃ ತ್ರಿಕೋನಾಕಾರದಲ್ಲಿ ವಾಣಿ ವಿಲಾಸ ಮಾರುಕಟ್ಟೆ ನಿರ್ಮಾಣಗೊಂಡಿದೆ. ವಾಣಿ ವಿಲಾಸ ರಸ್ತೆ, ತ್ಯಾಗರಾಜ ರಸ್ತೆ, ನೂರೊಂದು ಗಣಪತಿ ದೇವಸ್ಥಾನ ವೃತ್ತ ಹಾಗೂ ನವಗ್ರಹ ದೇವಸ್ಥಾನ ರಸ್ತೆಗಳಲ್ಲಿ ಮಾರುಕಟ್ಟೆಯ ಹೊರಾವರಣದ ಮಳಿಗೆಗಳನ್ನು ಕಾಣಬಹುದು. ಮಾರುಕಟ್ಟೆಯು ಕಟ್ಟಡದ ಎಲ್ಲಾ ದಿಕ್ಕಿನಲ್ಲಿ ಬಹುತೇಕ ಭಾಗದಲ್ಲಿ ಒಳ ಮತ್ತು ಹೊರಾವರಣದಲ್ಲಿ ಮಳಿಗೆಗಳನ್ನು ಹೊಂದಿದೆ. ಈ ಮಳಿಗೆಗಳೇ ಮಾರುಕಟ್ಟೆಯ ತಡೆಗೋಡೆಯಂತಿವೆ.

'ನಮ್ಮ ತಾತನವರ ಕಾಲದಿಂದಲೂ ಮಾರುಕಟ್ಟೆಯಲ್ಲಿ ಹಣ್ಣಿನ ಮಳಿಗೆ ಹೊಂದಿದ್ದೇವೆ. ಅಂದಿನಿಂದ ಈವರೆಗೂ ನಮ್ಮ ಮಳಿಗೆಗಳಿಗೆ ಮೈಸೂರು ಗ್ರಾಮಾಂತರ ಪ್ರದೇಶದಿಂದಲೂ ಗ್ರಾಹಕರು ಭೇಟಿ ನೀಡುತ್ತಾರೆ. ನಮ್ಮ ಈ ಗ್ರಾಹಕರು ತಾವಿರುವ ಸಮೀಪದಲ್ಲೇ ಹಣ್ಣಿನ ಮಾರಾಟ ಮಳಿಗೆಗಳಿದ್ದರೂ ಅವರು ಇಂದಿಗೂ ನಮ್ಮಲ್ಲೇ ವಹಿವಾಟು ನಡೆಸುವ ಖಾಯಂ ಗಿರಾಕಿಗಳಾಗಿದ್ದಾರೆ' ಎಂದು ಹರ್ಷ ವ್ಯಕ್ತಪಡಿಸುತ್ತಾರೆ ಇಲ್ಲಿನ ವ್ಯಾಪಾರಿಗಳಾದ ಅನಿಲ್ ಮತ್ತು ಕಿಶೋರ್.

ಸುಂದರ ಗೋಪುರ ನೆಲಕ್ಕುರುಳಿತು... ಎರಡು ಜೀವವನ್ನು ಬಲಿ ಪಡೆಯಿತು...

ಸದ್ಯ 96 ವರ್ಷದ ಪ್ರಾಯದಲ್ಲಿರುವ ಈ ಮಾರುಕಟ್ಟೆ ಹೊಂದಿದ್ದ ಮುಖ್ಯದ್ವಾರದ ಗೋಪುರ ಕುಸಿದು 28 ವರ್ಷಗಳೇ ಕಳೆದಿವೆ. 1994ರ ನವೆಂಬರ್‌ನಲ್ಲಿ ಸುರಿದ ಮಳೆಗೆ ಮುಖ್ಯದ್ವಾರದ ಸುಂದರ ಗೋಪುರ ನೆಲಕ್ಕುರುಳಿತು. ದೊಡ್ಡ ಗಡಿಯಾರವನ್ನೂ ಹೊಂದಿದ್ದ ಈ ಗೋಪುರ ತನ್ನೊಂದಿಗೆ ಎರಡು ಜೀವಗಳನ್ನು ಬಲಿಪಡೆಯಿತು. ಗೋಪುರದ ಪುನರ್ ನಿರ್ಮಾಣವಾಗದೇ ಮುಖ್ಯದ್ವಾರವು ತನ್ನ ಹಿಂದಿನ ಆಕರ್ಷಣೆಯನ್ನೇ ಕಳೆದುಕೊಂಡಿತು. ಮುಖ್ಯದ್ವಾರದ ಗೋಪುರಕ್ಕೆ ಹೊಂದಿಕೊಂಡಂತೆ ಇದ್ದ ಮೊದಲ ಅಂತಸ್ತು ಈಗ ಸಂಪೂರ್ಣ ಇಲ್ಲವಾಗಿದೆ. ಮಹಾರಾಜರ ಕಾಲದಲ್ಲಿ 114 ಮಳಿಗೆಗಳನ್ನು ಹೊಂದಿದ್ದ ಮಾರುಕಟ್ಟೆ, ಕಾಲ ಕ್ರಮೇಣ ಕೆಲ ಹೊಸ ಮಳಿಗೆಗಳ ನಿರ್ಮಾಣದೊಂದಿಗೆ ಈಗ 131 ಮಳಿಗೆಗಳನ್ನು ಹೊಂದಿದೆ. ಜೀರ್ಣೋದ್ಧಾರದೊಂದಿಗೆ ಸೂಕ್ತ ನಿರ್ವಹಣೆ ಕೈಗೊಂಡರೆ, ಮಾರುಕಟ್ಟೆಯ ಆಕರ್ಷಣೆ-ಅಂದ ಮರುಕಳಿಸಲಿದೆ ಎಂಬುದು ಇಲ್ಲಿನ ವರ್ತಕರ ಅಭಿಪ್ರಾಯ.


ನೂರೊಂದು ಗಣಪತಿ ದೇವಸ್ಥಾನದ ಎದುರಿನ ವಾಣಿ ವಿಲಾಸ ಮಾರುಕಟ್ಟೆಯ ಒಂದು ನೋಟ.


ಮಾರುಕಟ್ಟೆ ಮುಖ್ಯದ್ವಾರವು ಗಡಿಯಾರ ಗೋಪುರ, ಮೊದಲ ಅಂತಸ್ತು ಹೊಂದಿರುವ ಹಳೆಯ ಚಿತ್ರ.


ವಾಣಿ ವಿಲಾಸ ಮಾರುಕಟ್ಟೆಯ ಒಳಾವರಣದ ಒಂದು ಚಿತ್ರ.


“ಯುರೋಪಿಯನ್ ವಾಸ್ತುಶಿಲ್ಪ ಶೈಲಿಯಲ್ಲಿ ಈ ಮಾರುಕಟ್ಟೆ ನಿರ್ಮಾಣ ಮಾಡಲಾಗಿದೆ. ಸಾಮಾನ್ಯವಾಗಿ ಮೈಸೂರಿನ ಪಾರಂಪರಿಕ ಕಟ್ಟಡಗಳು ಉದ್ದ ಮತ್ತು ಅಗಲ ಜಾಸ್ತಿ ಅದೇ ಲಕ್ಷಣವನ್ನು ವಾಣಿ ವಿಲಾಸ ಮಾರುಕಟ್ಟೆಯೂ ಹೊಂದಿದೆ.

ಎಲ್ಲಾ ಪಾರಂಪರಿಕ ಕಟ್ಟಡಗಳಂತೆಯೇ ಇಟ್ಟಿಗೆ, ಕಲ್ಲು ಮತ್ತು ಸುಣ್ಣದ ಗಾರೆಯನ್ನು ಈ ಮಾರುಕಟ್ಟೆಗೂ ಬಳಸಲಾಗಿದೆ. ಇದರ ಗೋಡೆ 9ರಿಂದ 12 ಇಂಚು ದಪ್ಪವಿದೆ. ಕಬ್ಬಿಣ ಬಳಸದ ಮದ್ರಾಸ್ ಮೇಲ್ಛಾವಣಿ ಹೊಂದಿದೆ. ಸಿಮೆಂಟ್-ಕಬ್ಬಿಣ ಬಳಸಿದ ಕಾರಣಕ್ಕೆ ದೀರ್ಘ ಬಾಳಿಕೆ ಬರುತ್ತಿದೆ. ಜೊತೆಗೆ ಟೀಕ್‌ವುಡ್ ತೊಲೆಗಳನ್ನು ಬಳಸಲಾಗಿದೆ. ನೆಲಹಾಸು ಕಲ್ಲು ಚಪ್ಪಡಿಯಿಂದ ಕೂಡಿದ್ದು, ಇದನ್ನು ಕಡುಕಣಶಿಲೆ ನೆಲಹಾಸು ಎಂದು ಕರೆಯುತ್ತಾರೆ. ಸ್ವಚ್ಛತೆ ಸುಲಭ ಎಂಬ ಕಾರಣಕ್ಕೆ ಈ ರೀತಿಯ ನೆಲಹಾಸು ನಿರ್ಮಿಸಲಾಗಿದೆ.

-ಪ್ರೊ.ಎನ್.ಎಸ್.ರಂಗರಾಜು, ಮೈಸೂರು ಪಾರಂಪರಿಕ ಪ್ರದೇಶ ಅಭಿವೃದ್ಧಿ ಮತ್ತು ಸಂರಕ್ಷಣೆ ತಜ್ಞರ ಸಮಿತಿ ಸದಸ್ಯರು.


“ವಹಿವಾಟು ನಡೆಸುತ್ತಿರುವುದು ಸುಮಾರು 60 ಮಳಿಗೆಗಳಲ್ಲಿ ಮಾತ್ರ. ಒಳಾವರಣದಲ್ಲಿ ತರಕಾರಿ, ತೆಂಗಿನಕಾಯಿ ಮತ್ತು ಪೂಜಾ ಸಾಮಗ್ರಿ ಮಳಿಗೆಗಳು ಹೆಚ್ಚಿನ ಸಂಖ್ಯೆಯಲ್ಲಿವೆ. 10ಕ್ಕೂ ಹೆಚ್ಚು ಮಟನ್-ಚಿಕನ್ ಮಳಿಗೆಗಳೂ ಇವೆ. ಮುಖ್ಯದ್ವಾರದ ಗೋಪುರ ಒಳಗೊಂಡಂತೆ ಮಾತ್ರ ಮೊದಲ ಅಂತಸ್ತು ಇತ್ತು, ಈ ಗೋಪುರಕ್ಕೆ ಹೊಂದಿಕೊಂಡಂತೆ ಆಗ ಟೈಪಿಂಗ್ ತರಬೇತಿ ಕೇಂದ್ರ ನಡೆಯುತ್ತಿತ್ತು. ಮುಖ್ಯದ್ವಾರದ ಗೋಪುರ ಕುಸಿದ ಸಂದರ್ಭದಲ್ಲಿ ಇಡೀ ಮಾರುಕಟ್ಟೆಯನ್ನೇ ಖಾಲಿ ಮಾಡಿಸಲು ಪಾಲಿಕೆ ಮುಂದಾಗಿತ್ತು. ವರ್ತಕರು ನ್ಯಾಯಾಲಯದ ಮೊರೆ ಹೋದೆವು. ನ್ಯಾಯಾಲಯ ನಮ್ಮ ಪರವಾದ ತೀರ್ಪು ನೀಡಿತು. ಇಂಜಿನಿಯರ್‌ಗಳು ಕಟ್ಟಡ ಪರಿಶೀಲಿಸಿ, ಇನ್ನೂ 45 ವರ್ಷ ಕಟ್ಟಡ ಸದೃಢವಾಗಿರಲಿದೆ ಎಂದು ವರದಿ ನೀಡಿದರು. ನ್ಯಾಯಾಲಯ ಈ ವರದಿ ಆಧಾರದ ಮೇಲೆ ನಮ್ಮ ಪರವಾಗಿ ತೀರ್ಪು ನೀಡಿತು. ಕಟ್ಟಡ ಭದ್ರವಾಗಿದ್ದು, ಪ್ರತಿ ತಿಂಗಳು ಮಾರುಕಟ್ಟೆಯ ಸ್ವಚ್ಛತಾ ಕಾರ್ಯ ಮಾಡಿಸುತ್ತಿದ್ದೇವೆ. ಆ ಮೂಲಕ ಎಲ್ಲಿಯೂ ಕಸ ಶೇಖರಣೆ ಆಗದಂತೆ ಮತ್ತು ನೀರು ನಿಲ್ಲದಂತೆ ನೋಡಿಕೊಳ್ಳುತ್ತಿದ್ದೇವೆ. ಕಟ್ಟಡದ ಪರಂಪರೆಗೆ ಯಾವುದೇ ಧಕ್ಕೆಯಾಗದಂತೆ ವರ್ತಕರು ತಾವಾಗಿಯೇ ಸಣ್ಣಪುಟ್ಟ ದುರಸ್ತಿ ಮಾಡಿಸಿಕೊಂಡು ಸಾಧ್ಯವಾದಷ್ಟು ಸುಸ್ಥಿತಿಯಲ್ಲಿ ಇಟ್ಟುಕೊಂಡಿದ್ದೇವೆ. **-ಶಿವಕುಮಾರ್, ವಾಣಿ ವಿಲಾಸ ಮಾರುಕಟ್ಟೆ ವರ್ತಕರ ಸಂಘದ ಕಾರ್ಯದರ್ಶಿ**


“ದೇವರಾಜ ಮಾರುಕಟ್ಟೆ ಬಿಟ್ಟರೆ ಆಗ ವಾಣಿ ವಿಲಾಸ ಮಾರುಕಟ್ಟೆ ಪ್ರಸಿದ್ಧಿ ಹೊಂದಿತ್ತು. ನಂಜುಮಳಿಗೆ, ಎಂಜಿ ರಸ್ತೆಯಲ್ಲಿ ಮಾರುಕಟ್ಟೆಗಳು ಇಲ್ಲದ ಸಂದರ್ಭದಲ್ಲಿ ಈ ಮಾರುಕಟ್ಟೆಗೆ ಹೆಚ್ಚಿನ ಸಂಖ್ಯೆಯ ಗ್ರಾಹಕರು ಬರುತ್ತಿದ್ದರು. ಮುಖ್ಯದ್ವಾರದ ಗೋಪುರ ಕುಸಿದ ಸಂದರ್ಭದಲ್ಲಿ ಮಾರುಕಟ್ಟೆಯನ್ನು ಸಂಪೂರ್ಣ ನೆಲಸಮಗೊಳಿಸಿ, ಪುನರ್ ನಿರ್ಮಾಣ ಮಾಡುವುದಾಗಿ ಹೇಳಿಕೊಂಡಿದ್ದ ಪಾಲಿಕೆಯು, ವರ್ತಕರನ್ನು ತೆರವು ಮಾಡಿಸಲು ಮುಂದಾಗಿತ್ತು. ಆದರೆ ನಮ್ಮ ಪರವಾಗಿ ನ್ಯಾಯಾಲಯ ತೀರ್ಪು ನೀಡಿತು. ಆ ಕಾಲದಲ್ಲೇ ಗುಣಮಟ್ಟದ ಸಾಮಗ್ರಿ ಬಳಸಿ ನಿರ್ಮಿಸಿರುವ ಒಂದೇ ಅಂತಸ್ತಿನ ಕಟ್ಟಡ ಇದಾಗಿದ್ದು, ಈಗಲೂ ಸದೃಢವಾಗಿದೆ. ಒಳಾವರಣದಲ್ಲಿ ಸುಮಾರು 50 ಮಳಿಗೆಗಳು ಇದ್ದು, 20 ಮಳಿಗೆಗಳಲ್ಲಿ ಮಾತ್ರ ವಹಿವಾಟು ನಡೆಯುತ್ತಿದೆ. **-ಎಸ್.ಲೋಕೇಶ್‌ಗೌಡ, ಮಾರುಕಟ್ಟೆಯ ತೆಂಗಿನಕಾಯಿ ವ್ಯಾಪಾರಿ.**


ಮೈಸೂರಿನ ಅಗ್ರಹಾರ ವೃತ್ತದಲ್ಲಿರುವ ವಾಣಿ ವಿಲಾಸ ಮಾರುಕಟ್ಟೆಯ ಮುಖ್ಯದ್ವಾರ.

ಶವಪರೀಕ್ಷೆಗೂ ನಾ ಸದಾ ಸೈ...!

● ಗಣೇಶ್ ಎ

ಎಲ್ಲಾ ಕ್ಷೇತ್ರದಲ್ಲೂ ಸಾಧನೆ ಮೆರೆಯುತ್ತಿರುವ ಮಹಿಳೆಯರು, ಈಗಂತೂ ಎಂತಹದ್ದೇ ಕಷ್ಟದ ಕೆಲಸಗಳಲ್ಲಿಯೂ ಸೈ ಎನಿಸಿಕೊಳ್ಳುತ್ತಾರೆ ಎಂಬುದಕ್ಕೆ ಹೆಚ್.ಡಿ. ಕೋಟೆ ತಾಲೂಕಿನ ಸರ್ಕಾರಿ ಆಸ್ಪತ್ರೆಯಲ್ಲಿ ಮೃತದೇಹಗಳ ಮರಣೋತ್ತರ ಪರೀಕ್ಷೆಯಲ್ಲಿ ತೊಡಗಿಸಿಕೊಂಡಿರುವ ರಾಜಮ್ಮ ಅವರ ಧೈರ್ಯ, ಗಟ್ಟಿತನ ಸಾಕ್ಷಿಯಾಗಿದೆ.

ಬರೀ 7ನೇ ತರಗತಿ ಓದಿರುವ 36 ವರ್ಷದ, ನಂಜನಗೂಡು ತಾಲೂಕು ಚೆನ್ನಪಟ್ಟಣ ಗ್ರಾಮದ ನಿವಾಸಿ ರಾಜಮ್ಮ, ಮೃತದೇಹಗಳ ಮರಣೋತ್ತರ ಪರೀಕ್ಷೆಯಲ್ಲಿ ನಿಸ್ಸೀಮರು. ಹಿರಿಯ ವೈದ್ಯರ ಸಲಹೆ, ಮಾರ್ಗದರ್ಶನದಲ್ಲಿ ರಾಜಮ್ಮ ಕಳೆದ 9 ವರ್ಷಗಳಿಂದ ಮರಣೋತ್ತರ ಪರೀಕ್ಷೆ ನಡೆಸಿದ ಮೃತದೇಹಗಳ ಸಂಖ್ಯೆ ಬರೋಬ್ಬರಿ 830. ಮೊದ ಮೊದಲು ಸಹಾಯಕಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ರಾಜಮ್ಮ, ಈಗ ಅನುಭವಿ ವೈದ್ಯರಂತೆ ಕೆಲಸ ಮಾಡುತ್ತಿರುವುದು ಅಚ್ಚರಿ ಮೂಡಿಸದಿರದು.

ಮೃತದೇಹಗಳನ್ನು ಕಂಡರೆ ಸಾಕು ಭಯದಿಂದ ದೂರ ಸರಿಯುವವರು, ಮುಖ ಮುಚ್ಚಿ ಕೊಳ್ಳುವವರ ನಡುವೆ ರಾಜಮ್ಮರ ಗಟ್ಟಿತನ ಮೆಚ್ಚುವಂತಹದ್ದು. ಯಾವುದೇ ಭಯ, ಅಂಜಿಕೆ ಇಲ್ಲದ ಇವರು ಪುರುಷರಂತೆ ಕೆಲಸ ಮಾಡುತ್ತಾರೆ. ರಾಜಮ್ಮ ಅವರಿಗೆ 6 ವರ್ಷದ ಒಂದು ಹೆಣ್ಣು ಮಗುವಿದ್ದು, ತಂದೆ ಇಲ್ಲದ ತನ್ನ ಮಗುವಿನ ಪೋಷಣೆಗಾಗಿ ಈ ತಾಯಿ ನಿರಂತರವಾಗಿ ಶ್ರಮ ಪಡುತ್ತಿದ್ದಾರೆ.

ರಾಜಮ್ಮರ ವೃತ್ತಿ ಪಯಣ: ಹೆಚ್.ಡಿ. ಕೋಟೆಯ ಈಗಿನ ತಾಲೂಕು ಆರೋಗ್ಯಾಧಿಕಾರಿ ಡಾ. ಟಿ.ರವಿಕುಮಾರ್ ಅವರು ಇಲ್ಲಿಗೆ ಬರುವ ಮೊದಲು ನಂಜನಗೂಡಿನ ಹುಲ್ಲಹಳ್ಳಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಅದೇ ಆಸ್ಪತ್ರೆಯಲ್ಲಿ ರಾಜಮ್ಮ ಅವರು ಸಹ ಹೊರಗುತ್ತಿಗೆ ಡಿ ಗ್ರೂಪ್ ನೌಕರರಾಗಿ ಕೆಲಸ ಮಾಡುತ್ತಿದ್ದರು. ನಂತರ ಡಾ. ಟಿ.ರವಿಕುಮಾರ್ ಅವರು ಹೆಚ್.ಡಿ. ಕೋಟೆಗೆ ವರ್ಗಾವಣೆಯಾದರು. ಈ ವೇಳೆ ಮರಣೋತ್ತರ ಪರೀಕ್ಷಾ ವಿಭಾಗದಲ್ಲಿ ಸಹಾಯಕರಾಗಿ ಕೆಲಸ ಮಾಡುತ್ತಿದ್ದ ಇಬ್ಬರು ನೌಕರರು ಕೆಲಸ ಬಿಟ್ಟ ಕಾರಣ ಡಾ. ರವಿಕುಮಾರ್ ಅವರಿಗೆ ಸಹಾಯಕರ ಕೊರತೆ ಉಂಟಾಗಿ, ನಂಜನಗೂಡಿನಿಂದ ರಾಜಮ್ಮ ಅವರನ್ನು ಇಲ್ಲಿಗೆ ಬರುವಂತೆ ತಿಳಿಸಿದರು. ರಾಜಮ್ಮ ಅವರು ಸಹ ಬರಲು ಒಪ್ಪಿ, ಹೆಚ್.ಡಿ. ಕೋಟೆ ತಾಲೂಕು ಆಸ್ಪತ್ರೆಗೆ ಬಂದು 2013 ರಿಂದ ಡಾ. ರವಿ ಅವರಿಗೆ ಮರಣೋತ್ತರ ವಿಭಾಗದಲ್ಲಿ ಸಹಾಯಕರಾಗಿ ವೃತ್ತಿ ಮಾಡುತ್ತಿದ್ದಾರೆ.

ವೈದ್ಯರಿಗಿಂತ ಮೊದಲೇ ಹಾಜರ್: ಮರಣೋತ್ತರ ಪರೀಕ್ಷಾ ವಿಭಾಗದಲ್ಲಿ ಸಹಾಯಕರಾಗಿ ಬಂದ ರಾಜಮ್ಮನಿಗೆ ಭಯದಿಂದ ತೊಂದರೆ ಆಗಬಹುದು ಎಂಬ ಕಾರಣಕ್ಕೆ ಡಾ. ಟಿ.ರವಿಕುಮಾರ್ ಅವರು ನಿಮಗೆ ಇಲ್ಲಿ ಕಾರ್ಯನಿರ್ವಹಿಸಲು ಭಯವಿದ್ದರೆ ಬರುವುದು ಬೇಡ ಎಂದು ಸಲಹೆ ನೀಡಿದ್ದರು. ಇಲ್ಲ ಮಾಡುತ್ತೇನೆ ಎಂದಾಗ ಅದಕ್ಕೆ ವೈದ್ಯರು ಒಪ್ಪಿ, ಅವಕಾಶ ನೀಡಿದರು. ಮರುದಿನ ಬಂದಾಗಲೂ ಭಯದಿಂದ ಅವರಿಗೆ ತೀವ್ರ ಜ್ವರ ಬಾಧಿಸಿತು. ಒಂದು ವಾರದ ನಂತರ ಡಾ.ರವಿಕುಮಾರ್ ಅವರಿಗೆ ಅಚ್ಚರಿ ಕಾದಿತ್ತು. ರಾಜಮ್ಮ ಅವರು ವೈದ್ಯರಿಗಿಂತ ಮೊದಲೇ ಮರಣೋತ್ತರ ಪರೀಕ್ಷಾ ಕೊಠಡಿ ಪ್ರವೇಶಿಸಿ, ಮರಣೋತ್ತರ ಪರೀಕ್ಷೆಗೆ ಬೇಕಾದ ಎಲ್ಲಾ ಸಲಕರಣೆಗಳನ್ನು ಸಿದ್ಧಪಡಿಸಿ, ಸರ್ವ ಸನ್ನದ್ಧರಾಗಿ ನಿಂತಿದ್ದರು. ಅಂದು ಆರಂಭವಾದ ರಾಜಮ್ಮ ಅವರ ನಿರ್ಭೀತ ಕರ್ತವ್ಯ ಪಾಲನೆ ಇಂದಿಗೂ ನಿಂತಿಲ್ಲ.

ಒಂದೇ ದಿನ 6 ಶವ ಪರೀಕ್ಷೆ: ಆರಂಭದಲ್ಲಿ ಭಯದಿಂದ ತಲೆ ಸುತ್ತಿ ಬಿದ್ದು, ಜ್ವರದಿಂದ ಬಳಲುತ್ತಿದ್ದ ರಾಜಮ್ಮ ಅವರು ದಿನಗಳೆದಂತೆ ಹಿರಿಯ ವೈದ್ಯರ ಮಾರ್ಗದರ್ಶನದಲ್ಲಿ, ಅವರ ಸಹಾಯಕಿಯಾಗಿ, ನಂತರ ವೈದ್ಯರ ಮಾರ್ಗದರ್ಶನದಲ್ಲೇ ಅವರ ಸಮ್ಮುಖದಲ್ಲಿ ಮರಣೋತ್ತರ ಪರೀಕ್ಷೆ ನಡೆಸಲು ಆರಂಭಿಸಿದರು. ಅದರಂತೆ ನೀರಿನಲ್ಲಿ ಬಿದ್ದು ಸಾವನ್ನಪ್ಪಿದವರ ಶವ, ಬೆಂಕಿ ಅನಾಹುತದಲ್ಲಿ ಸತ್ತವರ ಶವ, ಸಾವಿಗೀಡಾದ ಗರ್ಭಿಣಿಯರ ದೇಹದಿಂದ ಮಗು ತೆಗೆಯುವುದು ಮತ್ತು ಕೆಲ ಪೊಲೀಸ್ ಪ್ರಕರಣಗಳಲ್ಲಿ ಅನುಮಾನಾಸ್ಪದವಾಗಿ ಸಾವನ್ನಪ್ಪಿದವರ ಶವ ಸಂಸ್ಕಾರ ನಂತರವೂ ನ್ಯಾಯಾಲಯದ ಅನುಮತಿ ಮೇರೆಗೆ ಮತ್ತೆ ಸಮಾಧಿಯಿಂದ ಹೊರ ತೆಗೆದ ಶವಗಳನ್ನು ಸಹ ಯಾವುದೇ ಭಯವಿಲ್ಲದೆ ರಾಜಮ್ಮ ಮರಣೋತ್ತರ ಪರೀಕ್ಷೆ ನಡೆಸಿದ್ದಾರೆ. ಆರಂಭದ ದಿನಗಳಲ್ಲಿ ಒಂದು ಶವಪರೀಕ್ಷೆಗೆ ಸಾಕು ಸಾಕಾಗುತ್ತಿತು ಎನ್ನುತ್ತಿದ್ದ ರಾಜಮ್ಮ, ಕಳೆದ 9 ವರ್ಷಗಳಲ್ಲಿ ಬರೋಬ್ಬರಿ 830 ಶವಗಳ ಮರಣೋತ್ತರ ಪರೀಕ್ಷೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಒಂದೇ ದಿನ 6 ಶವಗಳ ಮರಣೋತ್ತರ ಪರೀಕ್ಷೆ ನಡೆಸಿರುವ ಉದಾಹರಣೆಯೂ ಇದೆ.

ವಿಶೇಷ ಅನುಭವಗಳು: ಯಾವುದೇ ವ್ಯಕ್ತಿಯಾದರೂ ಆರಂಭದ ದಿನಗಳಲ್ಲಿ ಆದ ಕೆಲ ಕಷ್ಟದ ಅನುಭವಗಳನ್ನು ಮನುಷ್ಯ ಕೆಲವೊಮ್ಮೆ ಮೆಲುಕು ಹಾಕುವುದು ಸಹಜ. ಅದರಂತೆ ಕಳೆದ 9 ವರ್ಷಗಳಿಂದ ಮರಣೋತ್ತರ ಪರೀಕ್ಷೆ ನಡೆಸುತ್ತಿರುವ ರಾಜಮ್ಮ ಅವರಿಗೆ ಆರಂಭದಿಂದಲೂ ಶವಗಳ ಪರೀಕ್ಷೆ ನಡೆಸುವಾಗ ನಾನಾ ಅನುಭವಗಳಾಗಿವೆ. ಮನುಷ್ಯ ಅಥವಾ ಪ್ರಾಣಿ ಸಾವನ್ನಪ್ಪಿದರೂ ದೇಹದ ತೂಕ ಹೆಚ್ಚಾಗುವುದು ಸಹಜ. ಆದರೆ ನೀರಿನಲ್ಲಿ ಬಿದ್ದು ಸಾವನ್ನಪ್ಪಿದರೆ, ಆ ಶವಗಳ ತೂಕ ಇನ್ನು ಬಾರಿ. ಅಂತಹ ಒಂದು ಶವದ ಪರೀಕ್ಷೆ ನಡೆಸುವ ಸವಾಲು ರಾಜಮ್ಮ ಅವರಿಗೆ ಎದುರಾಗಿತ್ತು. ಆ ಶವದ ಪರೀಕ್ಷೆ ಮಾಡುವಷ್ಟರಲ್ಲಿ ರಾಜಮ್ಮನಿಗೆ ಸಾಕು ಸಾಕಾಗಿತ್ತಿತಂತೆ. ಹಾಗೆಯೇ ಯಾವುದೋ ಕೌಟುಂಬಿಕ ವಿಚಾರದಲ್ಲಿ ಸಾವಿಗೀಡಾದ ಗರ್ಭಿಣಿಯ ಶವ ಪರೀಕ್ಷೆ ನಡೆಸಿ, ಮಗುವನ್ನು ಹೊರತೆಗೆದು ಅದರ ಮರಣೋತ್ತರ ಪರೀಕ್ಷೆಯನ್ನು ಮಾಡಿದ್ದು, ನನಗೆ ಮಾನಸಿಕ ಆಘಾತ ಉಂಟು ಮಾಡಿದ್ದನ್ನೂ ಸ್ಮರಿಸುತ್ತಾರೆ. ಇವರ ಸೇವಾ ಸ್ಥೈರ್ಯವನ್ನು ಗುರುತಿಸಿ ರಾಜ್ಯದ ವಿವಿಧ ಸಂಘ ಸಂಸ್ಥೆಗಳು ಸನ್ಮಾನಿಸಿ, ಗೌರವಿಸಿವೆ.



ನಂಜನಗೂಡಿನಲ್ಲಿ ಕೇವಲ 1 ಸಾವಿರ ರೂ. ಗೆ ಕಾರ್ಯನಿರ್ವಹಿಸುತ್ತಿದ್ದೆ. ಧೈರ್ಯವಾಗಿ ಕಾರ್ಯನಿರ್ವಹಿಸುವಂತೆ ಆರಂಭದ ದಿನದಲ್ಲಿ ಅನೇಕ ಹಿರಿಯ ವೈದ್ಯರು ಸ್ಫೂರ್ತಿಯಾಗಿದ್ದಾರೆ. ಅದರಲ್ಲೂ ಈಗ ತಾಲೂಕು ಆರೋಗ್ಯಾಧಿಕಾರಿ ಡಾ. ಟಿ.ರವಿಕುಮಾರ್ ನನಗೆ ಕೆಲಸ ಕಲಿಸಿದವರು. ಅವರ ಮಾರ್ಗದರ್ಶನದಲ್ಲಿಯೇ ಸಾಗುತ್ತಿದ್ದೇನೆ. ಮೈಸೂರು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಹೆಚ್.ಪ್ರಸಾದ್, ಜಿಲ್ಲೆಯ ಪೊಲೀಸ್ ವರಿಷ್ಠಾಧಿಕಾರಿಗಳು ಮತ್ತು ಇಡೀ ಪೊಲೀಸ್ ಇಲಾಖೆಯ ಸಿಬ್ಬಂದಿ ತುಂಬು ಸಹಕಾರ ನೀಡುತ್ತಿದ್ದಾರೆ. ಕೆಲವು ಬಾರಿ ಮೃತರ ಸಂಬಂಧಿಗಳೂ ನನ್ನ ಕಾರ್ಯ ಮೆಚ್ಚಿ ಶ್ಲಾಘಿಸಿದ್ದಾರೆ. ನನ್ನದು ನಂಜನಗೂಡಿನ ಚೆನ್ನಪಟ್ಟಣ ಗ್ರಾಮ ಇಲ್ಲಿನ ಗ್ರಾಮಸ್ಥರು ಸಹ ಪ್ರೋತ್ಸಾಹಿಸಿದ್ದಾರೆ. ಅವರಿಗೆಲ್ಲರಿಗೂ ನಾನು ಧನ್ಯವಾದ ತಿಳಿಸುತ್ತೇನೆ. ಸಮಾಜದ ಸಹಕಾರವಿಲ್ಲದಿದ್ದರೇ ಮಹಿಳೆ ಯಾವುದೇ ವೃತ್ತಿಯನ್ನು ಯಶಸ್ವಿಯಾಗಿ ಮಾಡಲು ಸಾಧ್ಯವಿಲ್ಲ. ನಾನು ಈಗಲೂ ಹೊರಗುತ್ತಿಗೆಯಡಿಯೇ ಕಾರ್ಯನಿರ್ವಹಿಸುತ್ತಿದ್ದೇನೆ. ಅದರಲ್ಲೂ ಮಗಳಿಗೆ ಸದ್ಯ 6 ವರ್ಷ. ಮುಂದೇ ಅವಳ ವಿದ್ಯಾಭ್ಯಾಸಕ್ಕೆ ಈಗಿನ ಸಂಬಳ ಸಾಲುವುದಿಲ್ಲ. ಆದ್ದರಿಂದ ಸರ್ಕಾರ ಕೆಲಸವನ್ನು ಖಾಯಂಗೊಳಿಸಿದರೆ ಬದುಕಿಗೆ ಆಧಾರವಾಗಲಿದೆ.

– ರಾಜಮ್ಮ





ರಾಜಮ್ಮ ಅವರಲ್ಲಿ ಆರಂಭದ ದಿನಗಳಲ್ಲಿ ಮಾತ್ರ ಭಯ, ಅಂಜಿಕೆ ಕಂಡು ಬಂತು. ಶವ ಪರೀಕ್ಷೆಗೆ ಕರೆ ನೀಡಿದರೆ ತಡರಾತ್ರಿಯಾದರೂ ಹಾಜರಾಗುತ್ತಾರೆ. ಮರಣೋತ್ತರ ಪರೀಕ್ಷೆಯನ್ನು ಕರಗತ ಮಾಡಿಕೊಂಡಿದ್ದಾರೆ. ನೀರಿನಲ್ಲಿ ಬಿದ್ದು ಸಾವನ್ನಪ್ಪಿರುವವರ ಶವ, ಬೆಂಕಿಯಲ್ಲಿ ಬಿದ್ದವರು, ಗರ್ಭಿಣಿ ಸ್ತ್ರೀಯರ ಮರಣೋತ್ತರ ಪರೀಕ್ಷೆ ವೇಳೆ ಮಗು ತೆಗೆದು, ಅದರ ಪರೀಕ್ಷೆಯನ್ನು ನಡೆಸಿರುವುದು, ಪೊಲೀಸ್ ಪ್ರಕರಣಗಳಲ್ಲಿ ಅನುಮಾನಾಸ್ಪದವಾಗಿ ಸಾವನ್ನಪ್ಪಿದವರ ಶವವನ್ನು ನ್ಯಾಯಾಲಯದ ಅನುಮತಿ ಮೇರೆಗೆ ಸಮಾಧಿಯಿಂದ ಹೊರತೆಗೆದಿರುವ ಶವಗಳನ್ನು ಪರೀಕ್ಷೆ ನಡೆಸಿರುವುದು ಉಂಟು. ಈ ರಾಜಮ್ಮ ವೈದ್ಯರಂತೆ ಕರ್ತವ್ಯದಲ್ಲಿ ಕಟಿಬದ್ಧರಾಗಿದ್ದಾರೆ.

– ಡಾ. ಟಿ.ರವಿಕುಮಾರ್, ತಾಲೂಕು ಆರೋಗ್ಯಾಧಿಕಾರಿ, ಹೆಚ್.ಡಿ.ಕೋಟೆ

ನಗೆ ಹನಿ

ಅತಿಥಿ : ಬಾಗಿಲವರೆಗೂ ಬಂದು ಬೀಳ್ಕೊಡುತ್ತಿದ್ದೀರಿ... ತುಂಬಾ ಸಂತೋಷ
ಮನೆ ಒಡತಿ : ಹಾಗೇನಿಲ್ರೀ... ನಿನ್ನೆ ತಾನೇ ಹೊಸ ಚಪ್ಪಲಿ ತಗೊಂಡೆ.. ಈಗಿನ ಕಾಲದಲ್ಲಿ ಯಾರನ್ನೂ ನಂಬಲಿಕ್ಕೆ ಬರಲ್ಲ ನೋಡಿ....

ನಗೆ ಹನಿ

ಗುಂಡ ಬ್ಯಾಂಕಿಗೆ ಹೋದ. ಆ ಮ್ಯಾನೇಜರ್‌ಗೆ ಯಾವಾಗಲೂ ಜನರಲ್ ನಾಲೆಡ್ಜ್ ಪ್ರಶ್ನೆ ಕೇಳುವ ಚಟ. ಮ್ಯಾನೇಜರ್ ಕೇಳಿದ ಸೈಕ್ಲೋನ್ ಎಂದರೇನು? ಸೈಕಲ್ ಖರೀದಿಸುವುದಕ್ಕೆ ಕೊಡುವ ಸಾಲವೇ ಸೈಕ್ಲೋನ್ ಎಂದ. ಅಂದಿನಿಂದ ಮ್ಯಾನೇಜರ್ ಜನರಲ್ ನಾಲೆಡ್ಜ್ ಪ್ರಶ್ನೆ ಕೇಳಲೇ ಇಲ್ಲ.

ಸೇವೆಗೆ ನಿವೃತ್ತಿ; ಕಲಿತ ಕಲೆಗಲ್ಲ...!

●ರಾಜಕುಮಾರ್ ಭಾವಸಾರ್

ಸಾಕಪ್ಪಾ ಸಾಕು... ಇದುವರೆಗೂ ಸೇವೆ ಮಾಡಿದ್ದೇ ಸಾಕು... ಈಗ ನಿವೃತ್ತನಾಗಿದ್ದೇನೆ. ಇನ್ನಾದರೂ ಮನೆಯಲ್ಲಿ ವಿಶ್ರಾಂತ ಜೀವನ ನಡೆಸೋಣ ಎಂದು ಸರ್ಕಾರಿ ಸೇವೆಯಿಂದ ನಿವೃತ್ತಿ ಹೊಂದಿದ ಬಹುತೇಕರು ಹೇಳುವ ಮಾತು. ಇನ್ನಾದರೂ ಹೆಂಡತಿ ಮಕ್ಕಳೊಂದಿಗೆ ಕಾಲ ಕಳೆಯೋಣ ಎಂದು ನೆಮ್ಮದಿಯ ನಿಟ್ಟುಸಿರು ಬಿಡುವರೂ ಇದ್ದಾರೆ. ಆದರೆ ಈ ನಿವೃತ್ತ ಶಿಕ್ಷಕರು ತಮ್ಮ ನಿವೃತ್ತಿ ಜೀವನವನ್ನು ವಿದ್ಯಾರ್ಥಿಗಳ ಜ್ಞಾನಾರ್ಜನೆಗಾಗಿ ಮೀಸಲಿಟ್ಟಿದ್ದಾರೆ. ತಾವು ಕಲಿತ ವಿಶೇಷ ಓರಿಗಾಮಿ ವಿದ್ಯೆಯನ್ನು ಮಕ್ಕಳೊಂದಿಗೆ ಹಂಚಿಕೊಂಡು ಅವರ ಜ್ಞಾನಾರ್ಜನೆಗೆ ಶ್ರಮಿಸುತ್ತಿದ್ದಾರೆ.

ಎಚ್.ವಿ.ಮುರಳೀಧರ ಮೈಸೂರಿನ ಜೆ.ಪಿ. ನಗರ ನಿವಾಸಿ, ನಿವೃತ್ತ ಶಿಕ್ಷಕ. 30 ವರ್ಷಗಳ ಕಾಲ ಶಿಕ್ಷಕರಾಗಿ ನೂರಾರು ವಿದ್ಯಾರ್ಥಿಗಳಿಗೆ ಬೆಳಕಾದವರು. ವಿದ್ಯಾರ್ಥಿಗಳನ್ನು ಮಕ್ಕಳಂತೆ ಕಂಡು ಅವರಿಗೆ ತಮ್ಮ ವಿದ್ಯೆಯನ್ನು ಪ್ರೀತಿಯಿಂದ ಧಾರೆ ಎರೆದವರು. ಅವರು ನಿವೃತ್ತರಾಗಿ ಎಳೆಂಟು ವರ್ಷಗಳೇ ಕಳೆದರೂ ಇತರರಂತೆ ಮನೆಯಲ್ಲಿ ಸುಮ್ಮನೆ ಕೂರಲಿಲ್ಲ. ತಾವು ಕಲಿತ ಇತರೆ ವಿದ್ಯೆಗಳನ್ನು ಮಕ್ಕಳಿಗೆ ಕಲಿಸುತ್ತಾ ಆದರಲ್ಲಿ ಸಂತೋಷ ಕಾಣುತ್ತಿದ್ದಾರೆ.

ತಾವು ಕಲಿತಿದ್ದ ಓರಿಗಾಮಿ ಕಲೆಯನ್ನು ಮಕ್ಕಳಿಗೂ ಕಲಿಸುತ್ತಿದ್ದಾರೆ. ಆ ಮೂಲಕ ಕಷ್ಟವೆನಿಸುವ ಗಣಿತ ಮತ್ತು ವಿಜ್ಞಾನ ವಿಷಯಗಳನ್ನು ಬಹಳ ಸುಲಭವಾಗಿ ಕಲಿಸುತ್ತಿದ್ದಾರೆ. ಅವರು ನಡೆಸಿಕೊಡುವ ಓರಿಗಾಮಿ ಕಲೆ ಮಕ್ಕಳ ಜ್ಞಾನಾರ್ಜನೆಗೆ ಹೆಚ್ಚು ಉಪಯುಕ್ತವಾಗುತ್ತಿದೆ. ಮಕ್ಕಳು ಸಹ ಅತ್ಯುತ್ಸಾಹದಿಂದ ಕಲಿಕೆಯಲ್ಲಿ ತೊಡಗಿದ್ದಾರೆ. ತಮಗೆ ಅರ್ಥವಾಗದ ಗಣಿತ ಮತ್ತು ವಿಜ್ಞಾನ ಪಾಠಗಳನ್ನು ಓರಿಗಾಮಿ ಕಲೆಯ ಮೂಲಕ ಅರ್ಥ ಮಾಡಿಕೊಳ್ಳುತ್ತಿದ್ದಾರೆ.


ಓರಿಗಾಮಿ ಎಂದರೆ ಪೇಪರ್ ಮಡಚುವ ಕಲೆ. ಇದರ ಮೂಲಕ ನಾನಾ ರೀತಿಯ ಪ್ರಾಣಿ, ಪಕ್ಷಿ, ಮನುಷ್ಯ, ಭೂಮಂಡಲ, ನಕ್ಷತ್ರ, ಆಭರಣ ಹೀಗೆ ನಾನಾ ರೀತಿಯ ಕಲೆಯನ್ನು ತಮ್ಮ ಕೈಚಳಕದ ಮೂಲಕ ಸಿದ್ಧಪಡಿಸುತ್ತಾರೆ. ಬಿಳಿ ಅಥವಾ ಬಣ್ಣದ ಪೇಪರ್‌ಗಳಿಂದ ಸಿದ್ಧವಾಗುವ ಈ ಪ್ರಾಣಿ, ಪಕ್ಷಿಗಳು ಜೀವಂತವಾಗಿರುವಂತೆ ಕಾಣುತ್ತವೆ. ಪೇಪರ್‌ನಿಂದ ತಯಾರಿಸಿದ ಪ್ರಾಣಿ, ಪಕ್ಷಿಗಳಿಗೆ ಜೀವ ತುಂಬುತ್ತಾರೆ.

ಒಂಟೆ, ಕುದುರೆ, ಆನೆ, ಮೀನು, ಗಿಣಿ, ಗಂಡಭೇರುಂಡ, ನವಿಲು, ನಾಯಿ, ಕಪ್ಪೆ, ಚಿಟ್ಟೆ, ಹಾವು ಇನ್ನಿತರೆ ಪ್ರಾಣಿ ಪಕ್ಷಿಗಳು, ಭೂಮಂಡಲ, ನಕ್ಷತ್ರ, ಹೂವು, ಡಬ್ಬ, ಟೋಪಿ, ಕಿರೀಟ, ಬಟ್ಟಲು, ವಿಮಾನ, ರಾಕೆಟ್ ಸೇರಿದಂತೆ ನಾನಾ ರೀತಿಯ ಚಿತ್ರಗಳು ಇವರ ಕೈಚಳಕದಿಂದ ಕ್ಷಣ ಮಾತ್ರದಲ್ಲಿ ಸಿದ್ಧವಾಗುತ್ತವೆ. ಇವರು ಪ್ರತಿ ನಿತ್ಯ ಒಂದೊಂದು ಶಾಲೆಗಳಿಗೆ ಸ್ವಯಂ ತೆರಳಿ, ಶಾಲಾ ಮುಖ್ಯಸ್ಥರೊಂದಿಗೆ ಚರ್ಚಿಸಿ, ಬಳಿಕ ಸಮಯ ಪಡೆದುಕೊಂಡು ಗಣಿತ, ವಿಜ್ಞಾನದ ಮಕ್ಕಳಿಗೆ ಓರಿಗಾಮಿ ಚಿತ್ರಗಳ ಮೂಲಕ ಆಕರ್ಷಿಸುತ್ತಾರೆ. ಗಣಿತವೇ ಅರ್ಥವಾಗುವುದಿಲ್ಲ ಎಂಬ ಮಕ್ಕಳಿಗೆ ಸುಲಭ ಪದ್ಧತಿಯಲ್ಲಿ ಓರಿಗಾಮಿ ಕಲೆಯಲ್ಲಿ ಗಣಿತದ ಲೆಕ್ಕಗಳನ್ನು ತೋರಿಸಿ ಸುಲಭವಾಗಿ ಅವರಿಗೆ ಗಣಿತದ ಬಗ್ಗೆ ಆಸಕ್ತಿ ಮೂಡಿಸುತ್ತಾರೆ. ಪ್ರಾಣಿ, ಪಕ್ಷಿ ಗಳನ್ನು ಮಾಡಿ, ಆ ಮೂಲಕ ವಿಜ್ಞಾನದಲ್ಲಿ ಬರುವ ಪ್ರಾಣಿ, ಪಕ್ಷಿಗಳ ಪಾಠಗಳನ್ನು ಸುಲಭವಾಗಿ ಕಲಿಯುವಂತೆ ಮಾಡುವ ಇವರ ಉತ್ಸಾಹ ನಿಜಕ್ಕೂ ಮೆಚ್ಚುವಂತಿದೆ.

ಕ್ಷಣಾರ್ಧದಲ್ಲಿ ಕಾಗದದ ಪ್ರಾಣಿ, ಪಕ್ಷಿ, ಭೂಮಂಡಲ, ನಕ್ಷತ್ರ ಇನ್ನಿತರೆ ಆಕೃತಿ ಸಿದ್ಧಪಡಿಸುವ ಎಚ್.ವಿ.ಮುರಳೀಧರ



ಎಚ್.ವಿ.ಮುರಳೀಧರ ಅವರು ಆರಂಭದಲ್ಲಿ ತಮ್ಮ ಸ್ನೇಹಿತರಾದ ನಿವೃತ್ತ ಶಿಕ್ಷಕರೊಂದಿಗೆ ನೂರಾರು ಶಾಲೆಗಳಿಗೆ ತೆರಳಿ ಮಕ್ಕಳಿಗೆ ಕಠಿಣವಾದ ಗಣಿತ, ವಿಜ್ಞಾನ, ಇಂಗ್ಲಿಷ್ ಭಾಷೆಗಳಿಗೆ ಸಂಬಂಧಿಸಿದಂತೆ



ಭಾಷಣ, ಆಶುಭಾಷಣ, ಕಂಠಪಾಠ, ಪ್ರಬಂಧ, ರಸಪ್ರಶ್ನೆ ಇನ್ನಿತರೆ ಕಾರ್ಯಕ್ರಮಗಳ ಮೂಲಕ ಮಕ್ಕಳನ್ನು ಪಾಠದತ್ತ ಆಕರ್ಷಿಸುತ್ತಿದ್ದರಂತೆ. ಆಗ ಅವರಿಗೆ ತಾವು ಕಲಿತ ಓರಿಗಾಮಿ ಕಲೆಯ ಮೂಲಕ ಮಕ್ಕಳ ಜ್ಞಾನಾರ್ಜನೆಗೂ ಬಳಸಿಕೊಳ್ಳಬಹುದು ಎಂಬ ಚಿಂತನೆ ಮೂಡಿತಂತೆ. ಆಗಲೇ ಅವರು ಬಣ್ಣ ಬಣ್ಣದ ಕಾಗದಗಳನ್ನು ಮಡಚಿ, ಅವುಗಳಿಗೆ ಪ್ರಾಣಿ, ಪಕ್ಷಿ ಇನ್ನಿತರೆ ಆಕಾರ ನೀಡಿ, ಮಕ್ಕಳನ್ನು ಸೆಳೆಯತೊಡಗಿದರಂತೆ. ಮಕ್ಕಳ ಆಸಕ್ತಿ ಹೆಚ್ಚಾಗುತ್ತಿದ್ದಂತೆ ಅವರಿಗೆ ಓರಿಗಾಮಿ ಕಲೆಯಲ್ಲಿ ಏನೇನು ಸಾಧ್ಯವೋ ಅವೆಲ್ಲವನ್ನೂ ಕ್ಷಣಾರ್ಧದಲ್ಲಿ ಮಾಡತೊಡಗಿದರು.

> “ಶಾಲೆಯಲ್ಲಿ ಮಕ್ಕಳೊಂದಿಗೆ ಪಾಠ ಪ್ರವಚನದಲ್ಲಿ ಕಳೆದಿದ್ದ ನನಗೆ, ನನ್ನ ನಿವೃತ್ತ ಜೀವನವನ್ನು ವ್ಯರ್ಥಗೊಳಿಸದೆ ಮಕ್ಕಳೊಂದಿಗೆ ಕಳೆಯಬೇಕು. ಅವರ ಜ್ಞಾನಾರ್ಜನೆಗೆ ಓರಿಗಾಮಿ ಕಲೆಯಿಂದ ಹೇಗೆ ಸಾಧ್ಯವೋ, ಎಷ್ಟು ಸಾಧ್ಯವೋ ಅಷ್ಟನ್ನು ಆಸಕ್ತಿಯಿಂದ ಕಲಿಸಲು ಶುರು ಮಾಡಿದೆ. ಈಗ ನನಗೆ ಓರಿಗಾಮಿ ಕಲೆಯೇ ಸರ್ವಸ್ವವಾಗಿದೆ. ಮನೆಯಲ್ಲಿ ಕಾಲಹರಣ ಮಾಡದೆ ಕಾಗದದಿಂದ ಒಂದಲ್ಲಾ ಒಂದು ಹೊಸ ರೀತಿಯ ಪ್ರಾಣಿ, ಪಕ್ಷಿ, ಇತ್ಯಾದಿ ಮಾಡುವುದನ್ನು ಅಭ್ಯಾಸ ಮಾಡುತ್ತೇನೆ. ಅದನ್ನು ಮಕ್ಕಳಿಗೆ ಕಲಿಸುತ್ತೇನೆ. ಇದುವರೆಗೆ ನೂರಾರು ಮಕ್ಕಳು ಓರಿಗಾಮಿ ಕಲೆಯನ್ನು ಕಲಿತಿದ್ದಾರೆ. ನನ್ನ ನಿವೃತ್ತಿ ಜೀವನ ಸಾರ್ಥಕ ಎನ್ನಿಸುತ್ತಿದೆ.
>
> – ಎಚ್.ವಿ.ಮುರಳೀಧರ, ಓರಿಗಾಮಿ ಕಲಾವಿದ



ಓರಿಗಾಮಿ ಎಂದರೇನು?

ಕಾಗದವನ್ನು ಮಡಿಸುವ ಕಲೆಯನ್ನು 'ಓರಿಗಾಮಿ' ಎನ್ನಲಾಗುತ್ತದೆ. ಒರಿ (ಮಡಿಸುವ) ಮತ್ತು ಗಮಿ (ಕಾಗದ) ಎಂಬ ಜಪಾನಿ ಭಾಷೆಯ ಪದಗಳಿಂದ ಓರಿಗಾಮಿ ಎಂಬ ಪದ ಬಂದಿದೆ. ಸಾಂಪ್ರದಾಯಿಕ ಓರಿಗಾಮಿಯು ಚೌಕಾಕಾರದ ಕಾಗದದ ಒಂದು ಹಾಳೆಯನ್ನು (ಸಾಮಾನ್ಯವಾಗಿ ಬಣ್ಣದ ಬದಿಯೊಂದಿಗೆ) ಕತ್ತರಿಸುವುದು, ಅಂಟಿಸುವುದು, ಗುರುತು ಮಾಡದೆಯೇ ಮಡಚುವುದನ್ನು ಒಳಗೊಂಡಿರುತ್ತದೆ. ಓರಿಗಾಮಿ ಪ್ರಾಚೀನ ಕಲೆ, ಶತಮಾನಗಳಿಂದ ಕಾಗದದ ಕರಕುಶಲತೆಯನ್ನು ಕಲಾತ್ಮಕವಾಗಿ ಅಳವಡಿಸಿಕೊಳ್ಳುವ ಸೃಜನಶೀಲ ಕಲೆಯಾಗಿ ಮಾರ್ಪಟ್ಟಿತ್ತು. ಇಂದು ವಿಶ್ವಾದ್ಯಂತ ವ್ಯಾಪಕವಾಗಿ ಕಾಗದ ಮಡಚುವ ಕಲೆ ಓರಿಗಾಮಿ ಜನಪ್ರಿಯವಾಗುತ್ತಿದೆ.

ಮೈಸೂರು ಮಿತ್ರ
ಸ್ಥಾಪನೆ: 1980
43ನೇ ವರ್ಷ
ಅತ್ಯುತ್ತಮ ಪತ್ರಿಕೋದ್ಯಮ

ಗೂಡಿನೊಳಗಿನ ಗುಬ್ಬಿಗಳು

ಪ್ರಮೀಳಾ ಹಾಗೂ ಶ್ರೀಧರನದು ಮಧ್ಯಮ ವರ್ಗದ ಪುಟ್ಟ ಸಂಸಾರ. ಗಂಡ ಹೆಂಡತಿ ಇಬ್ಬರೂ ದುಡಿದು ಸಂಸಾರದ ಬಂಡಿಯನ್ನು ಸಾಗಿಸಿ ಒಂದು ಹಂತಕ್ಕೆ ತಂದು ಪುಟ್ಟದೊಂದು 'ಗೂಡ'ನ್ನು ಕಟ್ಟಿಕೊಂಡಿರುವ ಗುಬ್ಬಿಗಳು. 'ಮರಿಗುಬ್ಬಿಯ ಆಸೆ ಈಡೇರಿಸುವುದೊಂದೇ ತಮ್ಮ ಪರಮ ಗುರಿ' ಎಂದು ದುಡಿಯುತ್ತಿರುವ ಜೀವಿಗಳು. ಅದಕ್ಕೆ ತಕ್ಕಂತೆ ಮಗಳು ಸನ್ಮತಿ ಸಹ ಚೆನ್ನಾಗಿ ಓದಿ ಸ್ಪಂದಿಸುತ್ತಿರುವುದು ಇವರಿಗೆ ಇನ್ನಷ್ಟು ದುಡಿಯಲು ಚೈತನ್ಯ. 'ಓದಲೆಂದು ಗೂಡಿನಾಚೆ ಹೊರಹೋದ ಮರಿಗುಬ್ಬಿಯ ದನಿಕೇಳದೆ ಇವರಿಗೆ ಮುಂದಿನ ಕೆಲಸ ಸಾಗದು' ಪ್ರತಿದಿನ ಒಂದೆರಡು ನಿಮಿಷವಾ ದರೂ "ಕಾಲ್" ಮಾಡಿ "ಹಲೋ" ಎಂದು ಇಟ್ಟರೆ ಅಷ್ಟೇ ಸಾಕು! ಇನ್ನು ಮಾರನೆ ದಿನದ ವರೆಗೂ ತಲೆನೋವಿಲ್ಲ. ಆದರೆ ಫೋನ್ ಬರುವುದು ತಡವಾದರೆ ಈ ರೀತಿಯ ಕನವರಿಕೆ ಚಡಪಡಿಕೆ ಎಲ್ಲವೂ! ಪ್ರಮೀಳಾಳಿಗೂ ಶ್ರೀಧರನಷ್ಟೇ ಆತಂಕ. ಆದರೆ ಅದನ್ನು ಅವಳು ತೋರ್ಪಡಿಸಿಕೊಳ್ಳುವ ಹಾಗಿಲ್ಲ. ಒಂದುವೇಳೆ ತಾನೂ ಗಡಿಬಿಡಿ, ಗಾಬರಿ ಮಾಡಿಕೊಂಡರೆ ಶ್ರೀಧರ ಇನ್ನಷ್ಟು ಒದ್ದಾಡುವನೆಂಬ ಭಾವ. ಕಚೇರಿ ಯಲ್ಲಿ ಸಮಯ ಸಿಕ್ಕಾಗ ಮಗಳಿಗೆ ವಾಟ್ಸಪ್ ಮಾಡಿ ವಿಚಾರಿಸಿಕೊಂಡು ವಿಷಯ ತಿಳಿದುಕೊಳ್ಳುವುದು ಅವಳ ಸ್ವಭಾವ.

ಪ್ರಥಮ ಬಹುಮಾನ



ಶ್ರೀಮತಿ ಗಾಯತ್ರಿ ಸುಂದರೇಶ್
'ಸೂರ್ಯ' ಎಲ್–26, 6ನೇ ಬಿ ಮುಖ್ಯರಸ್ತೆ,
ಕೆ ಬ್ಲಾಕ್, ರಾಮಕೃಷ್ಣನಗರ, ಮೈಸೂರು–22
ಮೊ. ಸಂ: 9964790442



ಹೆಚ್.ಜಿ.ಎನ್.ಪ್ರಸಾದ್.

ಪ್ರಮೀಳಾ...ಪ್ರಮೀಳಾ ಬೇಗ ಬಾ ಎಷ್ಟು ಸರ್ತಿ ಹೇಳಿದೀನಿ ನಿನಗೆ... ಮಗು ಫೋನ್ ಮಾಡೋದ್ರೊಳಗೆ ನಿನ್ನ ಸ್ನಾನ, ಪೂಜೆ ಎಲ್ಲಾ ಮುಗಿಸಿಕೊಂಡಿರು ಅಂತ... ಎಷ್ಟು ಹೇಳಿದ್ರು ಕೇಳಲ್ಲ ನೀನು... ಸಮಯ ಆದಾಗ್ಲೆ ಎಂಟು ಗಂಟೆ ಆಗ್ತಾ ಇದೆ ನೀನು ನೋಡಿದ್ರೆ ಇನ್ನೂ ಬಚ್ಚಲ ಮನೇಲೇ ಅಂಟು ಕೊಂಡಿದೀಯ...ಶ್ರೀಧರನ ಹುಸಿಕೋಪದ ಆತಂಕದ ಮಾತುಗಳು ಸಾಗುತ್ತಲೇ ಇತ್ತು. ಇದೆಲ್ಲ ಪ್ರತಿನಿತ್ಯದ ಕಾಯಕ ಎಂಬಂತೆ ಸ್ನಾನದ ಮನೆಯಿಂದ ತಲೆವರೆಸಿಕೊಂಡು ಹೊರಬಂದ ಪ್ರಮೀಳಾ...ಒಳ್ಳೆ ಅದ್ಯಾಕೆ ಹಂಗಾಡ್ತೀರಿ... ಮಗು ಫೋನ್ ಮಾಡಿದ್ರೆ ಮಾತಾಡ್ತಾ ಇದ್ರೆ ಆಯ್ತು...ಅಷ್ಟರಲ್ಲಿ ನಾನು ಬಂದು ಜಾಯ್ನ್ ಆಗ್ತಿದ್ದೆ...ಸುಮ್ನೆ ಒಂದೇ ಸಮ ವಟ ವಟ ಅಂತೀರಲ್ಲ... ನೋಡಿ ಇವತ್ತು ಸೋಮವಾರ. ನೆನ್ನೆ ತಾನೆ ಗಂಟೆ ಗಟ್ಟಲೆ ವಿಡಿಯೋ ಕಾಲ್ ಮಾಡಿ ಮಾತಾಡಿದ್ದಾಗಿದೆ. ನೀವೇನೊ ಪುರುಸೊತ್ತಾಗಿದೀರಾ ಅಂದ್ರೆ.. ಅಲ್ಲಿ ಮಗು ಎಷ್ಟು ಬಿಜಿನೋ ಏನ್ ಕತೆನೋ. ನೀವು ಮೊದ್ಲು ಸ್ನಾನಕ್ಕೆ ಹೋಗಿ. ಕಾಲ್ ಬಂದ್ರೆ ನಾನು ಅಟೆಂಡ್ ಮಾಡ್ತೀನಿ ಎಂದು ಗಂಡ ಶ್ರೀಧರನನ್ನು ಪ್ರಮೀಳಾ ಬಲ ವಂತವಾಗಿ ಸ್ನಾನದ ಮನೆಗೆ ದಬ್ಬಿದಳು.

ಪ್ರಮೀಳಾ ಹಾಗೂ ಶ್ರೀಧರನದು ಮಧ್ಯಮ ವರ್ಗದ ಪುಟ್ಟ ಸಂಸಾರ. ಗಂಡ ಹೆಂಡತಿ ಇಬ್ಬರೂ ದುಡಿದು ಸಂಸಾರದ ಬಂಡಿಯನ್ನು ಸಾಗಿಸಿ ಒಂದು ಹಂತಕ್ಕೆ ತಂದು ಪುಟ್ಟದೊಂದು 'ಗೂಡ'ನ್ನು ಕಟ್ಟಿಕೊಂಡಿರುವ ಗುಬ್ಬಿಗಳು. 'ಮರಿಗುಬ್ಬಿಯ ಆಸೆ ಈಡೇರಿಸುವುದೊಂದೇ ತಮ್ಮ ಪರಮ ಗುರಿ' ಎಂದು ದುಡಿಯುತ್ತಿರುವ ಜೀವಿಗಳು. ಅದಕ್ಕೆ ತಕ್ಕಂತೆ ಮಗಳು ಸನ್ಮತಿ ಸಹ ಚೆನ್ನಾಗಿ ಓದಿ ಸ್ಪಂದಿಸುತ್ತಿರುವುದು ಇವರಿಗೆ ಇನ್ನಷ್ಟು ದುಡಿಯಲು ಚೈತನ್ಯ. 'ಓದಲೆಂದು ಗೂಡಿನಾಚೆ ಹೊರಹೋದ ಮರಿಗುಬ್ಬಿಯ ದನಿಕೇಳದೆ ಇವರಿಗೆ ಮುಂದಿನ ಕೆಲಸ ಸಾಗದು' ಪ್ರತಿದಿನ ಒಂದೆರಡು ನಿಮಿಷವಾದರೂ "ಕಾಲ್" ಮಾಡಿ "ಹಲೋ" ಎಂದು ಇಟ್ಟರೆ ಅಷ್ಟೇ ಸಾಕು! ಇನ್ನು ಮಾರನೆ ದಿನದ ವರೆಗೂ ತಲೆನೋವಿಲ್ಲ. ಆದರೆ ಫೋನ್ ಬರುವುದು ತಡವಾದರೆ ಈ ರೀತಿಯ ಕನವರಿಕೆ ಚಡಪಡಿಕೆ ಎಲ್ಲವೂ! ಪ್ರಮೀಳಾಳಿಗೂ ಶ್ರೀಧರನಷ್ಟೇ ಆತಂಕ. ಆದರೆ ಅದನ್ನು ಅವಳು ತೋರ್ಪಡಿಸಿಕೊಳ್ಳುವ ಹಾಗಿಲ್ಲ. ಒಂದುವೇಳೆ ತಾನೂ ಗಡಿಬಿಡಿ, ಗಾಬರಿ ಮಾಡಿಕೊಂಡರೆ ಶ್ರೀಧರ ಇನ್ನಷ್ಟು ಒದ್ದಾಡುವನೆಂಬ ಭಾವ. ಕಚೇರಿಯಲ್ಲಿ ಸಮಯ ಸಿಕ್ಕಾಗ ಮಗಳಿಗೆ ವಾಟ್ಸಪ್ ಮಾಡಿ ವಿಚಾರಿಸಿಕೊಂಡು ವಿಷಯ ತಿಳಿದುಕೊಳ್ಳುವುದು ಅವಳ ಸ್ವಭಾವ.

ಎಂದಿನಂತೆ ಶ್ರೀಧರ ಹಾಗೂ ಪ್ರಮೀಳಾ ಇಬ್ಬರೂ ತಮ್ಮ ತಮ್ಮ ಕೆಲಸ ಮುಗಿಸಿ ಮನೆ ದಾರಿ ಹಿಡಿಯುವ ಹೊತ್ತಿಗೆ ದಿನಕರನೂ ಸಹ ತನ್ನ ದಿನಚರಿ ಮುಗಿಸಿ ಹೊರಡಲು ಅಣಿಯಾಗಿದ್ದ. ಸಂಜೆಯ ತಿಳಿಗೆಂಪು ನೇಸರನ ಸೊಬಗನ್ನು ಇನ್ನಷ್ಟು ವರ್ಣಮಯಗೊಳಿಸಿತ್ತು. ಶ್ರೀಧರ ತನ್ನ ಸ್ಕೂಟರನ್ನು ನಿಲ್ಲಿಸಿ ಅಲ್ಲಿಯೇ ಇದ್ದ ಕಟ್ಟೆಯ ಮೇಲೆ ಕುಳಿತ. ಪ್ರತಿದಿನವೂ ಒಂದು ರೀತಿಯ ಸಮಾಧಾನದ ನಿಟ್ಟುಸಿರು! ಇನ್ನೇನು ಕೇವಲ ಆರೇ ತಿಂಗಳು ಮಗಳ ವಿದ್ಯಾಭ್ಯಾಸ ಮುಗಿಯುತ್ತದೆ. ಮುಂದೆ ಇನ್ನೂ ಹೆಚ್ಚಿ ಓದುವ ಹಂಬಲ ಅವಳಿಗಿದ್ದರೂ ಓದಿಸುವ ಶಕ್ತಿ ತಮಗಿಲ್ಲ. ಒಂದೆರಡು ವರುಷ ಕೆಲಸಮಾಡಿ ಬೇಕಿದ್ದರೆ ಅವಳ ದುಡಿಮೆಯಲ್ಲೇ ಮುಂದಕ್ಕೆ ಓದಿಕೊಳ್ಳಲಿ ಎಂಬ ನಿರ್ಧಾರ ಮಾಡಿಯಾಗಿದೆ. ಮುಂದಿನ ದಿನಗಳನ್ನು ನೆನೆಸಿಕೊಳ್ಳುತ್ತ ಶ್ರೀಧರ ಒಂದು ಐದುವರುಷದ ಹಿಂದಕ್ಕೆ ಜಾರಿದ.

ಓ...ಬರ್‌ಬೇಕು ಬರ್‌ಬೇಕು ಐನೋರು... ನಮ್ಮಟ್ಟಿಗಂಟ ನಿಮ್ಮ ಪಾದ...ಏನ್ ಬುದ್ಧಿ ಇಲ್ಲಿಗಂಟ ಉಡೀಕಬಂದುಬುಟ್ರಿಲ್ಲ ಎಂದು ಊರಿನ ಮುಖಂಡ ರಾಜೇಗೌಡ ಶ್ರೀಧರನನ್ನು ಬರಮಾಡಿಕೊಂಡರು. ಏನಿಲ್ಲ ಗೌಡ್ರೇ... ಹಾಗೆ ಬಂದೆ...ಊರಕಡೆ ಎಲ್ಲ ಕ್ಷೇಮನ ಹೇಗಿದ್ದೀರ ಎಂದ ಶ್ರೀಧರನ ಮಾತಿಗೆ ಅದೆಲ್ಲ ಇರ್ಲಿ ಬುಡಿ ಐನೋರೆ...ನಮ್ ದ್ಯಾವ್ರ ಸತ್ಯ ನಮಗೊತ್ತಿಲ್ಲವಾ...ಯೋಳಿ ಇಲ್ಲಿಗಂಟ ಬಂದಿರೋ ಇಸ್ಯ ವಸಿ ಯೋಳಿ.. ಬಾಕಿ ಮಾತು ಆಮ್ಯಾಕೆ ಆಡವ ಎಂದ ಗೌಡರ ಕಡ್ಡಿ ತುಂಡಾದ ಮಾತಿಗೆ ಶ್ರೀಧರ ಮರುಮಾತನಾಡದೆ... ಅದು... ಅದು.. ನಮ್ಮ ಜಮೀನನ್ನ ಮಾರೋಣ ಅಂತ ನಿರ್ಧಾರ ಮಾಡಿದ್ದೀನಿ! ಎಂದಾಗ ಕುಳಿತಿದ್ದ ರಾಜೇಗೌಡರು ತಕ್ಷಣ ಸಾವರಿಸಿಕೊಂಡು ಎದ್ದುನಿಂತು ಗಹಗಹಿಸಿ ನಕ್ಕರು. ಕಡೇಕು ಇತ್ತಾಗೆ ಬಂದ್ರಲ್ಲ...ಅಲ್ಲ ವಿಟ್ ಕಿತ ನಾ ಕ್ಯೋಳ್ದೆ... ಕೊಡಾಕಿಲ್ಲ ಕೊಡಾಕಿಲ್ಲ ಅಂದ್ರಿ...ಮನೆಕಟ್ಟಿ ಅದೇನೋ 'ಗೂಡೋ' 'ಸೂಡೋ' ಎಸ್ರು ಮಡಿಗಿದ್ದೀರಲ್ಲ ಅವಾಕ್ಲು ನಾ ಬೇಡ್‌ಕಂಡೆ ಮಾರ್ಬುಡಿ ನಾ ತಕತೀನಿ ಅಂತ... ನನ್ ಗೂಡು ಕಟ್ಟಾಕ ನನ್ ತಾವ ಕಾಸೈತೆ, ಜಮೀನು ಮಾರೋ ಗತಿ ಏನೂ ಬಂದಿಲ್ಲ ಅಂತೆಲ್ಲ ಡೈಲಾಗ್ ವೊಡ್ದ್ರಲ್ಲ... ಈಗ ಕಾಸೆಲ್ಲ ಆಗೋಯ್ತು...ಎಂದು ಕುಹಕವಾಡತೊಡಗಿದ.

ಎಲ್ಲವನ್ನೂ ಸಮಾಧಾನದಿಂದಲೇ ಕೇಳಿಸಿಕೊಂಡ ಶ್ರೀಧರ ಏನ್ ಮಾಡೋದು ಗೌಡ್ರೆ.. ಮಗಳು ಓದ ಬೇಕು ಅಂತ ಆಸೆ ಪಡ್ತಾ ಇದಾಳೆ. ಈಗ ನಂಗೆ ಒಂದು ಇಪ್ಪತ್ತು ಲಕ್ಷ ಹಣ ಬೇಕೇ ಬೇಕು. ನೀವೆ ಹೇಳಿದ ಹಾಗೆ ಗೂಡು ಕಟ್ಟಿರೋ ಗುಬ್ಬಿಗಳು ನಾವು. ನಮ್ಮ ಹತ್ರ ಅಷ್ಟೊಂದು ಹಣ ಎಲ್ಲಿರತ್ತೆ? ಏನೋ ಅಪ್ಪನ ಊರಲ್ಲಿ ಒಂದು ಜಮೀನು ಇರಲಿ ಅಂತ ಹೇಳಿ ಬಹಳ ಹಿಂದೆ ಇದನ್ನ ತಗೊಂಡಿದ್ದೆ. ಅದು ಈಗ ಉಪಯೋಗಕ್ಕೆ ಬರ್ತಾ ಇದೆ. ಮಗಳನ್ನ ಚೆನ್ನಾಗಿ ಓದಿ ಸೋಕ್ಕೆ ನನ್ನ ಹತ್ರ ಇದೊಂದೆ ದಾರಿ ಇರೋದು. ದಯವಿಟ್ಟು ಇದನ್ನ ತಗೊಂಡು ನನಗೆ ಹಣ ಕೊಡಿ ಎಂದ.

ಅಲ್ಲಾ ಐನೋರೇ ಇಂಗ್ ಯೋಳ್ತೀನಿ ಅಂತ ತಪ್ಪು ತಿಳೀಬ್ಯಾಡ್ರಿ...ಎಣ್ ಮಕ್ಳು ಅಂದ್ರೆ ನಾಳೆ ಕಾಲಕ್ಕೆ ಇನ್ನೊಬ್ರು ಮನ್ಯಾಗೆ ಓಗಿ ದೀಪ ಅಚ್ಚೋರು. ಅವ್ರ ಓದ್‌ ಸಲ್ವಾಗಿ ನೀವು ಇರೋ ಬರೋ ಆಸ್ತಿನೆಲ್ಲ ಮಾರ್ಬುಟ್ರೆ ನಾಳೆ ಯೋನ್ ಮಾಡೀರಿ... ಎಣ್ ಮಕ್ಳ ಮ್ಯಾಲೆ ಈಪಾಟಿ ಬಂಡವಾಳ ಆಕದು ಸರಿಯಾ...! ಎಂದಾಗ, ಹಾಗೆಲ್ಲ ಯೋಚನೆ ಮಾಡೋದು ತಪ್ಪು ಗೌಡ್ರೆ "ಇವತ್ತು ಹೆಣ್ಣು ಗಂಡು ಎಲ್ಲಾ ಮಕ್ಕಳು ಒಂದೇ" ಚೆನ್ನಾಗಿ ಓದ್ಸಿ ಅವರನ್ನ ಸಮಾಜಕ್ಕೆ ಒಳ್ಳೆ ಪ್ರಜೆಯಾಗಿ ಮಾಡೋದಷ್ಟೇ ನಮ್ಮ ಕರ್ತವ್ಯ. ಮುಂದೆ ಅವ್ರು ನಮ್ಮನ್ನ ನೋಡ್‌ಕೊಳ್ಳಿ ಅಂತ ಈಗ ಬಂಡವಾಳ ಹಾಕೋ ತರ ಮಾಡೋಕಾಗಲ್ಲ. ಮುಂದೆ ಏನಾಗತ್ತೊ ಅದೆಲ್ಲ ಮುಂದೆ ಇರ್ಲಿ ಈಗ ಅದೆಲ್ಲ ಬೇಡ. ವ್ಯವಹಾರಕ್ಕೆ ಬರೋಣ ಬೇಗ ಹೇಳಿ ಎಷ್ಟಕ್ಕೆ ತಗೋತೀರ ಎಂದು ಶ್ರೀಧರ ಗೌಡರ ಬಾಯಿ ಮುಚ್ಚಿಸಿದ.

ಒಂದಷ್ಟು ಮಾತುಕತೆಗಳ ನಡುವೆ ವ್ಯವಹಾರ ಕುದುರಿ ಶ್ರೀಧರನ ಜಮೀನು ಮಾರಾಟವಾಯಿತು. ಮಗಳ ಓದಿಗಾಗಿ ಯಾವುದೇ ಸಾಲ ಸೋಲ ಮಾಡದೇ ಇಂತಹ ನಿರ್ಧಾರ ತೆಗೆದುಕೊಂಡದ್ದಕ್ಕೆ ಶ್ರೀಧರನಿಗೂ ಹೆಮ್ಮೆ ಎನಿಸಿತು.

ಇಳಿಸಂಜೆಯಲ್ಲಿ ಆಕಾಶದಲ್ಲಿ ಗುಬ್ಬಿಗಳು ಗೂಡುಸೇರಿಕೊಳ್ಳುವ ತವಕದಲ್ಲಿರುವ ದೃಶ್ಯವನ್ನು ಕಣ್ತುಂಬಿಕೊಳ್ಳುತ್ತ ಹಳೆ ನೆನಪೆಲ್ಲ ನೆನೆಸಿಕೊಂಡ ಶ್ರೀಧರ ವಾಸ್ತವಕ್ಕೆ ಬಂದ. ಎಷ್ಟು ಬೇಗ ವರುಷಗಳು ಉರುಳಿ ಹೋದವು. ಸದ್ಯ ಎಲ್ಲಾ ಒಂದು ಹಂತಕ್ಕೆ ಬರುತ್ತಾ ಇದೆ ಎಂದುಕೊಂಡು ಮನೆಯದಾರಿ ಹಿಡಿದ.

ಇತ್ತ ಮನೆಗೆ ಬಂದ ಪ್ರಮೀಳಾ ಕೈಕಾಲು ಮುಖ ತೊಳೆದು ಕಾಫಿ ಬೆರೆಸಿ ಮೂರು ಲೋಟ ಗಳಿಗೆ ಹಾಕಿದಳು. ಪ್ರತಿದಿನವೂ ಅದೇ ಕತೆ. ಮಗಳಿಗೂ ಒಂದು ಲೋಟ ಕಾಫಿ ಹಾಕು ವುದು ನಂತರ ಅಯ್ಯೋ ಅವಳು ದೂರ ಇದ್ದಾಳಲ್ಲ ಎಂದುಕೊಂಡು ಇವರಿಬ್ಬರೇ ಕುಡಿಯುವುದು, ಅವಳ ಕಾಫಿ ಕಪ್ ನೋಡುತ್ತಾ ಕಾಲ ಕಳೆಯುವುದು! ಅಬ್ಬಬ್ಬಾ ಮಗಳು ಎಸ್ಸೆಸ್ಸೆಲ್ಸಿ ಮುಗಿಸಿದಾಗಿನಿಂದ ಏನೆಲ್ಲಾ ಆಗಿಹೋಯಿತು. ಎಂತಹ ಮಾರ್ಪಾಡುಗಳು ಜೀವನದಲ್ಲಿ ಆಗುತ್ತವಲ್ಲ ಎಂದು ಪ್ರಮೀಳಾ ಜೋರಾಗಿ ಉಸಿರು ಬಿಟ್ಟಳು.

ಪ್ರಮೀಳಾಳಿಗೆ ಇನ್ನೂ ಆ ದೃಶ್ಯಗಳೆಲ್ಲವೂ ಕಣ್ಣಿಗೆ ಕಟ್ಟಿದ ಹಾಗಿದೆ. ಕಾಲೇಜಿನಲ್ಲಿ ಉಪನ್ಯಾಸಕನಾಗಿದ್ದರೂ ಶ್ರೀಧರ ಮಗಳ ಓದಿನ ಜವಾಬ್ದಾರಿಯನ್ನು ಪ್ರಮೀಳಾಳಿಗೆ ವಹಿಸಿಬಿಟ್ಟಿದ್ದ. ನೋಡು ಈಗ ನೀನು ಸನ್ಮತಿಯ ಓದನ್ನು ನೋಡಿಕೊ ಅವಳು ಎಸ್ಸೆಸ್ಸೆಲ್ಸಿ ಮುಗಿಸಲಿ ಮುಂದೆ ನಾನೆಲ್ಲ ನೋಡಿಕೊಳ್ಳುತ್ತೇನೆ ಎಂದು ಗಂಡ ಹೆಂಡತಿ ಇಬ್ಬರೂ ಅಲಿಖಿತ ಒಪ್ಪಂದ ಮಾಡಿಕೊಂಡಿದ್ದರು. ಅಂತೆಯೇ ಸನ್ಮತಿ ಎಸ್ಸೆಸ್ಸೆಲ್ಸಿವರೆಗೂ ಅಪ್ಪನಿಗೆ ಬರೀ ತನ್ನ ಪ್ರೋಗ್ರೆಸ್ ಕಾರ್ಡ್ ತೋರಿಸುವುದಷ್ಟೆ ಆಗಿತ್ತು. ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕಗಳಿಸಿ ಶಾಲೆಗೆ ಮೊದಲು ಬಂದ ಮಗಳ ಜಾಣ್ಮೆಗೆ ಶ್ರೀಧರ ಹಿರಿ ಹಿರಿ ಹಿಗ್ಗಿದ! ಅವಳ ಆಸೆ ಪಟ್ಟ ಕಾಲೇಜಿಗೇ ಪಿಯುಸಿಗೂ ಸೇರಿಸಿದ. ವಿಜ್ಞಾನ ವಿಷಯ ಆಯ್ಕೆಮಾಡಿಕೊಂಡು ವೈದ್ಯೆಯಾಗುವ ಬಯಕೆ ನನ್ನದು ಎಂದ ಮಗಳ ಆಸೆ ಕೇಳಿ ಶ್ರೀಧರನ ತಲೆಯ ಮೇಲೆ ಕೊಂಬುಗಳು ರಾರಾಜಿಸತೊಡಗಿದವು. ಅದ್ಯಾವ ಗಳಿಗೆಯಲ್ಲಿ ಮಗಳು ಅಪ್ಪನಿಗೆ ಈ ವಿಷಯ ತಿಳಿಸಿದಳೋ ಮಗಳಿಗಿಂತ ಹೆಚ್ಚಾಗಿ ಶ್ರೀಧರನೇ ಅವಳ ಸಬ್ಜೆಕ್ಟ್‌ಗಳನ್ನು ಓದ ತೊಡಗಿದ. ಕೂತಾಗ ನಿಂತಾಗ ಮಗಳೊಂದಿಗೆ ಓದಿನ ಬಗ್ಗೆಯೇ ಮಾತನಾಡ ತೊಡಗಿದ. ಒಮ್ಮೊಮ್ಮೆ ವಾಕರಿಕೆ ಬರಿಸುವಷ್ಟು ಅವಳ ತಲೆಗೆ ಓದನ್ನು ತುಂಬ ತೊಡಗಿದ. ಹಗಲೂ ರಾತ್ರಿ ಕಷ್ಟಪಟ್ಟು ಓದುತ್ತಿದ್ದ ಮಗಳೊಂದಿಗೆ ತಾನೂ ಕಷ್ಟಪಟ್ಟು ವಿಷಯಗಳನ್ನು ಸಂಗ್ರಹಿಸಿ ಸಂಕ್ಷಿಪ್ತವಾಗಿ ಮಗಳಿಗೆ ವಿವರಿಸತೊಡಗಿದ. ಪ್ರತಿಹಂತದಲ್ಲೂ ಮಗಳ ಓದಿಗೆ ಸಪೋರ್ಟ್ ಮಾಡುತ್ತಾ ಎಂಜಾಯ್ ಮಾಡಿಕೊಂಡು ಪಾಠಹೇಳ ತೊಡಗಿದ. ಸನ್ಮತಿ ಕೂಡ ಅಪ್ಪನ ಉಪನ್ಯಾಸಕ್ಕೆ ಫಿದಾ ಆಗಿದ್ದಳು. ಒತ್ತಡವಾದರೂ ಸಹಿಸಿಕೊಂಡು ಓದುತ್ತಿದ್ದಳು.


ನೋಡ ನೋಡುತ್ತಿದ್ದಂತೆ ಎರಡು ವರುಷಗಳು ಮುಗಿದೇ ಹೋದವು. ವೈದ್ಯಕೀಯ ವಿಷಯಕ್ಕಾಗಿ ಇದ್ದ ಪ್ರತ್ಯೇಕ ಪರೀಕ್ಷೆಗಳನ್ನು ಎದುರಿಸುವ ಸವಾಲು ಎದುರಾಯಿತು. ಅದರಲ್ಲಿಯೂ ಸಹ ಶ್ರೀಧರ ಮಗಳಿಗೆ ನೆರವಾದ. ಹಳೆಯ ವರುಷದ ಎಲ್ಲಾ ಪ್ರಶ್ನೆಪತ್ರಿಕೆಗಳನ್ನು ಸಂಗ್ರಹಿಸಿ ಮಗಳಿಗೆ ಓದಲು ಸಹಾಯ ಮಾಡಿದ. ತಾನೇ ಒಂದಷ್ಟು ಪ್ರಶ್ನೆಗಳನ್ನು ಸೃಷ್ಟಿಸಿ ಮಗಳಿಗೆ ಹೊಸ ರೀತಿಯ ಸವಾಲುಗಳನ್ನು ಕೊಟ್ಟ. ಎಲ್ಲವನ್ನೂ ಶ್ರದ್ಧೆಯಿಂದ ಮಾಡುವ ಮಗಳನ್ನು ಮುದ್ದಾಡಿದ. ಗಂಡ ಹೆಂಡತಿ ಇಬ್ಬರೂ ಮಗಳ ಓದಿಗಾಗಿ ಕಾಯಾ ವಾಚಾ ಮನಸಾ ಶ್ರಮಿಸಿದರು. ಇವರೆಣಿಸಿದ್ದ ಆ ದಿನ ಬಂದೇ ಬಿಟ್ಟಿತು! ವೈದ್ಯಕೀಯ ವಿಷಯದ ಪರೀಕ್ಷೆ "ನೀಟ್" ನಡೆಯುವ ದಿನವದು. ಮಧ್ಯಾಹ್ನ 2 ಗಂಟೆಗೆ ಪರೀಕ್ಷೆ ನಿಗದಿಯಾಗಿದೆ. ಬೆಳಗ್ಗೆ 9 ಗಂಟೆಗೇ ಅಲ್ಲಿರಬೇಕು! ಸಡಗರ, ಸಂಭ್ರಮ, ಆತಂಕ ಎಲ್ಲವುಗಳ ನಡುವೆ ಸನ್ಮತಿ "ನೀಟ್" ಪರೀಕ್ಷೆ ಬರೆದು ಮುಗಿಸಿದಳು.

ಏಳನೇ ಪುಟಕ್ಕೆ

> ಮಗಳ ಉಜ್ವಲ ಭವಿಷ್ಯಕ್ಕಾಗಿ ಆಸ್ತಿ ಮಾರಿ ವಿದೇಶಕ್ಕೆ ಕಳಿಸಿ ಪ್ರತಿದಿನ ಒಂದಲ್ಲ ಒಂದು ರೀತಿಯಲ್ಲಿ ಆತಂಕದಲ್ಲೇ ದಿನ ದೂಡಿಕೊಂಡಿದ್ದ ದಂಪತಿಗಳು ಇಂದು ತಮ್ಮ 'ಗೂಡಿ'ನಲ್ಲಿ ಮರಿಗುಬ್ಬಿಯೊಂದಿಗೆ ಮಮ್ಮಲ ಮರುಗುತ್ತಿದ್ದಾರೆ. ಬೆಚ್ಚಗೆ ಕುಳಿತಿರಬೇಕಾದವರು ಬೆಚ್ಚಿ ಬೆಚ್ಚಿಬೀಳುವ ಹಂತಕ್ಕೆ ಬಂದಿದ್ದಾರೆ. ಸರ್ಕಾರ ಇಂತಹ ಮಕ್ಕಳಿಗಾಗಿ ಏನಾದರೂ ಕ್ರಮ ಕೈಗೊಳ್ಳುತ್ತದೆಯಾ, ಅವರ ಅತಂತ್ರ ಪರಿಸ್ಥಿತಿಗೊಂದು ನೆಲೆ ಕೊಡುತ್ತದೆಯಾ, ಪರಿಸ್ಥಿತಿಯ ಅಸಹಾಯಕತೆಗೆ ಬೆಂದು ಬಸವಳಿದಿರುವವರಿಗೆ ಏನಾದರೂ ದಾರಿಮಾಡಿಕೊಡುತ್ತದೆಯಾ ಎಂದು 'ಗೂಡಿನ ಸೂರು' ನೋಡುತ್ತಾ ದಿನ ಎಣಿಸುತ್ತಿದ್ದಾರೆ. ಎಲ್ಲವೂ ಸರಿಹೋಗುವುದೋ ಇಲ್ಲ ಸೋರಿ ಹೋಗುವುದೋ ಆ ದೇವನೇ ಬಲ್ಲ.

ತೀರ್ಪುಗಾರರ ನುಡಿ

'ಮೈಸೂರು ಮಿತ್ರ' ದಿನಪತ್ರಿಕೆ ಎಂದರೆ ಒಂದು ರೀತಿ ಸಾಂಸ್ಕೃತಿಕ ನಗರಿ ಮೈಸೂರಿನ ರಾಯಭಾರಿ ಇದ್ದಂತೆ. ಇದು ನಾಡಿನ ಪತ್ರಿಕಾ ಜಗತ್ತಿನ ಜನಪ್ರಿಯ ಪತ್ರಿಕೆಗಳಲ್ಲಿ ಅದರಲ್ಲೂ ವಿಶೇಷವಾಗಿ ಮೈಸೂರು ಭಾಗದ ಪ್ರತಿ ಮನೆ – ಮನಗಳಲ್ಲೂ ಪ್ರತಿದಿನವೂ ಕಾಣಸಿಗುವ ಆಪ್ತಮಿತ್ರ ಅಷ್ಟೇ ಅಲ್ಲ, ಆಬಾಲವೃದ್ಧರಾದಿಯಾಗಿ ಪ್ರತಿಯೊಬ್ಬರನ್ನೂ ಅಯಸ್ಕಾಂತದಂತೆ ತನ್ನತ್ತ ಆಕರ್ಷಿಸಿಕೊಂಡಿರುವ ವರ್ಣರಂಜಿತ ಗೆಳೆಯ. ಇದರಷ್ಟು ಬೃಹತ್ ಪ್ರಸಾರ ಸಂಖ್ಯೆ ಮತ್ತು ಸಸ್ತಾನೆರಡರಲ್ಲೂ ನಾಡಿನಲ್ಲಿ ಚರಿತ್ರೆ ನಿರ್ಮಿಸಿರುವ 'ಮೈಸೂರು ಮಿತ್ರ' ಸಮಕ್ಕೆ ಮತ್ತೊಂದು ಸ್ಥಳೀಯ ಪತ್ರಿಕೆ ಬಹುಶಃ ರಾಜ್ಯದಲ್ಲೇ, ಅಷ್ಟೇಕೆ ದೇಶದಲ್ಲೇ ಇರಲಾರದು! ಇಂತಹ 'ಮೈಸೂರು ಮಿತ್ರ'ನಿಗೆ ಈಗ 43ರ ಹರೆಯದ ಸಂಭ್ರಮ. ಇದರ ದ್ಯೋತಕವಾಗಿ ಪ್ರತಿವರ್ಷದಂತೆ ಈ ವರ್ಷವೂ 43 ನೇ ವಾರ್ಷಿಕ ಕಥಾ ಸ್ಪರ್ಧೆಯನ್ನು ಏರ್ಪಡಿಸಿದ್ದು, ಇದಕ್ಕಾಗಿ ನೂರಾರು ಕಥೆಗಳು ಬಂದಿದ್ದು ಸ್ಪರ್ಧೆಯ ತೂಕವನ್ನು ಹೆಚ್ಚಿಸಿವೆ.



ಬನ್ನೂರು ಕೆ. ರಾಜು

ಕಥೆಗಳನ್ನು ಬರೆಯುವವರೇ ವಿರಳವಾಗುತ್ತಿರುವ ಇಂದಿನ ಕಾಲಘಟ್ಟದಲ್ಲಿ ಇಷ್ಟು ದೊಡ್ಡ ಸಂಖ್ಯೆಯ ಕಥೆಗಳು ಸ್ಪರ್ಧೆಗೆ ಬಂದಿರುವುದು 'ಮೈಸೂರು ಮಿತ್ರ'ನ ಹೆಗ್ಗಳಿಕೆಯಾಗಿದೆ. ಅದೂ ಕೂಡ ಉಕ್ರೇನ್ – ರಷ್ಯಾ ದೇಶಗಳ ಯುದ್ಧ, ಹಿಜಾಬ್ , ಹಲಾಲ್ ಕಟ್, ಜಟ್ಕಾ ಕಟ್ ನಂತಹ ಪ್ರಚಲಿತ ವಿಷಯಗಳ ಬಗ್ಗೆ ಹಾಗೂ ಜೀತಪದ್ಧತಿ, ನಿರುದ್ಯೋಗ, ಮೂಢನಂಬಿಕೆ, ಜಾತಿ ದ್ವೇಷ, ಮತಮಾತ್ಸರ್ಯ, ಧರ್ಮ ಸಂಘರ್ಷ ಮುಂತಾದ ಸಾಮಾಜಿಕ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುವ ಬಹಳಷ್ಟು ಒಳ್ಳೆಯ ಕಥೆಗಳು ಸ್ಪರ್ಧೆಗೆ ಬಂದಿದ್ದು, ಕತೆಗಾರರ ಪ್ರಜ್ಞಾವಂತ ಪ್ರತಿಭೆಗೆ ಸಾಕ್ಷಿಯಾಗಿವೆ. ಇವುಗಳನ್ನೆಲ್ಲಾ ಓದಿ ಕೂಲಂಕುಷವಾಗಿ ಪರಿಶೀಲಿಸಿ ಕಥಾವಸ್ತು, ಭಾಷೆ, ಶೈಲಿ, ನಿರೂಪಣೆಗಳೆಲ್ಲದರ ಮೇಲ್ಮೆಯ ಮೇಲೆ ಐದು ಕಥೆಗಳನ್ನು ಬಹುಮಾನಕ್ಕೆ ಆಯ್ಕೆ ಮಾಡಲಾಗಿದೆ.

ಉಕ್ರೇನ್‌ನಂತಹ ವಿದೇಶದಲ್ಲಿ ಮೆಡಿಕಲ್ ಮುಗಿಸಿ ಇನ್ನೇನು ಮಗಳು ತವರಿಗೆ ಬರಲಿದ್ದಾಳೆ ಎಂಬ ಖುಷಿಯಲ್ಲಿ ತಂದೆ–ತಾಯಿಗಳಷ್ಟೇ ಇದ್ದ ಭಾರತೀಯ ಪುಟ್ಟ ಕುಟುಂಬಕ್ಕೆ ಉಕ್ರೇನ್ ಹಾಗೂ ರಷ್ಯಾ ಯುದ್ಧದಲ್ಲಿ ಮಗಳು ಸಿಲುಕಿಕೊಂಡ ಆತಂಕದ ಕ್ಷಣಗಳೊಡನೆ ಕಟ್ಟಿಕೊಳ್ಳುವ 'ಗೂಡಿನೊಳಗಿನ ಗುಬ್ಬಿಗಳು' ಕಥೆಗೆ ಪ್ರಥಮ ಬಹುಮಾನವನ್ನೂ, ಹಾಗೂ ದೇಶಾದ್ಯಂತ ಭಾರೀ ಸದ್ದು ಮಾಡುತ್ತಿರುವ 'ಹಿಜಾಬ್' ನ ಸುತ್ತ ಸುತ್ತಿಕೊಂಡು ಗ್ರಾಮೀಣ ಹೃದಯದ ದನಿಯಲ್ಲಿ ಸಹಬಾಳ್ವೆಯ ಸಂದೇಶ ಸಾರುವ 'ಗೌಡರ ತೀರ್ಪು' ಕಥೆಗೆ ದ್ವಿತೀಯ ಬಹುಮಾನವನ್ನೂ ಮತ್ತು ಭೂತಾಯಿಯ ಒಡಲನ್ನು ಬಗೆದು ನುಂಗುವ ಕಲ್ಲು ಕ್ವಾರೆಗಳ, ಕ್ರಷರ್‌ಗಳ, ಗಣಿಗಾರಿಕೆಗಳ ಮತ್ತು ಇವುಗಳನ್ನೇ ಬದುಕು ಮಾಡಿಕೊಂಡಿರುವ ಮಂದಿಯ ಮೇಲೆ ಕ್ಷ – ಕಿರಣ ಬೀರುವ ಪರಿಸರ ಕಾಳಜಿಯ 'ಶಬ್ದ ನಿಶ್ಶಬ್ದವಾದೊಡೆ' ಕಥೆಗೆ ತೃತೀಯ ಬಹುಮಾನವನ್ನು ನೀಡಲಾಗಿದೆ. ಹಾಗೂ ಉದಾರ ಶೀಲ ವ್ಯಕ್ತಿತ್ವ ಮತ್ತು ವಿಶಾಲ ಪ್ರೀತಿ ಇದ್ದಲ್ಲಿ ಎಲ್ಲವೂ ಇರುತ್ತದೆ, ಎಲ್ಲರೂ ಇರುತ್ತಾರೆಂಬ ಒಳಿತಿನ ಹೂರಣವನ್ನು ತುಂಬಿ ಕಟ್ಟಿಕೊಟ್ಟಿರುವ 'ಮಗಳು ಇಲ್ಲೇ ಇದ್ದಾಳೆ' ಕಥೆ ಮತ್ತು ಭೂಮಿತೂಕದ ಹೆಣ್ಣಿನ ಸಹನಾಶೀಲ ಗುಣದ ಹಿನ್ನೆಲೆಯಲ್ಲಿ ಹೆಣೆಯಲ್ಪಟ್ಟಿರುವ 'ಸ್ತ್ರೀ ಎಂದರೆ ಅಷ್ಟೇ ಸಾಕೆ' ಕಥೆಗಳೆರಡಕ್ಕೂ ಪ್ರೋತ್ಸಾಹಕ ಬಹುಮಾನ ಕೊಡಲಾಗಿದೆ. ಬಹುಮಾನಿತರೆಲ್ಲರಿಗೂ 'ಮೈಸೂರು ಮಿತ್ರ'ನ ಅಭಿನಂದನೆಗಳು.

ದ್ವಿತೀಯ ಬಹುಮಾನ

ಗೌಡರ ತೀರ್ಪು



ಎನ್.ಆರ್.ಆರಾಧ್ಯ, ನೆಬೆ
ಬಿಳಿಕೆರೆ,
ಹುಣಸೂರು ತಾಲೂಕು,
ಮೈಸೂರು ಜಿಲ್ಲೆ 571 103
ಮೊ.ದೂ.ಸಂ: 73489 10224

ತೃತೀಯ ಬಹುಮಾನ

ಶಬ್ದ ನಿಶ್ಶಬ್ದವಾದೊಡೆ...



ಆರ್.ಪವನ್‌ಕುಮಾರ್
ನಂ. 1–165, ಪಾರ್ಕ್ ಹತ್ತಿರ, 2ನೇ ಕ್ರಾಸ್,
ಜೈನ್ ಟೆಂಪಲ್ ಹಿಂಭಾಗ, ರಂಗನಾಥನಗರ,
ಶ್ರೀರಂಗಪಟ್ಟಣ–571438, ಮಂಡ್ಯ
ಮೊ.: 9945842882

ಸಮಾಧಾನಕರ ಬಹುಮಾನ

ಮಗಳು ಇಲ್ಲೇ ಇದ್ದಾಳೆ



ಶ್ರೀಮತಿ ಚಂಚಲ ವೇಣುಗೋಪಾಲ್
ನಂ.179, 4ನೇ ಕ್ರಾಸ್
ಕಂದಾಯ ನಗರ ಮೊದಲನೇ ಹಂತ
ಶ್ರೀರಾಂಪುರ 2ನೇ ಹಂತ, ಮೈಸೂರು
ಮೊ.ಸಂ: 8904117116

ಸಮಾಧಾನಕರ ಬಹುಮಾನ

ಸ್ತ್ರೀ ಎಂದರೆ ಅಷ್ಟೆ ಸಾಕೆ



ಆರ್. ಸಿ. ಅನುರಾಧ
ನಂ. 285, ಶ್ರೀ ರಾಮ ಕೃಪ,
4ನೇ ಮೇನ್, 7ನೇ ಕ್ರಾಸ್,
ವಿಜಯನಗರ 1ನೇ ಹಂತ, ಮೈಸೂರು.
ಮೊ.ಸಂ: 9242157590

ಆರನೇ ಪುಟದಿಂದ

ಗೂಡಿನೊಳಗಿನ ಗುಬ್ಬಿಗಳು

ಉಸ್ಸಪ್ಪ ಎಂದು ಈಗ ಕುಳಿತುಕೊಳ್ಳು ವಂತಿಲ್ಲ, ಎಷ್ಟು ಅಂಕ ಬರುತ್ತದೆ ಯಾವ ಕಾಲೇಜು ಸಿಗುತ್ತದೆ, ಹಣ ಎಷ್ಟು ಹೊಂದಿಸಿಕೊಳ್ಳಬೇಕು ಎಂಬೆಲ್ಲ ಸವಾಲುಗಳ ಪಟ್ಟಿಯೇ ಎದುರಾಯಿತು. ಶ್ರೀಧರ ಎಲ್ಲವನ್ನೂ ಸಾವಧಾನವಾಗಿ ಎದುರಿಸಲು ಸಿದ್ಧನಾದ.

ಸನ್ಮತಿ ಬೆಳಗ್ಗಿನಿಂದ ಕಂಪ್ಯೂಟರ್ ಆನ್ ಮಾಡಿಕೊಂಡು ವೆಬ್‌ಸೈಟ್ ನೋಡುತ್ತಲೇ ಇದ್ದಾಳೆ. ಯಾವಕ್ಷಣದಲ್ಲಾದರೂ ಫಲಿತಾಂಶ ಬರಬಹುದು ಎಂಬ ಮಾಹಿತಿ ಸಿಕ್ಕಿದೆ. ಎಷ್ಟೆಲ್ಲಾ ಸವಾಲುಗಳ ಮಧ್ಯೆ ತಾನು ಈ ಹಂತಕ್ಕೆ ಬಂದೆ ಎಂಬ ಹೆಮ್ಮೆ ಅವಳಿಗಿದೆ. ಶಾಲೆಯಲ್ಲಿ ಹೆಚ್ಚು ಅಂಕಪಡೆದು ಮೊದಲು ಬಂದರೂ ಇವಳಿಗೆ ಸ್ಕಾಲರ್ ಶಿಪ್ ಕೊಡದೆ ಕೆಲವರಿಗಷ್ಟೇ ಕೊಟ್ಟಾಗ ಇವಳಲ್ಲಾಗಿದ್ದ ಗೊಂದಲವನ್ನು ಪ್ರಮೀಳಾ ಸೂಕ್ಷ್ಮವಾಗಿ ಗಮನಿಸಿ ಬಗೆಹರಿಸಿದ್ದಳು. ಚಿಕ್ಕಮಕ್ಕಳಿಗೆ ಜಾತಿ ಮತಗಳ ಬಗ್ಗೆ ಹೇಗೆ ಹೇಳುವುದು! ನೀನು ಉನ್ನತವರ್ಗದವಳು ಹಾಗಾಗಿ ನಿನಗೆ ಸ್ಕಾಲರ್‌ಶಿಪ್ ಕೊಡುವು ದಿಲ್ಲ, ಅವರು ಕೆಳವರ್ಗದವರು ಕೊಟ್ಟಿದ್ದಾರೆ ಎಂದು ಹೇಳಿದರೆ ಮಗುವಿನ ಮೇಲೆ ಎಂತಹ ಪರಿಣಾಮ ಬೀರುತ್ತದೆ ಅಲ್ಲವೇ? ಮುನ್ನೂರು ಅಂಕ ಪಡೆದ ಮಹಿಮಾ 'ನೋಡೆ ಸನ್ಮತಿ, ನನಗೆ ಪ್ರೈಜ್ ಕೊಟ್ಟಿದ್ದಾರೆ' ಅಂತ ಹೇಳಿದಾಗ ಐನೂರಕ್ಕೆ ಐನೂರು ಅಂಕ ಪಡೆದ ಸನ್ಮತಿ ಮುಖ ಸಪ್ಪಗೆ ಮಾಡಿಕೊಂಡು ಅಮ್ಮನ ಮುಖ ನೋಡಿದ್ದಳು. ಪ್ರಮೀಳಾ ನಗುತ್ತಾ ಎಲ್ಲವನ್ನೂ ತಾಳ್ಮೆಯಿಂದಲೇ ವಿವರಿಸಿ ಮಗಳು ಓದಿನ ಕಡೆ ಹೆಚ್ಚು ಗಮನ ಕೊಡುವಂತೆ ಮಾಡಿದ್ದಳು. ಮುಂದೆ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ವಿವಿಧ ಸಂಘ ಸಂಸ್ಥೆಗಳು ಹೆಚ್ಚು ಅಂಕಪಡೆದದ್ದಕ್ಕೆ ಗೌರವಧನ ನೀಡಿ ಸನ್ಮಾನ ಮಾಡಿದಾಗ ಒಂದು ರೀತಿಯ ಹೆಮ್ಮೆ ಎನಿಸಿತ್ತು. ಸರ್ಕಾರದ ಸವಲತ್ತುಗಳು, ಸಂವಿಧಾನದ ರೀತಿನೀತಿಗಳು, ಅದರ ಉಪಯೋಗಗಳ ಬಗ್ಗೆ ಮಾಹಿತಿ ತಿಳಿದ ಮೇಲೆ ಅದರ ಬಗ್ಗೆ ತಲೆಕೆಡಿಸಿಕೊಳ್ಳದೆ ಹೆಚ್ಚು ಅಂಕಗಳಿಸುವ ಕಡೆ ಗಮನಹರಿಸ ತೊಡಗಿದಳು. ಈಗ ಮುಂದಿರುವ ಸವಾಲು 'ನೀಟ್' ಎಂಬ ಅಗ್ನಿಪರೀಕ್ಷೆ!

ಅಮ್ಮಾ...ವೆಬ್‌ಸೈಟ್ ಓಪನ್ ಆಯ್ತು... ಎಂದು ಮಗಳು ಕಿಟಾರನೇ ಅರಚಿದಾಗ ಶ್ರೀಧರ, ಪ್ರಮೀಳಾ ಇಬ್ಬರೂ ಕೆಲಸ ಬಿಟ್ಟು ಕಂಪ್ಯೂಟರ್ ಟೇಬಲ್ ಬಳಿ ಓಡಿ ಬಂದರು. ಇಬ್ಬರ ಎದೆಯ ಬಡಿತ ಜೋರಾಗಿದೆ...ಸನ್ಮತಿಗೆ ಕೈಯೆಲ್ಲ ನಡುಗುತ್ತಿದೆ... ಆತಂಕದ ನಡುವೆಯೇ ಸನ್ಮತಿಯ ರಿಸಲ್ಟ್ ಶೀಟ್ ಓಪನ್ ಆಯಿತು. ಗಳಿಸಿದ ಅಂಕಗಳನ್ನು ನೋಡಿದ ಕೂಡಲೇ ಮೂವರ ಮುಖವೂ ಬಾಡಿಹೋಯಿತು! ಅಷ್ಟು ವರುಷಗಳಿಂದ ಕಟ್ಟಿಕೊಂಡಿದ್ದ ಆಶಾಗೋಪುರ ನುಚ್ಚುನೂರಾಯಿತು. ಜನರಲ್ ಮೆರಿಟ್ ವಿದ್ಯಾರ್ಥಿಗಳು ಎಷ್ಟು ಗಳಿಸಬೇಕಿತ್ತೋ ಅಷ್ಟು ಅಂಕ ಇವಳಿಗೆ ಬಂದಿಲ್ಲ. ಹೆಚ್ಚು ಅಂಕ ಬಂದಿದ್ದರೂ ಅದು ಸಾಕಾಗುತ್ತಿಲ್ಲ. ಶ್ರೀಧರ ತಲೆಯ ಮೇಲೆ ಕೈಹೊತ್ತು ಕುಳಿತು ಬಿಟ್ಟ. ಅವನ ಮುಂದೆ ನೆಂಟರಿಷ್ಟರು, ಬಂಧು ಬಳಗದವರು ಗಹಗಹಿಸಿ ನಗುತ್ತಿದ್ದಾರೆ ಎನ್ನುವ ಭಾವ ಮೂಡಿತು. ಮಗಳಿಗೆ ಎಂಬಿಬಿಎಸ್ ಸೀಟ್ ಸಿಗುತ್ತದೆ. ಅವಳು ಡಾಕ್ಟರ್ ಆಗುತ್ತಾಳೆ ಎಂದು ಎಲ್ಲರ ಮುಂದೆ ತಾನು ಜಂಭ ಕೊಚ್ಚಿಕೊಂಡೆನೇ ಎನಿಸಿತು. ಪ್ರಮೀಳಾಳಿ ಗಂತೂ ಶ್ರೀಧರ, ಸನ್ಮತಿ ಇಬ್ಬರನ್ನೂ ಸುಧಾರಿಸುವುದು ಕಷ್ಟದ ಕೆಲಸವಾಯಿತು. 'ಸಾರಿ ಪಪ್ಪ...ಸಾರಿ ಪಪ್ಪ ನಂಗೆ ಜಾಸ್ತಿ ಸ್ಕೋರ್ ಮಾಡಕ್ಕೆ ಆಗಿಲ್ಲ...ಐ ಆ್ಯಮ್ ಸಾರಿ..' ಎಂದು ಬಿಕ್ಕಿ ಬಿಕ್ಕಿ ಅತ್ತ ಮಗಳನ್ನು ಹೇಗೆ ಸಮಾಧಾನ ಮಾಡುವುದೋ ತಿಳಿಯದಾಯಿತು. ಒಂದಷ್ಟು ದಿನ 'ಗೂಡಿನಲ್ಲಿ ಮೌನದ ವಾತಾವರಣ' ಪ್ರತಿದಿನ ಪಟಪಟ ಎಂದು ಮಾತನಾಡುತ್ತಾ ಅತ್ತಿಂದಿತ್ತ ಓಡಾಡುತ್ತಾ ಇದ್ದ ಹಕ್ಕಿಗಳು ಇಂದು ರೆಕ್ಕೆ ಮುರಿದುಕೊಂಡವರಂತೆ ಕುಳಿತಿದ್ದಾರೆ.

ಪ್ರಮೀಳಾ ಹೊರಗೆ ಹೋದರೆ 'ಏನ್ರೀ... ಪ್ರಮೀಳಾ, ನಿಮ್ಮ ಮಗಳ ರಿಸಲ್ಟ್ ಏನಾಯ್ತು? ಎಂಬಿಬಿಎಸ್ ಸೀಟ್ ಸಿಗ್ತಾ... ಯಾವ ಕಾಲೇಜ್' ಎಂದು ಸಹಜವಾಗೇ ಅಕ್ಕಪಕ್ಕದವರು ಕೇಳಿದರೂ ಅವರು ನಮ್ಮನ್ನು ಕಂಡು ಕೀಟಲೆ ಮಾಡುತ್ತಿದ್ದಾರೇನೋ ಎನಿಸುತ್ತಿತ್ತು. ಮನೆಗೆ ಬಂದ ನೆಂಟರಿಷ್ಟರು ಏನಮ್ಮಾ ಎಲ್ಲಿ ಸೀಟ್ ಸಿಗ್ತು? ಸ್ಟೇಟ್ ಎಲ್ಲಿ? ಓ...ಎಂಬಿಬಿಎಸ್ ಸಿಗಲಿಲ್ವಾ... ಡೆಂಟಲ್ ಟ್ರೈ ಮಾಡು...ಇಲ್ಲಾ ಅಂದ್ರೆ ಆಯುರ್ವೇದಕ್ಕಾದರೂ ಹೋಗು ಒಂದು ಕೆಲಸ ಮಾಡು ಡಿಫಾರ್ಮ ಮಾಡಿಬಿಡು ಇಲ್ಲಾ ಅಂದ್ರೆ ನರ್ಸಿಂಗ್ ಆದ್ರೂ ಸೇರಿಕೊ ಒಳ್ಳೆ ಡಿಮ್ಯಾಂಡ್ ಇದೆ ಎಂದು ಹೇಳುತ್ತಿದ್ದರೆ ಶ್ರೀಧರ ಅವರ ಕುತ್ತಿಗೆ ಪಟ್ಟಿಯನ್ನು ಹಿಡಿದು ದರದರನೆ ಹೊರಗೆ ದಬ್ಬಿಬಿಡಲೆ ಎಂಬಂತೆ ಬುಸುಗುಡುತ್ತಿದ್ದಾನೆ. ಒಂದಷ್ಟು ದಿನಗಳು ಇವರ ಮೌನ ಹೀಗೆ ಮುಂದುವರೆಯಿತು. ಸನ್ಮತಿಯ ಗೆಳತಿಯರಾದ ಮಹಿಮಾ, ಸ್ಮಿತಾ ಇವಳಿಗಿಂತ ಕಡಿಮೆ ಅಂಕ ತೆಗೆದಿದ್ದರೂ ಕ್ಯಾಟಗರಿ ಆಧಾರದ ಮೇಲೆ ಆರಾಮವಾಗಿ ಸೀಟ್ ಸಿಕ್ಕಿದೆ. ಬಾಲ್ಯದಿಂದಲೂ ಈ 'ಅಂಕ'ದ ಪರದೆಯ ವಿಚಾರವಾಗಿ ಗೊಂದಲದಲ್ಲಿಯೇ ಇದ್ದ ಸನ್ಮತಿ ಈಗ ಮತ್ತಷ್ಟೂ ವಿಚಲಿತಳಾದಳು. ಮಗಳ ಅವಸ್ಥೆ ಕಂಡು ಶ್ರೀಧರ ಕುಗ್ಗಿ ಹೋದ. ಅವಳಿಗೆ ಏನಾದರೂ ದಾರಿ ಮಾಡಲೇ ಬೇಕೆಂದು ನಿರ್ಧರಿಸಿದ. ಮೆಡಿಕಲ್ ಕೌನ್ಸಲಿಂಗ್ ಸೆಂಟರಗೆ ಹೋಗಿ ಹೆಚ್ಚಿನ ಮಾಹಿತಿ ತಿಳಿದುಕೊಂಡು ಬರಲು ನಿಶ್ಚಯಿಸಿದ.

ಮಂಕಾಗಿ ಕುಳಿತಿದ್ದ ಮಗಳನ್ನು ಕಂಡ ಶ್ರೀಧರ ಸನ್ಮತಿ... ಪುಟ್ಟಾ...ನೀನು ಮೆಡಿಕಲ್ ಓದಕ್ಕೆ ಎಲ್ಲಿಗೆ ಬೇಕಾದರೂ ಹೋಗ್ತೀಯಾ ಪುಟ್ಟ ಎಂದು ಆತ್ಮೀಯವಾಗಿ ವಿಚಾರಿಸಿದ. ಹೂ ನಪ್ಪ ಈ ಪ್ರಪಂಚದ ಯಾವ ಮೂಲೇಲಾದ್ರು ಪರವಾಗಿಲ್ಲ ನಾ ಹೋಗ್ತೀನಿ, ಓದ್ತೀನಿ...ನಾನು ಡಾಕ್ಟರ್ ಆಗ್ತೀನಿ ಎಂದಾಗ ಮಗಳನ್ನು ಬಿಗಿಯಾಗಿ ಅಪ್ಪಿ ಕೊಂಡು ಗೊಳೋ ಎಂದು ಅಳತೊಡಗಿದ. ಖಂಡಿತ ನೀನು ಡಾಕ್ಟರ್ ಆಗ್ತೀಯ ಪುಟ್ಟಾ... ನಾನಿದೀನಲ್ಲ... ನೋಡು ಈಗ್ಲೆ ನಾನು ನಮ್ಮ ಹಳ್ಳಿಗೆ ಹೋಗಿ ಅಲ್ಲಿರೋ ಜಮೀನು ಮಾರಿ ಹಣತಂದು ನಿನ್ನ ಓದಿಗೆ ಉಪಯೋಗಿಸ್ತೀನಿ ಏನೂ ಯೋಚನೆ ಮಾಡಬೇಡ ಮಗಳೆ ಎಂದು ಧೈರ್ಯ ಹೇಳಿದ.

ಅಲ್ರೀ ಅವಳು ಫಾರಿನ್‌ಗೆ ಹೋಗಿಬಿಟ್ರೆ ಏನ್ ಮಾಡೋದು. ನಾವು ಹೇಗ್ರೀ ಇಬ್ರೇ ಇರೋದು. ಈ ಮನೇ ಕಟ್ಟೋವಾಗ 'ಗೂಡು' ಅಂತ ಹೆಸರು ಇಡು ಅಂತ ಇವಳೆ ತಾನೆ ಹೇಳಿದ್ದು.

> ಮಂಕಾಗಿ ಕುಳಿತಿದ್ದ ಮಗಳನ್ನು ಕಂಡ ಶ್ರೀಧರ ಸನ್ಮತಿ...ಪುಟ್ಟಾ.. ನೀನು ಮೆಡಿಕಲ್ ಓದಕ್ಕೆ ಎಲ್ಲಿಗೆ ಬೇಕಾದರೂ ಹೋಗ್ತೀಯಾ ಪುಟ್ಟ ಎಂದು ಆತ್ಮೀಯವಾಗಿ ವಿಚಾರಿಸಿದ. ಹೂ ನಪ್ಪ ಈ ಪ್ರಪಂಚದ ಯಾವ ಮೂಲೇಲಾದ್ರು ಪರವಾಗಿಲ್ಲ ನಾ ಹೋಗ್ತೀನಿ, ಓದ್ತೀನಿ...ನಾನು ಡಾಕ್ಟರ್ ಆಗ್ತೀನಿ ಎಂದಾಗ ಮಗಳನ್ನು ಬಿಗಿಯಾಗಿ ಅಪ್ಪಿ ಕೊಂಡು ಗೊಳೋ ಎಂದು ಅಳತೊಡಗಿದ. ಖಂಡಿತ ನೀನು ಡಾಕ್ಟರ್ ಆಗ್ತೀಯ ಪುಟ್ಟಾ... ನಾನಿದೀನಲ್ಲ...ನೋಡು ಈಗ್ಲೆ ನಾನು ನಮ್ಮ ಹಳ್ಳಿಗೆ ಹೋಗಿ ಅಲ್ಲಿರೋ ಜಮೀನು ಮಾರಿ ಹಣತಂದು ನಿನ್ನ ಓದಿಗೆ ಉಪಯೋಗಿಸ್ತೀನಿ ಏನೂ ಯೋಚನೆ ಮಾಡಬೇಡ ಮಗಳೆ ಎಂದು ಧೈರ್ಯ ಹೇಳಿದ.

ಈಗ ಈ ಗೂಡನ್ನ ಬಿಟ್ಟು ಅವಳನ್ನ ಹೇಗೆ ಕಳಿಸೋದು ಎಂದು ಪ್ರಮೀಳಾ ಗದ್ಗದಿತಳಾದಳು. ಏ ಹುಚ್ಚಿ ಸುಮ್ಮಿರೇ ಮಗಳು ಓದಿ ಡಾಕ್ಟರ್ ಆಗಕ್ಕೆ ಅಂತ ಒಂದಷ್ಟು ದಿನ ಗೂಡು ಬಿಟ್ಟು ಹೋಗ್ತಾ ಇದೆ ಅಷ್ಟೆ. ಮತ್ತೆ ಬಂದು ನಮ್ಮ ಗೂಡು ಸೇರಿಕೊಳ್ಳದೆ ಇರತ್ತ. ನೋಡು ನೀನು ಅವಳಿಗೆ ಏನು ಬೇಕೋ ಅದನ್ನೆಲ್ಲ ತಯಾರಿ ಮಾಡು. ನಾನು ದುಡ್ಡುಹೊಂದಿಸಿಕೊಂಡು ಬರ್ತೀನಿ ಎಂದ.

ಹಲವಾರು ಅಡೆತಡೆ ಆತಂಕಗಳ ನಡುವೆ 'ಕಾರ್‌ಕೀವ್ ಇಂಟರ್‌ನ್ಯಾಷನಲ್ ಮೆಡಿಕಲ್ ಯೂನಿವರ್ಸಿಟಿ' ಎಂಬಲ್ಲಿ ಸನ್ಮತಿಗೆ ಸೀಟ್ ಸಿಕ್ಕಿತು. ಮಗಳ ಮುಖದಲ್ಲಿನ ಹರುಷ ಕಂಡು ಇವರಿಬ್ಬರೂ ಸಮಾಧಾನ ಪಟ್ಟುಕೊಂಡರು. ದೃಢವಿಶ್ವಾಸದಿಂದ ವಿದೇಶಕ್ಕೆ ಹೊರಟು ನಿಂತ ಮಗಳಿಗೆ ಗಂಡಹೆಂಡತಿ ಇಬ್ಬರೂ ತುಂಬು ಹೃದಯದಿಂದ ಹಾರೈಸಿದರು. ಎಲ್ಲವೂ ನಿರಾತಂಕವಾಗಿ ನಡೆಯಿತು. ಪ್ರತಿ ವರುಷಕ್ಕೊಮ್ಮೆ ರಜೆಯಲ್ಲಿ ಮಗಳು ಮನೆಗೆ ಬಂದು ಹೋಗುತ್ತಾಳೆ. ಈಗ ಐದನೇ ವರುಷ ನಡೆಯುತ್ತಿದೆ ಎಲ್ಲವನ್ನೂ ಒಟ್ಟಿಗೇ ಮುಗಿಸಿಕೊಂಡೇ ಬರುತ್ತೇನೆ ಎಂದು ಹೇಳಿದ್ದಾಳೆ. ಪ್ರತಿದಿನ ತಪ್ಪದೇ ಅಪ್ಪ ಅಮ್ಮನೊಂದಿಗೆ ಮೊಬೈಲ್ ಫೋನಿನಲ್ಲಿ ವಿಡಿಯೋ ಕಾಲ್ ಸಂಭಾಷಣೆ ನಡೆಯುತ್ತಲೇ ಇರುತ್ತದೆ.

ಕಾಲಿಂಗ್ ಬೆಲ್ ಶಬ್ದಕ್ಕೆ ಪ್ರಮೀಳಾ ಬೆಚ್ಚಿಬಿದ್ದು ವಾಸ್ತವಕ್ಕೆ ಬಂದಳು. ಬಾಗಿಲು ತೆರೆಯುತ್ತಿದ್ದಂತೆ ಶ್ರೀಧರ 'ಮಗು ಏನಾದ್ರೂ ಮೆಸೇಜು ಫೋನ್ ಮಾಡಿತ್ತ...' ಎಂದುಕೊಂಡೇ ಒಳಗೆ ಬಂದ. ಏನೂ ಇಲ್ಲಾ ರೀ... ನಿಮಗೆ ಎಂದು ಪ್ರಶ್ನಿಸಿದಳು... ಇಲ್ಲಾ..ನಂಗೂ ಏನೂ ಇಲ್ಲ ಎಂದು ಆತಂಕ ವ್ಯಕ್ತಪಡಿಸಿದ. ಏನಿಲ್ಲ ಬಿಡಿ ಏನೋ ಬ್ಯುಸಿ ಇರಬೇಕು. ಫೈನಲ್ ಇಯರ್ ಅಲ್ವಾ..ತುಂಬಾ ಓದದು ಇರತ್ತೆ ಅಂತ ಮೊನ್ನೇನೆ ಹೇಳಿದ್ಲಲ್ಲ ಎಂದು ಪ್ರಮೀಳಾ ಶ್ರೀಧರನ ಆತಂಕಕ್ಕೆ ತೆರೆ ಎಳೆದಳು.

ಕಾಫಿ ಕುಡಿಯುತ್ತ ಶ್ರೀಧರ ಟಿವಿಯ ನ್ಯೂಸ್ ಚಾನೆಲ್ ಆನ್ ಮಾಡಿದ "ಉಕ್ರೇನ್ ವಿರುದ್ಧ ರಷ್ಯಾ ಅಧ್ಯಕ್ಷ ಯುದ್ಧ ಘೋಷಣೆ' ಎಂದು ಸುದ್ದಿ ಬರುತ್ತಿದೆ. ಆತಂಕದ ನಡುವೆ ಜನಸಾಮಾನ್ಯರು, ವಿದ್ಯಾರ್ಥಿಗಳು ಎಂದು ಪದೇ ಪದೆ ಕ್ಲಿಪಿಂಗ್ ತೋರಿಸುತ್ತಿದ್ದಾರೆ. ಪ್ರಮೀಳಾ... ಪ್ರಮೀಳಾ...ಎಂದು ನಡುಗುವ ಸ್ವರದಲ್ಲಿ ಶ್ರೀಧರ ಹೆಂಡತಿಯನ್ನು ಕರೆದ. ಚಪಾತಿ ಹಿಟ್ಟುಕಲಸುತ್ತಿದ್ದವಳು ಗಂಡನ ಕೂಗಿಗೆ ಅಡುಗೆ ಮನೆಯಿಂದ ಹಾಗೆಯೇ ಓಡಿಬಂದಳು. ನೋಡೇ ಅಲ್ಲಿ...ನಮ್ಮ ಸನ್ಮತಿ ಇರೋ ಜಾಗದಲ್ಲಿ ಯುದ್ಧ ಅಂತೆ ಎಂದು ಕೂಗಿದ. ಅಯ್ಯೋ ದೇವ್ರೇ... ಏನ್ರಿ ಗತಿ...ಇನ್ನೂ ಅವಳಿಂದ ಯಾವ ಕಾಲೂ ಬಂದಿಲ್ಲ... ತಡೀರಿ ನಾನೇ ಮಾಡ್ತೀನಿ ಎಂದು ಮೊಬೈಲ್ ಫೋನ್ ತೆಗೆದು ಕೊಂಡಳು. ಅತ್ತಲಿಂದ ಯಾವುದೇ ಪ್ರತಿಕ್ರಿಯೆ ಇಲ್ಲ. ಇವರ ಆತಂಕ ಮತ್ತಷ್ಟು ಹೆಚ್ಚಾಯಿತು. ಯಾರನ್ನ ವಿಚಾರಿಸೋದು, ಹೇಗೆ ವಿಚಾರಿ ಸೋದು ಒಂದೂ ತಿಳಿಯದಾಯಿತು.

ಮೂರುದಿನ ಕಳೆಯುತ್ತಾ ಬಂದಿತು. ಸನ್ಮತಿ ಇರುವ ಪ್ರದೇಶವನ್ನು 'ಅಪಾಯ ಕಾರಿ ಪ್ರದೇಶ' ಎಂದು ಘೋಷಿಸಿರುವ ಸುದ್ದಿ ವರದಿಯಾಗುತ್ತಿದೆ. ಭಾರತೀಯ ವಿದ್ಯಾರ್ಥಿಗಳನ್ನೆಲ್ಲಾ ಬಂಕರ್‌ಗಳಲ್ಲಿ ಸುರಕ್ಷಿತವಾಗಿ ಇರಿಸಿದ್ದಾರೆ ಎಂದು ವಿದೇಶಾಂಗ ಸಚಿವಾಲಯ ಹೇಳುತ್ತಿದೆ. ಅಯ್ಯೋ ದೇವರೆ ಏನಪ್ಪಾ ಗತಿ. ಯಾಕೆ ನಮಗೆ ಹೀಗೆಲ್ಲ ಪರೀಕ್ಷೆ ಮಾಡ್ತಾ ಇದೀಯ ಎಂದು ಶ್ರೀಧರ ಗೋಳಾಡತೊ ಡಗಿದ. ನಿದ್ರೆ ಇಲ್ಲದೆ ಇಬ್ಬರೂ ಹೊರ ಳಾಡುತ್ತಿದ್ದಾರೆ. ಬೆಳಗಿನ ಜಾವದ ಸಮಯ ಮೊಬೈಲ್ ಫೋನ್ ಸದ್ದಾಗುತ್ತಿದೆ. ದಡಕ್ಕನೆ ಎದ್ದ ಪ್ರಮೀಳಾ ಕಾಲ್ ರಿಸೀವ್ ಮಾಡಿದಳು. 'ಅಮ್ಮಾ' ಎಂದು ಅತ್ತಲಿಂದ ಸನ್ಮತಿಯ ದನಿ ಕೇಳುತ್ತಿದ್ದಂತೆ ಪ್ರಮೀಳಾಳ ಹೃದಯದ ಕಟ್ಟೆ ಒಡೆದು ಹೋಯಿತು. ಇಬ್ಬರೂ ಜೋರಾಗಿ ಅಳುತ್ತಿದ್ದಾರೆ. ಆ ಅಳುವಿನಲ್ಲಿಯೇ ಎಲ್ಲ ಪ್ರಶ್ನೆಗಳೂ ಅಡಕವಾಗಿದ್ದವು. ನಿದ್ದೆಗಣ್ಣಿನಲ್ಲಿದ್ದ ಶ್ರೀಧರ ಪ್ರಮೀಳಾಳ ಅಳುವಿನ ಸದ್ದಿಗೆ ಗಾಬರಿಯಿಂದ ಎದ್ದ, ಮಗಳ ಕರೆ ಎಂದು ತಿಳಿಯುತ್ತಿದ್ದಂತೆ ಚಂಗನೆ ಹಾರಿಬಂದ. ಪಪ್ಪ ನೀವೇನೂ ಗಾಬರಿ ಆಗಬೇಡಿ, ನಾನಿಲ್ಲಿ ಸುರಕ್ಷಿತವಾಗಿದ್ದೀನಿ ಎಂದು ಮಗಳು ಧೈರ್ಯ ಹೇಳಿದಳು. ನೋಡು ಮಗಳೆ ಏನಾದರೂ ಅವಕಾಶ ಸಿಕ್ಕರೆ ಹೊರಟು ಬಂದುಬಿಡು ಎಂದ ಶ್ರೀಧರನ ಮಾತಿಗೆ, ಇಲ್ಲ ಪಪ್ಪ.. ಇನ್ನೇನು ಮುಂದಿನ ವಾರ ಪರೀಕ್ಷೆ ಇದೆ. ಅದು ಮುಗಿದರೆ ನನ್ನ ಡಿಗ್ರಿ ಕಂಪ್ಲೀಟ್ ಆಗುತ್ತೆ ಡೋಂಟ್ ವರಿ...ಇಲ್ಲಿ ನಾನು ಆರಾಮವಾಗಿದ್ದೀನಿ ಎಲ್ಲಾ ಮುಗಿಸಿಕೊಂಡು ಒಟ್ಟಿಗೇ ಹೊರ ಡುತ್ತೀನಿ ಎಂದಾಗ ಶ್ರೀಧರ ಪ್ರಮೀಳಾ ಇಬ್ಬರೂ ಕೊಂಚ ನಿಟ್ಟುಸಿರು ಬಿಟ್ಟರು.

ಎಲ್ಲವೂ ಸರಿ ಇದೆ ಎಂದುಕೊಂಡು ನಿರುಮ್ಮಳರಾಗಿದ್ದವರಿಗೆ ಪ್ರತಿದಿನದ ಯುದ್ಧವರದಿ ಬಿತ್ತರಿಸುತ್ತಿದ್ದ ಟಿವಿ ಚಾನೆಲ್ ನೋಡಿ ಆಕಾಶವೇ ಕಳಚಿಬಿದ್ದಂತಾಯಿತು. ಅಲ್ಲಿಯ ಪರಿಸ್ಥಿತಿಗಳ ಅವಲೋಕನ ನೋಡಿ ಜೀವ ಬಾಯಿಗೆ ಬಂದಿತು. ಮಗಳು ನಮ್ಮನ್ನು ಸಮಾಧಾನಪಡಿಸಲು ಆಡಿದ ಮಾತುಗಳು ಅವು ಎಂದುಕೊಂಡರು. ತಂಡೋಪತಂಡವಾಗಿ ವಿದ್ಯಾರ್ಥಿಗಳು ಭಾರತಕ್ಕೆ ಮುಖಮಾಡುತ್ತಿದ್ದಾರೆ ಎಂದು ಹೇಳುತ್ತಿದ್ದಾರೆ. ಪರಿಸ್ಥಿತಿ ಅಲ್ಲಿ ಶೋಚನೀಯವಾಗಿದೆ ಆದರೆ ಮಗಳು ಅಲ್ಲಿಂದ ಕದಲುವುದಿಲ್ಲ ಎನ್ನುತ್ತಿದ್ದಾಳೆ. ಶ್ರೀಧರ ವಿದೇಶಾಂಗ ಸಚಿವಾಲಯದ ಜೊತೆ ಸಂಭಾಷಣೆ ನಡೆಸಿದ. ಎಲ್ಲರನ್ನೂ ಕರೆದು ತರುವ ಭರವಸೆ ಅವರೇನೋ ಕೊಟ್ಟರು. ಆದರೆ? ದೇವರೇ ಎಲ್ಲಾ ಮಕ್ಕಳನ್ನೂ ಕಾಪಾಡು ಎಂದು ಶ್ರೀಧರ ಪ್ರಮೀಳಾ ಬೇಡಿಕೊಂಡರು.

ಪ್ರಮೀಳಾ ನ್ಯೂಸ್ ಚಾನೆಲ್ ಬಿಟ್ಟು ಬೇರೇನೂ ನೋಡುತ್ತಿಲ್ಲ, ಮೂರು ಹೊತ್ತು ಯುದ್ಧಚಿತ್ರದ ವರದಿ ನೋಡುವುದು ಗೊಳೋ ಎಂದು ಅಳುವುದು. ಶ್ರೀಧರ ಬಂದಾಗ ಕಣ್ಣೀರು ವರೆಸಿಕೊಂಡು ಎಲ್ಲವೂ ಸರಿ ಇದೆ ಎಂಬಂತೆ ನಟಿಸುವುದು. ಕಂಡ ಕಂಡ ದೇವರಿಗೆ ಹರಕೆ ಹೊತ್ತಿದ್ದಾಯಿತು. 'ಉಕ್ರೇನ್‌ನಲ್ಲಿ ತವರಿಗೆ ಮರಳಲು ವಿಮಾನ ಸಿಗದೆ ಭಾರತೀಯರ ಪರದಾಟ' ಎಂಬ ಸುದ್ದಿ ನೋಡುತ್ತಿದ್ದಂತೆಯೇ ಪ್ರಮೀಳಾಳ ಕರುಳು ಹಿಂಡಿದಂತಾಯಿತು. ಎಂತಹ ಗತಿ ಬಂತಲ್ಲ ಮಗಳೇ ನಿನಗೆ, ಇಲ್ಲಿಯೇ ಯಾವುದಾದರೂ ಡಿಗ್ರಿ ಮಾಡಿಕೊಂಡು ನಮ್ಮ ಕಣ್ಣಮುಂದೆಯೇ ಇರಬಾರದಿತ್ತೇ, ಡಾಕ್ಟರ್ ಆಗಬೇಕೆಂಬ ಹೆಬ್ಬಯಕೆಯಲ್ಲಿ ಹೆಮ್ಮಾರಿಯನ್ನೇ ಮೈಮೇಲೆ ಎಳೆದುಕೊಂಡಂತಾಯಿತಲ್ಲ, ಇನ್ನೇನು ಒಂದು ನಾಲ್ಕು ತಿಂಗಳು ಕಳೆದಿದ್ದರೆ ಎಲ್ಲವೂ ಮುಗಿದೇ ಹೋಗುತ್ತಿತ್ತು. ಎಂತಹ ಅಸಹಾಯಕ ಸ್ಥಿತಿ ನಿನ್ನದಾ ಯಿತಲ್ಲ ಎಂದು ರೋದಿಸತೊಡಗಿದಳು.

ಹತ್ತು ನಿಮಿಷ ಜಾತ್ರೆಯಲ್ಲಿ ಮಗಳು ಕಾಣದಾದಾಗ ಉಸಿರೇ ನಿಂತಂತೆ ಆಡಿದ್ದ ಶ್ರೀಧರ. ಇಂದು ಮಗಳು ಕಾಣದ ದೇಶದಲ್ಲಿ ಕಣ್ಮರೆಯಾಗಿದ್ದಾಳೆ. ಪ್ರತಿದಿನ ಒಂದು ಗಳಿಗೆ ಫೋನ್ ಮಾಡುವುದು ತಡವಾದರೆ ಎದೆ ಬಡಿತ ಜೋರಾಗುತ್ತಿತ್ತು. ಈಗ ಅಲ್ಲಿಯ ಪರಿಸ್ಥಿತಿ ಕಣ್ಣಮುಂದೆ ಕಾಣುತ್ತಿದೆ, ಅಸಹಾಯಕ ಪರಿಸ್ಥಿತಿ ಇವರದಾಗಿದೆ.

ಶ್ರೀಧರ ಹಾಗೂ ಪ್ರಮೀಳಾ ಇಬ್ಬರೂ ಒಬ್ಬರಿಗೊಬ್ಬರು ಮುಖ ಕೊಟ್ಟು ಮಾತನಾಡುತ್ತಿಲ್ಲ. ಎಲ್ಲಿ ತಮ್ಮ ದುಃಖದ ಕಟ್ಟೆ ಒಡೆಯುತ್ತದೋ ಎಂಬ ಭಾವ. ಮನೆಯಲ್ಲಿ ನೀರವ ಮೌನ. ಶ್ರೀಧರ ಆತಂಕದ ನಡುವೆಯೂ ಮಗಳ ಸುರಕ್ಷತೆಗಾಗಿ ಅವಳ ಬರುವಿಕೆಗಾಗಿ ಅವರಿವರನ್ನು ಕಾಂಟ್ಯಾಕ್ಟ್ ಮಾಡುತ್ತಿದ್ದಾನೆ. ಪ್ರಮೀಳಾ...ಪ್ರಮೀಳಾ...ನೋಡು ಮಿನಿಸ್ಟರ್ ಜೊತೆ ಮಾತನಾಡಿದೆ. ಅವರು ಈ ಬ್ಯಾಚಿನಲ್ಲಿ ಇನ್ನೊಂದಷ್ಟು ಮಕ್ಕಳನ್ನ ಕರೆದುಕೊಂಡು ಬರುತ್ತಿದ್ದಾರಂತೆ. ಸನ್ಮತಿ ಕೂಡ ಬರಬಹುದು ನಡೀ ತಯಾರಾಗು ನಾವು ಏರ್‌ಪೋರ್ಟ್‌ಗೆ ಹೋಗೋಣ ಎಂದು ಹೇಳಿದಾಗ ಪ್ರಮೀಳಾಳಿಗೆ ಒಂದರೆಗಳಿಗೆ ಸದ್ಯ ಮಗಳು ಬರುತ್ತಾಳಲ್ಲ ಎಂಬ ಸಮಾಧಾನ ದೊರೆಯಿತು.


ಮಗನಿಗಾಗಿ, ಮಗಳಿಗಾಗಿ, ತಂಗಿ ತಮ್ಮಂದಿರಿಗಾಗಿ ಹೀಗೆ ಅವರವರ ಸಂಬಂಧ ದವರಿಗಾಗಿ ಹಪಹಪಿಸುತ್ತಾ ಏರ್‌ಪೋರ್ಟ್ ನಲ್ಲಿ ನಿಂತಿರುವವರನ್ನು ನೋಡಿದರೆ ಎಂತಹ ಕಲ್ಲುಹೃದಯವೂ ಕರಗುತ್ತದೆ. ಯಾರಿಗೂ ಏನೂ ಆಗದಿರಲಿ ಎಂಬುದೇ ಎಲ್ಲರ ಹಾರೈಕೆ. ವಿದೇಶಕ್ಕೆ ಹೋದದ್ದು ತಪ್ಪೇ, ಕಳಿಸಿದ್ದು ತಪ್ಪೇ, ಪರಿಸ್ಥಿತಿಯ ತಪ್ಪೆ, ಸರ್ಕಾರದ ತಪ್ಪೆ, ಇಲ್ಲ ವ್ಯವಸ್ಥೆಯ ತಪ್ಪೆ, ಹೀಗೆ ಅನೇಕ ವಿಚಾರಗಳು ನಡೆಯುತ್ತಲೇ ಇದ್ದವು. ಯಾವುದು ಏನಾದರಾಗಲೀ ಈಗ ಸದ್ಯ ನಮ್ಮ 'ಮಕ್ಕಳು' ಬಳಿ ಬರಲಿ ಎಂಬು ದಷ್ಟೇ ಎಲ್ಲರ ಮನೋನಿಶ್ಚಯವಾಗಿತ್ತು.


ಆತಂಕದ ಮೊಗದೊಂದಿಗೆ ಒಂದಷ್ಟು ಮಂದಿ ವಿಚಾರಣೆ ಮುಗಿಸಿಕೊಂಡು ಏರ್‌ಪೋರ್ಟ್‌ನಿಂದ ಹೊರಬಂದರು. ಸನ್ಮತಿಯ ಮುಖ ಕಂಡೊಡನೆ ಶ್ರೀಧರ ಹಾಗೂ ಪ್ರಮೀಳಾ ಇಬ್ಬರೂ ಓಡಿಹೋಗಿ ಮಗಳನ್ನು ತಬ್ಬಿಕೊಂಡರು. ಸದ್ಯ ಬಂದೆಯಲ್ಲ ಮಗಳೇ ಎಂಬಂತಾಗಿತ್ತು ಅವರ ನೋಟ. "ಪಪ್ಪ ಐ ಆ್ಯಮ್ ಸೋ ಸಾರಿ ಪಪ್ಪ ನಾನ್ ನನ್ನ ಟಾಸ್ಕ್ ಕಂಪ್ಲೀಟ್ ಮಾಡಕಾಗಿಲ್ಲ" ಎಂದು ಮಗಳು ಗದ್ಗದಿತಳಾಗಿ ಶ್ರೀಧರನನ್ನು ತಬ್ಬಿಕೊಂಡು ಅಳಲು ಪ್ರಾರಂಭಿಸಿದಳು. ನೋ...ಪುಟ್ಟ ಇಲ್ಲ, ಡೋಂಟ್ ವರಿ, ಏನೂ ಆಗಲ್ಲ, ಆ ದೇವರಿದ್ದಾನೆ, ಎಲ್ಲ ಒಳ್ಳೇದಾಗತ್ತೆ ಈಗ ಮನೆಗೆ ಹೋಗೋಣ ನಡಿ ಎಂದು ಮಗಳ ಹಣೆಗೆ ಮುತ್ತನ್ನಿಟ್ಟು ಹೊರಡಿಸಿಕೊಂಡು ಹೊರನಡೆದ.

ಸುರಕ್ಷಿತವಾಗಿ ಮರಳಿಬಂದ ಮಗಳಿಗೆ ಕೆಂಪಿನಾರತಿಮಾಡಿ ಪ್ರಮೀಳಾ ಒಳಗೆ ಕರೆದುಕೊಂಡಳು. 'ಗೂಡಿನೊಳಗೆ ಬಂದ ಗುಬ್ಬಿಯಂತಾಗಿದ್ದಳು ಸನ್ಮತಿ'. ಬಿಳಿಕೋಟು ತೊಟ್ಟು ಕೈಯಲಿ ಸ್ಟೆತಾಸ್ಕೋಪ್ ಹಿಡಿದು ನಗುನಗುತ್ತಾ ಬರುವ ಮಗಳನ್ನು ಸ್ವಾಗತಿಸಲು ಸಿದ್ಧವಾಗಿದ್ದವರು ಈಗ ರೆಕ್ಕೆ ಮುರಿದುಕೊಂಡು ವಿಲವಿಲ ಒದ್ದಾಡುತ್ತಿ ರುವ ಗಾಯಗೊಂಡ ಮರಿಗುಬ್ಬಿಯನ್ನು ರಕ್ಷಿಸುವ ಕಾಯಕದಲ್ಲಿ ತೊಡಗಿರುವವರಂತಾದರು.

ಮಗಳ ಉಜ್ವಲ ಭವಿಷ್ಯಕ್ಕಾಗಿ ಆಸ್ತಿ ಮಾರಿ ವಿದೇಶಕ್ಕೆ ಕಳಿಸಿ ಪ್ರತಿದಿನ ಒಂದಲ್ಲ ಒಂದು ರೀತಿಯಲ್ಲಿ ಆತಂಕದಲ್ಲೇ ದಿನ ದೂಡಿಕೊಂಡಿದ್ದ ದಂಪತಿಗಳು ಇಂದು ತಮ್ಮ 'ಗೂಡಿ'ನಲ್ಲಿ ಮರಿಗುಬ್ಬಿಯೊಂದಿಗೆ ಮಮ್ಮಲ ಮರುಗುತ್ತಿದ್ದಾರೆ. ಬೆಚ್ಚಗೆ ಕುಳಿತಿರ ಬೇಕಾದವರು ಬೆಚ್ಚಿ ಬೆಚ್ಚಿಬೀಳುವ ಹಂತಕ್ಕೆ ಬಂದಿದ್ದಾರೆ. ಸರ್ಕಾರ ಇಂತಹ ಮಕ್ಕಳಿಗಾಗಿ ಏನಾದರೂ ಕ್ರಮ ಕೈಗೊಳ್ಳುತ್ತದೆಯಾ, ಅವರ ಅತಂತ್ರ ಪರಿಸ್ಥಿತಿಗೊಂದು ನೆಲೆ ಕೊಡುತ್ತದೆಯಾ, ಪರಿಸ್ಥಿತಿಯ ಅಸಹಾಯಕತೆಗೆ ಬೆಂದು ಬಸವಳಿದಿರುವವರಿಗೆ ಏನಾದರೂ ದಾರಿಮಾಡಿಕೊಡುತ್ತದೆಯಾ ಎಂದು 'ಗೂಡಿನ ಸೂರು' ನೋಡುತ್ತಾ ದಿನ ಎಣಿಸುತ್ತಿದ್ದಾರೆ. ಎಲ್ಲವೂ ಸರಿಹೋಗುವುದೋ ಇಲ್ಲ ಸೋರಿ ಹೋಗುವುದೋ ಆ ದೇವನೇ ಬಲ್ಲ ●














ವಿಂಟೇಜ್ ಸಂಗೀತ ವಾದ್ಯಗಳ ನಿಧಿ

ಮೈಸೂರು ಪೊಲೀಸ್ ಬ್ಯಾಂಡ್‌ಗೆ ಮಹಾರಾಜರ ಕೊಡುಗೆ






ಸಾರ್ವಜನಿಕರ ವೀಕ್ಷಣೆಗೆ ಅವಕಾಶ



ಕೇವಲ ಗಣ್ಯರು, ಅತಿ ಗಣ್ಯರು ಹಾಗೂ ಹಿರಿಯ ಪೊಲೀಸ್ ಅಧಿಕಾರಿಗಳಿಗೆ ನೋಡಲು ಸೀಮಿತವಾಗಿರುವ ಮ್ಯೂಸಿಕಲ್ ಇನ್‌ಸ್ಟ್ರುಮೆಂಟ್ ಸದ್ಯದಲ್ಲೇ ಸಾರ್ವಜನಿಕರಿಗೂ ಅವಕಾಶ ಕಲ್ಪಿಸಲಾಗುವುದು ಎಂದು ಮೈಸೂರು ನಗರ ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ ಅವರು ತಿಳಿಸಿದ್ದಾರೆ.

ಮೌಂಟೆಡ್ ಕಂಪನಿಯಲ್ಲಿರುವ ಸಂಗೀತ ಸಂಗ್ರಹಾಲಯವನ್ನು ನಜರ್‌ಬಾದ್‌ನಲ್ಲಿರುವ ಪೊಲೀಸ್ ಆಯುಕ್ತರ ಕಚೇರಿ ಹಳೇ ಪಾರಂಪರಿಕ ಕಟ್ಟಡಕ್ಕೆ ಸ್ಥಳಾಂತರಿಸಲುದ್ದೇಶಿಸಲಾಗಿದೆ. ಶಿಥಿಲಾವಸ್ಥೆಯಲ್ಲಿರುವ ಕಟ್ಟಡವನ್ನು ಪಾರಂಪರಿಕ ಶೈಲಿಯಲ್ಲಿ ದುರಸ್ತಿಪಡಿಸಿ ನವೀಕರಿಸಲು ಪ್ರಯತ್ನಿಸಲಾಗುತ್ತಿದೆ. ಮೈಸೂರು ಮಹಾರಾಜರು ಕೊಡುಗೆಯಾಗಿ ನೀಡಿರುವ ಅಪರೂಪದ ವಿಂಟೇಜ್ ಸಂಗೀತ ಸಾಧನಗಳನ್ನು ಬ್ಯಾಂಡ್ ಹೌಸ್‌ಗೆ ಸ್ಥಳಾಂತರಿಸಿ ಅಲ್ಲಿ ನಿತ್ಯ ವೀಕ್ಷಣೆಗೆ ಅವಕಾಶ ಕಲ್ಪಿಸಲುದ್ದೇಶಿಸಲಾಗಿದೆ ಎಂದು ಅವರು ನುಡಿದರು.

1 ನೋಟೋಟೈಪ್ ಮ್ಯೂಸಿಕ್ ಟೈಪ್‌ರೈಟರ್



3 ಪಿಯಾನೋ ಅಕಾರ್ಡಿಯನ್



2 ಸ್ಟ್ರೋ ಹಾರ್ನ್ ಸೆಲ್ಲೋ



4 ಸಾರಂಗಿ



5 ಗ್ರೇಸಿಯಸ್ ಹಾರ್ಪ್



6 ಟ್ಯುಬುಲಾರ್ ಆರ್ಗನ್



7 ಗ್ಸೈಲೋಫೋನ್



✍ ಎಸ್.ಟಿ. ರವಿಕುಮಾರ್

ಪಾರಂಪರಿಕ ನಗರಿ ಮೈಸೂರು ಕಲೆ, ಸಂಸ್ಕೃತಿಯ ತವರೂರು. ಮೈಸೂರು ಸಂಸ್ಥಾನ ಮತ್ತು ಆಳಿದ ರಾಜ ಮಹಾರಾಜರು ಸಂಗೀತ, ನೃತ್ಯ, ಕಲೆಗೆ ನೀಡಿದ ಕೊಡುಗೆ ಅಪಾರವಾದುದು.

ಮೈಸೂರಿನ ಲಲಿತ ಮಹಲ್ ರಸ್ತೆಯಲ್ಲಿರುವ ಮೌಂಟೆಡ್ ಪೊಲೀಸ್ ಕಂಪನಿ (ಅಶ್ವಾರೋಹಿ ದಳ)ಯ ಸಂಗ್ರಹಾಲಯದಲ್ಲಿ ಮೈಸೂರು ಅರಸರ ಕೊಡುಗೆಯಾಗಿ ನೀಡಿರುವ ಅಪರೂಪದಲ್ಲಿ ಬಹು ಅಪರೂಪದ ಭಾರತೀಯ ಮತ್ತು ಪಾಶ್ಚಿಮಾತ್ಯ ಸಂಗೀತ ಸಲಕರಣೆ (Musical Instruments) ಗಳನ್ನು ಸಂರಕ್ಷಿಸಿದ್ದು, ಇದು ಸಂಗೀತಕ್ಕೆ ರಾಜರು ಆದ್ಯತೆ ನೀಡುತ್ತಿದ್ದರೆಂಬುದಕ್ಕೆ ಸಾಕ್ಷಿ.

ಸಾರ್ವಜನಿಕರು ವೀಕ್ಷಿಸಲು ಇಲ್ಲಿಯವರೆಗೂ ಅವಕಾಶ ನೀಡಿಲ್ಲವಾದರೂ, ನಜರ್‌ಬಾದ್‌ನಲ್ಲಿರುವ ಪೊಲೀಸ್ ಆಯುಕ್ತರ ಹಳೇ ಪಾರಂಪರಿಕ ಕಟ್ಟಡ (ಬ್ಯಾಂಡ್ ಹೌಸ್)ವನ್ನು ನವೀಕರಣಗೊಳಿಸಿದ ನಂತರ ಸಂಗೀತ ಪ್ರಿಯರು ಕಣ್ತುಂಬಿಕೊಳ್ಳಲು ಅವಕಾಶ ಕಲ್ಪಿಸಲಾಗುತ್ತದೆ.

ಭಾರತದ ಸಾಂಪ್ರದಾಯಿಕ ಸಂಗೀತ ಸಾಧನಗಳು, ವಿದೇಶದಲ್ಲಿ ಬಳಸುತ್ತಿದ್ದ ಬಲು ಅಪರೂಪದ ಸಲಕರಣೆಗಳನ್ನೂ ಮೌಂಟೆಡ್ ಪೊಲೀಸ್ ಮ್ಯೂಸಿಯಂನಲ್ಲಿ ಇರಿಸಲಾಗಿದೆ. ವಿಂಟೇಜ್ ಸಂಗೀತ ಪರಿಕರಗಳು ಅಲ್ಲಿ ಕಾಣಸಿಗುತ್ತವೆ.

ಈ ಪರಿಕರಗಳಿಂದ ಹೊರ ಬರುವ ಸಂಗೀತ ನಾದವು ಇನ್ನೆಲ್ಲೂ ಕೇಳದ ಶಬ್ದ ಸೂಚಿಸುವುದಲ್ಲದೆ, ಮನಸ್ಸಿಗೆ ಮುದ ನೀಡುತ್ತವೆ. ಕೆಲವು 150 ವರ್ಷ ಹಳೆಯದಾದರೂ, ಇಂಪಾದ ಸಂಗೀತವನ್ನು ನೀಡುತ್ತಿವೆ. ಅರಮನೆಯಲ್ಲಿ ಬಳಸುತ್ತಿದ್ದ ಈ ಸಂಗೀತ ಸಲಕರಣೆಗಳನ್ನು ಮಹಾರಾಜರು 1868ರಲ್ಲಿ ರಚನೆಯಾದ ಮೈಸೂರು ಪೊಲೀಸ್ ಬ್ಯಾಂಡ್‌ಗೆ ಹಸ್ತಾಂತರಿಸಿದ್ದಾರೆ.

ಈ ಹಿಂದೆ ರಾಜ್ಯ ಪೊಲೀಸ್ ಮಹಾ ನಿರ್ದೇಶಕರಾಗಿದ್ದ ಬಿ.ಎನ್. ಗರುಡಾಚಾರ್ ಅವರ ಅಧಿಕಾರಾವಧಿಯಲ್ಲಿ 1985ರ ಜನವರಿ 28ರಂದು ಮೌಂಟೆಡ್ ಕಂಪನಿಯಲ್ಲಿ ಈ ಸಂಗ್ರಹಾಲಯವನ್ನು ಆರಂಭಿಸಲಾಗಿತ್ತು. ಚಾಮರಾಜ ಒಡೆಯರ್ ಅವರ ಆಸ್ಥಾನದಲ್ಲಿ ಬಳಸುತ್ತಿದ್ದ ಸುಮಾರು 200 ಬಗೆಯ ಮ್ಯೂಸಿಕಲ್ ಇನ್‌ಸ್ಟ್ರುಮೆಂಟ್‌ಗಳನ್ನು ಪ್ರದರ್ಶಿಸಲಾಗಿದೆ.

ಆ ಪೈಕಿ 7 ಸಲಕರಣೆಗಳು ಅತೀ ಅಪರೂಪವಾಗಿದ್ದು, ಪ್ರಪಂಚದ ಒಂದೆರಡು ಕಡೆ ಮಾತ್ರ ಅವುಗಳನ್ನು ಕಾಣಬಹುದಾದಂತಹ ಹಳೆಯದಾಗಿವೆ ಎಂಬುದಿಲ್ಲಿ ವಿಶೇಷ.

1. ನೋಟೋಟೈಪ್ ಮ್ಯೂಸಿಕ್ ಟೈಪ್‌ರೈಟರ್

ಪೇಪರ್ ಮೇಲೆ ಮ್ಯೂಸಿಕ್ ನೋಟ್ಸ್ ಹಾಕಲು ಸಾಧ್ಯವಿರುವ ನೋಟೋಟೈಪ್ ಟೈಪ್‌ರೈಟರ್ ಅಪರೂಪದ ಸಲಕರಣೆಯಾಗಿದ್ದು, ಬರ್ಲಿನ್‌ನಲ್ಲಿ ಗುಸ್ತೇವ್ ರುಂಡಸ್ಟೆಟ್ಲರ್ ಕಂಡು ಹಿಡಿದದ್ದಾಗಿದೆ. ಪಿಯಾನೋ ಮಾದರಿಯಲ್ಲಿರುವ ಕೀಬೋರ್ಡ್ ಅನ್ನು ವಿಶೇಷ ಮಾದರಿಯಲ್ಲಿ ವಿನ್ಯಾಸ ಮಾಡಲಾಗಿದೆ.

ಒಟ್ಟು ಕೇವಲ 10 ಸಲಕರಣೆಗಳನ್ನು ಮಾತ್ರ ತಯಾರಿಸಲಾಗಿದ್ದು, ಆ ಪೈಕಿ ಐದನ್ನು ಅಮೆರಿಕೆಗೆ ರಫ್ತು ಮಾಡಲಾಗಿದೆ. 44 ಕೀಗಳು, 88 ಮ್ಯೂಸಿಕ್ ಸಿಂಬಲ್‌ಗಳನ್ನು ಹೊಂದಿರುವ ನೋಟೋಟೈಪ್ ಮ್ಯೂಸಿಕ್ ಟೈಪ್‌ರೈಟರ್‌ನ ಕೀಗಳಿಗೆ ವಿವಿಧ ಸ್ವರಗಳನ್ನು ಗುರುತಿಸಲು ಕಲರ್ ಕೋಡ್ ಮಾಡಲಾಗಿದೆ.

2. ಸ್ಟ್ರೋ ಹಾರ್ನ್ ಸೆಲ್ಲೋ

ಇದೊಂದು ಹಾರ್ನ್ ಹೊಂದಿರುವ ವಯಲಿನ್. ಸಾಮಾನ್ಯ ಶಬ್ದದ ಬಾಕ್ಸ್‌ಗೆ ಪರ್ಯಾಯವಾಗಿರುವ ಮೆಗಾ ಫೋನ್ ವಯಲಿನ್. ಜರ್ಮನ್‌ನ ಅಪ್ರೆಂಟಿಸ್ ವಾಚ್‌ಮೇಕರ್ ಆಗಿದ್ದ ಆಗಸ್ಟಿಸ್ ಎಂಬುವರು 19ನೇ ಶತಮಾನದಲ್ಲಿ ಅನ್ವೇಷಣೆ ಮಾಡಿದ ಸಂಗೀತ ಸಾಧನವಾಗಿದ್ದು, ಮರದ ಶಬ್ದ ಪೆಟ್ಟಿಗೆಯಲ್ಲಿ ಮೆಟಲ್ ಹಾರ್ನ್ ಹೊಂದಿದೆ.

3. ಪಿಯಾನೋ ಅಕಾರ್ಡಿಯನ್

'ಅಕಾರ್ಡ್' ಎಂಬ ಜರ್ಮನ್ ಪದದಿಂದ ಬಂದಿರುವ ಅಕಾರ್ಡಿಯನ್ ಒಂದು ಸಂಗೀತ ಸಾಧನ. ಬ್ರೆಜಿಲ್, ಚೈನಾ, ಸ್ಕಾಟ್‌ಲ್ಯಾಂಡ್, ಸೌತ್ ಆಫ್ರಿಕಾ, ನ್ಯೂಜಿಲ್ಯಾಂಡ್, ಆಸ್ಟ್ರೇಲಿಯಾ, ಫ್ರಾನ್ಸ್, ಬೆಲ್ಜಿಯಂನಲ್ಲಿ ಖ್ಯಾತಿಯಾಗಿರುವ ಈ ಸಲಕರಣೆಯು ವಿವಿಧ ಆಕಾರ, ಅಳತೆ, ಬಣ್ಣಗಳಲ್ಲಿರಲಿದ್ದು, ಪಿಯಾನೊ ಶೈಲಿಯ ಕೀಬೋರ್ಡ್ ಹೊಂದಿದೆ.

4. ಸಾರಂಗಿ

ವಯಲಿನ್ ಹೋಲುವ ಸಾರಂಗಿಯು ತಳಭಾಗದಲ್ಲಿ ಸೌಂಡ್ ಚೇಂಬರ್ ಹೊಂದಿದೆ. ಜಾನಪದದಲ್ಲಿ ವಿಶೇಷ ಮಹತ್ವ ಹೊಂದಿರುವ ಇದು ಬುಡಕಟ್ಟು ಪ್ರದೇಶದಲ್ಲಿ ಹೆಚ್ಚು ಬಳಕೆಯಲ್ಲಿತ್ತು. 17ನೇ ಶತಮಾನದ ಮಧ್ಯಭಾಗದಲ್ಲಿ ಪ್ರಸಿದ್ಧಿ ಪಡೆದಿದ್ದ ಈ ಸಾಧನದಲ್ಲಿ ನೂರಕ್ಕೂ ಹೆಚ್ಚು ಬಗೆಯ ಸ್ವರಗಳನ್ನು ನುಡಿಸಬಹುದು.

5. ಗ್ರೇಸಿಯಸ್ ಹಾರ್ಪ್

ಎರಡು ಗ್ರೇಸಿಯಸ್ ಹಾರ್ಪ್‌ಗಳಿದ್ದು, ಸೌಂಡ್ ಬೋರ್ಡ್‌ಗಳನ್ನೊಂದಿದೆ. ಮರದಿಂದ ಮಾಡಿದ ಈ ಸಲಕರಣೆಯು ತ್ರಿಭುಜಾಕಾರದಲ್ಲಿದ್ದು, ಕೈ ಬೆರಳುಗಳಿಂದ ನುಡಿಸುವ ಸಂಗೀತ ಸಾಧನಗಳಲ್ಲಿ ಒಂದಾಗಿದೆ.

6. ಟ್ಯುಬುಲಾರ್ ಆರ್ಗನ್

ಹೆಸರೇ ಸೂಚಿಸುವಂತೆ ಇದೊಂದು ಟ್ಯುಬುಲರ್ ಪರಕಷನ್ ಸಲಕರಣೆಯಾಗಿದ್ದು, ಅದನ್ನು ಆಂಕ್ಲಂಗ್ ಎಂದೂ ಕರೆಯುವುದುಂಟು. ಸಿಂಕಿಂಗ್, ರಬ್ಬಿಂಗ್, ಪ್ಲಕಿಂಗ್ ಮಾಡಿದರೆ ಅದರಿಂದ ವಿವಿಧ ಬಗೆಯ ಸಂಗೀತ ಕೇಳಿಬರುತ್ತದೆ.

7. ಗ್ಸೈಲೋಫೋನ್

ಮೌಂಟೆಡ್ ಪೊಲೀಸ್ ಘಟಕದ ಮ್ಯೂಸಿಯಂನಲ್ಲಿರುವ ಮತ್ತೊಂದು ಅಪರೂಪದ ಸಂಗೀತ ಪರಿಕರ ಗ್ಸೈಲೋಫೋನ್. ಪೂರ್ವ ಏಷಿಯಾದಿಂದ ಬಂದ ಈ ಇನ್‌ಸ್ಟ್ರುಮೆಂಟ್ ಮರದ ಬಾರ್‌ಗಳಿಂದ ತಯಾರಿಸಲಾಗಿದೆ. ಬಾರ್‌ಗಳಿಗೆ ಸಣ್ಣ ಕಡ್ಡಿಯಿಂದ ಹೊಡೆದರೆ ಅವುಗಳಿಂದ ವಿವಿಧ ಬಗೆಯ ಶಬ್ದ ಹೊರಬರುತ್ತದೆ.

ಈ 7 ವಿಶೇಷ ಇನ್‌ಸ್ಟ್ರುಮೆಂಟ್‌ಗಳಲ್ಲದೆ, ಕ್ಲಾರಿನೆಟ್ಸ್, ಟ್ರಂಪೆಟ್ಸ್, ಸ್ಯಾಕ್ಸೋಫೋನ್, ಪಿಕೊಲೋ, ಫ್ಲೋಟ್, ಫ್ರೆಂಚ್ ಹಾರ್ನ್, ಸರ್ಕಲ್ ಬೇಸ್, ಟ್ರೊಂಬೋನ್, ಯೂಫೋನಿಯಂ, ದಿಲ್‌ರುಬ, ಬೇಸ್ ಡ್ರಮ್ಸ್, ಸೈಡ್ ಡ್ರಮ್ಸ್, ಕೀ ಬೋರ್ಡ್‌ಗಳು, ಗಿಟಾರ್‌ಗಳು, ಡ್ರಮ್ ಕಿಟ್‌ಗಳಂತಹ ಹಲವು ಬಗೆಯ ಮ್ಯೂಸಿಕಲ್ ಇನ್‌ಸ್ಟ್ರುಮೆಂಟ್‌ಗಳನ್ನು ಸಂಗ್ರಹಾಲಯದಲ್ಲಿ ಸಂರಕ್ಷಿಸಲಾಗಿದೆ.





ಪಡುವಾರಹಳ್ಳಿ ಸಾಹಸಿಗರ ಗರಡಿ

•ಮೋಹನ್ ಕಾಯಕ

'ನಾಡಕುಸ್ತಿ ರಾಜಧಾನಿ' ಮೈಸೂರಿನಲ್ಲಿ ಎಂದಿಗೂ ಮಾಸದ ಪಡುವಾರಹಳ್ಳಿಯ ಉಸ್ತಾದ್ ಹೊಂಬಾಳೇ ಗೌಡರ 'ಹತ್ತೂ ಜನಗಳ ಗರಡಿ'ಯ ಜಟ್ಟಿಗಳು ಹಾಕುವ ಪಟ್ಟು ತೋಡುಗಳಿಗೆ ಹೆಸರುವಾಸಿ...!

ಪಡುವಾರಹಳ್ಳಿ ಗ್ರಾಮಸ್ಥರ ಪ್ರೋತ್ಸಾಹ, ಪೋಷಣೆಯಿಂದಲೇ ಸುಮಾರು 96 ವರ್ಷಗಳಿಂದಲೂ ಸಾವಿರಾರು ಪೈಲ್ವಾನರನ್ನು ತಯಾರು ಮಾಡಿರುವ 'ಹತ್ತೂ ಜನಗಳ ಗರಡಿ'ಯಲ್ಲಿ ಎದುರಾಳಿಯನ್ನು ನೆಲಕ್ಕುರುಳಿಸುವ ಭೀಮಸೇನಿ ಪಟ್ಟು, ನಿಕಾಲ್, ಉಕಾಡ್, ಕಲಾವರ್‌ಜಂಗ್, ದೋಬಿಶಾಟ್, ಏಕ್‌ಲಾಂಗ್ ಇನ್ನಿತರ ತಂತ್ರಗಾರಿಕೆಯ ಪಟ್ಟುಗಳನ್ನು ಹೇಳಿಕೊಡುವ ಮೂಲಕ ಪೈಲ್ವಾನರನ್ನಾಗಿ ರೂಪುಗೊಳಿಸಲಾಗುತ್ತಿದೆ.

1926–27 ರಲ್ಲಿ ಉಸ್ತಾದ್ ಹೊಂಬಾಳೇಗೌಡರು ಆರಂಭಿಸಿದ ಪಡುವಾರಹಳ್ಳಿಯ 'ಹತ್ತೂ ಜನಗಳ ಗರಡಿ'ಯನ್ನು ಸುಮಾರು 40 ವರ್ಷಗಳ ಹಿಂದೆ ಪೈಲ್ವಾನ್ ಕೆಂಚಪ್ಪನವರು ಜೀರ್ಣೋದ್ಧಾರ ಮಾಡಿದರು. ಅವತ್ತಿನ ಕಾಲದಲ್ಲಿ ಭಾರೀ ಹೆಸರು ಮಾಡಿದ್ದ ಕೊಲ್ಲಾಪುರದ ಪೈಲ್ವಾನ್ ಕಲ್ಲಪ್ಪ ಶಿರೋಡ್ ಅವರನ್ನು ತಮ್ಮ ಗರಡಿ ಮನೆಗೆ ಕರೆತಂದು ತರಬೇತಿ ನೀಡಿದ್ದ ಹೆಗ್ಗಳಿಕೆ ಪೈ.ಕೆಂಚಪ್ಪನವರದು. ಬಳಿಕ ಪೈಲ್ವಾನ್ ಮಂಡ್ಯದ ಬೋರಪ್ಪ, ಪೈ.ಸ್ಕೂಟರ್ ಚಿಕ್ಕಣ್ಣ, ಪೈ.ಚಿಕ್ಕಬೋರಯ್ಯ, ಪೈ.ಮೂಗಪ್ಪ, ಪೈ.ಪಾಯಪ್ಪ, ಪೈ.ಸಣ್ಣಪ್ಪನವರು ತಮ್ಮ ತಮ್ಮ ಎತ್ತಿನ ಗಾಡಿಗಳನ್ನು ಕಟ್ಟಿಕೊಂಡು ಸಿಕ್ಕಲ್ಲೆಲ್ಲಾ ಇಟ್ಟಿಗೆ, ಮರಗಳನ್ನು ತಂದು ಗರಡಿ ಮನೆ ಉಳಿಸಿ–ಬೆಳೆಸಿದ್ದಾರೆ.

ಸುಸಜ್ಜಿತ ಗರಡಿ: ಮೈಸೂರಿನಲ್ಲಿಯೇ ಇದೊಂದು ಸುಸಜ್ಜಿತ ಗರಡಿ. ಗರಡಿ ಮನೆ ಉಳಿಸಲು ಗ್ರಾಮಸ್ಥರೇ ಮನೆ ಮನೆಯಿಂದ ಹಣ ಸಂಗ್ರಹಿಸಿ ಗರಡಿ ಮನೆ ಮೇಲೆ 6 ಬಾಡಿಗೆ ರೂಂಗಳನ್ನು ಕಟ್ಟಿ, ಅವುಗಳಿಂದ ಬರುವ ಬಾಡಿಗೆ ಹಣದಲ್ಲಿ ಅಗತ್ಯ ವಸ್ತು ಖರೀದಿ, ನೀರು, ವಿದ್ಯುತ್ ಇನ್ನಿತರೆ ವೆಚ್ಚಗಳನ್ನು ಭರಿಸಲಾಗುತ್ತಿದೆ. ಬೆಳಗ್ಗೆ 5 ಗಂಟೆಯಿಂದ 9 ಗಂಟೆವರೆಗೆ ಹಾಗೂ ಸಂಜೆ 4.30ರಿಂದ ರಾತ್ರಿ 8.30ರವರೆಗೆ ಪೈಲ್ವಾನರು ಮಟ್ಟಿಯಲ್ಲಿ ಮಿಂದೇಳುತ್ತಾರೆ.

ಮಟಾಣಿ ಪೈಲ್ವಾನರೇ ಹೆಚ್ಚು: 'ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೇ' ಎಂಬ ಗಾದೆಯಂತೆ ಚಿಕ್ಕ ವಯಸ್ಸಿನ ಮಕ್ಕಳನ್ನೇ ಸುಸಂಸ್ಕೃತ ವ್ಯಕ್ತಿತ್ವವುಳ್ಳ ಪೈಲ್ವಾನರನ್ನಾಗಿಸುವ ಉದ್ದೇಶ 'ಹತ್ತೂ ಜನಗಳ ಗರಡಿ'ಯದ್ದಾಗಿದೆ. ಬಹುತೇಕ ಚಿಕ್ಕ ವಯಸ್ಸಿನ ಮಕ್ಕಳಿಗೆ ತರಬೇತಿ ನೀಡಲಾಗುತ್ತಿದ್ದು, ದೊಡ್ಡಮಟ್ಟದಲ್ಲಿ ಸಾಧನೆ ಮಾಡಬೇಕಾದರೆ ತರಬೇತಿ ಅತ್ಯವಶ್ಯಕ ಎಂಬುದನ್ನು ಮನದಟ್ಟು ಮಾಡಿಕೊಡಲಾಗುತ್ತಿದೆ. ಸದ್ಯ 12 ರಿಂದ 40 ವರ್ಷ ವಯೋಮಾನದ ಪೈಲ್ವಾನರು ತರಬೇತಿ ಪಡೆಯುತ್ತಿದ್ದು, ಅವರಲ್ಲಿ ಬಹುತೇಕರು ಮಟಾಣಿ ಪೈಲ್ವಾನರೇ ಎಂಬುದು ವಿಶೇಷವಾಗಿದೆ.

ವಿಶೇಷ ಮಟ್ಟಿ: ತರಬೇತಿ ವೇಳೆ ಕುಸ್ತಿ ಮಾಡುವ ಪೈಲ್ವಾನರಿಗೆ ಗಾಯಗಳಾಗದಂತೆ ವಿಶೇಷವಾಗಿ ಮಟ್ಟಿ (ಮಣ್ಣಿನ ಅಖಾಡ) ತಯಾರು ಮಾಡಲಾಗಿದೆ. ಹಾವಿನ ಹುತ್ತದ ಮಣ್ಣಿಗೆ ಲಾವಾಂಚ (ಬೇರು), ಬೇವಿನಮರದ ಹೊಟ್ಟು, ಸಾಸಿವೆ ಎಣ್ಣೆ, ಕಡಲೇಕಾಯಿ ಎಣ್ಣೆ, ಮಜ್ಜಿಗೆ, ಹಾಲು, ಬಾದಾಮಿ, ಅರಿಸಿನ ಪುಡಿ, ಪಚ್ಚ ಕರ್ಪೂರ, ನಿಂಬೆಹಣ್ಣಿನ ರಸವನ್ನು ಬೆರೆಸುವ ಮೂಲಕ ಯಾವುದೇ ಚರ್ಮರೋಗ ಬಾರದಂತೆ ಮುನ್ನೆಚ್ಚರಿಕೆ ವಹಿಸಲಾಗಿದೆ.

ಎಲ್ಲರ ಆಕರ್ಷಣೆ: ಪಡುವಾರಹಳ್ಳಿಯ ಗರಡಿ ಬರೀ ಪಡುವಾರಹಳ್ಳಿಗರಷ್ಟೇ ಅಲ್ಲದೆ ಅಕ್ಕ–ಪಕ್ಕದ ಬಡಾವಣೆ ಯುವಕರ ಆಕರ್ಷಣೆಯೂ ಆಗಿದೆ. ಕುಸ್ತಿ ಸಾಧನೆಗೆ ಬರುವವರಲ್ಲಿ ಹಲವರು ಬೇರೆ ಬೇರೆ ಕಡೆಗಳಿಂದಲೂ ಬಂದು ಅಭ್ಯಾಸ ಮಾಡುತ್ತಿದ್ದಾರೆ. ಕುಸ್ತಿ ಅಭ್ಯಾಸವಷ್ಟೇ ಅಲ್ಲದೆ ದೇಹವನ್ನು ಸದೃಢವಾಗಿಟ್ಟುಕೊಳ್ಳಲು ವ್ಯಾಯಾಮ ಮಾಡಿಸಿ ದೇಹದ ತೂಕವನ್ನು ಇಳಿಸಲಾಗುತ್ತದೆ. ಇದಕ್ಕೆ ಗರಡಿ ಮನೆಯಲ್ಲಿ ಬಹಳಷ್ಟು ಉದಾಹರಣೆಗಳಿದ್ದು, ಕುಸ್ತಿ ಆಸಕ್ತರು ಒಮ್ಮೆಯಾದರೂ ಉಸ್ತಾದ್ ಹೊಂಬಾಳೆಗೌಡರ ಗರಡಿ ಮನೆಗೆ ಭೇಟಿ ನೀಡಲೇಬೇಕು.

ರಕ್ಷಣಾನಿಧಿ ಪಂದ್ಯಾವಳಿಯಲ್ಲಿ ಭಾಗವಹಿಸಿದ್ದೆ...



1963ರ ತುರ್ತು ಪರಿಸ್ಥಿತಿ ವೇಳೆ ಭಾರತೀಯ ರಾಷ್ಟ್ರೀಯ ರಕ್ಷಣಾನಿಧಿ ಸಲುವಾಗಿ ಮೈಸೂರಿನಲ್ಲಿ ನಡೆದ ಕುಸ್ತಿ ಪಂದ್ಯಾವಳಿಯಲ್ಲಿ ಪಡುವಾರಹಳ್ಳಿ ಹೊಂಬಾಳೆಗೌಡರ 'ಹತ್ತೂ ಜನಗಳ ಗರಡಿ'ಯಿಂದ 65 ಕೆಜಿ ವಿಭಾಗದಲ್ಲಿ ಭಾಗವಹಿಸಿ ಪ್ರಥಮ ಬಹುಮಾನ ಗಳಿಸಿ, ಜೊತೆಗೆ 2 ಪಾಯಿಂಟ್ ಕೂಡ ಪಡೆದಿದ್ದೆ. ಗರಡಿ ಮನೆಯಲ್ಲೇ ಮಲಗಿಕೊಂಡು ಮುಂಜಾನೆ 3 ಗಂಟೆಗೆ ಎದ್ದು, ಕುಸ್ತಿ ಸಾಧನೆ ಮಾಡುತ್ತಿದ್ದೆವು. ಮೊದಲಿಗಿಂತ ಇಂದು ಯುವಕರಿಗೆ ಅವಕಾಶಗಳು ಹೆಚ್ಚಾಗಿವೆ. ಕಠಿಣ ಪರಿಶ್ರಮ ಪಟ್ಟರೇ ಸಾಕಷ್ಟು ಸಾಧನೆ ಮಾಡಬಹುದು.

– ಪೈಲ್ವಾನ್ ಉಸ್ತಾದ್ ದಾಸೇಗೌಡ



ಪಡುವಾರಹಳ್ಳಿಯ ಉಸ್ತಾದ್ ಹೊಂಬಾಳೇಗೌಡರ 'ಹತ್ತೂ ಜನಗಳ ಗರಡಿ'ಯ ಜಟ್ಟಿಗಳ ಕಸರತ್ತು.

ರಾಷ್ಟ್ರಮಟ್ಟದ ಪೈಲ್ವಾನರನ್ನು ತಯಾರು ಮಾಡುವ ಸಂಕಲ್ಪ...!

ಪ್ರಸ್ತುತ 40ಕ್ಕೂ ಹೆಚ್ಚು ಮಂದಿ ಪೈಲ್ವಾನರು ತರಬೇತಿ ಪಡೆಯುತ್ತಿದ್ದು, ವಾರಕ್ಕೊಂದು ಹೊಸ ಬ್ಯಾಚ್ ಸೃಷ್ಟಿಯಾಗುತ್ತಿದೆ. ನಮ್ಮ ಗರಡಿ ಮನೆಯಿಂದ ರಾಷ್ಟ್ರಮಟ್ಟದ ಪೈಲ್ವಾನರನ್ನು ತಯಾರಿಸಿ, ದೇಶವನ್ನು ಪ್ರತಿನಿಧಿಸುವ ಸಂಕಲ್ಪ ಮಾಡಿದ್ದೇನೆ ಎಂದು ಪಡುವಾರಹಳ್ಳಿಯ 'ಹತ್ತೂ ಜನಗಳ ಗರಡಿ' ಮನೆಯ ಕುಸ್ತಿ ತರಬೇತುದಾರ ಪೈಲ್ವಾನ್ ಚಂದ್ರು 'ಮೈಸೂರು ಮಿತ್ರ'ನಲ್ಲಿ ತಮ್ಮ ಮನದಾಸೆಯನ್ನು ಹೇಳಿಕೊಂಡರು.



ಸಾಹಸಿ ಬಾಲಕರಿಗೆ ಕುಸ್ತಿಪಟುಗಳ ಪ್ರಾಯೋಗಿಕವಾಗಿ ಕಲಿಸುತ್ತಿರುವ ಪೈಲ್ವಾನ್ ಚಂದ್ರು.

ಉಸ್ತಾದ್ ಹೊಂಬಾಳೇಗೌಡರು ಉಚಿತವಾಗಿ ನೀಡಿರುವ ಜಾಗದಲ್ಲಿ ಸರ್ಕಾರದ ಸಹಕಾರವಿಲ್ಲದೆ ಗ್ರಾಮಸ್ಥರ ಪ್ರೋತ್ಸಾಹದಿಂದಲೇ ಗರಡಿ ಮನೆ ಬೆಳೆದು ಬಂದಿದೆ. ಮಟ್ಟಿ(ಮಣ್ಣು) ಕುಸ್ತಿ ಭಾರತೀಯ ಶೈಲಿಯ ಕುಸ್ತಿಯಾಗಿದ್ದು, ರಾಜ್ಯ, ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಕುಸ್ತಿ ಪಟುಗಳು ಸಾಧನೆ ಮಾಡಬೇಕಾದರೆ ಮ್ಯಾಟ್ ಕುಸ್ತಿ ತರಬೇತಿ ಅಗತ್ಯವಿದೆ. 1996–97ರಲ್ಲಿ ಪಡುವಾರಹಳ್ಳಿ ಗ್ರಾಮಸ್ಥರೆಲ್ಲಾ ಸೇರಿ ಹಣ ಸಂಗ್ರಹಿಸಿ ಗರಡಿ ಮನೆ ಮೇಲೆ 6 ಬಾಡಿಗೆ ರೂಂಗಳನ್ನು ನಿರ್ಮಿಸಿದ್ದಾರೆ. ಬಾಡಿಗೆ ರೂಂಗಳಿಂದ ಬರುವ ಆದಾಯವನ್ನು ಎಣ್ಣೆ, ನೀರು, ವ್ಯಾಯಾಮ ಪರಿಕರಗಳ ಸಂಗ್ರಹ ಮಾಡುವುದಕ್ಕಾಗಿ ಬಳಕೆ ಮಾಡಿಕೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಗರಡಿ ಮನೆ ಕಡೆ ಬರುವ ಜನಪ್ರತಿನಿಧಿಗಳು ಸಹಕಾರ ಮಾಡುವುದಾಗಿ ಹಲವು ದಿನಗಳಿಂದ ಹೇಳುತ್ತಲೇ ಬರುತ್ತಿದ್ದಾರೆಯೇ ಹೊರತು ಯಾರೊಬ್ಬರೂ ಸಹಾಯ ಮಾಡಿಲ್ಲ. ಮಟ್ಟಿ ಜೊತೆಗೆ ಮ್ಯಾಟ್‌ನಲ್ಲಿ ಕುಸ್ತಿ ಅಭ್ಯಾಸ ಮಾಡಿದರೆ ಕುಸ್ತಿ ಕಲಿತಿದ್ದಕ್ಕೂ ಸಾರ್ಥಕ ಭಾವನೆ ಪೈಲ್ವಾನರಲ್ಲಿ ಮೂಡುತ್ತದೆ. ತಮ್ಮ ಸಾಮರ್ಥ್ಯ ಏರುವಷ್ಟೂ ಗೆದ್ದು, ಸಾಧನೆ ಮಾಡುತ್ತಾರೆ. ಆದ್ದರಿಂದ ಗರಡಿ ಮನೆಗೆ ಮ್ಯಾಟ್ ಅಗತ್ಯವಿದೆ. ಅಲ್ಲದೆ ದೈಹಿಕವಾಗಿ ಸದೃಢರಾಗಲೂ ಪೂರಕ ಆಹಾರ ಪದಾರ್ಥಗಳ ಅಗತ್ಯವಿದ್ದು, ಅದರದ್ದೇ ತಿಂಗಳಿಗೆ 30–40 ಸಾವಿರ ರೂ. ಖರ್ಚಾಗಲಿದೆ ಎಂದರು.

ಶಿಸ್ತು: ಕುಸ್ತಿ ಹಾಗೂ ಇತರೆ ಕ್ರೀಡೆಗಳಿಗೂ ಬಹಳ ವ್ಯತ್ಯಾಸವಿದೆ. ಪೈಲ್ವಾನರು ನೆಲ ಮುಟ್ಟಿ ನಮಸ್ಕರಿಸಿ ಅಖಾಡಕ್ಕೆ ಇಳಿಯುತ್ತಾರೆ. ಅಲ್ಲದೆ ತಮಗೆ ಕುಸ್ತಿ ಕಲಿಸಿದ ಗುರುಗಳು ಹಾಗೂ ಗುರು–ಹಿರಿಯರಿಗೆ ಗೌರವ ನೀಡುತ್ತಾರೆ. ಊಟ, ನಿದ್ರೆ, ದೈಹಿಕ ವ್ಯಾಯಾಮ ಹಾಗೂ ತಮ್ಮ ದೈನಂದಿನ ಚಟುವಟಿಕೆಗಳಲ್ಲಿ ಶಿಸ್ತು ಎಂಬುದಿರುತ್ತದೆ. ಬೇರೆ ಕ್ರೀಡೆಗಳಲ್ಲಿ ಮೊದಲು ಶುಲ್ಕ ಕಟ್ಟಿ ತರಬೇತಿ ಪಡೆಯಬೇಕು. ಆದರೆ ಗರಡಿ ಮನೆಯಲ್ಲಿ ಕುಸ್ತಿ ಕಲಿಯಲು ಯಾವುದೇ ಶುಲ್ಕ ಪಡೆಯುವುದಿಲ್ಲ. ತರಬೇತಿ ನೀಡಿ ಸಾಧಕ ಪೈಲ್ವಾನರನ್ನಾಗಿಸುವುದು ಗರಡಿ ಮನೆಯ ಕರ್ತವ್ಯವಾಗಿದೆ ಎಂದು ತಿಳಿಸಿದರು.

ಗರಡಿಯಲ್ಲಿ ಪಳಗಿದ ಪಡುವಾರಹಳ್ಳಿಯ ಸಾಹಸಿ 'ಪೈಲ್ವಾನರು'...

ಪೈಲ್ವಾನ್ ಕೆಂಚಪ್ಪ ಅವರ ನಂತರ ಪೈ.ಬೋರಪ್ಪ, ಪೈ.ಕಲ್ಲೈ ಜವರಪ್ಪ, ಪೈ.ಬಟೇರಿ ದೇವೇಗೌಡ, ಪೈ.ದೊಡ್ಡ ಕರಿಯಪ್ಪನವರ ಮಗ ಪೈ.ರಘು, ಪೈ. ರಾಮಣ್ಣ, ಪೈ.ತಿಮ್ಮಯ್ಯ, ಪೈ.ಸ್ವಾಮಿ, ಪೈ.ರಾಮು, ಪೈ.ಮಾದೇಶು, ಪೈ.ಚೌಡಯ್ಯ(ಹೋಂ ಗಾರ್ಡ್), ಪೈ.ಕೆಂಪೇಗೌಡ, ಪೈ.ಚಂದ್ರು, ಪೈ. ಮಟ್ಟಿ, ಪೈ.ಕರಿಯಪ್ಪ, ಪೈ.ಕೃಷ್ಣ, ಪೈ.ಮರಿಗೆಜ್ಜೆ ಕೃಷ್ಣ, ಪೈ.ಪದ್ಮನಾಭ್, ಪೈ.ರಾಮು, ಪೈ.ಕ್ಲಾಸಿಕ್ ಭೈರವ, ಪೈ.ಪ್ರವೀಣ್, ಪೈ.ಅಪ್ಪು, ಪೈ.ಸಂದೀಪ್, ಪೈ.ರವಿ, ಪೈ.ಮಂಜೇಶ, ಪೈ.ಶೀನಾನಾಯ್ಕ, ಪೈ.ಚಂದ್ರು ನಾಯಕ್, ಪೈ.ಪ್ರತಾಪ, ಪೈ.ರವಿ (ಕುಳ್ಳಪ್ಪ), ಪೈ.ಮಧು(ಮೈಪಾಲ್), ಪೈ.ಕೀರ್ತಿ, ಪೈ. ಚಂದ್ರ, ಪೈ. ಷಣ್ಮುಗ ನಾಯಕ್, ಪೈ.ಸುಮೀತ್, ಪೈ.ಕಾರ್ತಿ, ಪೈ.ಶರತ್, ಮಂಜೇಶ (ರೈಲ್ವೆ) ಸೇರಿ ಪಡುವಾರಹಳ್ಳಿಯ ಕೆಲ ಪೈಲ್ವಾನ್‌ನರು ಹಾಗೂ ಅಕ್ಕ–ಪಕ್ಕ ಬಡಾವಣೆಗಳು, ಊರುಗಳಿಂದ ಬಂದು ಕುಸ್ತಿ ಕಲಿತವರು ಸೇರಿ ಇಲ್ಲಿಯವರೆಗೆ 5–6 ಸಾವಿರ ಪೈಲ್ವಾನರನ್ನು ಈ ಗರಡಿ ಹುಟ್ಟುಹಾಕಿದೆ.

ಬದುಕಿನ ಪಯಣ ಮುಗಿಸಿದವರ

ಮುಕ್ತಿದಾತೆ ಶರಣೆ ನೀಲಮ್ಮ

ಲೇಖನ: ಎಸ್.ಬಿ.ದೇವರಾಜ

'ಹೆದರದಿರು ಮನವೇ ಬೆದರದಿರು ತನುವೇ ನಿಜವನರಿತು ನಿಶ್ಚಿಂತನಾಗಿರು...'

ಶಿವಶರಣೆ ಅಕ್ಕಮಹಾದೇವಿ ವಚನದ ಈ ಸಾಲು, ಮೈಸೂರಿನ ಶರಣೆ ನೀಲಮ್ಮ ಅವರಿಗೆಂದೇ ಕಟ್ಟಿದಂತಿದೆ. ಕೈ ಹಿಡಿದ ಪತಿಯೊಂದಿಗೆ ಸ್ಮಶಾನದಲ್ಲಿ ನೆಲೆಸಿದ್ದ ಇವರು, ಅಲ್ಲಿಯೇ ಕಾಯಕ ಕಂಡುಕೊಂಡು ಯಾವುದಕ್ಕೂ ಹೆದರದೆ, ಬೆದರದೆ ಜೀವನದ ಸತ್ಯವನ್ನರಿತು ಶ್ರಮದಲ್ಲೇ ನೆಮ್ಮದಿ ಕಂಡುಕೊಂಡಿದ್ದಾರೆ.

ಬದುಕಿನ ಪಯಣದ ಅಂತಿಮ ನಿಲ್ದಾಣ ತಲುಪಿದವರಿಗೆ ಮುಕ್ತಿ ದಾತೆಯಾಗಿ, ಸಾರ್ಥಕ ಜೀವನ ನಡೆಸುತ್ತಿದ್ದಾರೆ. ಗಂಡಿಗೆ ಸರಿಸಮಾನವಾಗಿ ನಿಂತಿರುವ ಎಲ್ಲಾ ಕ್ಷೇತ್ರದ ಮಹಿಳಾಮಣಿಗಳಿಗಿಂತ ಈ ನೀಲಮ್ಮ ಒಂದಿಷ್ಟು ಎತ್ತರ. ಮನದಲ್ಲಿ ಪತಿಯ ಅಗಲಿಕೆ ನೋವು, ಹೆಗಲಲ್ಲಿ ಕುಟುಂಬ ನೊಗದ ಭಾರ. ಆದರೂ ದಿಟ್ಟತನದಿಂದ ಮಸಣದಲ್ಲೇ ಉದ್ಯೋಗ ಕಂಡುಕೊಂಡ ಗಟ್ಟಿಗಿತ್ತಿ. ಹಾರೆ-ಗುದ್ದಲಿ ಹಿಡಿದು ಆಳವಾದ ಗುಂಡಿ ತೆಗೆದು ಅಗಲಿದವರ ಸಂಸ್ಕಾರಕ್ಕೆ ನೆರವಾಗುವ ಮಹಾಮಾತೆ. 65ರ ಇಳಿ ವಯಸ್ಸಿನಲ್ಲೂ ಇದೇ ಕಾಯಕ ನೆಚ್ಚಿಕೊಂಡಿರುವ ಮೈಸೂರಿನ ವಿದ್ಯಾರಣ್ಯ ಪುರಂ ವೀರಶೈವ ರುದ್ರಭೂಮಿಯ ನೀಲಮ್ಮ, ತಮ್ಮ ಜೀವನದ ಹೆಜ್ಜೆಗಳನ್ನು ಮೆಲುಕು ಹಾಕಿದ್ದಾರೆ...

ಹೆಚ್.ಡಿ.ಕೋಟೆ ತಾಲೂಕು ಸರಗೂರು ಸಮೀಪದ ಕೊತ್ತೇಗಾಲ ನನ್ನ ಹುಟ್ಟೂರು. ಮೈಸೂರಿನ ಅಗ್ರಹಾರದ ಎಂ.ಸಿ.ಬಸವರಾಜು ಅವರೊಂದಿಗೆ ವಿವಾಹವಾದ ಕ್ಷಣದಿಂದ ಇದೇ ನಮ್ಮೂರು. ಮನೆಯವರು(ಪತಿ) ಹತ್ತಾರು ಕೆಲಸ ಮಾಡಿದರು. ಆದರೆ ಯಾವುದೂ ಅವರ ಕೈ ಹತ್ತಲಿಲ್ಲ. ಕೊನೆಗೆ ಇಲ್ಲಿಗೆ ಬಂದು ನೆಲೆಸಬೇಕಾಯ್ತು. ಇಲ್ಲಿ ಬಂದವರು ಕೂರಲೆಂದು ಪಾಲಿಕೆಯವರು ಕಟ್ಟಿಸಿದ್ದ ಕಟ್ಟಡಕ್ಕೆ ಸಮಾಜದ ಮುಖಂಡರು ಕಿಟಕಿ, ಬಾಗಿಲು ಹಾಕಿಸಿ ನಮಗೆ ವಾಸಕ್ಕೆ ಅನುವು ಮಾಡಿಕೊಟ್ಟರು. ವಾಸಕ್ಕೆ ಒಂದು ಗೂಡು, ಕೂಳಿಗೊಂದು ಕೆಲಸ. ಜೀವನ ಆರಾಮಾಗಿತ್ತು. 1991ರಿಂದ ರುದ್ರಭೂಮಿಯೇ ನಮಗೆ ನೆಲೆಯಾಯಿತು.

ಅಂತಿಮ ಸಂಸ್ಕಾರ ನೆರವೇರಿಸುವುದರಿಂದ ಪತಿಗೆ ಸಿಗುತ್ತಿದ್ದ ಹಣದಲ್ಲೇ ಬದುಕು ನಡೆಯುತ್ತಿತ್ತು. ಆದರೆ 2005ರಲ್ಲಿ ಅವರು ಹೃದಯಾಘಾತದಿಂದ ನಿಧನರಾದರು. ಅಂದಿನಿಂದ ನನಗೆ ಜೀವನದ ನಿಜವಾದ ಸವಾಲು ಎದುರಾಯಿತು. ಇಬ್ಬರು ಮಕ್ಕಳೊಂದಿಗೆ ಹೊರ ಹೋಗಿ ನೆಲೆಸುವುದು ಸುಲಭದ ಮಾತಾಗಿರಲಿಲ್ಲ. ಪತಿ ಸಂಸ್ಕಾರ ಮಾಡುತ್ತಿದ್ದಾಗ ಗುಂಡಿ ತೆಗೆಯುವವರೇ ಬೇರೆ ಇದ್ದರು. ನಂತರ ನಾನೇ ಆ ಕೆಲಸಕ್ಕಿಳಿದೆ.

ಮಕ್ಕಳಿಬ್ಬರು ಕೆಲಸಕ್ಕೆ ಹೋಗುವಾಗ ನಾನೊಬ್ಬಳೇ ಇಲ್ಲಿ ಇರುತ್ತಿದ್ದೆ. ಬೆಕ್ಕು-ನಾಯಿಗಳೊಂದಿಗೆ ಮಾತನಾಡಿಕೊಂಡು, ಮನೆ ಕೆಲಸ ಮಾಡಿಕೊಂಡು, ಗುಂಡಿ ತೆಗೆಯುವ ಕೆಲಸ ಬಂದಾಗ ಅದನ್ನೂ ನಿಭಾಯಿಸಿಕೊಂಡು ಬಂದೆ. ಮಗ ಚನ್ನಬಸವ ದೇವರು ಎಲೆಕ್ಟ್ರಿಕ್ ಕೆಲಸ ಮಾಡಿಕೊಂಡು ನನ್ನ ಜೊತೆಯಲ್ಲೇ ಇದ್ದಾನೆ. ಸೊಸೆ, ಇಬ್ಬರು ಮೊಮ್ಮಕ್ಕಳು ಇಲ್ಲೇ ಇದ್ದಾರೆ. ಮತ್ತೊಬ್ಬ ಮಗ ಬಸವರಾಜೇಂದ್ರ ಪ್ರಸಾದ್ ಬೆಂಗಳೂರಿನಲ್ಲಿ ಜೆಎಸ್‌ಎಸ್ ಸಂಸ್ಥೆಯಲ್ಲಿ ಕೆಲಸದಲ್ಲಿದ್ದಾನೆ.

ಆಗ ಗುಂಡಿಗೆ 200 ರೂ. ಇತ್ತು. ಈಗ ಸಾವಿರ ರೂ. ಮಾಡಿದ್ದಾರೆ. ಇತ್ತೀಚೆಗೆ ಕಣ್ಣಿನ ಶಸ್ತ್ರಚಿಕಿತ್ಸೆ ಆಗಿದ್ದರಿಂದ ಮಗ ಸಹಾಯ ಮಾಡುತ್ತಾನೆ. ನನ್ನ ಕೈಲಿ ಆಗುವವರೆಗೂ ಈ ಕೆಲಸ ಮುಂದುವರೆಸುತ್ತೇನೆ. ನಾವು ಹೀಗೆ ಬದುಕಬೇಕೆಂಬುದು ದೇವರ ನಿರ್ಧಾರ. ನಾವು ಏನೇ ಅಂದು ಕೊಂಡರೂ ಅಂತಿಮವಾಗಿ ನಡೆಯುವುದು ದೇವರದ್ದೇ. ಅವನು ತೋರಿದ್ದನ್ನು ನಾವು ಮಾಡಲೇಬೇಕು. ನನ್ನ ಮನೆಯವರದ್ದು(ಪತಿ) ಹುಣ್ಣಿನ ಸಾವು. ಅವರ ದೇಹವನ್ನು ನಮ್ಮ ಮನೆ ಪಕ್ಕದಲ್ಲೇ ಮಣ್ಣು ಮಾಡಿದ್ದೇವೆ. ಬೇಸರವಾದಾಗ ಸಮಾಧಿ ಬಳಿಯೇ ಕುಳಿತುಕೊಳ್ಳುತ್ತೇವೆ. ಈಗಲೂ ನಾವಿಬ್ಬರೂ ಜೊತೆಯಲ್ಲೇ ಇದ್ದೀವಿ ಅನ್ನಿಸುತ್ತದೆ.

ಸತ್ತಾಗ ಯಾರೂ ಏನನ್ನೂ ತೆಗೆದುಕೊಂಡು ಹೋಗೋದಿಲ್ಲ. ಆದರೆ ಬದುಕುವುದಕ್ಕೆ ಊಟ, ಬಟ್ಟೆ, ಮನೆ, ಒಂದು ಕೆಲಸ, ಖರ್ಚಿಗೆ ಒಂದಿಷ್ಟು ಹಣ ಇದ್ದರೆ ಸಾಕು. ಅಷ್ಟನ್ನು ದೇವರು ನಮಗೆ ಕರುಣಿಸಿದ್ದಾನೆ. ಮುಖ್ಯವಾಗಿ ನೆಮ್ಮದಿ ಸಿಕ್ಕಿದೆ. ಆರೋಗ್ಯವಾಗಿ, ನೆಮ್ಮದಿಯಾಗಿ ಇದ್ದೇವೆ. ನಾವು ದುಡಿತೀವಿ, ತಿಂತೀವಿ. ಹಣ -ಆಸ್ತಿಯಿಂದಲೇ ನೆಮ್ಮದಿ, ಸುಖ, ತೃಪ್ತಿ ಸಿಗುವುದಿಲ್ಲ. ಹಣ ಬಂದಷ್ಟು ದುರಾಸೆ ಹೆಚ್ಚಾಗುತ್ತದೆ. ಆಗ ಖಂಡಿತವಾಗಿ ನೆಮ್ಮದಿ ಇರುವುದಿಲ್ಲ. ಏನೇ ಆದರೂ ಮಿತಿಯಾಗಿರಬೇಕು. ಊಟ ಹೆಚ್ಚಾದರೂ ಅನಾರೋಗ್ಯ ವಾಗುತ್ತದೆ. ಜೀವನದಲ್ಲಿ ನೆಮ್ಮದಿ ಬೇಕು ಎಂದರೆ ಬೇರೆ ಯವರ ವಿಷಯ ವನ್ನು ತಲೆಗೆ ಹಚ್ಚಿಕೊಳ್ಳಬಾರದು. ನಮ್ಮ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಬೇಕು. ಕೆಲಸದಲ್ಲಿ ತೃಪ್ತಿ ಕಾಣಬೇಕು. ನಿಯತ್ತಾಗಿರಬೇಕು, ಸುಳ್ಳು, ಮೋಸ ಮಾಡಬಾರದು. ಸ್ಮಶಾನದಲ್ಲೂ ಆಸ್ತಿಗಾಗಿ ಜಗಳ ಆಡಿದವರನ್ನು ನೋಡಿದ್ದೇನೆ. ಇಲ್ಲಿಗೆ ಬಂದರೂ ನಿಮಗೆ ಜೀವನ ಅರ್ಥವಾಗಿಲ್ಲ ಎಂದು ನಾನೇ ಬೈಯ್ದು ಕಳುಹಿಸಿದ್ದೇನೆ. ಜನ ಸ್ಮಶಾನಕ್ಕೆ ಬಂದು ಹೋದರೆ ಸ್ನಾನ ಮಾಡುತ್ತಾರೆ. ಯಾರಾದರೂ ದೇವಸ್ಥಾನದಿಂದ ಮನೆಗೆ ಹೋಗಿ ಸ್ನಾನ ಮಾಡುತ್ತಾರಾ?. ಸ್ಮಶಾನ ದೇವಾಲಯವಿದ್ದಂತೆ. ಸತ್ತವರೆಲ್ಲಾ ದೇವರು. ಆದಕ್ಕಾಗಿಯೇ ಶವಕ್ಕೆ ಪೂಜೆ ಮಾಡಿ ಸಂಸ್ಕಾರ ಮಾಡುವುದು. ರುದ್ರಭೂಮಿಯಲ್ಲಿ ಶಿವ ನೆಲೆಸಿದ್ದಾನೆ ಎಂಬ ನಂಬಿಕೆ ಇದೆ. ಆದರೂ ಜನರಲ್ಲಿ ಭ್ರಮೆ ಅಂಟಿಕೊಂಡಿದೆ. ಅದಕ್ಕೆ ಯಾವ ಔಷಧಿಯೂ ಇಲ್ಲ. ಬಡವರಾಗಿರಲಿ, ಶ್ರೀಮಂತರಾಗಿರಲಿ, ಯಾರು ಯಾವ ರೀತಿಯಲ್ಲಾದರೂ ಬದುಕಿರಲಿ, ಉಸಿರು ಚೆಲ್ಲಿದ ನಂತರ ಎಲ್ಲರೂ ಒಂದೇ. ಎಲ್ಲರನ್ನೂ ಒಂದೇ ರೀತಿಯಲ್ಲಿ ಸಂಸ್ಕಾರ ಮಾಡುವುದು, ಎಲ್ಲರನ್ನೂ ಒಂದೇ ಮಣ್ಣಿನಲ್ಲಿ ಮುಚ್ಚುವುದು. ನನಗೂ ಒಳ್ಳೆಯ ಸೀರೆ, ಚಿನ್ನದ ಒಡವೆ ಹಾಕಿಕೊಳ್ಳಬೇಕೆಂಬ ಆಸೆಗಳಿದ್ದವು. ಆದರೆ ಇಲ್ಲಿ ನೆಲೆಸಿದ ಮೇಲೆ ಅಂತಹ ಯಾವುದೇ ಆಸೆಗಳಿಲ್ಲ. ಎಲ್ಲವೂ ನಶ್ವರ, ನಾಲ್ಕಾರು ಜನರಿಗೆ ಒಳ್ಳೆಯದು ಮಾಡಿದರೆ ದೇವರು ಕಾಯುತ್ತಾನೆ. ಈವತ್ತಿನವರೆಗೂ ನನಗೆ ಯಾವ ಭಯವೂ ಆಗಿಲ್ಲ. ಭೂತ, ಪ್ರೇತ ಎನ್ನುವುದೆಲ್ಲಾ ಭ್ರಮೆ. ಕೆಲವರು ಇಲ್ಲದ್ದನ್ನೆಲ್ಲಾ ತಲೆಗೆ ತುಂಬಿಕೊಳ್ಳುತ್ತಾರೆ. ಎಲ್ಲವೂ ದೇವರು ಸೂಚಿಸಿದಂತೆ ನಡೆಯುತ್ತದೆ ಎನ್ನುವುದನ್ನು ತಿಳಿದುಕೊಳ್ಳಬೇಕು.

> "ವಯಸ್ಸಿನ ಮಕ್ಕಳು ಸಣ್ಣ ವಿಚಾರಕ್ಕೆ ಜೀವ ಕಳೆದುಕೊಳ್ಳುತ್ತಾರೆ. ಅಂತಹವರ ಸಂಸ್ಕಾರ ಮಾಡುವುದನ್ನು ನೋಡಿದಾಗ ತುಂಬಾ ನೋವಾಗುತ್ತದೆ. ಮಕ್ಕಳಿಗೆ ಪ್ರೀತಿಯ ಜೊತೆಗೆ ಕಷ್ಟವನ್ನೂ ತಿಳಿಸಬೇಕು. ಮಕ್ಕಳಿಗೆ ಧೈರ್ಯ ತುಂಬಬೇಕು. ತುಂಬಾ ಪ್ರೀತಿಯಿಂದ ಬೆಳೆಸಿ, ಸಣ್ಣ ಕಷ್ಟವನ್ನೂ ಸಹಿಸಲಾಗದ ಮನಃಸ್ಥಿತಿಗೆ ದೂಡಬಾರದು. ಕಷ್ಟ ಬಂದೇ ಬರುತ್ತದೆ. ಹಾಗಂತ ಪ್ರಾಣ ಕಳೆದುಕೊಳ್ಳಬಾರದು. ಯಾವುದೂ ಶಾಶ್ವತವಲ್ಲ, ಎಲ್ಲವೂ ಸರಿ ಹೋಗುತ್ತದೆ ಎಂಬ ಗಟ್ಟಿ ಮನಸ್ಸಿರಬೇಕು. ಅತ್ತು-ಕರೆದು ಮಣ್ಣು ಮಾಡಿ, ಗೋರಿ ಕಟ್ಟಿಸಿ ಹೋದವರು ಮತ್ತೆ ಯಾವಾಗಲೋ ಬರುತ್ತಾರೆ. ದಯವಿಟ್ಟು 2-3 ತಿಂಗಳಿಗೊಮ್ಮೆ ಸಮಯ ಸಿಕ್ಕಾಗ ಇಲ್ಲಿಗೆ ಬನ್ನಿ. ಗೋರಿಯನ್ನು ಸ್ವಚ್ಛಗೊಳಿಸಿ, ಒಂದು ಬಿಂದಿಗೆ ನೀರು ಹಾಕಿ, ಇಲ್ಲೇ ಇರುವ ಒಂದೆರಡು ಬಿಲ್ವಪತ್ರೆ ಎಸಳಿಟ್ಟು ಕೈ ಮುಗಿದರೆ ಅವರ ಆತ್ಮಕ್ಕೂ ಶಾಂತಿ ಸಿಗುವುದರ ಜೊತೆಗೆ ಈ ಜಾಗವೂ ಸ್ವಚ್ಛವಾಗಿರುತ್ತದೆ.
> -ಶರಣೆ ನೀಲಮ್ಮ



ಮೈಸೂರಿನ ಶರಣೆ ನೀಲಮ್ಮ

ಗಂಡಿಗೆ ಸರಿಸಮಾನವಾಗಿ ನಿಂತಿರುವ ಎಲ್ಲಾ ಕ್ಷೇತ್ರದ ಮಹಿಳಾ ಮಣಿಗಳಿಗಿಂತ ಈ ನೀಲಮ್ಮ ಒಂದಿಷ್ಟು ಎತ್ತರ. ಮನದಲ್ಲಿ ಪತಿಯ ಅಗಲಿಕೆ ನೋವು, ಹೆಗಲಲ್ಲಿ ಕುಟುಂಬ ನೊಗದ ಭಾರ. ಆದರೂ ದಿಟ್ಟತನದಿಂದ ಮಸಣದಲ್ಲೇ ಉದ್ಯೋಗ ಕಂಡು ಕೊಂಡ ಗಟ್ಟಿಗಿತ್ತಿ. ಹಾರೆ-ಗುದ್ದಲಿ ಹಿಡಿದು ಆಳವಾದ ಗುಂಡಿ ತೆಗೆದು ಅಗಲಿದವರ ಸಂಸ್ಕಾರಕ್ಕೆ ನೆರವಾಗುವ ಮಹಾಮಾತೆ.



ಹಣ-ಆಸ್ತಿಯಿಂದಲೇ ನೆಮ್ಮದಿ, ಸುಖ, ತೃಪ್ತಿ ಸಿಗುವುದಿಲ್ಲ. ಹಣ ಬಂದಷ್ಟು ದುರಾಸೆ ಹೆಚ್ಚಾಗುತ್ತದೆ. ಆಗ ಖಂಡಿತವಾಗಿ ನೆಮ್ಮದಿ ಇರುವುದಿಲ್ಲ. ಏನೇ ಆದರೂ ಮಿತಿಯಾಗಿರಬೇಕು. ಊಟ ಹೆಚ್ಚಾದರೂ ಅನಾರೋಗ್ಯ ವಾಗುತ್ತದೆ. ಜೀವನದಲ್ಲಿ ನೆಮ್ಮದಿ ಬೇಕು ಎಂದರೆ ಬೇರೆ ಯವರ ವಿಷಯವನ್ನು ತಲೆಗೆ ಹಚ್ಚಿಕೊಳ್ಳ ಬಾರದು. ನಮ್ಮ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಬೇಕು. ಕೆಲಸದಲ್ಲಿ ತೃಪ್ತಿ ಕಾಣಬೇಕು. ನಿಯತ್ತಾಗಿರಬೇಕು, ಸುಳ್ಳು, ಮೋಸ ಮಾಡಬಾರದು.

ಆಗ ಗುಂಡಿಗೆ 200 ರೂ. ಇತ್ತು, ಈಗ ಸಾವಿರ ರೂ. ಮಾಡಿದ್ದಾರೆ. ಇತ್ತೀಚೆಗೆ ಕಣ್ಣಿನ ಶಸ್ತ್ರಚಿಕಿತ್ಸೆ ಆಗಿದ್ದರಿಂದ ಮಗ ಸಹಾಯ ಮಾಡುತ್ತಾನೆ. ನನ್ನ ಕೈಲಿ ಆಗುವವರೆಗೂ ಈ ಕೆಲಸ ಮುಂದುವರೆಸುತ್ತೇನೆ. ನಾವು ಹೀಗೆ ಬದುಕ ಬೇಕೆಂಬುದು ದೇವರ ನಿರ್ಧಾರ. ನಾವು ಏನೇ ಅಂದು ಕೊಂಡರೂ ಅಂತಿಮವಾಗಿ ನಡೆಯುವುದು ದೇವರದ್ದೇ. ಅವನು ತೋರಿದ್ದನ್ನು ನಾವು ಮಾಡಲೇಬೇಕು.

ದೇಹದಾನದ ಬಗ್ಗೆ ಅರಿವು

ಸತ್ತವರಿಗೆ ಗುಡಿ ನಿರ್ಮಿಸುವ ಶ್ರೇಷ್ಠ ಕಾಯಕ ಯೋಗಿ ನೀಲಮ್ಮ, ಮೃತದೇಹ ದಾನದ ಬಗ್ಗೆಯೂ ಅರಿವು ಮೂಡಿಸುತ್ತಿರುವುದು ವಿಶೇಷ. ತಮ್ಮ ಕುಟುಂಬ ದವರೊಡಗೂಡಿ ಜೆಎಸ್‌ಎಸ್ ವೈದ್ಯಕೀಯ ಕಾಲೇಜಿಗೆ ದೇಹದಾನಕ್ಕೆ ನಿರ್ಧರಿಸಿದ ನಂತರವೇ ಇತರರಿಗೆ ತಿಳಿಹೇಳುತ್ತಿದ್ದಾರೆ. ಸ್ಮಶಾನದ ಜಾಗವೆಲ್ಲಾ ಗೋರಿಗಳಿಂದ ತುಂಬಿ ಹೋಗಿದೆ. ಈಗಾಗಲೇ ಮಣ್ಣು ಮಾಡಿರುವ ಸ್ಥಳದಲ್ಲೇ ಗುಂಡಿ ತೆಗೆದು ಅಲ್ಲಿಯೇ ಅಂತ್ಯಸಂಸ್ಕಾರ ಮಾಡುವ ಸ್ಥಿತಿ ನಿರ್ಮಾಣವಾಗಿದೆ. ನೀಲಮ್ಮ ಗುಂಡಿ ತೆಗೆಯುವಾಗ ಅಸ್ಥಿ ಸಿಕ್ಕರೆ ಬಿಸಾಡದೆ ಅದನ್ನು ಆಳವಾದ ಗುಂಡಿಯಲ್ಲಿ ಮುಚ್ಚುತ್ತಾರೆ. ಮೃತದೇಹ ದಾನ ಮಾಡಿದರೆ ಇಂತಹ ದುಸ್ಥಿತಿಯನ್ನು ಆದಷ್ಟು ತಪ್ಪಿಸುವುದರ ಜೊತೆಗೆ ನೂರಾರು ವೈದ್ಯಕೀಯ ವಿದ್ಯಾರ್ಥಿಗಳ ಕಲಿಕೆಗೂ ಸಹಾಯವಾಗುತ್ತದೆ. ಈ ನಿಟ್ಟಿನಲ್ಲಿ ಅರಿವು ಮೂಡಿಸುವ ಮೂಲಕ ನೀಲಮ್ಮ ಮಾದರಿಯಾಗಿದ್ದಾರೆ.


ನಗೆ-ಹನಿ

ಹೆಂಡತಿ: ನೋಡ್ರಿ ನಮ್ಮ ಮಗ ತುಂಬಾ ಹಣ ಕದ್ದು ಖರ್ಚು ಮಾಡುತ್ತಿದ್ದಾನೆ.
ಗಂಡ: ಹಣವನ್ನು ಅವನಿಗೆ ಸಿಗದಂತೆ ಬಚ್ಚಿಡು.
ಹೆಂಡತಿ: ಎಲ್ಲೇ ಬಚ್ಚಿಟ್ರು ಪತ್ತೆ ಮಾಡಿ ಕದೀತಾನೆ ರೀ...
ಗಂಡ: ಹಾಗಾದರೆ ಒಂದು ಕೆಲಸ ಮಾಡು; ಅವನ ಬುಕ್‌ನಲ್ಲಿ ಬಚ್ಚಿಡು. ಮುಂದಿನ ಎಕ್ಸಾಂ ಬರೋವರೆಗೂ ಅವನು ನೋಡಲ್ಲ.

ಎಸ್‌ಎಸ್‌ಎಲ್‌ಸಿ ಹುಡುಗ ಫಸ್ಟ್ ರ್‍ಯಾಂಕ್ ಬಂದಿದ್ದ. ಆಗ ಜನ ಹೇಳಿದರು ಅವನು ಪ್ರತಿಭಾವಂತ ಅಂತ. ಅದೇ ಹುಡುಗ ಪಿಯುಸಿಯಲ್ಲಿ ಫೇಲಾದಾಗ ಗೊತ್ತಾಯ್ತು ಅದಕ್ಕೆ ಕಾರಣ 'ಪ್ರತಿಭಾ' ಅಂತ.

ಅಮ್ಮ: ಮಗನೇ ರಾತ್ರಿಯೆಲ್ಲಾ ಒಬ್ಬನೇ ಇರುತ್ತೀಯಲ್ಲಾ ಭೂತ, ಗೀತಾ ಬಂದರೆ ಏನು ಮಾಡುತ್ತೀಯಾ?
ಮಗ: ಭೂತ ಬಂದರೆ ಒದ್ದು ಓಡಿಸುತ್ತೇನೆ. ಗೀತಾ ಬಂದರೆ ಮದುವೆ ಮಾಡಿಕೊಳ್ಳುತ್ತೇನೆ.

ಮೊಮ್ಮಗ: ಅಜ್ಜಿ ನಾನು ಒಲಿಂಪಿಕ್‌ನಲ್ಲಿ ರನ್ನಿಂಗ್ ರೇಸ್‌ಗೆ ಹೋಗ್ತಾ ಇದ್ದೀನಿ, ಆಶೀರ್ವಾದ ಮಾಡಿ.
ಅಜ್ಜಿ: ಎಲ್ಲಾದ್ರು ಬಿದ್ದಿಗಿದ್ದೀಯಾ, ನಿಧಾನಕ್ಕೆ ಓಡು ಮಗ



ಹೊಗೇನಕಲ್ ಫಾಲ್ಸ್‌ನಲ್ಲಿ ತೇಲುವ ಅಂಗಡಿಗಳಿವೆ...!

✍ ಎಂ.ಟಿ.ಯೋಗೇಶ್ ಕುಮಾರ್

ಕರ್ನಾಟಕ-ತಮಿಳುನಾಡು ಗಡಿ ಭಾಗದಲ್ಲಿರುವ ಹೊಗೇನಕಲ್ ಫಾಲ್ಸ್‌ನಲ್ಲಿ ತೇಲುವ ಅಂಗಡಿಗಳು ಹಲವಾರು ಕುಟುಂಬಗಳ ಜೀವನ ನಿರ್ವಹಣೆಗೆ ಸಹಕಾರಿಯಾಗಿವೆ.

'ಆಗದು ಎಂದು ಕೈ ಕಟ್ಟಿ ಕುಳಿತರೆ ಸಾಗದು ಕೆಲಸವು ಮುಂದೆ, ಮನಸೊಂದಿದ್ದರೆ ಮಾರ್ಗವು ಉಂಟು ಕೆಚ್ಚೆದೆ ಇರಬೇಕೆಂದು' ವರನಟ ಡಾ.ರಾಜ್ ಕುಮಾರ್ ಅವರ 'ಬಂಗಾರದ ಮನುಷ್ಯ' ಚಿತ್ರದ ಗೀತೆಗೆ ಅನ್ವರ್ಥನಾಮದಂತೆ ಹಲವಾರು ವ್ಯಾಪಾರಿಗಳು ಹರಿಯುವ ನೀರಿನಲ್ಲಿ ತೇಲುವ ಈ ಅಂಗಡಿಗಳನ್ನು ನಡೆಸುತ್ತ ಪ್ರವಾಸಿಗರ ಬಾಯಾರಿಕೆಯನ್ನು ತಣಿಸುವುದರೊಂದಿಗೆ ಬಾಯಿಗೆ ರುಚಿ-ರುಚಿಯಾದ ತಿಂಡಿ ತಿನಿಸುಗಳನ್ನು ಒದಗಿಸುತ್ತಾರೆ.

ವಿದೇಶಗಳಲ್ಲಿ ತೇಲುವ ಅಂಗಡಿಗಳು ಪ್ರವಾಸೋದ್ಯಮಕ್ಕೆ ಇಂಬು ನೀಡಿ, ಪ್ರವಾಸಿಗರನ್ನು ಆಕರ್ಷಿಸುವ ಮಾದರಿಯಲ್ಲೇ ಕರ್ನಾಟಕ-ತಮಿಳುನಾಡು ಗಡಿ ಭಾಗದಲ್ಲಿರುವ ಹೊಗೇನಕಲ್ ಫಾಲ್ಸ್‌ನಲ್ಲೂ ತೇಲುವ ಅಂಗಡಿಗಳು ಪ್ರವಾಸಿಗರಿಗೆ ವಿಭಿನ್ನವಾದ ಅನುಭವ ನೀಡುವ ಮೂಲಕ ಗಮನ ಸೆಳೆಯುತ್ತಿವೆ.

ಆಳೆತ್ತರದಿಂದ ಜೋರಾಗಿ ಧುಮ್ಮಿಕ್ಕುವ ನೀರು ಬೃಹತ್ ಬಂಡೆಗಳ ನಡುವೆ ಹಾದು ಹೋಗುವ ಸುಂದರ, ನಯನ ಮನೋಹರ ದೃಶ್ಯವನ್ನು ಕಣ್ತುಂಬಿಕೊಳ್ಳಲು ಕರ್ನಾಟಕ ಹಾಗೂ ತಮಿಳು ನಾಡಿನ ವಿವಿಧೆಡೆಯಿಂದ ಪ್ರವಾಸಿಗರು ಬಂದು ಹೊಗೇನಕಲ್ ವೈಭವವನ್ನು ಆಸ್ವಾದಿಸುತ್ತಾರೆ. ಹೊಗೇನಕಲ್‌ಗೆ ಬಂದ ಬಹುತೇಕರು ತೆಪ್ಪದಲ್ಲಿ ಬೋಟಿಂಗ್‌ಗೆ ಹೋಗುತ್ತಾರೆ. ಹೀಗೆ ದೋಣಿ ವಿಹಾರದಲ್ಲಿ ತೊಡಗಿರುವ ಪ್ರವಾಸಿಗರಿಗೆ ತಿನಿಸು, ಪಾನೀಯಗಳನ್ನು ಜೀವದ ಹಂಗನ್ನು ತೊರೆದು ವ್ಯಾಪಾರ ಮಾಡುವ ಮೂಲಕ ಎಲ್ಲರ ಸಹಾನುಭೂತಿಯೊಂದಿಗೆ, ಪ್ರಶಂಸೆಗೆ ಪಾತ್ರರಾಗುತ್ತಿದ್ದಾರೆ.

ತೇಲುವ ಅಂಗಡಿಗಳಲ್ಲೇನಿದೆ: ತೇಲುವ ಅಂಗಡಿಗಳಲ್ಲಿ ತಂಪು ಪಾನೀಯ, ಚಿಪ್ಸ್, ಲೇಸ್, ಪಾಪ್ಕಾರ್ನ್, ಕೊಬ್ಬರಿ ಮಿಠಾಯಿ, ಕಡಲೆ ಮಿಠಾಯಿ, ನೀರಿನ ಬಾಟಲ್, ಚಾಕಲೇಟ್ ಸೇರಿದಂತೆ ಇನ್ನಿತರ ಕುರುಕಲು ತಿಂಡಿ ದೊರೆಯುತ್ತವೆ. ಇದರೊಂದಿಗೆ ಇಬ್ಬರು ಎಳನೀರು ವ್ಯಾಪಾರಿಗಳು ತೆಪ್ಪದಲ್ಲಿ ಎಳನೀರು ತುಂಬಿಕೊಂಡು ನದಿಯಲ್ಲೇ ಅದನ್ನು ಕೊಚ್ಚಿ ಗ್ರಾಹಕರಿಗೆ ನೀಡುತ್ತಿದ್ದಾರೆ. ಬಿಸಿಲ ಬೇಗೆಯಲ್ಲಿ ಹೊಗೇನಕಲ್‌ಗೆ ಬಂದ ಪ್ರವಾಸಿಗರು ದೋಣಿ ವಿಹಾರದಲ್ಲೇ ಎಳನೀರು ಕುಡಿದು ದಾಹ ತಣಿಸಿಕೊಳ್ಳುತ್ತಾರೆ.



ಏಕೈಕ ಮಹಿಳಾ ವ್ಯಾಪಾರಿ: 6-7 ಮಂದಿ ವ್ಯಾಪಾರಿಗಳು ತೇಲುವ ಅಂಗಡಿ ನಡೆಸುತ್ತಿದ್ದು, ಅವರಲ್ಲಿ ಏಕೈಕ ಮಹಿಳಾ ವ್ಯಾಪಾರಿಯೂ ಇದ್ದಾರೆ. ಪುರುಷ ವ್ಯಾಪಾರಿಗಳಂತೆ ನೀರಲ್ಲಿ ಹುಟ್ಟು ಹಾಕಿಕೊಂಡು ತೆಪ್ಪ ಚಲಾಯಿಸುವ ಆ ಮಹಿಳೆ ಪ್ರವಾಸಿಗರು ಇರುವ ತೆಪ್ಪ(ದೋಣಿ)ದ ಸಮೀಪ ಬಂದು ಫ್ರೂಟ್ ಸಲಾಡ್ ಮಾರುತ್ತಾರೆ. ತನ್ನ ತೆಪ್ಪದಲ್ಲಿ ಕಲ್ಲಂಗಡಿ, ಮಾವಿನಕಾಯಿ, ಪೈನಾಪಲ್, ಪರಂಗಿಹಣ್ಣು, ಬಾಳೆಹಣ್ಣು ಸೇರಿದಂತೆ ಇನ್ನಿತರ ಹಣ್ಣುಗಳನ್ನು ತುಂಬಿಕೊಂಡು ಮಾರಾಟ ಮಾಡುತ್ತಿರುವ ಏಕೈಕ ಮಹಿಳಾ ವ್ಯಾಪಾರಿ ಎನಿಸಿದ್ದಾರೆ. ಗ್ರಾಹಕರ ಬೇಡಿಕೆಯಂತೆ ಉಂಡೇ ಹಣ್ಣನ್ನೇ ಸ್ಥಳದಲ್ಲೇ ಕೊಯ್ದು ಕೊಟ್ಟರೆ, ಕೇಳಿದವರಿಗೆ ಬೌಲ್‌ನಲ್ಲಿ ವಿವಿಧ ಹಣ್ಣಿನ ತುಂಡನ್ನು ಮಿಶ್ರಣ ಮಾಡಿ 30 ರೂ.ಗೆ ಮಾರಾಟ ಮಾಡುತ್ತಾರೆ.

ಕಷ್ಟವಾದರೂ ಕೆಲಸ ಮಾಡಬೇಕು: ಹೊಗೇನಕಲ್‌ನಲ್ಲಿ ತೇಲುವ ಅಂಗಡಿಯಲ್ಲಿ ವ್ಯಾಪಾರ ಮಾಡುವ ಗಡಿ ಗ್ರಾಮವಾದ ಗೋಪಿನಾಥಂ ಸಮೀಪದ ಮಾರಿಕೊಟ್ಟೈ ಗ್ರಾಮದ ಸತ್ಯವೇಲು 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಕಳೆದ 25 ವರ್ಷದಿಂದ ಹೊಗೇನಕಲ್‌ನಲ್ಲಿ ತೆಪ್ಪದ ಮೂಲಕ ವ್ಯಾಪಾರ ಮಾಡುತ್ತಿದ್ದೇನೆ. ಗ್ರಾಹಕರಿಗೆ ವಿವಿಧ ಜ್ಯೂಸ್, ಬಿಸ್ಕೆಟ್, ಮಿಠಾಯಿ, ಕುರುಕಲು ತಿಂಡಿ, ಮಕ್ಕಳಿಗೆ ಲೇಸ್, ಚಿಪ್ಸ್, ಚಾಕಲೇಟ್, ನೀರಿನ ಬಾಟಲ್ ಮಾರಾಟ ಮಾಡುತ್ತೇನೆ. ಪ್ರವಾಸಿಗರು ಬೋಟಿಂಗ್ ಪಾಯಿಂಟ್‌ನಿಂದ ಜಲಪಾತ ವೀಕ್ಷಣೆವರೆಗೂ ತೆಪ್ಪದಲ್ಲಿ ಬರುತ್ತಾರೆ. ಈ ವೇಳೆ ನಮ್ಮಲ್ಲಿ ಲಭ್ಯವಿರುವ ತಿನಿಸು, ಪಾನೀಯಗಳ ಬಗ್ಗೆ ತಿಳಿಸುತ್ತೇವೆ. ಖುಷಿಗಾಗಿ ಬರುವ ಪ್ರವಾಸಿಗರು ತಿನಿಸು, ಪಾನೀಯವನ್ನು ಕೇಳಿ ಪಡೆಯುತ್ತಾರೆ. ನಾವು ವ್ಯಾಪಾರ ಮಾಡುವ ಸಲುವಾಗಿ ಒಂದೇ ಸ್ಥಳದಲ್ಲಿ ನಿಲ್ಲುವುದಿಲ್ಲ. ಪ್ರವಾಸಿಗರು ಇರುವ ತೆಪ್ಪ ಬರುವ ಮಾರ್ಗದತ್ತ ಹೋಗಿ ಏನಾದರೂ ಖರೀದಿಸುವಂತೆ ಮನವಿ ಮಾಡುತ್ತೇವೆ ಎಂದರು.

ನೀರು ಹೆಚ್ಚಾದರೆ ತಾತ್ಕಾಲಿಕ ಬಂದ್

ನದಿಯಲ್ಲಿ ನೀರಿನ ಪ್ರಮಾಣ ಹೆಚ್ಚಾದರೆ ದೋಣಿ ವಿಹಾರವನ್ನು ಸ್ಥಗಿತಗೊಳಿಸಿದಂತೆ ತೇಲುವ ಅಂಗಡಿಗಳೂ ಬಂದ್ ಆಗಲಿವೆ. ಸಾಮಾನ್ಯವಾಗಿ ಮಳೆಗಾಲದಲ್ಲಿ ಕೆಆರ್‌ಎಸ್ ಹಾಗೂ ಕಬಿನಿ ಜಲಾಶಯದಿಂದ ಹೆಚ್ಚಿನ ಪ್ರಮಾಣದಲ್ಲಿ ನದಿಗೆ ನೀರನ್ನು ಬಿಟ್ಟಾಗ ಹೊಗೇನಕಲ್ ಫಾಲ್ಸ್‌ನಲ್ಲಿ ನೀರಿನ ರಭಸ ಹೆಚ್ಚಾಗುತ್ತದೆ. ನೀರು ಅಪಾಯದ ಮಟ್ಟ ಮೀರುವ ಮುನ್ನವೇ ಮುಂಜಾಗ್ರತಾ ಕ್ರಮವಾಗಿ ದೋಣಿ ವಿಹಾರ ಸ್ಥಗಿತಗೊಳಿಸಲಾಗುತ್ತದೆ. ಆ ಸಂದರ್ಭದಲ್ಲಿ ತೇಲುವ ಅಂಗಡಿ ನಡೆಸುವ ವ್ಯಾಪಾರಿಗಳೆಲ್ಲರೂ ಫಾಲ್ಸ್‌ನ ದಡದಲ್ಲಿ ವ್ಯಾಪಾರ ಮಾಡುತ್ತೇವೆ. ವರ್ಷಕ್ಕೆ ಮೂರ್‍ನಾಲ್ಕು ಬಾರಿ ಒಂದು ವಾರದಿಂದ 10 ದಿನಗಳವರೆಗೆ ದೋಣಿ ವಿಹಾರ ಸ್ಥಗಿತಗೊಳಿಸಲಾಗುತ್ತದೆ. ಆ ಸಂದರ್ಭ ದಲ್ಲಿ ಜಲಪಾತ ಧುಮ್ಮಿಕ್ಕುವುದನ್ನು ನೋಡಲೆಂದೇ ಸಾವಿರಾರು ಮಂದಿ ಪ್ರವಾಸಿಗರು ಬರುತ್ತಾರೆ. ಆ ವೇಳೆ ದಡದಲ್ಲಿಯೇ ನಾವು ವ್ಯಾಪಾರ ಮಾಡುತ್ತೇವೆ ಎಂದು ವ್ಯಾಪಾರಿಗಳು ತಿಳಿಸಿದ್ದಾರೆ.





ಪ್ರತಿದಿನ ಬೆಳಗ್ಗೆ 8 ಗಂಟೆಗೆ ಹೊಗೇನಕಲ್ ಫಾಲ್ಸ್ ಬಳಿ ಬಂದು ನಮ್ಮ ತೆಪ್ಪದೊಳಗೆ ಮಾರಾಟ ಮಾಡಲು ತಂದ ಎಲ್ಲಾ ತಿಂಡಿ, ತಿನಿಸು, ಪಾನೀಯ, ನೀರಿನ ಬಾಟಲ್‌ಗಳನ್ನು ತುಂಬುತ್ತೇವೆ. ಬ್ಯಾಲೆನ್ಸ್ ತಪ್ಪದಂತೆ ಎಷ್ಟು ಬೇಕೋ ಅಷ್ಟೇ ಮಾಲನ್ನು ಹಾಕಿಕೊಳ್ಳುತ್ತೇವೆ. ಸಂಜೆ 5.30 ರಿಂದ 6 ಗಂಟೆವರೆಗೂ ನಾವು ಹೊಗೇನಕಲ್‌ನಲ್ಲೇ ತೇಲುವ ಅಂಗಡಿಯಲ್ಲೇ ಕುಳಿತು ವ್ಯಾಪಾರ ಮಾಡುತ್ತೇವೆ. ಪದೇ ಪದೇ ನೀರಿನಲ್ಲಿ ಹುಟ್ಟು ಹಾಕಿ ಹಿಂದೆ, ಮುಂದೆ ಸಾಗಬೇಕಾಗಿರುವುದರಿಂದ ತೋಳು ನೋವಾಗುತ್ತದೆ. ಆದರೂ, ಜೀವನದ ಬಂಡಿ ಸಾಗಿಸಬೇಕಾದರೆ ಕಷ್ಟವಾದರೂ ಸರಿ ಹರಿವ ನೀರಲ್ಲಿ ದೋಣಿಯ ಹುಟ್ಟು ಹಾಕಲೇಬೇಕಾಗಿದೆ. ಇಷ್ಟು ವರ್ಷದಿಂದ ದೋಣಿಯ ಸಹಾಯದಿಂದಲೇ ಈ ಪದಾರ್ಥಗಳನ್ನು ಮಾರಾಟ ಮಾಡಿ ಜೀವನ ಸರಿದೂಗಿಸಿಕೊಂಡು ಬರುತ್ತಿದ್ದೇವೆ, ಕೆಲವೊಮ್ಮೆ ಕರ್ನಾಟಕದ ಕಡೆಯಿಂದ ಪ್ರವಾಸಿಗರು ಕಡಿಮೆ ಸಂಖ್ಯೆಯಲ್ಲಿ ಬರುತ್ತಾರೆ. ಆಗ ನಮಗೆ ವ್ಯಾಪಾರ ಕುಂಠಿತವಾಗುತ್ತದೆ ಎಂದು ಹೇಳಿದರು.

ಅಪ್ಪನೊಂದಿಗೆ ತೆಪ್ಪ ಚಲಾಯಿಸಲು ಕಲಿತೆ: ಹೊಗೇನಕಲ್‌ನಲ್ಲಿನ ತೇಲುವ ಅಂಗಡಿಯುಳ್ಳ ವ್ಯಾಪಾರಿಗಳಲ್ಲಿ ಏಕೈಕ ಮಹಿಳಾ ವ್ಯಾಪಾರಿ ಎನಿಸಿರುವ ಮಾರಿಕೊಟ್ಟೈ ಗ್ರಾಮದ ಸತ್ಯವೇಲು ಪತ್ನಿ ನದಿಯಾ ಮಾತನಾಡಿ, ನಾನು ಚಿಕ್ಕವಳಿದ್ದಾಗಲೇ ಅಪ್ಪನೊಂದಿಗೆ ದೋಣಿಯನ್ನು ಹುಟ್ಟು ಹಾಕಲು ಕಲಿತಿದ್ದೆ, ಅಪ್ಪ ತೆಪ್ಪ ಓಡಿಸುತ್ತಿದ್ದರು. ಅಲ್ಲದೆ, ಕೆಲವೊಮ್ಮೆ ಹಣ್ಣು, ತಿನಿಸು ಮಾರಾಟ ಮಾಡುತ್ತಿದ್ದರು. ಇದರಿಂದ ನಾನು ಕೂಡ ಅಪ್ಪನೊಂದಿಗೆ ವ್ಯಾಪಾರ ಮಾಡುತ್ತಿದ್ದೆ, ಸತ್ಯವೇಲು ಅವರೊಂದಿಗೆ ವಿವಾಹವಾದ ನಂತರ ಇದೇ ವ್ಯಾಪಾರವನ್ನು ಮುಂದುವರೆಸಿಕೊಂಡು ಹೋಗುತ್ತಿದ್ದೇನೆ. ಪತಿಯೊಂದಿಗೆ ಮನೆಯಿಂದ ಒಟ್ಟಿಗೆ ಬಂದು ತೆಪ್ಪದಲ್ಲಿ ಅಂಗಡಿ ತೆರೆಯುತ್ತೇನೆ. ಜಲಪಾತದವರೆಗೂ ಹೋಗುವುದಿಲ್ಲ. ನದಿಯ ಮಧ್ಯಭಾಗದಲ್ಲಿ ಹಣ್ಣನ್ನು ಮಾರಾಟ ಮಾಡುತ್ತೇನೆ. ಈ ಕೆಲಸ ನನಗೆ ತೃಪ್ತಿ ತಂದಿದೆ ಎಂದರು.

ನಳ ಪಾಕ

ಸಬ್ಬಕ್ಕಿ ಕಿಚಡಿ



ಬೇಕಾಗುವ ಪದಾರ್ಥಗಳು

ಸಬ್ಬಕ್ಕಿ– 1 ಬಟ್ಟಲು, ಉಪ್ಪು–ರುಚಿಗೆ ತಕ್ಕಷ್ಟು, ಸಾಸಿವೆ– ಸ್ವಲ್ಪ, ಕರಿಬೇವು–ಸ್ವಲ್ಪ, ಜೀರಿಗೆ–ಸ್ವಲ್ಪ, ಎಣ್ಣೆ–ಸ್ವಲ್ಪ, ಕೊತ್ತಂಬರಿ ಸೊಪ್ಪು–ಸಣ್ಣಗೆ ಕತ್ತರಿಸಿದ್ದು ಸ್ವಲ್ಪ, ಕಡಲೆಕಾಯಿ ಬೀಜ– 1 ಸಣ್ಣ ಬಟ್ಟಲು (ಹುರಿದು ಪುಡಿ ಮಾಡಿದ್ದು)

ಮಾಡುವ ವಿಧಾನ...

ಹಿಂದಿನ ದಿನ ರಾತ್ರಿಯೇ ಸಬ್ಬಕ್ಕಿಯನ್ನು 3–4 ಬಾರಿ ತೊಳೆದು ಸಬ್ಬಕ್ಕಿ ಮುಳುಗುವಷ್ಟು ನೀರು ಹಾಕಿ ನೆನೆಸಿಟ್ಟುಕೊಳ್ಳಬೇಕು. ಮರು ದಿನ ಬೆಳಗ್ಗೆ ಒಂದು ಬಾಣಲೆಗೆ ಎಣ್ಣೆ ಹಾಕಿ, ಕಾದನಂತರ ಸಾಸಿವೆ, ಕರಿಬೇವು, ಜೀರಿಗೆ ಹಾಕಿ ಕೆಂಪಗೆ ಹುರಿದುಕೊಳ್ಳಿ, ನಂತರ ನೆನೆಸಿಟ್ಟ ಸಬ್ಬಕ್ಕಿಯನ್ನು ಹಾಕಿ ಸಣ್ಣ ಉರಿಯಲ್ಲಿ ಸಬ್ಬಕ್ಕಿ ನೀರಿನ ಬಣ್ಣ ತಿರುಗುವವರೆಗೆ ಬಿಡಿ. ನಂತರ ಇದಕ್ಕೆ ಉಪ್ಪು, ಕಡಲೆಕಾಯಿ ಬೀಜದ ಪುಡಿ ಹಾಕಿ ಮಿಶ್ರಣ ಮಾಡಿದರೆ, ರುಚಿಕರವಾದ ಸಬ್ಬಕ್ಕಿ ಕಿಚಡಿ ಸವಿಯಲು ಸಿದ್ಧ.

ಮೋತಿಚೂರ್ ಲಡ್ಡು



ಬೇಕಾಗುವ ಪದಾರ್ಥಗಳು...

ಕಡಲೆಹಿಟ್ಟು–2 ಬಟ್ಟಲು, ಸಕ್ಕರೆ–2.5 ಬಟ್ಟಲು, ಕೇಸರಿ –6 ದಳ, ಅಡುಗೆ ಸೋಡಾ–ಕಾಲು ಚಮಚ, ಹಾಲು–1 ಬಟ್ಟಲು, ಫುಡ್ ಕಲರ್–ಸ್ವಲ್ಪ, ಏಲಕ್ಕಿ – 2 ಚಮಚ

ಮಾಡುವ ವಿಧಾನ...

ಕಡಲೆ ಹಿಟ್ಟಿಗೆ 3 ಚಮಚ ಹಾಲು, ನೀರು, ಅಡುಗೆ ಸೋಡಾ, ಫುಡ್ ಕಲರ್ ಹಾಕಿ ಚೆನ್ನಾಗಿ ಕಲಸಿಕೊಳ್ಳಿ. ಅದರಲ್ಲಿ ಸಣ್ಣ ಸಣ್ಣ ಕಾಳು ತಯಾರಿಸಿ ಎಣ್ಣೆಯಲ್ಲಿ ಕರಿದುಕೊಳ್ಳಿ, ಸಕ್ಕರೆ ಪಾಕ ತಯಾರಿಸಿಕೊಂಡು ಅದಕ್ಕೆ ಮೊದಲೇ ತಯಾರಿಸಿಕೊಂಡ ಬೂಂದಿ ಕಾಳುಗಳನ್ನು ಸೇರಿಸಿ. ಈ ಮಿಶ್ರಣವನ್ನು ಚೆನ್ನಾಗಿ ಕಲೆಸಿ ಅಳತೆಗೆ ತಕ್ಕಂತೆ ಉಂಡೆ ಮಾಡಿಕೊಂಡರೆ, ರುಚಿಕರವಾದ ಮೋತಿ ಚೂರ್ ಲಾಡು ಸವಿಯಲು ಸಿದ್ಧ.



43ನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿರುವ ಜನ ಮೆಚ್ಚಿದ-ಮನಮೆಚ್ಚಿದ

ಮೈಸೂರು ಮಿತ್ರನಿಗೆ

ಶುಭಾಶಯಗಳು














ನನ್ನ ಬದುಕಿನ ಸಂಕಷ್ಟದಲ್ಲಿ ಬೆನ್ನಿಗೆ ನಿಂತವರು,
ಸಂತಸದ ಕ್ಷಣಗಳಲ್ಲಿ ನಗುವಾದವರು ಸೇವೆಯಲ್ಲಿ ಸದಾ ಸಹಕರಿಸಿದವರು, ಮುಂದೆಯೂ
ನನ್ನೆಲ್ಲಾ ಸ್ವಕಾರ್ಯ, ಸೇವಾಕಾರ್ಯದಲ್ಲಿ ಸಹಭಾಗಿಯಾದವರಿಗೆಲ್ಲಾ
ನನ್ನೀ ಬಾಳಲ್ಲಿ ಸದಾ ಚಿರಋಣಿ

ಕೆ. ಪ್ರದೀಪ್ ಸಿಂಗ್

ಹೆಸರಾಂತ ಉದ್ಯಮಿ ಹಾಗೂ ಸಮಾಜ ಸೇವಕರು



ಕರ್ನಾಟಕ ಮತ್ತೊಮ್ಮೆ ಹುಲಿಗಳ ರಾಜಧಾನಿಯಾಗಿ ಹೊರ ಹೊಮ್ಮಲಿದೆ



ಮುಂಜಾನೆ ನಸುಗತ್ತಲಲ್ಲಿ ಸೂರ್ಯೋದಯಕ್ಕೆ ಮೊದಲೇ ಕಾಡಿನ ದಾರಿಯಲ್ಲಿ ಹುಲಿಗಳ ಹೆಜ್ಜೆ ಅಳಿಸಿ ಹೋಗುವ ಮುನ್ನ, ಹುಲಿಗಳ ಚಿತ್ರಗಳನ್ನು ಕ್ಯಾಮರಾದಲ್ಲಿ ಸೆರೆ ಹಿಡಿಯಬೇಕೆನ್ನುವ ಕನಸು, ಹಂಬಲ ಎಲ್ಲರದಾಗಿರುತ್ತೆ. ವರ್ಷಾನುಗಟ್ಟಲೆಯಿಂದ ಕಾದು, ಹುಡುಕುತ್ತಿದ್ದ ಹುಲಿಗಳು ಕಣ್ಣಿಗೆ ಬಿದ್ದಿದ್ದೆ ತಡ. ಮೂರನೇ ಕಣ್ಣು ಕ್ಲಿಕ್ಕಿಸಿದ್ದೇ ಕ್ಲಿಕ್ಕಿಸಿದ್ದು ಕ್ಯಾಮರಾದ ಮೆಮೋರಿ ಕಾರ್ಡ್ ಖಾಲಿಯಾಗುವವರೆಗೂ.

ವಾರಾಂತ್ಯ ಬಂತೆಂದರೆ ಸಾಕು ತಂತ್ರಜ್ಞಾನದ ಜನಜೀವನದ ಬದುಕಿನ ಒತ್ತಡ ನಿರ್ವಹಣೆಗಾಗಿ ಯುವಕ ಯುವತಿಯರು ಕಾಡು ಮೇಡು ಸುತ್ತುವ ಹಂಬಲದಿಂದ ಕಾಡಿನ ಬಹುಭಾಗ ತುಂಬಿ ತುಳುಕುತ್ತದೆ. ಹುಲಿಯ ಫೋಟೋ ತೆಗೆಯಲು ಪಟ್ಟಪಾಡು, ತಿರುಗಿದ ಕಾಡು ಮೇಡುಗಳು ಜೀವದ ಹಂಗು ತೊರೆದು ವನ್ಯಜೀವಿಗಳ ಅಪಾಯವನ್ನು ಲೆಕ್ಕಿಸದೆ ಒಂದು ಉತ್ತಮ ಚಿತ್ರಕ್ಕೆ ದಿನಗಟ್ಟಲೆ ಆಹಾರ ನಿದ್ರೆಯಿಲ್ಲದೆ ಕಾದು ಕುಳಿತುಕೊಳ್ಳುವ ತಾಳ್ಮೆಗಳನ್ನು ಪರಿಗಣಿಸಿದಾಗ ಛಾಯಾಚಿತ್ರ ಕಲೆ ಅದೆಷ್ಟು ಕಷ್ಟದ್ದು ಎಂದು ತಿಳಿದು ಬರುತ್ತದೆ.

ಕರ್ನಾಟಕದ ಅರಣ್ಯ ಪ್ರದೇಶಗಳಲ್ಲಿ 2022ರ ಹುಲಿಗಳ ಜನಗಣತಿ ಕಾರ್ಯವು ಮುಗಿದಿದೆ. ಹುಲಿ ಸಂರಕ್ಷಿತ ಪ್ರದೇಶವಾದ ನಾಗರಹೊಳೆ, ಬಿಳಿಗಿರಿರಂಗನ ಬೆಟ್ಟ, ಭದ್ರ ಅರಣ್ಯ, ಹಾಗೂ ಬ್ರಹ್ಮಗಿರಿ, ಪುಷ್ಪಗಿರಿ, ಮೂಕಾಂಬಿಕಾ, ಕುದುರೆಮುಖ, ಸೋಮೇಶ್ವರ, ಕಾಳಿ ಸಂರಕ್ಷಿತ ಪ್ರದೇಶ, ತಲಕಾವೇರಿ, ಹಾಗೂ ಇನ್ನೂ ಮುಂತಾದ ಅರಣ್ಯ ಪ್ರದೇಶಗಳಲ್ಲಿ ಹುಲಿ ಜನಗಣತಿಯ ಕಾರ್ಯ ಮುಗಿದಿದೆ. ಬಂಡಿಪುರದ ಅರಣ್ಯದಲ್ಲಿ ಮಾತ್ರ ಸದ್ಯದಲ್ಲಿ ನಡೆಯಲಿದೆ. ಏಕೆಂದರೆ ನಮ್ಮ ಕ್ಯಾಮೆರಾ ಟ್ರ್ಯಾಪ್‌ಗಳು ಬೇರೆ ಅರಣ್ಯ ಪ್ರದೇಶಗಳಿಗೆ ಹೋಗಿದ್ದವು. ಈಗ ಬಂದಿರುವುದರಿಂದ ಹುಲಿಗಣತಿಯ ಕಾರ್ಯವನ್ನು ಇನ್ನು ಕೆಲವೇ ದಿನಗಳಲ್ಲಿ ಎಂ. ಸ್ಟ್ರೈಪ್ ಲೈವ್ ಮೂಲಕ ಹಾಗೂ ಕ್ಯಾಮೆರಾ ಟ್ರ್ಯಾಪ್ ಮುಖಾಂತರ 40 ದಿನಗಳ ಕಾಲ ಹುಲಿ ಗಣತಿಯನ್ನು ಮಾಡಲಾಗುತ್ತದೆ. ಆ.15 ಸ್ವಾತಂತ್ರ್ಯ ದಿನಾಚರಣೆಯಂದು ದೇಶದ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಹುಲಿಗಳ ಜನಗಣತಿಯ ಮಾಹಿತಿಯನ್ನು ದೇಶದ ಜನಗಳಿಗೆ ನೀಡಲಿದ್ದಾರೆ. ಎಂದು ಬಂಡೀಪುರ ಅರಣ್ಯ ಸಂರಕ್ಷಣಾ ಅಧಿಕಾರಿ ಕ್ಷೇತ್ರ ನಿರ್ದೇಶಕರಾದ ಭಾರತೀಯ ಅರಣ್ಯ ಸೇವೆಯ ಡಾ.ಪಿ.ರಮೇಶ್ ಕುಮಾರ್ ತಿಳಿಯಪಡಿಸುತ್ತಾರೆ. ಕಳೆದ ವರ್ಷಕ್ಕಿಂತ ಈ ವರ್ಷ ಬೇಗನೆ ಮಳೆ ಬಿದ್ದಾಗಿದ್ದು, ಕಾಡು ಹಚ್ಚ ಹಸಿರಿನಿಂದ ಕಂಗೊಳಿಸುತ್ತಿವೆ ಎನ್ನುತ್ತಾರೆ.

ಚಿತ್ರ-ಲೇಖನ-
ಎಂ.ಆರ್.ಮಂಜುನಾಥ್
ಮೊ: 9448470308






ದೇಶದಲ್ಲಿ 2967 ಹುಲಿಗಳು ಕಂಡು ಬಂದಿವೆ. ಅದರಲ್ಲಿ ಮಧ್ಯಪ್ರದೇಶದಲ್ಲಿ 526 ಹುಲಿಗಳು ಕಂಡು ಬಂದರೆ, ಕರ್ನಾಟಕದಲ್ಲಿ ಹುಲಿಗಳ ಸಂಖ್ಯೆಯು ಎರಡನೇ ಸ್ಥಾನದಲ್ಲಿದೆ. ಕರ್ನಾಟಕದ ಅರಣ್ಯಗಳಲ್ಲಿ 524 ಹೆಚ್ಚು ಹುಲಿಗಳಿವೆ. ಅದರಲ್ಲಿ ಹೆಚ್ಚಿನ ಪಾಲು ನಾಗರಹೊಳೆ ಅರಣ್ಯದ ಮಡಿಲಿಗೆ ಸೇರಿದೆ. ಕಳೆದ ಹುಲಿಗಣತಿಯಲ್ಲಿ 127 ಇತ್ತು ಆದರೆ ಈ ವರ್ಷದ ಹುಲಿ ಗಣತಿಯ ಪ್ರಕಾರ 135 ಹುಲಿಗಳು ಕಂಡು ಬಂದಿವೆ. ಈ ಅಭಯಾರಣ್ಯವು ಪಶ್ಚಿಮ ಘಟ್ಟಗಳ ತಪ್ಪಲಿನಲ್ಲಿ 634.39 ಚದರ ಕಿ.ಮೀ ವ್ಯಾಪ್ತಿ ಆವರಿಸಿದೆ. ಬಂಡಿಪುರ ಅರಣ್ಯವು 1100 ಚದರ ಕಿಮೀ ವ್ಯಾಪ್ತಿ ಹೊಂದಿದ್ದು 125 ಹುಲಿಗಳು ಕಂಡು ಬಂದಿವೆ. ಹೆಚ್ಚಾಗಿ ಕೆರೆ ಕಟ್ಟೆಗಳ ಬಳಿಯೇ ಹೆಚ್ಚಾಗಿ ಹುಲಿಗಳು ಕಂಡು ಬರುತ್ತವೆ. ಬೇಟೆ ನಿಯಂತ್ರಣಕ್ಕೆ ಸೋಲಾರ್ ತಂತಿ ಬೇಲಿ, ಇಪಿಟಿ ಮಾಡಿರುವುದರಿಂದ ಹುಲಿಗಳಿಗೆ ರಕ್ಷಣೆ ದೊರಕುತ್ತಿದೆ ಎಂದು ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಕ್ಷೇತ್ರ ನಿರ್ದೇಶಕರಾದ ಮಹೇಶ್ ತಿಳಿಯಪಡಿಸುತ್ತಾರೆ. ನಾಲ್ಕು ವರ್ಷಕ್ಕೊಮ್ಮೆ ನಡೆಸುವ ಹುಲಿಗಳ ಗಣತಿಯ ಮಾಹಿತಿ ಬಹಿರಂಗಕ್ಕೂ ಮುನ್ನವೇ ಕರ್ನಾಟಕ ಮತ್ತೊಮ್ಮೆ ಹುಲಿಗಳ ರಾಜಧಾನಿಯಾಗಿ ಹೊರ ಹೊಮ್ಮಲಿದೆ ಎಂದು ವನ್ಯಜೀವಿ ತಜ್ಞರು ಅಂದಾಜಿಸಿದ್ದಾರೆ.

ಕಾಡಿನಲ್ಲಿ ಎಷ್ಟೇ ಕೆರೆಗಳು ಕಂಡು ಬಂದರೂ ಸಾಮಾನ್ಯವಾಗಿ ಹುಲಿಗಳು ಒಂದು ವ್ಯಾಪ್ತಿಯನ್ನು ತಮ್ಮ ವಾಸಸ್ಥಳವಾಗಿ ಮಾಡಿ ಕೊಂಡಿರುತ್ತವೆ. ಎಷ್ಟೇ ಸುತ್ತಾಡಿ, ಬೇಟೆಯಾಡಿ ಬಂದರೂ ಅಲ್ಲಿಯೇ ಬಂದು ವಿಶ್ರಮಿಸುತ್ತವೆ. ಬೇಸಿಗೆ ಝಳದಿಂದ ನೀರಿನ ಕೊರತೆಯನ್ನು ನೀಗಿಸಲು ಸೌರ ಕೊಳವೆ ಬಾವಿಯನ್ನು ಕೆರೆಗಳಿಗೆ ಅಳವಡಿಸಲಾಗಿದೆ. ಆದ್ದರಿಂದ ಹುಲಿಗಳು ಹೆಚ್ಚಾಗಿ ಕಂಡು ಬರುತ್ತಿವೆ. ಮುಂಬರುವ ವರ್ಷದಲ್ಲಿ ಕರ್ನಾಟಕದ ಹುಲಿಗಳ ಸಂಖ್ಯೆಯು ಮೊದಲನೇ ಸ್ಥಾನದಲ್ಲಿರುತ್ತದೆ ಎಂದು ಆರ್‌ಎಫ್‌ಓ ಸಿದ್ದರಾಜು ತಿಳಿಸುತ್ತಾರೆ. ಇದರ ಜೊತೆಗೆ ಅಂತರಸಂತೆಯ 15 ಕಿ.ಮೀ ವ್ಯಾಪ್ತಿಯಲ್ಲಿ ಬರುವ ಸರಕಾರಿ ಶಾಲಾ ಮಕ್ಕಳಿಗೆ ಅರಣ್ಯ ಇಲಾಖೆಯ ವತಿಯಿಂದ ಉಚಿತವಾಗಿ ತಮ್ಮದೇ ವಾಹನದಿಂದ ಕರೆತಂದು ಪರಿಸರ ಹಾಗೂ ವನ್ಯಪ್ರಾಣಿ-ಪಕ್ಷಿಗಳ ಮಾಹಿತಿ ನೀಡಲಾಗುತ್ತಿದೆ ಮತ್ತು ಎಲ್ಲಾ ಸರಕಾರಿ ಶಾಲೆ ಮಕ್ಕಳಿಗೆ ಉಚಿತವಾಗಿ ಅರಣ್ಯದೊಳಗೆ ಸಫಾರಿ ಮಾಡಿಸಲಾಗುತ್ತಿದೆ. ಮತ್ತು ಖಾಸಗಿ ಶಾಲೆ ಮಕ್ಕಳಿಗೂ ಉಚಿತ ಪ್ರವೇಶ ಮಾಡಿಸಿದ್ದೇವೆ ಎಂದು ತಿಳಿಸುತ್ತಾರೆ.



ಸಾವಿರಾರು ಪ್ರವಾಸಿಗರು ಹುಲಿಗಳನ್ನು ನೋಡಿ ಸಂತೋಷಪಟ್ಟಿದ್ದಾರೆ. ಕಾರಣ ಹುಲಿಗಳು ತನ್ನ ಮರಿಗಳ ಜೊತೆ ವಿಹರಿಸುತ್ತಿರುವುದರಿಂದ ವನ್ಯಜೀವಿ ಛಾಯಾಗ್ರಾಹಕರಿಗೆ ಹಬ್ಬವೇ ಹಬ್ಬ. ಪ್ರತಿ ದಿವಸ ಹೊರ ದೇಶದ ಪ್ರವಾಸಿಗರು ಹಾಗೂ ನಮ್ಮವರು ಅದರಲ್ಲೂ ಹೆಚ್ಚಾಗಿ ಬೆಂಗಳೂರಿನ ಐಟಿಬಿಟಿಯವರೇ ಹೆಚ್ಚಾಗಿ ಕಂಡು ಬರುತ್ತಿದ್ದಾರೆ. ಕರ್ನಾಟಕದ ರಾಷ್ಟ್ರೀಯ ಉದ್ಯಾನಗಳು ಪ್ರವಾಸಿಗರನ್ನು ಕೈಬೀಸಿ ಕರೆಯುತ್ತಿವೆ. ಅರಣ್ಯದ ಹುಲಿಗಳ ಜೊತೆ ಜೊತೆಯಲ್ಲಿ ಆನೆಗಳ ಹಿಂಡು, ಕಾಡುನಾಯಿ, ಚಿರತೆ, ಕಪ್ಪು ಚಿರತೆ, ಕಾಡೆಮ್ಮೆ, ಕಾಡು ಕೋಣ, ಜಿಂಕೆ, ನಾನಾ ವಿಧದ ಪಕ್ಷಿ ಸಂಕುಲಗಳು ಇನ್ನೂ ಮುಂತಾದ ವನ್ಯಜೀವಿ ಸಂಪತ್ತನ್ನು ನೋಡಿ ಆನಂದಿಸಬಹುದು ●

ಜೆಡಿಎಸ್ ಜಲಧಾರೆ





ಈಗಾಗಲೇ ಸಾಂಕೇತಿಕವಾಗಿ ಚಾಲನೆ ಪಡೆದಿರುವ ಜೆಡಿಎಸ್‌ನ ಮಹತ್ವದ 'ಜನತಾ ಜಲಧಾರೆ' ರಥಯಾತ್ರೆ ಏ.16ರ ಹನುಮ ಜಯಂತಿ ದಿನದಂದು ವಿದ್ಯುಕ್ತವಾಗಿ ಉದ್ಘಾಟನೆಗೊಳ್ಳಲಿದೆ.

ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ನಾಯಕತ್ವದಲ್ಲಿ ಕುಡಿಯಲು ಶುದ್ಧ ಜಲ, ಕೃಷಿಗೂ ಸಮೃದ್ಧ ಜಲ ನೀಡುವ ದೃಢ ಸಂಕಲ್ಪದೊಂದಿಗೆ 14 ದಿನಗಳ ಕಾಲ ರಾಜ್ಯದೆಲ್ಲೆಡೆ ಸುಮಾರು 518 ಕಿ.ಮೀ ಸಾಗುವ 'ಜನತಾ ಜಲಧಾರೆ' ರಥ ಯಾತ್ರೆಗೆ ಕ್ಷಣಗಣನೆ ಆರಂಭವಾಗಿದೆ.

ನಾಡ ಅಧಿದೇವತೆ ಚಾಮುಂಡೇಶ್ವರಿ ಸನ್ನಿಧಿಯಲ್ಲಿ 'ಜನತಾ ಜಲಧಾರೆ' ರಥಯಾತ್ರೆಗೆ ಪೂಜೆ ಸಲ್ಲಿಸಿ ಈಗಾ ಗಲೇ ಸಾಂಕೇತಿಕವಾಗಿ ಚಾಲನೆ ನೀಡಲಾಗಿದೆ. ಹನುಮ ಜಯಂತಿ ದಿನದಂದು ರಾಮನಗರ ಹಾಗೂ ತಲಕಾವೇರಿ ಭಾಗಮಂಡಲದಲ್ಲಿ ಏಕಕಾಲದಲ್ಲಿ ಉದ್ಘಾಟನೆಗೊಳ್ಳುವ 'ಜನತಾ ಜಲಧಾರೆ' ರಥಯಾತ್ರೆ ಏ.17ರಂದು ಮಡಿಕೇರಿ, ಏ.18ರಂದು ಹಾರಂಗಿ ಅಣೆಕಟ್ಟು, ಏ.19ರಂದು ಸೋಮವಾರಪೇಟೆ, ಏ.20ರಂದು ಕುಶಾಲನಗರ, ಏ.21ರಂದು ರಾಮನಾಥಪುರ, ಏ.22ರಂದು ಪಿರಿಯಾಪಟ್ಟಣ, ಏ.23 ರಂದು ಚುಂಚನಕಟ್ಟೆ, ಏ.24ರಂದು ಲಕ್ಷ್ಮಣತೀರ್ಥ ಮತ್ತು ಹುಣಸೂರು, ಏ.25 ಮತ್ತು 26ರಂದು ಮೈಸೂರು ನಗರ ಮಾರ್ಗವಾಗಿ ಏ.29 ರಂದು ಬೆಂಗಳೂರು ತಲುಪಲಿದೆ ಎಂದರು.

ಜನತಾ ಜಲಧಾರೆ ಉದ್ದೇಶ: ಅಂತರ ರಾಜ್ಯ ಜಲ ವಿವಾದಗಳನ್ನು ಬಗೆಹರಿಸುವುದು. ಮಡಿಕೇರಿ ಮತ್ತು ಮೈಸೂರು ಜಿಲ್ಲೆ ವಿವಿಧ ಅಭಿವೃದ್ಧಿ ಮತ್ತು ಮೂಲ ಸೌಕರ್ಯ ಕಲ್ಪಿಸುವ ಕಾಮಗಾರಿಗಳ ಅನುಷ್ಠಾನ. ಹಾರಂಗಿ ಯೋಜನೆ ಮೂಲಕ ಹುಣಸೂರು, ಪಿರಿಯಾಪಟ್ಟಣ, ಕೆ.ಆರ್.ನಗರ, ಹಾಸನ ಜಿಲ್ಲೆಯ ಅರಕಲಗೂಡು ಹಾಗೂ ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲೂಕುಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸುವುದಾಗಿದೆ. ಪಿರಿಯಾಪಟ್ಟಣ ಏತ ನೀರಾವರಿ ಯೋಜನೆ ಪೂರ್ಣಗೊಳಿಸು ವುದು. ಚಾಮರಾಜ ಅಣೆಕಟ್ಟು ಹಾಗೂ ಅದರ ನಾಲೆಗಳ ಆಧುನೀಕರಣಗೊಳಿಸುವುದು. ಹಾರಂಗಿ ಬಲದಂಡೆ ನಾಲೆ ಅಭಿವೃದ್ಧಿ, ಚಿಕ್ಕಹೊಳೆ ಜಲಾಶಯದ ಎಡದಂಡೆ ಹಾಗೂ ಬಂಡಿಗೆರೆ ನಾಲೆಗಳ ಅಭಿವೃದ್ಧಿ ಮಾಡುವುದಾಗಿದೆ.


ಪೂರ್ವ ತಯಾರಿ: ಮುಂಬರುವ 2023ರ ವಿಧಾನ ಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ರಾಜ್ಯದಲ್ಲಿ ಪ್ರಾದೇಶಿಕ ಪಕ್ಷವನ್ನು ಬಹುಮತದೊಂದಿಗೆ ಅಧಿಕಾರಕ್ಕೆ ತರುವ ಸಂಕಲ್ಪದೊಂದಿಗೆ ಹಮ್ಮಿಕೊಂಡಿರುವ 'ಜನತಾ ಜಲಧಾರೆ' ರಥಯಾತ್ರೆಗೆ ಸಾಕಷ್ಟು ಪೂರ್ವ ತಯಾರಿಗಳನ್ನು ಮಾಡಿಕೊಳ್ಳಲಾಗಿದೆ. ಹನುಮ ಜಯಂತಿ ದಿನದಂದು ರಾಮನಗರದಲ್ಲಿ ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಉದ್ಘಾಟಿಸಿದರೆ, ತಲಕಾವೇರಿಯಲ್ಲಿ ಶಾಸಕ ಸಾ.ರಾ.ಮಹೇಶ್ ಹಾಗೂ ಯುವ ಜನತಾದಳ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ರಥಯಾತ್ರೆಗೆ ಚಾಲನೆ ನೀಡಲಿದ್ದಾರೆ. ಹಾಗೆಯೇ ರಥಯಾತ್ರೆಯ ಮಾರ್ಗದುದ್ದಕ್ಕೂ ಎದುರಾಗುವ ನದಿಗಳಲ್ಲಿ ಜಲ ಸಂಗ್ರಹದ ಉಸ್ತುವಾರಿಯನ್ನು ಜೆಡಿಎಸ್‌ನ ಪ್ರಮುಖ ನಾಯಕರಿಗೆ ವಹಿಸಲಾಗಿದೆ.

ಜಲ ಸಂಗ್ರಹ

ಮಾಂಜ್ರಾ ನದಿ(ಬಿದರ್), ಭೀಮಾ ನದಿ (ಸೊನ್ನ), ಭೀಮಾ ಬ್ಯಾರೇಜ್, ಮಹದಾಯಿ, ಕೃಷ್ಣಾ ನದಿ (ಆಲಮಟ್ಟಿ) ತುಂಗಭದ್ರಾ (ತುಂಗಭದ್ರಾ ಅಣೆಕಟ್ಟು), ಹೇಮಾವತಿ ನದಿ(ಐವಳಿ, ಕೊಟ್ಟಿಗೆ ಹಾರ), ಕಾಳಿನದಿ(ಕಾರವಾರ), ಸೌಪರ್ಣಿಕಾ ನದಿ(ಗಣಪತಿ ದೇವಸ್ಥಾನ, ಕೊಲ್ಲೂರು), ಹೇಮಾವತಿ ನದಿ(ಶ್ರೀರಾಮ ದೇವರ ಕಟ್ಟೆ ಹೊಳೆನರಸೀಪುರ), ಕಾವೇರಿ ನದಿ (ಕೃಷ್ಣರಾಜ ಜಲಸಾಗರ ಜಲಾಶಯ, ಮೇಕೆದಾಟು ಸಂಗಮ ಕನಕಪುರ), ಕಬಿನಿ ನದಿ (ಕಬಿನಿ ಅಣೆಕಟ್ಟು, ಬೀಚನಹಳ್ಳಿ, ಹೆಚ್.ಡಿ. ಕೋಟೆ ತಾಲೂಕು), ಎತ್ತಿನಹೊಳೆ(ಸಕಲೇಶಪುರ), ಉತ್ತರ ಪಿನಾಕಿನಿ (ವಿಧುರಾಶ್ವತ ಗೌರಿಬಿದನೂರು)ಯಲ್ಲಿ ಜಲ ಸಂಗ್ರಹ ಮಾಡಲಾಗುವುದು.

ಬಾಲಿವುಡ್ ಸ್ಟಾರ್ ರಣಬೀರ್ ಕಪೂರ್, ಆಲಿಯಾ ಭಟ್ ಅವರ ಖಾಸಗಿ ಬಾಣಸಿಗ

ನಮ್ಮ ಕನ್ನಡದ ಕಂದ ರಾಮಸ್ಕಂದ



ಕನ್ನಡಿಗ ರಾಮಸ್ಕಂದ! "ಚೆಫಿಂಗ್ ಈಸ್ ಲೈಕ್ ರಿಯಲ್ ಲೈಫ್..........ಯು ನೆವರ್ ಫಿನಿಶ್ ಲರ್ನಿಂಗ್" ಮಾರ್ಸೆಲ್ ರೀಮರ್. (ಅಡುಗೆ ಮಾಡುವುದು ಎಂದರೆ ನಿಜಜೀವನದಂತೆ......... ನಿಮ್ಮ ಕಲಿಕೆ ಮುಕ್ತಾಯಗೊಳ್ಳುವುದೇ ಇಲ್ಲ.)

ಏಪ್ರಿಲ್ 15ನೇ ತಾರೀಖು ಮುಂಬೈನಲ್ಲಿ ದಾಂಪತ್ಯ ಜೀವನಕ್ಕೆ ಅಡಿ ಇಡಲಿರುವ ಬಾಲಿವುಡ್ ಸ್ಟಾರ್ಸ್ ರಣಬೀರ್ ಕಪೂರ್ ಹಾಗೂ ಆಲಿಯಾ ಭಟ್‌ರವರ ಪ್ರೈವೇಟ್ ಚೆಫ್ (ಖಾಸಗಿ ಬಾಣಸಿಗ ಅರ್ಥಾತ್ ಅಡುಗೆಯವರು), 25-ವರ್ಷದ, ಬೆಂಗಳೂರಿನ ಯುವಕ 'ರಾಮಸ್ಕಂದ ಶಾಸ್ತ್ರಿ' ವರ್ಷಗಳ ಹಿಂದೆ ಬೆಂಗಳೂರಿನ ಸೆಂಟ್ ಜೋಸೆಫ್ ಕಾಲೇಜಿನಲ್ಲಿ ಬಿ.ಎ. ಹಿಸ್ಟರಿ ಹಾಗೂ ಎಕಾನಾಮಿಕ್ಸ್ ಓದುವುದನ್ನು ಅರ್ಧಕ್ಕೇ ನಿಲ್ಲಿಸಿ, ಕೆಲ ಸಮಯದ ನಂತರ ಮಣಿಪಾಲ್ ಯೂನಿವರ್ಸಿಟಿಯ "ವೆಲ್‌ಕಮ್ ಗ್ರೂಪ್ ಗ್ರ್ಯಾಜುಯೇಟ್ ಸ್ಕೂಲ್ ಆಫ್ ಹೋಟೆಲ್ ಅಡ್ಮಿನಿಸ್ಟ್ರೇಶನ್"ನಲ್ಲಿ "ಕಲಿನರಿ ಆರ್ಟ್"ನಲ್ಲಿ ಬಿ.ಎ. ಪದವೀಧರರಾದರು. ಗೋವಾದ 'ಡಬ್ಲ್ಯು' ಹೋಟೆಲ್‌ನಲ್ಲಿ 8 ತಿಂಗಳ ಕಾಲ ಕೆಲಸ ಮಾಡಿದ ರಾಮಸ್ಕಂದರಿಗೆ ಹೋಟೆಲ್ ಕೆಲಸದ ಏಕತಾನತೆ ಬೇಸರ ತಂದಿತು. ಆ ವೇಳೆಯಲ್ಲೇ ಅವರಿಗೆ ಮುಂಬೈನ ಅನುಭವಿ, ಖಾಸಗಿ ಚೆಫ್ ಹರ್ಷ ದೀಕ್ಷಿತ್‌ರ ಪರಿಚಯವಾಯಿತು. ಎರಡು ವರ್ಷಗಳ ಹಿಂದೆ ಹರ್ಷ ದೀಕ್ಷಿತ್‌ರವರು ರಣಬೀರ್ ಕಪೂರ್‌ಗೆ 'ಪ್ರೈವೇಟ್ ಚೆಫ್' ಆಗಿದ್ದರು. ಅವರಿಗೆ ಸಹಾಯಕರಾಗಿ ಕೆಲಸ ಆರಂಭಿಸಿದ ರಾಮಸ್ಕಂದ ಕಳೆದ ಆರು ತಿಂಗಳಿನಿಂದ ರಣಬೀರ್ ಹಾಗೂ ಆಲಿಯಾರವರಿಗೆ ಖಾಸಗಿ ಬಾಣಸಿಗರಾಗಿದ್ದಾರೆ!

"ಮೈಸೂರು ಮಿತ್ರ" ಸ್ಕಂದ ಅವರನ್ನು ಭೇಟಿ ಮಾಡಿದಾಗ, ಅವರು ಮುಕ್ತವಾಗಿ ಹಲವು ವಿಚಾರಗಳನ್ನು ಹಂಚಿಕೊಂಡರು.

ಮೈಸೂರು ಮಿತ್ರ : 'ಸೆಲಿಬ್ರಿಟಿ'ಗಳಿಗೆ ಬಗೆ ಬಗೆಯ ಆರೋಗ್ಯದಾಯಕವಾದ ಆಹಾರವನ್ನು ತಯಾರಿಸುವಲ್ಲಿ ನಿಮ್ಮ ಪಾತ್ರವೇನು?

ಸ್ಕಂದ: ಅಡುಗೆಯವರು ಸಾಧಾರಣವಾಗಿ ಒಂದು ಮನೆಯ ಸದಸ್ಯರಿಗೆ ಬೇಕಾಗುವಂತಹ ತಿಂಡಿ, ಊಟ ಹಾಗೂ ಇನ್ನಿತರೆ ಖಾದ್ಯಗಳನ್ನು ಮಾಮೂಲಿ ಅಡುಗೆಯಂತೆಯೇ ತಯಾರಿಸುತ್ತಾರೆ. ಆದರೆ, "ಪ್ರೈವೇಟ್ ಚೆಫ್"ನ ಅದೂ 'ಸ್ಟಾರ್ ಸೆಲಿಬ್ರಿಟಿ'ಗಳ ಖಾಸಗಿ ಅಡುಗೆ ಮಾಡುವವರದು ಅತೀ ಜವಾಬ್ದಾರಿಯುತವಾದ ಹೊಣೆ. ಅವರುಗಳ ಡಯಟ್ ರಿಸ್ಟ್ರಿಕ್ಷನ್ಸ್, ನ್ಯೂಟ್ರಿಶನಲ್ ನೀಡ್ಸ್ (ಸೀಮಿತ ಆಹಾರ, ಪೌಷ್ಟಿಕಾಂಶಗಳ ಅಗತ್ಯ) ತಿಳಿದುಕೊಂಡು ಅದರಂತೆ ದಿನದ ತಿಂಡಿ, ಊಟೋಪಚಾರಗಳನ್ನು ತಯಾರಿಸಬೇಕಾಗುತ್ತದೆ.

ಉದಾಹರಣೆಗೆ, ಕೆಲವು ತಿಂಗಳುಗಳ ಮೊದಲು ರಣಬೀರ್ ಸರ್‌ರವರಿಗೆ, ಅವರ ಆಹಾರ- ಪೌಷ್ಟಿಕಾಂಶಗಳ ಸಲಹೆ ನೀಡುವವರು (ನ್ಯೂಟ್ರಿಶನಿಸ್ಟ್) "ಕಿಟೋ ಡಯಟ್" ಅನ್ನು ಮೂರು ವಾರಗಳ ಕಾಲ ಸೇವಿಸಲು ಸಲಹೆ ನೀಡಿದ್ದರು. ರಣಬೀರ್‌ರವರು ಮುಂಬರುವ ಒಂದು ಹಿಂದಿ ಚಲನಚಿತ್ರದ ನಾಯಕ ಪಾತ್ರಕ್ಕಾಗಿ ದೇಹದ ತೂಕ ಇಳಿಸಿಕೊಳ್ಳಬೇಕಾಗಿತ್ತು. "ಲೋ-ಕಾರ್ಬೋಹೈಡ್ರೇಟ್" ಡಯಟ್‌ಗಾಗಿ, ನಾನು ತಯಾರಿಸುವ ಅಡುಗೆಗಳಲ್ಲಿ 'ಬೀಟ್‌ರೂಟ್' ಹಾಗೂ 'ಕ್ಯಾರೆಟ್' ಅನ್ನು ಉಪಯೋಗಿಸುವ ಹಾಗಿರಲಿಲ್ಲ. ರಣಬೀರ್ ಸರ್‌ರವರಿಗೆ 'ಡಯಟ್' ಆಹಾರದ ಬಗ್ಗೆ ಬೇಸರ ಮೂಡದಿರಲು, ನಾನು ಕೆಲವು ಅಂಶಗಳನ್ನು ಗಮನದಲ್ಲಿರಿಸಿಕೊಂಡು ಅವರು ತಿನ್ನಲು ರುಚಿ ಎನಿಸುವಂತೆ ಹಾಗೂ ಆಹಾರ ತಜ್ಞರ ಸಲಹೆಯನ್ನೂ ಮೀರದೆ, ಬ್ರಕೋಲಿ ಹಾಗೂ ಪಾಲಕ್ ಸೊಪ್ಪು ಉಪಯೋಗಿಸಿ "ಬ್ರೇಕ್‌ಫಾಸ್ಟ್" ಅನ್ನು ಬೇರೆ, ಬೇರೆ ರೀತಿಯಾಗಿ ತಯಾರಿಸುತ್ತಿದ್ದೆ.

ಅದೇ ರೀತಿ, ರಣಬೀರ್ ಸರ್ ಬೆಳಗಿನ ಜಾವ "ವರ್ಕ್‌ಔಟ್" ಮಾಡುವ ದಿನಗಳಲ್ಲಿ "ಮಶ್" (MUSH) ಅಂದರೆ ಓಟ್ಸ್ ಪಾರಿಡ್ಜ್, ಸೌತೇಕಾಯಿ ಅಥವಾ 'ಆಮ್ಲ'ದ ಹಸಿರು ಜ್ಯೂಸ್ ಮತ್ತು ಒಂದು ಹಣ್ಣನ್ನು ಸೇವಿಸಲು ಇಚ್ಛಿಸುತ್ತಾರೆ. 'ವರ್ಕ್‌ಔಟ್' (ವ್ಯಾಯಾಮ) ಅನ್ನು ಪ್ರಾರಂಭಿಸುವ ಮುಕ್ಕಾಲು ಗಂಟೆ ಮೊದಲು ಅವರು ಬೆಳಗಿನ ಉಪಾಹಾರವನ್ನು ಸೇವಿಸುವುದರಿಂದ, ಆ ವೇಳೆಗೆ ಸರಿಯಾಗಿ ಡಯಟ್ ಉಪಾಹಾರವನ್ನು ಸಿದ್ಧಪಡಿಸಿ ಕೊಡುತ್ತೇನೆ.

ಮುಂಬಯಿಯಲ್ಲೇ 'ಶೂಟಿಂಗ್'ಗೆ ತೆರಳಿದರೆ, ಮಧ್ಯಾಹ್ನದ ಊಟವನ್ನು ಪ್ಯಾಕ್ ಮಾಡಿ ಮಧ್ಯಾಹ್ನ 12 ಗಂಟೆಗೆ ಕಳುಹಿಸುತ್ತೇನೆ. ರಾತ್ರಿಯ 'ಡಿನ್ನರ್' ಅನ್ನು ಅವರುಗಳು ಮನೆಗೆ ಬರುವ ಒಂದು ಗಂಟೆಗೆ ಮೊದಲೇ ಸಿದ್ಧಪಡಿಸಿರುತ್ತೇನೆ. ಪ್ರೈವೇಟ್ ಚೆಫ್ ಎಂದರೆ 'ಆನ್ ಕಾಲ್ ಡ್ಯೂಟಿ' ತರಹ, 24/7 ದಿನಗಳೂ !.

ಮೈಸೂರು ಮಿತ್ರ: ನೀವು ಅವರ ಜೊತೆ ಯಾವ ಭಾಷೆಯಲ್ಲಿ ಸಂಭಾಷಿಸುತ್ತೀರಿ. ರಣಬೀರ್ ಮತ್ತು ಆಲಿಯಾರವರಿಗೆ ನಿಮ್ಮ ಅಡುಗೆಯ ರುಚಿ ಇಷ್ಟವಾಗಿದೆಯೇ?

ಸ್ಕಂದ: ನಾನು ಸಾಮಾನ್ಯವಾಗಿ ಅವರೊಡನೆ ಇಂಗ್ಲೀಷಿನಲ್ಲೇ ಸಂಭಾಷಣೆ ಮಾಡುತ್ತೇನೆ. ನಾನು ಹಿಂದಿ ಭಾಷೆಯಲ್ಲಿ ಮಾತನಾಡುವುದನ್ನು ಕಲಿತದ್ದು ಗೋವಾದ ಹೋಟೆಲ್‌ನಲ್ಲಿ 'ಕಲಿನರಿ ಇಂಟರ್ನ್‌ಶಿಪ್' ಮಾಡುತ್ತಿದ್ದಾಗ. ಕೆಲವೊಮ್ಮೆ ರಣಬೀರ್ ಮತ್ತು ಆಲಿಯಾ ಭಟ್‌ರೊಡನೆ ಹಿಂದಿಯಲ್ಲೂ ಮಾತನಾಡುತ್ತೇನೆ. ನಾನು ಮಾಡುವ ಅಡುಗೆ (ಶಾಖಾಹಾರ ಮಾತ್ರ) ಅವರುಗಳಿಗೆ ಇಷ್ಟವಾಗಿದೆ ಹಾಗೂ ಹೊಸ. ಹೊಸ 'ರೆಸಿಪಿ'ಗಳನ್ನು ಪ್ರಯತ್ನಿಸಲೂ ಕೂಡ ನನಗೆ ಸ್ವಾತಂತ್ರ್ಯ ಹಾಗೂ ಪ್ರೋತ್ಸಾಹವನ್ನು ಕೊಟ್ಟಿದ್ದಾರೆ.

ಮೈಸೂರು ಮಿತ್ರ: ರಣಬೀರ್ ಕಪೂರ್‌ರವರಿಗೆ ಇಷ್ಟವಾದ ತಿನಿಸು ಹಾಗೂ ಆಲಿಯಾ ಭಟ್‌ರವರಿಗೆ ಪ್ರಿಯವಾದ ತಿನಿಸು ಯಾವುದು ? ಇಬ್ಬರಿಗೂ ಬೇರೆ ಬೇರೆ ರೀತಿಯ ಉಪಾಹಾರ ಅಥವಾ ಭೋಜನ ತಯಾರಿಸಲು ಕಷ್ಟ ಎನಿಸಿಲ್ಲವೇ?

ಸ್ಕಂದ: ರಣಬೀರ್ ಸರ್‌ರವರಿಗೆ ನಾನು ಮಾಡುವ "ಬಿಸಿಬೇಳೆ ಬಾತ್" ತುಂಬಾ ಇಷ್ಟ. ಆದರೆ ಅವರು 'ಬಿಳಿಅಕ್ಕಿ'ಯನ್ನು ಹೆಚ್ಚಾಗಿ ತಿನ್ನುವುದಿಲ್ಲವಾದ್ದರಿಂದ, ಅಪರೂಪವೆನಿಸುವಂತೆ 'ಬಿಸಿಬೇಳೆ ಬಾತ್' ಮಾಡಲು ಹೇಳುತ್ತಾರೆ. ಒಮ್ಮೆ ರಣಬೀರ್‌ರವರು ಶೂಟಿಂಗ್ ಮುಗಿಸಿಕೊಂಡು ಇಟಲಿಯಿಂದ ವಾಪಸ್ಸು ಬಂದಾಗ, ನಾನು ಮಾಡುವ 'ಪಾಸ್ತಾ'ವನ್ನು ತಿನ್ನುವ ಆಸೆ ವ್ಯಕ್ತಪಡಿಸಿದರು. ಮುಂಬೈನಲ್ಲಿ ನಾನು ರೆಸ್ಟೋರೆಂಟ್‌ಗಳಲ್ಲಿ ಕೆಲಸ ಮಾಡುತ್ತಿರುವ ಸೀನಿಯರ್ ಚೆಫ್‌ಗಳೊಡನೆ ಉತ್ತಮ ಸ್ನೇಹ, ಸಂಪರ್ಕ ಇರಿಸಿಕೊಂಡಿರುವುದರಿಂದ, "ಅಮೆರಿಕಾನ" ಎಂಬ ಹೋಟೆಲ್‌ನ ಚೆಫ್ ಒಬ್ಬರಿಂದ 'ಪಾಸ್ತಾ' ಮಾಡುವುದನ್ನು ಕಲಿತೆ. ರಣಬೀರ್ ಸರ್‌ರವರು "ಚೀಟ್ ಡಯಟ್" ಮಾಡುವಾಗ ಮಾತ್ರ ನನಗೆ "ಹೋಮ್ ಮೇಡ್ 'ಪಾಸ್ತಾ' ಮಾಡಲು ಹೇಳುತ್ತಾರೆ !. ಆಲಿಯಾ ಭಟ್‌ರವರಿಗೆ 'ಚಿಲ್ಲಾ' (ಕರ್ನಾಟಕದಲ್ಲಿ 'ಪೆಸರಟ್ಟು') ಎಂದರೆ ತುಂಬಾ ಇಷ್ಟ. ಬೆಂಗಳೂರಿನಲ್ಲಿ ನಾವು ಮಾಡುವ 'ಪೆಸರಟ್ಟು'ನ್ನು ನೆನೆಸಿದ ಹೆಸರುಕಾಳನ್ನು ರುಬ್ಬಿ ಮಾಡಿದ ಹಿಟ್ಟಲ್ಲಿ ಮಾಡುತ್ತೇವೆ. ಮುಂಬೈನಲ್ಲಿ ನೆನೆಸಿದ ಹೆಸರು ಬೇಳೆಯನ್ನು ರುಬ್ಬಿದ ಹಿಟ್ಟಿನಲ್ಲಿ ದೋಸೆಯಂತೆ ಮಾಡುತ್ತೇವೆ. ಆಲಿಯಾ ಭಟ್‌ರವರು ಎಲ್ಲಾ ರೀತಿಯ ತರಕಾರಿಗಳನ್ನೂ ತಿನ್ನುತ್ತಾರೆ. ಅವರಿಗೆ "ರಾಜ್‌ಗಿರಾ" (ಬಸಳೆ ಸೊಪ್ಪಿನ ಕಾಳಿನಿಂದ ಮಾಡಿರುವ ಹಿಟ್ಟಿನ ರೊಟ್ಟಿ) ಎಂದರೆ ತುಂಬಾ ಇಷ್ಟ. ಅವರುಗಳು ಹೇಳುವ ಯಾವುದೇ ತಿನಿಸು ಅಥವಾ ಭೋಜನವನ್ನು ತಯಾರಿಸಲು ನನಗೆ ಕಷ್ಟವೆನಿಸಿಲ್ಲ.



ಈ ವರ್ಷದ ಸಂಕ್ರಾಂತಿಯ ದಿನದಂದು 'ಖಾರ ಪೊಂಗಲ್' ಜೊತೆಗೆ 'ಹುಣಸೇ ಹಣ್ಣಿನ ಗೊಜ್ಜ'ನ್ನು ಮಾಡಿ ರಣಬೀರ್ ಹಾಗೂ ಆಲಿಯಾರವರಿಗೆ ಬಡಿಸಿದ್ದೆ. ಕರ್ನಾಟಕದಲ್ಲಿ ಸಂಕ್ರಾಂತಿಯನ್ನು ಹೇಗೆ ಆಚರಿಸುತ್ತಾರೆ ಎಂದೂ ಕೂಡ ವಿವರಿಸಿದ್ದೆ.

ಮೈಸೂರು ಮಿತ್ರ: ರಣಬೀರ್ ಹಾಗೂ ಆಲಿಯಾರವರು ಭಾರತದಲ್ಲಿ ಬೇರೆ ರಾಜ್ಯಗಳಿಗೆ 'ಶೂಟಿಂಗ್' ಗೆ ಹೋದಾಗ, ಹೇಗೆ ತಮ್ಮ 'ಡಯಟ್' ಅನ್ನು ನಿಭಾಯಿಸುತ್ತಾರೆ?

ಸ್ಕಂದ: ನವೆಂಬರ್ 2021 ರಲ್ಲಿ ಅವರುಗಳಿಗೆ ದೆಹಲಿಯಲ್ಲಿ ಚಿತ್ರೀಕರಣದ ಷೆಡ್ಯೂಲ್ ಇದ್ದಾಗ, ನನ್ನನ್ನೂ ಜೊತೆಯಲ್ಲಿ ಕರೆದುಕೊಂಡು ಹೋಗಿ, ತಾವು ಇಳಿದುಕೊಂಡಿದ್ದ ಹೋಟೆಲ್‌ನಲ್ಲೇ ನನ್ನನ್ನು ಇರಿಸಿದ್ದರು. ಆ ಹೋಟೆಲ್‌ನ "ಕಿಚನ್" ನ ಒಂದು ಮುಖ್ಯವಾದ ಭಾಗದಲ್ಲಿ, ಅವರುಗಳಿಗೆ ಅಡುಗೆ ಮಾಡಲು ನನಗೆ ಅವಕಾಶ ದೊರಕಿತ್ತು.

ಮೈಸೂರು ಮಿತ್ರ: ರಣಬೀರ್ ಮತ್ತು ಆಲಿಯಾರವರ ಯಾವ ಗುಣ ನಿಮಗೆ ಆತ್ಮೀಯತೆ ಅನುಭವ ನೀಡಿದೆ?

ಸ್ಕಂದ: "ರಣಬೀರ್ ಸರ್ ಹಾಗೂ ಆಲಿಯಾ ಭಟ್‌ರವರು ತುಂಬಾ ಸರಳ ಸ್ವಭಾವದ ಸಜ್ಜನರು. ಯಾವುದೇ ರೀತಿಯ "ಸ್ಟಾರ್ ಆಟಿಟ್ಯೂಡ್" ತೋರಿಸಿಲ್ಲ. ನನ್ನನ್ನು ಅವರ ಕುಟುಂಬದ ಸದಸ್ಯನಂತೆ ಕಾಣುತ್ತಾರೆ. ಅವರಿಬ್ಬರ ಮಾನವೀಯ ಗುಣ, ಸ್ವಭಾವಗಳನ್ನು ನಾನು ಗೌರವಿಸುತ್ತೇನೆ."

ಯಾವುದೇ ವೇಳೆಯಲ್ಲಾಗಲೀ, ರಣಬೀರ್‌ರವರಿಂದ ಕರೆ ಬಂದರೆ, ರಾಮಸ್ಕಂದ ತನ್ನ ಮೋಟಾರ್ ಬೈಕ್‌ನಲ್ಲಿ ಕೇವಲ 3 ರಿಂದ 5 ನಿಮಿಷಗಳಲ್ಲಿ ತಾನಿರುವ ಬಾಂದ್ರಾದಿಂದ ಅವರ 'ಪಾಲಿಹಿಲ್'ನ ವಿಶಾಲವಾದ ಮನೆಯನ್ನು ತಲುಪಿ, ಸಮರ್ಪಕವಾಗಿ ತನ್ನ 'ಪ್ರೈವೇಟ್ ಚೆಫ್' ಕಾರ್ಯವನ್ನು ನಿಭಾಯಿಸಲು ಸಿದ್ಧರಾಗುತ್ತಾರೆ!



– ಡಾ. ವೀಣಾಭಾರತಿ
ಬೆಂಗಳೂರು,
ಮೊಬೈಲ್ ಸಂಖ್ಯೆ:9880251040,

ಸವಿ ರುಚಿ

ರಾಗಿ ಚಕ್ಕುಲಿ



ಬೇಕಾಗುವ ಪದಾರ್ಥಗಳು...

ರಾಗಿ ಹಿಟ್ಟು- 2 ಲೋಟ
ನವಣೆ ಹಿಟ್ಟು-1/2 ಲೋಟ
ಹುರಿಗಡಲೆ ಪುಡಿ-1/2 ಬಟ್ಟಲು
ಇಂಗು- ಸ್ವಲ್ಪ
ಖಾರದ ಪುಡಿ- 2 ಚಮಚ
ಉಪ್ಪು- ರುಚಿಗೆ ತಕ್ಕಷ್ಟು
ಜೀರಿಗೆ- 1/2 ಚಮಚ
ಬಿಳಿ ಎಳ್ಳು- 1 ಚಮಚ

ಮಾಡುವ ವಿಧಾನ...

ರಾಗಿ ಹಿಟ್ಟು ಹಾಗೂ ನವಣೆಹಿಟ್ಟು ಎರಡನ್ನೂ, ಚೆನ್ನಾಗಿ ಬೆರಿಸಿ, ಒಂದು ಬಟ್ಟೆಯಲ್ಲಿ ಗಟ್ಟಿಯಾಗಿ ಗಂಟು ಕಟ್ಟಿಕೊಳ್ಳಿ. ಈ ಗಂಟನ್ನು ಒಂದು ಬಟ್ಟಲಿನಲ್ಲಿ ಇಟ್ಟು 15-20 ನಿಮಿಷಗಳ ಕಾಲ ಕುಕ್ಕರ್‌ನ ಹಬೆಯಲ್ಲಿ ಬೇಯಿಸಿಕೊಳ್ಳಿ.

ಬಿಸಿ ಆರಿದ ಬಳಿಕ ಗಂಟಿನಲ್ಲಿನ ಹಿಟ್ಟಿಗೆ ಉಳಿದ ಪದಾರ್ಥಗಳನ್ನು ಸೇರಿ, ಚೆನ್ನಾಗಿ ನಾದಿಕೊಂಡು ಚಕ್ಕುಲಿ ಹಿಟ್ಟಿನ ಹದಕ್ಕೆ ಕಲಸಿಕೊಳ್ಳಿ.

ಚಕ್ಕುಲಿ ಒರಳಿನಲ್ಲಿ ಈ ಹಿಟ್ಟನ್ನು ಒತ್ತಿ, ಕಾದ ಎಣ್ಣೆಯಲ್ಲಿ ಹದವಾಗಿ ಕರಿದರೆ ಗರಿ ಗರಿಯಾದ, ರುಚಿಕರವಾಗ ಹಾಗೂ ಆರೋಗ್ಯಕವಾದ ಚಕ್ಕುಲಿ ಸವಿಯಲು ಸಿದ್ಧ.

ನಗರಸಭಾ ಕಾರ್ಯಾಲಯ, ಮಂಡ್ಯ

ದೂ.ಸಂ.: 08232-226749 ಟೋಲ್ ಫ್ರೀ ಸಂ. : 1800-4253795 ಫ್ಯಾಕ್ಸ್: 08232-221617
website: www.mandyacity.mrc.gov.in Email: itstaff_ulb_mandya@yahoo.co.in

ಸಂ.ನಸಮಂ/ಕಂಶಾ/ಸಿಆರ್/01/2022-23 ದಿನಾಂಕ: 30-03-2022

ಸಾರ್ವಜನಿಕ ಪ್ರಕಟಣೆ

ವಿಷಯ:- 2022-23ನೇ ಸಾಲಿನ ನಿವೇಶನ, ವಸತಿ ಹಾಗೂ ವಾಣಿಜ್ಯ ಕಟ್ಟಡಗಳ ಆಸ್ತಿ ತೆರಿಗೆಯನ್ನು ಎಸ್.ಎ.ಎಸ್ ಪದ್ಧತಿಯಲ್ಲಿ ಘೋಷಿಸಿಕೊಳ್ಳುವ ಬಗ್ಗೆ.

ಆಸ್ತಿ ತೆರಿಗೆ ಪಾವತಿ:-

- 2022-23ನೇ ಸಾಲಿಗೆ ಮಂಡ್ಯ ನಗರಸಭಾ ವ್ಯಾಪ್ತಿಯಲ್ಲಿರುವ ನಿವೇಶನ, ವಸತಿ ಮತ್ತು ವಾಣಿಜ್ಯ ಕಟ್ಟಡಗಳ ಸ್ವಾಧೀನ ಮಾಲೀಕರುಗಳಿಗೆ ಈ ಮೂಲಕ ತಿಳಿಸುವುದೇನೆಂದರೆ ಹಿಂದಿನ ವರ್ಷದಲ್ಲಿದ್ದಂತಹ ತೆರಿಗೆಗೆ 1. ಸರ್ಕಾರದ ಅಧಿಸೂಚನೆಗಳ ಸಂಖ್ಯೆ: DPAL07SHASANA2021, BENGALURU. ಹಾಗೂ DPAL06SHABABA 2021, BENGALURU ದಿನಾಂಕ: 18-02-2021. ಪೌರಾಡಳಿತ ನಿರ್ದೇಶನಾಲಯದ ಸುತ್ತೋಲೆ ಸಂ.292724 /ಡಿ.ಎಂ.ಎ/ಡಿಆರ್‌ಪಿ/ಟ್ಯಾಕ್ಸ್-3/2020 ದಿನಾಂಕ: 19-02-2021. ಹಾಗೂ ನಗರಸಭಾ ಕೌನ್ಸಿಲ್ ನಿರ್ಣಯ ಸಂಖ್ಯೆ 26(1) ದಿನಾಂಕ: 16-03-2022 ರ ರೀತ್ಯಾ ಖಾಲಿ ನಿವೇಶನ ವಸತಿ ಮತ್ತು ವಾಣಿಜ್ಯ ಕಟ್ಟಡಗಳಿಗೆ ಶೇ 3 ರಷ್ಟನ್ನು ಪರಿಷ್ಕರಿಸಲಾಗಿದೆ. 2021-22 ರ ಮೂಲ ಆಸ್ತಿ ತೆರಿಗೆ ಮೇಲೆ.
- 2022 ಏಪ್ರಿಲ್ 30ರ ಒಳಗಾಗಿ ತೆರಿಗೆ ಪಾವತಿಸಿದರೆ, ಮೂಲ ಆಸ್ತಿ ತೆರಿಗೆಯಲ್ಲಿ ಶೇ.5 ರಷ್ಟು ರಿಯಾಯಿತಿ ಪಡೆಯಬಹುದಾಗಿದೆ. ಮೇ ಮತ್ತು ಜೂನ್ ರ ಆಸ್ತಿ ತೆರಿಗೆ ಪಾವತಿ ಮಾಡುವವರಿಗೆ ದಂಡ ಇರುವುದಿಲ್ಲ 2022 ರ ಜುಲೈ ತಿಂಗಳಿಂದ ಪಾವತಿಸುವವರಿಗೆ ಪ್ರತಿ ತಿಂಗಳಿಗೆ ಶೇ.2 ರಷ್ಟು ದಂಡ ಪಾವತಿಸಬೇಕಾಗುತ್ತದೆ.
- ಮೂಲೆ ನಿವೇಶನಗಳ ಆಸ್ತಿ ಮಾಲೀಕರು ಶೇ. 10 ರಷ್ಟು ಹೆಚ್ಚಿನ ತೆರಿಗೆ ಪಾವತಿ ಮಾಡಬೇಕಾಗಿರುತ್ತದೆ.
- ಮಂಡ್ಯ ನಗರಸಭಾ ವ್ಯಾಪ್ತಿಯ ಸರಹದ್ದಿನಲ್ಲಿರುವ ಕೆಲವು ಆಸ್ತಿ ಮಾಲೀಕರು ನಗರಸಭೆಯಿಂದ ಮೂಲಭೂತ ಸೌಕರ್ಯ ಪಡೆದು ಗ್ರಾಮ ಪಂಚಾಯಿತಿಗಳಲ್ಲಿ ಖಾತೆ ತೆರೆದು ಕಟ್ಟಡ ನಿರ್ಮಾಣ ಮಾಡುತ್ತಿದ್ದು, (ತೆರಿಗೆ ಮತ್ತು ಇತರೆ ಪರವಾನಗಿ ಶುಲ್ಕ ಕಡಿಮೆ ಇರುವುದರಿಂದ) ಗ್ರಾಮ ಪಂಚಾಯಿತಿಗಳಿಗೆ ಕಂದಾಯ ಪಾವತಿಸುತ್ತಿರುವುದು ಕಂಡುಬಂದಿದ್ದು ಇದರಿಂದ ನಗರಸಭೆಗೆ ಆರ್ಥಿಕ ನಷ್ಟ ಉಂಟುಮಾಡುತ್ತಿದ್ದು ಇದು ಶಿಕ್ಷಾರ್ಹ ಅಪರಾಧವಾಗಿದ್ದು, ಇಂತಹ ಆಸ್ತಿ ಮಾಲೀಕರು ನಗರಸಭೆ ತಾಂತ್ರಿಕ ಶಾಖೆಯನ್ನು ಸಂಪರ್ಕಿಸಿ ನಿಖರ ಮಾಹಿತಿ ಪಡೆದು ನಗರಸಭೆಯಲ್ಲಿ ಖಾತೆ ತೆರೆದು ತೆರಿಗೆ ಪಾವತಿಸಲು ತಿಳಿಸಲಾಗಿದೆ.
- ಕಾಲೇಜು / ಶಾಲಾ ಕಟ್ಟಡಗಳಿಗೆ ನಿರ್ದೇಶಕರು ಪೌರಾಡಳಿತ ನಿರ್ದೇಶನಾಲಯ ಬೆಂಗಳೂರು ರವರ ಪತ್ರ ಸಂಖ್ಯೆ 23788 ಡಿಎಂಎ186ಡಿಆರ್‌ಪಿ 2017-18 ದಿನಾಂಕ: 23-02-2018, ರ ಅನ್ವಯ ಈಗಾಗಲೇ ಶಾಲಾ / ಕಾಲೇಜುಗಳಿಗೆ ಆಸ್ತಿತೆರಿಗೆ ಪಾವತಿಸಲು ನೋಟೀಸ್‌ಗಳನ್ನು ನೀಡಲಾಗಿರುವಂತೆ ಆಸ್ತಿತೆರಿಗೆ ಬಾಕಿಯನ್ನು ಪಾವತಿಸುವುದು ಹಾಗೂ 2022-23 ನೇ ಸಾಲಿಗೂ ಆಸ್ತಿ ಘೋಷಣೆ ಮಾಡಿ ಆಸ್ತಿತೆರಿಗೆ ಪಾವತಿಸಲು ಈ ಮೂಲಕ ತಿಳಿಯಪಡಿಸಿದೆ.

ಅನಧಿಕೃತ ಆಸ್ತಿಗಳಿಗೆ ತೆರಿಗೆ ಪಾವತಿ:

- ಸರ್ವೆ ನಂಬರ್ ಜಾಗದಲ್ಲಿ ಕಟ್ಟಿರುವ ಕಟ್ಟಡಗಳ ಮಾಲೀಕರು, ಭೂ ಪರಿವರ್ತನೆಯಾಗಿದ್ದು, ನಗರಾಭಿವೃದ್ಧಿ ಪ್ರಾಧಿಕಾರದಿಂದ ನಕ್ಷೆ ಅನುಮೋದನೆಯಾಗದೆ ಅನಧಿಕೃತವಾಗಿ ವಿಭಜನೆಯಾಗಿರುವ, ಅನಧಿಕೃತವಾಗಿ ನಿರ್ಮಿಸಿಕೊಂಡಿರುವ ಕಟ್ಟಡಗಳ ರೆವಿನ್ಯೂ / ಕಂದಾಯ ಬಡಾವಣೆಗಳಲ್ಲಿನ ಸ್ವತ್ತುಗಳ ಮಾಲೀಕರು / ಅನುಭವದಾರರು ಕರ್ನಾಟಕ ಪುರಸಭಾ ಕಾಯಿದೆ 1964 ಸೆಕ್ಷನ್ 107 ರ ಪ್ರಕಾರ ಆಸ್ತಿ ತೆರಿಗೆ ಪದ್ಧತಿ (ಎಸ್.ಎ.ಎಸ್) ರನ್ವಯ ತಮ್ಮ ಆಸ್ತಿಗೆ 2 ಪಟ್ಟು ಆಸ್ತಿ ತೆರಿಗೆ ಪಾವತಿಸತಕ್ಕದ್ದು, ಆದರೆ ಇಂತಹ ಆಸ್ತಿಗಳಿಗೆ ತೆರಿಗೆ ಮಾತ್ರ ಸೀಮಿತವಾಗಿರುತ್ತದೆಯೇ ಹೊರತು ಇ-ಆಸ್ತಿ ನೀಡುವುದು, ಮಾಲೀಕತ್ವದ ಹಕ್ಕು ವರ್ಗಾವಣೆ ಮಾಡುವುದು ಸರ್ಕಾರದ ನಿಯಮಾವಳಿಗೆ ಒಳಪಟ್ಟಿರುತ್ತದೆ.
- ಕರ್ನಾಟಕ ತೆರಿಗೆ ಸಂದಾಯ ನಿರಾಕರಣೆ ಅಥವಾ ಮುಂದೂಡುವಿಕೆಯ ಪ್ರಚೋದನಾ ಪ್ರತಿಬಂಧಕ ಅಧಿನಿಯಮ 1981 ರಂತೆ ಸರ್ಕಾರಕ್ಕೆ ಅಥವಾ ಸ್ಥಳೀಯ ಸಂಸ್ಥೆಗಳಿಗೆ ಪಾವತಿಸಬೇಕಾದ ತೆರಿಗೆಯನ್ನು ನಿರಾಕರಿಸುವುದು ಅಥವಾ ಮುಂದೂಡಲು ಪ್ರಚೋದಿಸುವ ವ್ಯಕ್ತಿಗಳಿಗೆ ಐದು ವರ್ಷಗಳ ಕಠಿಣ ಶಿಕ್ಷೆಗೆ ಗುರಿಯಾಗತಕ್ಕ ಶಿಕ್ಷಾರ್ಹ ಅಪರಾಧವಾಗಿದ್ದು ಸಾರ್ವಜನಿಕರು ಸಕಾಲದಲ್ಲಿ ಆಸ್ತಿತೆರಿಗೆ ಪಾವತಿಸಲು ತಿಳಿಸಲಾಗಿದೆ.

ಸಹಿ/-	ಸಹಿ/-	ಸಹಿ/-
ಅಧ್ಯಕ್ಷರು	ಉಪಾಧ್ಯಕ್ಷರು	ಪೌರಾಯುಕ್ತರು
ನಗರಸಭೆ, ಮಂಡ್ಯ.	ನಗರಸಭೆ, ಮಂಡ್ಯ	ನಗರಸಭೆ, ಮಂಡ್ಯ

ಎಲ್ಲಿಗೆ ಪಯಣ ಯಾವುದೋ ದಾರಿ...





ನಮ್ಮ ಪೂರ್ವಜರು ಪ್ರಕೃತಿಯಲ್ಲಿನ ಸೂರ್ಯ, ಚಂದ್ರ, ನೀರು, ಗಾಳಿ ಮತ್ತು ಭೂಮಿಯನ್ನೇ ದೈವವೆಂದು ಆರಾಧಿಸುತ್ತಿದ್ದರು. ಆದರೆ ನಾವು ಇದನ್ನು ಮರೆತು ನಮ್ಮದೇ ಆದಂತಹ ಸ್ವಪ್ರತಿಷ್ಠೆಯಿಂದ ಮಾಡುತ್ತಿರುವುದು ತಪ್ಪು ಎಂದು ತಿಳಿದರೂ ಅದನ್ನೇ ಮಾಡುತ್ತಾ ಸಾವಿನೆಡೆಗೆ ಸಾಗುತ್ತಿದ್ದೇವೆ. ಅವರು ಆಹಾರವನ್ನು ಸೇವಿಸುವ ಮುನ್ನ ಇದು ಪ್ರಾಣಿ, ಪಕ್ಷಿಗಳ ಪಾಲೆಂದು ಹೊರಗಿಟ್ಟು ನಂತರ ತಿನ್ನುತ್ತಿದ್ದರು. "ಸತ್ತವರ ಮೇಲೆ ಸಂಪಿಗೆ ನೆಡು" ಎಂದು ಸತ್ತವರ ಸಮಾಧಿಗಳಲ್ಲಿ ಒಂದು ಸಸಿ ನೆಡುತ್ತಿದ್ದರು. "ಫಲ ಕೊಟ್ಟು ಪಾಪ ಕಳಿ" ಎಂದು ಸ್ಥಳವಿದ್ದಲ್ಲಿ ಸಸಿಗಳನ್ನು ನೆಡುತ್ತಿದ್ದರು. ಅನೇಕ ಕಥೆಗಳ ಮೂಲಕ ಮರಗಳನ್ನು ಧರ್ಮದ ಗುರುತಾಗಿ ಬೆಳೆಸುತ್ತಿದ್ದರು. ಅಂದರೆ ಒಬ್ಬನು ಮತ್ತೊಬ್ಬನಿಗೆ ಒಂದು ಮರದ ಮುಂದೆ ಮಾತು ಕೊಟ್ಟರೆ ಆ ಮರವೇ ಅವರಿಬ್ಬರ ನಡುವಿನ ಸಾಕ್ಷಿ. ಮಾತು ಕೊಟ್ಟವನು ನನ್ನ ಮಾತನ್ನು ನಡೆಸಿಕೊಡು ತಾಯಿ ಎಂದು ಪ್ರತಿನಿತ್ಯ ಅಲ್ಲಿ ಬೇಡುತ್ತಿದ್ದನು. ಆ ಮಾತು ನೆರವೇರಿದ ನಂತರ ಇಬ್ಬರೂ ಸೇರಿ ಅದಕ್ಕೆ ಪೂಜೆ ಸಲ್ಲಿಸುತ್ತಿದ್ದರು. ಅಂದ ಮೇಲೆ ಅವರ ಧರ್ಮನಿಷ್ಠೆ ಎಷ್ಟಿತ್ತೆಂಬುದನ್ನು ನಾವು ಅಳೆಯಲು ಸಾಧ್ಯವೇ?

ಈಗ ನನ್ನಜ್ಜ ಹೇಳಿದ ಕಥೆಯೊಂದು ಜ್ಞಾಪಕಕ್ಕೆ ಬರುತ್ತದೆ. ಸುಮಾರು ನೂರು ವರ್ಷಗಳ ಹಿಂದೆ ಮುಖ್ಯೋಪಾಧ್ಯಾಯನಾಗಿದ್ದು, ಸುತ್ತಮುತ್ತಲ ಊರಿನ ಜನರ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಮುಖ್ಯಸ್ಥನಾಗಿದ್ದ. ಒಬ್ಬ ಬಡವ ಕೂಲಿಗಾರ. ಆತ ಬಿಡಿಕಾಸು ಇಲ್ಲದಿರುವವನು, ಕೂಲಿಯೇ ಜೀವನ, ಯಾವ ಆಸ್ತಿಯೂ ಇಲ್ಲ. ಊರಿನ ಹೊರಗೆ ಗುಡಿಸಲು. ಇವನನ್ನು ಎಲ್ಲರೂ ಮೋಜಿಗಾಗಿ ಛೇಡಿಸುತ್ತಿದ್ದರಂತೆ. ಒಂದು ದಿನ ಇದೇ ರೀತಿ ಆ ಊರಿನ ಒಬ್ಬ ಆಗರ್ಭ ಶ್ರೀಮಂತ ಯಾವುದೋ ಒಂದು ಮಾತಿಗೆ ಮಾತು ಬೆಳೆದು 'ಗತಿಗೆಟ್ಟ ನನ್ನ ಮಗನೇ ಜೇಬಿನಲ್ಲಿ ಒಂದಾಣೆ ಇಲ್ಲದಿದ್ದರೂ ಬಡಾಯಿ ಬಡ್ಡಿ ಮಗ" ಎಂದು ಮೂದಲಿಸಿದೊಡನೆ, ಸ್ವಾಮಿ ನನ್ನ ಹತ್ತಿರ ಒಂದಾಣೆ ಇದ್ದರೆ ಏನು ಕೊಡುತ್ತೀರಿ? ಎಂದು ಮರುಪ್ರಶ್ನಿಸಿದನಂತೆ. ಆ ಶ್ರೀಮಂತ ನನ್ನ ಆಸ್ತಿ, ಮನೆ, ಮಠ ಎಲ್ಲವನ್ನೂ ಕೊಟ್ಟುಬಿಡುತ್ತೇನೆ ಎಂದನಂತೆ. ತಕ್ಷಣ ಇವನು ಚಡ್ಡಿ ಜೇಬಿನಿಂದ ಒಂದಾಣೆಯನು ತೆಗೆದು ಮುಂದಿಟ್ಟುಬಿಟ್ಟನಂತೆ. ಎಲ್ಲರೂ ದಂಗಾಗಿ ಶ್ರೀಮಂತನ ಮುಖವನ್ನು ಪೆಚ್ಚಾಗಿ ನೋಡಿದರಂತೆ. ಆತ "ನಾನು ಮಾತು ಕೊಟ್ಟಂತೆ ನಾನು ನಿನಗೆ ಎಲ್ಲವನ್ನೂ ಬಿಟ್ಟುಕೊಟ್ಟಿದ್ದೇನೆ. ನಾನು, ನನ್ನ ಹೆಂಡತಿ, ಮಕ್ಕಳು ಉಟ್ಟ ಬಟ್ಟೆಯಲ್ಲೇ ಊರು ಬಿಡುತ್ತೇವೆ ಎಂದು ಹೇಳಿ, ಬಾ ನನ್ನದೆಲ್ಲಾ ನೀನು ತೆಗೆದುಕೊ' ಎಂದು ಹೇಳಿ ಶ್ರೀಮಂತ ಹೊರಟುಬಿಟ್ಟನಂತೆ. ಬಡವ ಪೆಚ್ಚಾಗಿ ತಪ್ಪು ಮಾಡಿಬಿಟ್ಟೆನಲ್ಲಾ ಎಂದುಕೊಂಡು ಗಾಬರಿಯಿಂದ ತನ್ನ ಅಜ್ಜನ ಬಳಿಗೆ ಓಡಿ ಬಂದು 'ಮೇಷ್ಟ್ರೆ ಮೇಷ್ಟ್ರೆ' ನಾನು ಸತ್ತೆ ಎಂದು ಕೂಗಿಕೊಂಡನಂತೆ. ಬೇರೆಯವರಿಂದ ವಿಷಯ ತಿಳಿದ ಆತನ ಅಜ್ಜ, ಹೌದು ಮಾತಿನಂತೆ ನಡೆದುಕೊಳ್ಳಬೇಕಲ್ಲವೇ? ಇದಕ್ಕೆ ನಾನು ಯಾವ ನ್ಯಾಯವೂ ಮಾಡಲಾರೆ ಎಂದು ಕೈತೊಳೆದುಕೊಂಡರಂತೆ.

ಬಡವ ಮತ್ತೆ ಶ್ರೀಮಂತನ ಮನೆಗೆ ಓಡಿ ಹೋಗಿ ಸ್ವಾಮಿ, ನಾನು ಮಾಡಿದ್ದು ತಮಾಷೆಗೆ. "ಬಡವ ನೀನು ಇಟ್ಟಂಗಿರು" ಎಂಬಂತೆ ನನಗೆ ಯಾಕೆ ಸ್ವಾಮಿ ಇವೆಲ್ಲ? ಬೇಡಾ, ಬೇಡಾ ಎಂದು ಅಂಗಲಾಚಿ ಬೇಡಿಕೊಂಡರೂ, ಊರಿನ ಜನರೆಲ್ಲರೂ ಹೇಳಿದರೂ, ಊರಿನವರಿಗೆಲ್ಲಾ, 'ನನ್ನ ಮಾತು ತಪ್ಪಿದರೆ ನನ್ನ ನಾಲಿಗೆ ಕರವಾಗಿ ಹೋಗುತ್ತೆ ಅದು ನನ್ನ ಮಕ್ಕಳ ತಲೆಗೂ ನಿಲ್ಲುತ್ತೆ, ಆಗೋಲ್ಲ. ನಾಳೆ ನೀನು ಬಂದು ಇವೆಲ್ಲವನ್ನೂ ತೆಗೆದುಕೊಂಡು ನಮಗೆ ಬಿಡುಗಡೆ ಮಾಡು' ಎಂದು ಹೇಳಿ ಬಾಗಿಲನ್ನು ಮುಚ್ಚಿಬಿಟ್ಟನಂತೆ. ಬಡವ ನಿದ್ರೆ ಬಾರದೆ ನರಳಿ-ನರಳಿ ಮಧ್ಯ ರಾತ್ರಿಯಲ್ಲಿ ಮನೆ ಬಿಟ್ಟು ಹೋಗಿ, ಊರ ಹೊರಗಿನ ಆಲದಮರಕ್ಕೆ ನೇಣು ಹಾಕಿಕೊಂಡು ಸತ್ತನಂತೆ. ಮಾರನೆಯ ದಿನ ಎಲ್ಲಾ ಕಡೆಗೂ ವಿಷಯ ಹರಡಿ, ಜನರು ಜಾತ್ರೆಯಂತೆ ಸೇರಿದ್ದರಂತೆ. ಶ್ರೀಮಂತ ನನ್ನ ಅಜ್ಜನ ಬಳಿ ಬಂದು 'ಮೇಷ್ಟ್ರೆ, ಈಗಾಗಲೇ ಏನೆಲ್ಲಾ ನಡೆದು ಹೋಯಿತು ಎಂದು ನಿಮಗೆ ತಿಳಿದಿದೆ. ನಾನು ಘೋರ ತಪ್ಪು ಮಾಡಿಬಿಟ್ಟೆ. ಅವನ ಸಾವಿಗೆ ನಾನೇ ಕಾರಣ. ನನಗೆ ಕ್ಷಮೆಯಿಲ್ಲ. ನನ್ನದೆಲ್ಲವನ್ನೂ ಯಾವುದಾದರೂ ಆಶ್ರಮಕ್ಕೆ ದಾನ ಮಾಡಿಬಿಡಿ ಎಂದು ಹೇಳಿ, ಹೆಂಡತಿ-ಮಕ್ಕಳೊಡನೆ ಹೊರಟು ಹೋದನಂತೆ. ಅದು ಎಂದಿಗೂ "ಒಂದಾಣೆ ಮನೆ" ಎಂದೇ ಕರೆಯಲ್ಪಡುತ್ತಿತ್ತಂತೆ. ಆದರೆ ಈಗ ನಾವೇನು ಮಾಡುತ್ತಿದ್ದೇವೆ?

ಬೈಗಿನಲ್ಲಿ ಕೋಳಿ ಕೂಗುತ್ತಲೇ ಅವರ ದಿನದ ಯಾತ್ರೆ ಪ್ರಾರಂಭವಾಗುತ್ತಿತ್ತು. ಪ್ರಾಣಿ, ಪಕ್ಷಿ, ಮರ, ಗಿಡಗಳೇ ಅವರ ಸಂಗಾತಿಯಾಗಿದ್ದವು. ಕುರಿ, ಮೇಕೆ, ದನ, ಎತ್ತು, ಎಮ್ಮೆ, ಕೋಣ, ನಾಯಿ ಬೆಕ್ಕು, ಕೋಳಿ ಇವು ಸದಾ ಅವರೊಡನೆ ಉಂಡು ಮಲಗುತ್ತಿದ್ದ ಸಂಗಾತಿಗಳು. ಮೋಡ ನೋಡಿ ಮಳೆ ಬೀಳುವುದನ್ನು ನಿಖರವಾಗಿ ಹೇಳುತ್ತಿದ್ದರು. 15 ದಿನಗಳಿಗೊಂದು ಮಳೆ ಎಂದು ವರ್ಷದಲ್ಲಿ ಬರುವ 24 ಮಳೆಯ ಹೆಸರುಗಳನ್ನು, ಕಾಲವನ್ನು ನಿಖರವಾಗಿ ಹೇಳುತ್ತಿದ್ದರು. ಪ್ರಾಣಿಗಳು, ಮಳೆ ಬರುವುದಾದರೆ ಮಾತ್ರ ಆಸರೆಗೆ ಜಾಗವನ್ನು ಹುಡುಕುತ್ತಿದ್ದವು. "ಪ್ರಕೃತಿಯೆಂದರೆ ಅವರ ಪ್ರಾಣ". ಯಾವ ರೀತಿಯಲ್ಲೂ ಹಾನಿ ಮಾಡಲಿಲ್ಲ. ಬದಲಾಗಿ ನಮಗೆ ಕೊಡುಗೆಯಾಗಿ ಬಿಟ್ಟು ಹೋದರು. ಹಿಂದೆ ಪ್ರಕೃತಿಯನ್ನು ಸಮತೋಲನದಲ್ಲಿಟ್ಟುಕೊಳ್ಳುವಂತಹ ಕಾರ್ಯವನ್ನು ನಿಯಂತ್ರಿಸಿಕೊಳ್ಳಲಾಗುತ್ತಿತ್ತು. ಹೇಗೆಂದರೆ, ಒಂದು ಸಲ ಸಾಂಕ್ರಾಮಿಕ ರೋಗಗಳಾದ, ಕಾಲರಾ, ಪ್ಲೇಗ್, ಮಲೇರಿಯಾ, ಸಿಡುಬು, ಮುಂತಾದ ರೋಗಗಳು ಬಂದರೆ ಊರಿಗೆ ಊರೇ ಸುಮಾರು ಶೇ.75ರಷ್ಟು ಜನ ಸತ್ತು ಉಳಿದವರು ಸಮೃದ್ಧಿಯಿಂದಿರುತ್ತಿದ್ದರು. ಇಷ್ಟಲ್ಲದೆ ಹತ್ತಾರು ಮನೆಗಳಾದ ಮೇಲೆ ದೂರದಲ್ಲಿ ಇನ್ನೊಂದು ಹೊಸ ಗ್ರಾಮ ಮಾಡಿ, ಅಲ್ಲಿ ಮುಂದಿನ ಪೀಳಿಗೆಗಳು ವಾಸಿಸುತ್ತಿದ್ದವು. ಶಾಲೆ, ಆಸ್ಪತ್ರೆ, ಅಂಟು ರೋಗಿಗಳ ಶಿಬಿರ ಇವೆಲ್ಲವೂ ಊರ ಹೊರಗಿರುತ್ತಿದ್ದವು. ಅವುಗಳಿಗೆ ಒಳ್ಳೆ ಗಾಳಿ-ಬೆಳಕು ದೊರೆಯುತ್ತಿತ್ತು.

ಬೆಳೆಗಳ ಮೇಲೆ ಕ್ರಿಮಿ-ಕೀಟಗಳು ಬರುತ್ತಿದ್ದವು. ಇವುಗಳನ್ನು ನಿಯಂತ್ರಿಸುವುದಕ್ಕೆ ಪಕ್ಷಿಗಳು, ಹಾವು, ಕಪ್ಪೆಗಳು ಮುಂತಾದವು ಇವುಗಳನ್ನು ತಿಂದು ಬದುಕುವುದಲ್ಲದೆ, ಬೆಳೆಯನ್ನು ಸಂರಕ್ಷಿಸುತ್ತಿದ್ದವು. ಮಳೆಯ ಮೋಡಗಳು, ಉರುವಲಿನ ಹೊಗೆ, ಆವಿ ಮತ್ತು ಧೂಳಿನಿಂದ ನಿರ್ದಿಷ್ಟವಾದ ಮೋಡ ಕಟ್ಟುವಲ್ಲಿ ಸಾಕಷ್ಟು ಪಾತ್ರ ವಹಿಸುತ್ತಿದ್ದವು. ಒಂದೆಡೆ ಚೆನ್ನಾಗಿ ಮಳೆಯಾಗಿ ಇನ್ನೊಂದೆಡೆ ಮಳೆಯಿಲ್ಲವೆಂದರೆ ಕೆರೆ ಕೋಡಿಗಳು ಒಡೆದು ಒಂದರಿಂದ ಇನ್ನೊಂದು ಕೆರೆಗೂ ನೀರು ತುಂಬಿಕೊಂಡು ಹೋಗುತ್ತಿದ್ದವು. ಮತ್ತು ನದಿಗಳು ಜೀವಂತವಾಗಿದ್ದವು. ಮೋಡಗಳನ್ನು ಚದುರಿಸಿ ಮಳೆಯನ್ನು ಸಮನಾಗಿ ಹರಡುವಲ್ಲಿ ಮರ, ಬೆಟ್ಟಗುಡ್ಡ, ಪರ್ವತಗಳು ಪ್ರಮುಖವಾದ ಪಾತ್ರ ವಹಿಸುತ್ತಿದ್ದವು. ಕೆರೆಗಳ ಸಂರಕ್ಷಣೆಗೆ ಕೆರೆಯಲ್ಲಿ ಬೆಳೆಯುವಂತಹ ಜೊಂಡು ಹಸು, ಎಮ್ಮೆಗಳಿಗೆ ಆಹಾರವಾಗುತ್ತಿತ್ತು ಮತ್ತು ಕೆರೆ ಬೇಸಿಗೆಯಲ್ಲಿ ಬತ್ತಿದ್ದರೆ, ಅದರಿಂದ ಗೋಡು ಮಣ್ಣನ್ನು (ಹೂಳೆತ್ತುವುದು) ತೆಗೆದು ತೋಟ, ಹೊಲ, ಗದ್ದೆಗಳಿಗೆ ಹಾಕುತ್ತಿದ್ದರು. ಇದರಿಂದ ಭೂಮಿಯಿಂದ ಹರಿದು ಹೋದ ಸಾರ ಮತ್ತೆ ಅಲ್ಲಿಗೆ ಸೇರುತ್ತಿತ್ತು. ಇಷ್ಟಲ್ಲದೇ ಕೊಟ್ಟಿಗೆ ಗೊಬ್ಬರ ಸಮೃದ್ಧಿಯಾಗಿ ದೊರೆಯುವುದರ ಜೊತೆಗೆ ಸುಭಿಕ್ಷತೆ ಇರುತ್ತಿತ್ತು. ವಿಸ್ತಾರವಾದ ಗೋಮಾಳಗಳು, ಅರಣ್ಯಗಳು ಇದ್ದವು. ಈಗ ಕೆರೆಗಳು, ಗೋಮಾಳಗಳೆಲ್ಲವೂ ಗುಳುಂ ಆಗಿ ಹೋಗಿವೆ.

ಈಗ ಮಿಶ್ರ ತಳಿಗಳ ದೆಸೆಯಿಂದಾಗಿ ಶೀಘ್ರ ಮತ್ತು ಹೆಚ್ಚು ಹೆಚ್ಚು ಆಹಾರ ಉತ್ಪಾದನೆಗಾಗಿ ಎಲ್ಲಾ ಕಿರಿದಾದ ಕಿರೀಟವುಳ್ಳ ಗಿಡಮರಗಳನ್ನು ಬೆಳೆಸುತ್ತಿದ್ದೇವೆ. ಇಷ್ಟಲ್ಲದೆ, ಕ್ರಿಮಿ-ಕೀಟ ನಾಶಕಗಳನ್ನು ಹೆಚ್ಚಾಗಿ ಬಳಸುವುದು ಮತ್ತು ರಾಸಾಯನಿಕ ಗೊಬ್ಬರಗಳನ್ನು ಬಳಸುವುದರಿಂದ ನೀರು ಕಲುಷಿತಗೊಳ್ಳುತ್ತಿದೆ. ಇಷ್ಟಲ್ಲದೆ ಅರಣ್ಯ ಉತ್ಪಾದನೆಗೂ ಬೇಡಿಕೆ ಹೆಚ್ಚಾದ್ದರಿಂದ ಕೈಗಾರಿಕೆಗಳಿಗೆ ಪೂರೈಸಬೇಕಾದ ಮರಗಳನ್ನು ಶೀಘ್ರದಲ್ಲಿ ಬೆಳೆಯಲು, ಯಾಂತ್ರಿಕ ನೆಡು ತೋಪುಗಳನ್ನು ಬೆಳೆಸುತ್ತಾರೆ. ಇದರಿಂದ ಭೂಮಿ ಸಡಿಲವಾಗುವುದರ ಜೊತೆಗೆ, ಭೂ-ಚರ ಜೀವಿಗಳನ್ನು ಕೊಲ್ಲುತ್ತದೆ ಮತ್ತು ಭೂ ಸವೆಯುವಿಕೆಗೆ ಎಡೆ ಮಾಡಿಕೊಡುತ್ತದೆ. ಅರಣ್ಯಗಳ ಬೆಳೆಸುವಿಕೆಗೆ ಕೈಹಾಕದೆ ಪ್ರಕೃತಿಗೇ ಬಿಟ್ಟು ಕೆಲ ದಶಕಗಳು ಸುಮ್ಮನೆ ಸಂರಕ್ಷಿಸಿದರೆ ಸಾಕು, ಸಂಪದ್ಭರಿತವಾದ ಅರಣ್ಯಗಳನ್ನು ಕಾಣಬಹುದು ಮತ್ತು ವನ್ಯಜೀವಿಗಳ ಬದುಕಿಗೂ ಎಡೆ ಮಾಡಿಕೊಟ್ಟಂತಾಗುವುದು. ಭೂ ಪರಿವರ್ತನೆಯನ್ನು ನಿಲ್ಲಿಸಿ ವನ್ಯಜೀವಿಗಳ ಭೂ ವಿಸ್ತಾರವನ್ನು ಬಿಟ್ಟು ಕೊಟ್ಟಲ್ಲಿ ಇಡೀ ವಿಶ್ವವೇ ಆರೋಗ್ಯವಂತ ಗ್ರಹವಾಗುತ್ತದೆ. ಪ್ರಕೃತಿಯಲ್ಲಿ ಒಂದನ್ನೊಂದು ಅವಲಂಬಿಸಿ ಜೀವಿಸಿದರೆ ಮಾತ್ರ ಅದರ ಸಮತೋಲನ ಮತ್ತು ಎಲ್ಲದಕ್ಕೂ ನಮ್ಮಂತೆಯೇ ಜೀವಿಸುವ ಸಂಪೂರ್ಣ ಅಧಿಕಾರವು ಇದೆ ಇದನ್ನು ನಾವು ಚೆನ್ನಾಗಿ ಅರಿತವರಾಗಿದ್ದು, ನಮ್ಮ ಸ್ವಾರ್ಥಕ್ಕಾಗಿ ಎಲ್ಲವನ್ನು ಸರ್ವನಾಶ ಮಾಡಿದರೆ ನಮ್ಮ ಬುಡಕ್ಕೆ ನಾವೇ ಕೊಡಲಿ ಹಾಕಿದಂತಲ್ಲವೆ. ಜಾಗತಿಕ ತಾಪಮಾನಕ್ಕೆ ವನ್ಯ ಸಂಪತ್ತು ಇಲ್ಲದಿರುವುದು ಒಂದು ಕಾರಣವಾದರೆ, ಸಣ್ಣ, ಮಧ್ಯಮ ಮತ್ತು ಭಾರೀ ಕೈಗಾರಿಕೆಗಳು, ನೀರಾವರಿ ಯೋಜನೆಗಳು, ಗಣಿಗಳು, ದಟ್ಟವಾದ ವಾಹನ ಸಂಚಾರ ಇವುಗಳ ಗಣನೀಯ ಬೆಳವಣಿಗೆಯೂ ಕಾರಣ.



ಹಿಂದೆ ವಿಶಾಲವಾದ ಪಾದಚಾರಿ ರಸ್ತೆಗಳಿದ್ದು, ಇವುಗಳ ಇಕ್ಕೆಡೆಗಳಲ್ಲಿ ಮಾವು (Mangifera indica), ಬೇವು (Azadirchata indica), ಹಿಪ್ಪೆ (Madhuca latifolia), ಹೊಂಗೆ (Pongamia pinnata), ಹುಣಸೇ (Tamarindus indica), ಬಾಗೆ (Albizzia lebbekka), ಆಲ (Ficus bengalensis), ಅರಳಿ (Ficus religiousa) ಮುಂತಾದ ಫಲ ಕೊಡುವ ನಾಟಿ ಮರಗಳನ್ನು ಬೆಳೆಸುತ್ತಿದ್ದರು. ಇವುಗಳ ಕಿರೀಟ ಅತ್ಯಂತ ವಿಸ್ತಾರವಾಗಿದ್ದು, ಬೇರುಗಳು ಅತ್ಯಂತ ಆಳಕ್ಕೆ ಹೋಗಿ ಅಂತರ್ಜಲವನ್ನು ರಕ್ಷಿಸುವುದಲ್ಲದೆ ಬಾಷ್ಪವಿಸರ್ಜನೆ ಮತ್ತು ಆಮ್ಲಜನಕ ಬಿಡುಗಡೆ, ತಂಗಾಳಿ ಬೀಸುವುದು, ಮಳೆಯನ್ನು ಸಮನಾಗಿ ಹರಡುವಲ್ಲಿ ಮರಗಳು ಮುಖ್ಯ ಪಾತ್ರ ವಹಿಸುತ್ತಿದ್ದವು. ಇದರಿಂದ ಪಶು, ಪಕ್ಷಿ, ಪ್ರಾಣಿಗಳು ಬದುಕುವುದರ ಜೊತೆಗೆ ನಮಗೂ ಫಲ ಕೊಟ್ಟು ಆದಾಯ ತರುತ್ತಿದ್ದವು. ಇಂತಹ ಮರಗಳಿಂದ ಸಾಕಷ್ಟು ಆದಾಯ, ಉರುವಲು ದೊರೆಯುತ್ತಿತ್ತು. ಮತ್ತು ಮರದ ನೆರಳಲ್ಲಿ ಎಲ್ಲವೂ ವಿಶ್ರಾಂತಿ ಪಡೆಯುತ್ತಿದ್ದವು. ಪಾದಚಾರಿಗಳು ಆಯಾಸವಿಲ್ಲದೆ ತಂಗಾಳಿಯಲ್ಲಿ ಬಹು ದೂರ ಸಾಗುತ್ತಿದ್ದರು ಮತ್ತು ಮಕ್ಕಳು ಇಲ್ಲೇ ಆಟವಾಡುತ್ತಿದ್ದರು. ಈಗ ಪಾದಚಾರಿಗಳ ರಸ್ತೆಯೂ ಇಲ್ಲ, ಮರಗಳಂತೂ ಇಲ್ಲವೇ ಇಲ್ಲ. ಇದ್ದರೂ ಕಿರಿದಾದ ಸ್ಥಳಕ್ಕೆ ತಕ್ಕಂತೆ ಸೀಗಡಿಯಂತಹ ಮರಗಳನ್ನು ಬೆಳೆಸುತ್ತಾರೆ. ಮೇಲೆ ಹೇಳಿದ ಮರಗಳು ದಿನವೊಂದಕ್ಕೆ 400 ಲೀಟರಿನಷ್ಟು ನೀರನ್ನು ಬಾಷ್ಪವಿಸರ್ಜನೆ ಮೂಲಕ ಆವಿಯಾಗಿ ಬಿಡುಗಡೆ ಮಾಡಿ ಮೋಡ ಕಟ್ಟುವಲ್ಲಿ ಹೆಚ್ಚಿನ ಪಾತ್ರ ವಹಿಸುತ್ತಿದ್ದವು. ಇಂತಹ ರೇಚಕ ಯಂತ್ರವನ್ನು (ಪಂಪ್‌ಸೆಟ್) ಮಾನವ ಎಂದೂ ಸೃಷ್ಟಿಸಲಾರ".

-ಇ.ರಾಬಿನ್

20, ಸರ್ವಜ್ಞ ರೋಡ್, 'ಜೆ' ಬ್ಲಾಕ್, ಕುವೆಂಪುನಗರ, ಮೈಸೂರು-570 023, ಮೊ: 9986140616



"ನಮ್ಮ ಆಧುನಿಕತೆಯ ಮೊದಲನೇ ಪೆಟ್ಟು, ಸ್ಫೋಟಿಸುತ್ತಿರುವ ಜನಸಂಖ್ಯೆ ಮತ್ತು ಭರಿಸಲಾರದ ದುರಾಸೆ. ಇದರಿಂದಾಗಿ ಏನೆಲ್ಲಾ ಮಾಡಬಾರದೋ ಅದರ ಒತ್ತಡ ಹೆಚ್ಚಾಗಿ, ಇದಕ್ಕೆ ಸಿಲುಕಿ ನಮ್ಮ ಗುಂಡಿಯನ್ನು ನಾವೇ ತೋಡಿಕೊಳ್ಳುತ್ತಿದ್ದೇವೆ. ಈ ಕಾರಣದಿಂದಾಗಿ ಅವಶ್ಯಕತೆಗಳು ಹೆಚ್ಚಾದ್ದರಿಂದ, ಜಲ ವಿದ್ಯುತ್ ಯೋಜನೆಗಳು, ವಿದ್ಯುತ್ ಸ್ಥಾವರಗಳು, ಗಣಿಗಳು, ಅರಣ್ಯ ಉತ್ಪನ್ನಗಳಾದಂತಹ ಕೈಗಾರಿಕೆಗಳು, ನಗರೀಕರಣ, ವ್ಯವಸಾಯಕ್ಕೆ ಬೇಕಾದ ಹೆಚ್ಚು ಭೂಮಿ ಇವುಗಳಿಂದಾಗಿ ಅರಣ್ಯ, ಬೆಟ್ಟ, ಗುಡ್ಡಗಳು, ಇವುಗಳ ಸತತ ನಾಶ ಪ್ರಕೃತಿಯ ವಿರುಪೇರಿಗೆ ಎಡೆ ಮಾಡಿಕೊಟ್ಟು ಅತಿವೃಷ್ಟಿ, ಅನಾವೃಷ್ಟಿ, ಪ್ರವಾಹಗಳು, ಭೂಕಂಪ, ಚಂಡಮಾರುತ, ಸುನಾಮಿ, ಅಗ್ನಿಪರ್ವತಗಳ ಉದ್ಭವಗಳಿಗೆ ಸಿಲುಕಿ ಸಾಯುವಂತಾಗಿದೆ. ಒಟ್ಟಿನಲ್ಲಿ **Bertrand Russell** ಅವರ **Impact of science on Society** ಎಂಬ ಪ್ರಬಂಧದಲ್ಲಿ ಹೇಳಿರುವ ಹಾಗೆ ನಮ್ಮ ವಿಶ್ವವೆಂಬ ಕಾಂಕ್ರೀಟ್ ಪ್ರಪಂಚ ಅತೀ ಶೀಘ್ರದಲ್ಲಿ ನಮ್ಮ ಸಮಾಧಿಗಳಾಗಲಿವೆ ಎಂಬುದನ್ನು ಸಂಪೂರ್ಣ ಮರೆತಿದ್ದೇವೆ.

ಮೈಸೂರಿನ ನನ್ನ ಮನೆಗೆ ಬಂದರು ಭಾರತೀಯ ಚಿತ್ರರಂಗದ

ಮೇರು ನಟ ರಾಜ್ ಕಪೂರ್

–ಹೆಚ್.ಕೆ.ಶಿವಾನಂದ






ಮೈಸೂರಿನ ಎಟಿಐನಲ್ಲಿ 1980ರಲ್ಲಿ ಚಿತ್ರೀಕರಣ ನಡೆದ 'ಪ್ರೇಮ್ ರೋಗ್' ಚಿತ್ರದ ದೃಶ್ಯಗಳು.



● ಹೆಚ್.ಕೆ. ಶಿವಾನಂದ, ಐಎಎಸ್ (ನಿವೃತ್ತ)

1980ರಲ್ಲಿ, ನಾನು ಮೈಸೂರು ನಗರ ಮುನ್ಸಿಪಲ್ ಕಾರ್ಪೊರೇಷನ್‌ನ (ಚುನಾಯಿತ ಕೌನ್ಸಿಲ್ ರದ್ದುಗೊಳಿಸಲಾಗಿತ್ತು) ಆಡಳಿತಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಆಡಳಿತಾತ್ಮಕ ತರಬೇತಿ ಕೇಂದ್ರದ ಹೆಚ್ಚುವರಿ ಪ್ರಭಾರ ನಿರ್ದೇಶಕರ ಜವಾಬ್ದಾರಿಯನ್ನೂ ನಿರ್ವಹಿಸುತ್ತಿದ್ದೆ. ಈ ವೇಳೆ ಮೈಸೂರಿನ ಚೆಲುವಾಂಬ ಪಾರ್ಕ್ ಎದುರುಗಡೆಯ ಕಾರ್ಪೊರೇಷನ್ ಗೆಸ್ಟ್ ಹೌಸ್‌ನಲ್ಲಿ ನಾನು, ನನ್ನ ಕುಟುಂಬದೊಂದಿಗೆ ವಾಸವಿದ್ದೆ.

ಹೆಚ್.ಕೆ.ಶಿವಾನಂದ

ಒಂದು ಮುಂಜಾನೆ, ನಾನು ಉಪಾಹಾರ ಸೇವಿಸುತ್ತಿದ್ದಾಗ, ನಮ್ಮ ಸೆಕ್ಯೂರಿಟಿ ಬಂದು ಕನ್ನಡದಲ್ಲೇ "ಯಾರೋ ರಾಜಕಪೂರ್ ಅಂತೆ. ನಿಮ್ಮನ್ನು ನೋಡಬೇಕಂತೆ. ಅವರನ್ನು ವರಾಂಡಾದಲ್ಲೇ ಕೂರಿಸಿದ್ದೇನೆ" ಎಂದು ಹೇಳಿದನು.

ನಿಧಾನವಾಗಿಯೇ ಉಪಾಹಾರ ಸೇವಿಸಿ, 10 ನಿಮಿಷಗಳ ನಂತರ ಹೊರ ಬಂದು "ಯಾವ ರಾಜಕಪೂರಪ್ಪಾ? ಏನು ಸಿನಿಮಾ ನಟ ಬಂದು ಬಿಟ್ಟಿದ್ದಾರಾ?" ಎಂದು ಅಂದುಕೊಂಡೆ ಹಾಲ್‌ನಿಂದ ಹೊರ ಬಂದೆ.

ನಾನು ಹೊರಬಂದಾಗ, ವರಾಂಡದಲ್ಲಿದ್ದವರ ಕಂಡು ನನಗೆ ಶಾಕ್ ಆಯಿತು. ಭಾರತೀಯ ಚಿತ್ರ ರಂಗದ ಜನಪ್ರಿಯ ನಾಯಕ ನಟ, ಗ್ರೇಟ್ ಶೋಮ್ಯಾನ್ ರಾಜ್‌ಕಪೂರ್, ಕ್ವಾಟ್ರಸ್‌ನ ವರಾಂಡಾದಲ್ಲಿ ಕುಳಿತಿದ್ದರು. ಅವರು ತಕ್ಷಣ ಎದ್ದು ನನ್ನನ್ನು ಹಾರ್ದೈಸಿದರು.

ನಾನು ತಡವಾಗಿ ಬಂದದ್ದಕ್ಕೆ ಕ್ಷಮೆಯಾಚಿಸಿ, ನನ್ನ ಕಾವಲುಗಾರ ಚಲನಚಿತ್ರ ನಟ ರಾಜ್‌ಕಪೂರ್ ಎಂದು ಉಲ್ಲೇಖಿಸಲಿಲ್ಲ. ಬಹುಶಃ ಕಾವಲುಗಾರನಿಗೆ ಇದು ತಿಳಿದಿರಲಿಕ್ಕಿಲ್ಲ ಎಂದು ಹೇಳಿ, ಅವರನ್ನು ಆಹ್ವಾನಿಸಿ, ನಮ್ಮ ಡ್ರಾಯಿಂಗ್ ರೂಮ್‌ನಲ್ಲಿ ಆರಾಮವಾಗಿ ಕೂರುವಂತೆ ಹೇಳಿದೆ.



ಮೈಸೂರಿನ ಎಟಿಐ ಆವರಣದಲ್ಲಿ 'ಪ್ರೇಮ್ ರೋಗ್' ನಾಯಕ ನಟ ರಿಷಿ ಕಪೂರ್.

ಆ ಸಮಯದಲ್ಲಿ ನನ್ನ ಕುಟುಂಬ ಸದಸ್ಯರು ಬಂದರು. ಅವರನ್ನು ಭೇಟಿಯಾಗಿ ಪರಿಚಯ ಮಾಡಿಕೊಂಡರು.

ಉಪಾಹಾರವನ್ನು ತೆಗೆದುಕೊಳ್ಳಲು ನಿರಾಕರಿಸಿ, ಒಂದು ಕಪ್ ಚಹಾವನ್ನು ಮಾತ್ರ ಸ್ವೀಕರಿಸಿದರು. ನಂತರ ನನ್ನ ಮನೆಗೆ ಬಂದಿದ್ದರ ಬಗ್ಗೆ ವಿವರಿಸಿದರು. ಅವರ ಆರ್‌ಕೆ ಬ್ಯಾನರ್ ಅಡಿಯಲ್ಲಿ 'ಪ್ರೇಮ್ ರೋಗ್' ಚಿತ್ರೀಕರಣಕ್ಕಾಗಿ ಮೈಸೂರಿಗೆ ಬಂದಿದ್ದರು. ಹಿಂದಿನ ದಿನ, ಲಲಿತ ಮಹಲ್ ರಸ್ತೆಯಲ್ಲಿ ಹೋಗುತ್ತಿದ್ದಾಗ ಗ್ರಾವೆಲ್ ಪಾತ್‌ವೇಯೊಂದಿಗಿನ ಎಟಿಐ ಮುಂಭಾಗದ ಉದ್ಯಾನವನ ನೋಡಿ ಪ್ರಭಾವಿತರಾಗಿದ್ದರು. ಅವರು ಅಲ್ಲಿ ಒಂದು ದೃಶ್ಯವನ್ನು ಚಿತ್ರೀಕರಿಸಲು ಬಯಸಿದ್ದರು. ಅಲ್ಲಿಗೆ ನಾಯಕಿ ಪದ್ಮಿನಿ ಕೊಲ್ಹಾಪುರೆ ಬರುತ್ತಾರೆ. ಅಲ್ಲಿ ನಾಯಕ ರಿಷಿ ಕಪೂರ್ ಅವರನ್ನು ಭೇಟಿಯಾಗುತ್ತಾರೆ. ಆ ಶೂಟಿಂಗ್‌ಗೆ ನಾನು ಎಟಿಐ ನಿರ್ದೇಶಕನಾಗಿದ್ದರಿಂದ ನನ್ನ ಅನುಮತಿ ಪಡೆಯಲು ಅವರು ಬಂದಿದ್ದರು.

ನನಗೆ ಅಧಿಕಾರ ಇದ್ದುದ್ದರಿಂದ ಏನನ್ನೂ ಪರಿಶೀಲಿಸದೆ ನಾನು ಅನುಮತಿ ನೀಡಲು ಸಂತೋಷದಿಂದ ಒಪ್ಪಿಕೊಂಡೆ. ಆ ದಿನಗಳಲ್ಲಿ ಫೀಲ್ಡ್ ಆಫೀಸರ್‌ಗಳಂತೆ ನಮಗೆ ಹೆಚ್ಚಿನ ಅಧಿಕಾರವಿತ್ತು ಮತ್ತು ಮೇಲಧಿಕಾರಿಗಳೂ ವಿಶಾಲ ಮನಸ್ಸಿನವರಾಗಿದ್ದರು ಹಾಗೂ ಬೋನಫೈಡ್ ಇರುವವರೆಗೂ ಹಸ್ತಕ್ಷೇಪ ಮಾಡಲಿಲ್ಲ. ಒಳ್ಳೆಯ ಉದ್ದೇಶದಿಂದ ನಿರ್ಧಾರಗಳನ್ನು ತೆಗೆದುಕೊಳ್ಳಲಾಗಿತ್ತು. ಅವರು ಕೀರ್ತಿಯ ಉತ್ತುಂಗದಲ್ಲಿದ್ದರೂ, ಭಾರೀ ಜನಪ್ರಿಯತೆ ಪಡೆದವರಾದರೂ, ಅವರ ಸಂವಹನದಲ್ಲಿ ನನಗೆ ಅವರು ಸಂಭಾವಿತ ಮತ್ತು ಸೌಜನ್ಯ ವ್ಯಕ್ತಿಯಾಗಿ ಕಂಡು ಬಂದರು.

ಮರುದಿನ ಮುಂಜಾನೆ ರಾಜ್ ಕಪೂರ್ ಅವರದ್ದು ಶೂಟಿಂಗ್. ಅಕ್ಷರಶಃ, ಇದು ATIನಲ್ಲಿ ಅನಧಿಕೃತ ರಜಾ ದಿನವಾಗಿತ್ತು. ಇಡೀ ಸಿಬ್ಬಂದಿ (ಡೈರೆಕ್ಟರ್ ಸೇರಿದಂತೆ!) ಮತ್ತು ಎಲ್ಲಾ ತರಬೇತುದಾರರು ಶೂಟಿಂಗ್ ನೋಡಲು ಅಲ್ಲಿದ್ದರು. ನಮ್ಮ ಸಂಪೂರ್ಣ ಕುಟುಂಬದ ಜೊತೆ ಏಕೆ ಫೋಟೋ ತೆಗೆಸಿಕೊಂಡಿಲ್ಲ ಎಂದು ನನ್ನ ಮೊಮ್ಮಕ್ಕಳು ಈಗ ಕೇಳುತ್ತಾರೆ. ತೆಗೆದುಕೊಂಡಿದ್ದರೆ ಅದು ನಮ್ಮ ಆಲ್ಬಂನಲ್ಲಿ ಸೇರುತ್ತಿತ್ತು.

ಅಂದು ನನಗೆ ಹೇಳುವ ಧೈರ್ಯವಿರಲಿಲ್ಲ. ನನ್ನ ಬಳಿ ಸ್ವಂತ ಕ್ಯಾಮರಾ ಇರಲಿಲ್ಲ ಮತ್ತು ಮೊಬೈಲ್ ಫೋನ್‌ಗಳು ಇದ್ದರೂ ನಮ್ಮ ಬಳಿ ಇನ್ನೂ ಬಂದಿರಲಿಲ್ಲ!



'ಪ್ರೇಮ್ ರೋಗ್' ಚಿತ್ರೀಕರಣ ಸೆಟ್‌ನಲ್ಲಿ ರಾಜ್ ಕಪೂರ್ ಅವರೊಂದಿಗೆ ಖ್ಯಾತ ನಟಿ ಪದ್ಮಿನಿ ಕೊಲ್ಹಾಪುರೆ.




ಪ್ರವಾಸಿಗರ ಅಚ್ಚು ಮೆಚ್ಚಿನ ತಾಣ ದುಬಾರೆ ಆನೆ ಶಿಬಿರ



ಕೊಡಗಿನ ಕುಶಾಲನಗರ ಬಳಿ ಇರುವ ದುಬಾರೆ ಆನೆ ಶಿಬಿರ ಪ್ರವಾಸಿಗರ ಅಚ್ಚುಮೆಚ್ಚಿನ ಪ್ರವಾಸಿ ತಾಣವಾಗಿದೆ. ಕಾವೇರಿ ನದಿ ದಡದಲ್ಲಿ ಈ ಶಿಬಿರವಿದೆ. ಕಾಡಿಗೆ ಹೊಂದಿಕೊಂಡಂತಿರುವ ಈ ಶಿಬಿರದಲ್ಲಿ ಮದವೇರಿದ ಆನೆಗಳನ್ನು ಪಳಗಿಸಲಾಗುತ್ತದೆ. ಈ ಶಿಬಿರದಲ್ಲಿ ಆನೆಗಳಿಗೆ ತರಬೇತಿ, ಪ್ರವಾಸಿಗರಿಗೆ ಆನೆ ಸಫಾರಿ ಮೊದಲಾದ ಚಟುವಟಿಕೆಗಳು ನಡೆಯುತ್ತವೆ. ಪ್ರತಿದಿನ ಬೆಳಗ್ಗೆ 8ರಿಂದ ಸಂಜೆ 5.30ರವರೆಗೆ ಪ್ರವಾಸಿಗರಿಗಾಗಿ ಈ ಶಿಬಿರ ತೆರೆದಿರುತ್ತದೆ. ಸಂಜೆ ನಂತರ ಶಿಬಿರದಲ್ಲಿರುವ ಸಾಕಾನೆಗಳನ್ನು ಮಾವುತರು ಕಾಡಿನಲ್ಲಿ ಬಿಟ್ಟು ಬರುತ್ತಾರೆ. ರಾತ್ರಿ ಇಡೀ ಕಾಡಿನಲ್ಲಿಯೇ ಸಂಚರಿಸುವ ಆನೆಗಳನ್ನು ಮುಂಜಾನೆ ಮತ್ತೆ ಶಿಬಿರಕ್ಕೆ ಕರೆತರಲಾಗುತ್ತದೆ. ದುಬಾರೆ ಶಿಬಿರಕ್ಕೆ ತೆರಳಲು ಕಾವೇರಿ ನದಿ ಯನ್ನು ದಾಟಲು ಬೋಟ್ ವ್ಯವಸ್ಥೆ ಇದೆ. ಈ ಶಿಬಿರದಲ್ಲಿ ಪ್ರವಾಸಿಗರು ಆನೆಗೆ ಸ್ನಾನ ಮಾಡಿಸಲು ಹಾಗೂ ಆಹಾರ ನೀಡಲು ಅವಕಾಶ ಕೊಡಲಾಗುತ್ತದೆ. ಈ ಶಿಬಿರವು ಮೈಸೂರಿಂದ 103 ಕಿ.ಮೀ., ಕುಶಾಲನಗರದಿಂದ 15 ಕಿ.ಮೀ ಅಂತರದಲ್ಲಿದೆ.







ಬೇಸಿಗೆ ಬಲು ಹುಷಾರ್...



ಲೋಕೇಶ್ ಡಿ.
ಶಿಕ್ಷಕರು

ಇತ್ತೀಚಿನ ಕೆಲವು ವರ್ಷಗಳಿಂದ ಬೇಸಿಗೆಯಲ್ಲಿ ವರ್ಷದಿಂದ ವರ್ಷಕ್ಕೆ ಬಿಸಿಲಿನ ತಾಪ ಏರಿಕೆಯಾಗುತ್ತಿರುವುದನ್ನು ಗಮನಿಸಿದ್ದೇವೆ. ಇದೀಗ ಬೇಸಿಗೆಯು ಆರಂಭವಾಗಿದ್ದು, ಇದು ಪ್ರಾರಂಭದ ಹಂತದಲ್ಲಿರುವಾಗಲೇ ಬಿಸಿಲಿನ ಧಗೆ ಅಸಹನೀಯ ಮಟ್ಟವನ್ನು ತಲುಪುವ ಮುನ್ಸೂಚನೆಯನ್ನು ನೀಡುತ್ತಿದೆ. ಇದಕ್ಕೆ ಸಂಬಂಧಿಸಿದಂತೆ ಹವಾಮಾನ ಇಲಾಖೆಯೂ ಸಹ ತಾಪ ಏರಿಕೆಯ ಬಗ್ಗೆ ಮುನ್ನೆಚ್ಚರಿಕೆಯನ್ನು ನೀಡುತ್ತಿದೆ.

ಈ ಕ್ಲಿಷ್ಟಕರ ಸನ್ನಿವೇಶವನ್ನು ಎದುರಿಸುವುದಾದರೂ ಹೇಗೆ ಎಂಬ ಪ್ರಶ್ನೆ ಎಲ್ಲರ ಮನಸ್ಸಿನಲ್ಲಿಯೂ ಮೂಡುವುದು ಸಹಜ. ಈ ಮಾನಸಿಕ ತುಡಿತವನ್ನು ಹೋಗಲಾಡಿಸಲು ಕೆಲವು ಸ್ವಯಂ ರಕ್ಷಣೆಯ ಅಂಶಗಳು ಹಾಗೂ ಮಕ್ಕಳು ಈ ಬೇಸಿಗೆ ರಜೆಯನ್ನು ಸದುಪಯೋಗ ಮಾಡಿಕೊಳ್ಳಬಹುದಾದ ಮಾರ್ಗಗಳು ಈ ಕೆಳಕಂಡಂತೆ ಇವೆ.

ಮಕ್ಕಳಿಗೆ ಕೆಲವು ಸಲಹೆಗಳು

ಸೂರ್ಯನ ಶಾಖದಿಂದ ರಕ್ಷಣೆ ಪಡೆಯುವುದು ಹೇಗೆ?

- ಬಿಸಿಲಿನ ನೇರ ಬೆಳಕಿಗೆ ಮೈಯೊಡ್ಡುವುದು ಬೇಡ.
- ಮಧ್ಯಾಹ್ನದ ಸಮಯ ಆದಷ್ಟು ನೆರಳಿನಲ್ಲಿಯೇ ಇರಲು ಪ್ರಯತ್ನಿಸಿ. ಒಂದು ವೇಳೆ ಅನಿವಾರ್ಯವಾಗಿ ಹೊರಗೆ ಹೋಗಲೇಬೇಕಾದ ಸಂದರ್ಭ ಬಂದರೆ ಛತ್ರಿ ಅಥವಾ ಟೋಪಿಯನ್ನು ಧರಿಸಿ ಹೋಗುವುದು ಒಳ್ಳೆಯದು.



- ಬಿಸಿಲಿನ ಝಳ ಹೆಚ್ಚಿರುವುದರಿಂದ ಹೊರಾಂಗಣ ಆಟಗಳನ್ನು ಸಾಧ್ಯವಾದಷ್ಟು ಕಡಿಮೆ ಮಾಡಿ; ಒಳಾಂಗಣ ಆಟಗಳನ್ನು ಆಡಿ.
- ಈ ಕಾಲದಲ್ಲಿ ಹೆಚ್ಚು ಬೆವರುವುದರಿಂದ ಆಗಾಗ್ಗೆ ಮುಖ, ಕೈಕಾಲುಗಳನ್ನು ತೊಳೆಯುತ್ತಿರಿ.
- ಪ್ರತಿನಿತ್ಯ ಸ್ನಾನ ಮಾಡಿ.
- ಕಡುಬಣ್ಣದ ಬಟ್ಟೆಗಳಿಗಿಂತ ತಿಳಿಬಣ್ಣದ ಬಟ್ಟೆಗಳನ್ನು ಧರಿಸಿ.
- ಅರ್ಧ ತೋಳಿನ ಶರ್ಟ್‌ಗಿಂತ ತುಂಬು ತೋಳಿನ ಶರ್ಟ್ ಧರಿಸುವುದು ಒಳ್ಳೆಯದು.

ಆಹಾರ ಪದ್ಧತಿ ಹೇಗಿರಬೇಕು?

- ಬೇಸಿಗೆಯಲ್ಲಿ ತುಂಬಾ ಬೆವರುವುದರಿಂದ ದೇಹದಲ್ಲಿ ನೀರಿನ ಅಂಶ ಕಡಿಮೆಯಾಗುವ ಕಾರಣ ಹೆಚ್ಚು ಹೆಚ್ಚು ನೀರು, ಮಜ್ಜಿಗೆ, ಎಳನೀರುಗಳನ್ನು ಸೇವಿಸಿ.
- ಮನೆಯಲ್ಲೇ ತಯಾರಿಸಿದ ಪಾನೀಯಗಳನ್ನು ಸೇವಿಸಿ.



- ಸಂಸ್ಕರಿಸಿದ ಪಾನೀಯಗಳನ್ನು ಕುಡಿಯಬಾರದು.
- ತಾಜಾ ಹಣ್ಣುಗಳನ್ನು ತಿನ್ನಿ.
- ಲಘು ಆಹಾರ ಸೇವಿಸುವುದು ಒಳಿತು.
- ಬೀದಿ ಬದಿಯಲ್ಲಿ ತಯಾರು ಮಾಡುವ ಆಹಾರವನ್ನು ತಿನ್ನಬೇಡಿ.

ಬೇಸಿಗೆ ರಜೆಯ ಸದುಪಯೋಗ ಮಾಡಿಕೊಳ್ಳುವುದು ಹೇಗೆ?

- ಬೇಸಿಗೆ ರಜೆಯನ್ನು ಕೇವಲ ಆಟಗಳಲ್ಲೇ ಕಳೆಯುವುದರ ಬದಲು ಕಲಿವಿನ ಕಡೆಗೂ ಗಮನ ಹರಿಸಿ.




- ಕಲಿಕೆಗೆ ಪೂರಕವಾದ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಿ.
- ಅನುಕೂಲವಿದ್ದರೆ ಬೇಸಿಗೆ ಶಿಬಿರಗಳಿಗೆ ಸೇರಿಕೊಳ್ಳಿ.
- ವ್ಯಕ್ತಿತ್ವ ವಿಕಸನದಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸಿ.
- ಆನ್‌ಲೈನ್‌ನಲ್ಲಿ ಹಲವಾರು ಉಪಯುಕ್ತ ವೆಬಿನಾರ್‌ಗಳು, ಕೋರ್ಸ್‌ಗಳು ಆಯೋಜಿಸಲ್ಪಡುತ್ತವೆ. ಇವುಗಳ ಉಪಯೋಗ ಪಡೆದುಕೊಳ್ಳಿ.
- ಆಟ, ಕಲಿಕೆ, ಮನರಂಜನೆ, ಮೌಲ್ಯವರ್ಧನೆ ಎಲ್ಲವನ್ನೂ ಸರಿದೂಗಿಸಿಕೊಂಡು ಬೇಸಿಗೆ ರಜೆಯನ್ನು ಆನಂದದಿಂದ ಕಳೆಯಿರಿ.



ಪೋಷಕರಿಗೆ ಕೆಲವು ಸಲಹೆಗಳು

- ನಿಮ್ಮ ಮಗುವನ್ನು ಸಾಧ್ಯವಾದಷ್ಟು ಮೊಬೈಲ್‌ನಿಂದ ದೂರವಿರಿಸಿ.
- ಶಿಕ್ಷಣಕ್ಕೆ ಉಪಯುಕ್ತವಾದ ಕೆಲವು ವೆಬಿನಾರ್‌ಗಳು, ಕೋರ್ಸ್‌ಗಳನ್ನು ವೀಕ್ಷಿಸುತ್ತಿದ್ದರೆ ಅವರನ್ನು ತಡೆಯಬೇಡಿ. ಆದರೆ ತಾವೂ ಸಹ ಆಗಾಗ್ಗೆ ಪರಿಶೀಲಿಸುತ್ತಿರಿ.
- ಮಕ್ಕಳಿಗೆ ಸಾಧ್ಯವಾದಷ್ಟು ಒಳಾಂಗಣ ಕ್ರೀಡೆಗಳನ್ನು ಆಡುವಂತೆ ಪ್ರೋತ್ಸಾಹಿಸಿ.
- ಬೇಸಿಗೆಗೆ ಸೂಕ್ತವಾದ ಆಹಾರ ಪದ್ಧತಿಯನ್ನು ರೂಢಿಸಿಕೊಳ್ಳಿ.
- ನಿಮ್ಮ ಮಗು ಹೆಚ್ಚು ಸಮಯ ನಿಮ್ಮ ಜೊತೆಗೇ ಇರುವುದರಿಂದ ಅವನನ್ನು ಸರಿಯಾಗಿ ಮಾಡಿಕೊಳ್ಳುವುದರ ಜೊತೆಗೆ ಅವನ ಸುಪ್ತ ಪ್ರತಿಭೆಗಳನ್ನು ಗುರ್ತಿಸಿ.
- ಕೌಟುಂಬಿಕ ಮೌಲ್ಯ ತಿಳಿಸುವ ಸಲುವಾಗಿ ಸಾಧ್ಯವಿದ್ದರೆ ಮಗುವಿನ ತಾತ-ಅಜ್ಜಿಯರ ಜೊತೆ ಬೆರೆಯಲು ಅವಕಾಶ ಕಲ್ಪಿಸಿಕೊಡಿ.
- ಮಗುವು ಶೈಕ್ಷಣಿಕ ಕಲಿಕೆಯಿಂದ ದೂರ ಉಳಿಯದಂತೆ ಗಮನ ವಹಿಸಿ.
- ಅನುಕೂಲವಿದ್ದರೆ ಬೇಸಿಗೆ ಶಿಬಿರಗಳಿಗೆ ದಾಖಲು ಮಾಡಿ.













ಹಳೆಯ ಮೈಸೂರು ಭಾಗದಲ್ಲಿ
ಮನೆ ಮನೆ ಮಾತಾಗಿರುವ
'ಮೈಸೂರುಮಿತ್ರ' ನಿಗೆ
ಜನ್ಮ ದಿನದ ಶುಭಾಶಯಗಳಲ್ಲಿ
ಇನ್ನೂ ಯಶಸ್ಸಿನ ಉತ್ತುಂಗಕ್ಕೇರಲಿ
ಎಂದು ಹಾರೈಸುತ್ತೇವೆ
ಎಲ್. ಆರ್. ಮಹದೇವಸ್ವಾಮಿ
ಅಧ್ಯಕ್ಷರು
ಕರ್ನಾಟಕ ಮೃಗಾಲಯ ಪ್ರಾಧಿಕಾರ


43 ನೇ ವಾರ್ಷಿಕೋತ್ಸವದ
ಈ ಸುಸಂದರ್ಭದಲ್ಲಿ
ಜನಪ್ರಿಯ ಬೆಳಗಿನ
ದಿನಪತ್ರಿಕೆ
ಮೈಸೂರು ಮಿತ್ರ
ನಿಗೆ
ಅಭಿನಂದನೆಗಳು
ಶುಭಕೋರುವವರು:
ಎಲ್.ನಾಗೇಂದ್ರ
ಶಾಸಕರು,
ಚಾಮರಾಜ ಕ್ಷೇತ್ರ


43
ನೇ
ವಸಂತದ
ಹೊಸ್ತಿಲಿನಲ್ಲಿರುವ
ಮೈಸೂರು ಮಿತ್ರ
ನಿಗೆ ಹಾರ್ದಿಕ
ಶುಭಾಶಯಗಳು
ಕೆ.ಮರೀಗೌಡ
ಮಾಜಿ ಅಧ್ಯಕ್ಷರು,
ಮೈಸೂರು ಜಿಲ್ಲಾ ಪಂಚಾಯ್ತಿ


43
ನೇ
ವಸಂತದ
ಹೊಸ್ತಿಲಿನಲ್ಲಿರುವ
ಮೈಸೂರು ಮಿತ್ರನಿಗೆ
ಹಾರ್ದಿಕ
ಶುಭಾಶಯಗಳು
ಡಾ. ಡಿ.ತಿಮ್ಮಯ್ಯ
ವಿಧಾನ ಪರಿಷತ್ ಸದಸ್ಯರು